ಯಕ್ಷಪಥ

(ಬೆಂಗಳೂರಿನಲ್ಲಿ ಯಕ್ಷಗಾನದ ಹೆಜ್ಜೆಗುರುತುಗಳು)



ಡಾ. ಆನಂದರಾಮ ಉಪಾಧ್ಯ

ಯಕ್ಷಪಥ

(ಬೆಂಗಳೂರಿನಲ್ಲಿ ಯಕ್ಷಗಾನದ ಹೆಜ್ಜೆಗುರುತುಗಳು)

ಡಾ. ಆನಂದರಾಮ ಉಪಾಧ್ಯ

ಭರತ್ ಪಬ್ಲಿಕೇಷನ್
ನಂ. 40, 5ನೇ ಮುಖ್ಯರಸ್ತೆ,
ದತ್ತಾತ್ರೇಯನಗರ, ಬೆಂಗಳೂರು – 560 085
ಮೊ: 8123496789

YAKSHAPATHA: Dr. Anandarama Upadyha, No. 317, 7th Cross, Avalahalli BDA Layout, BSK 3rd Stage, Bengaluru - 560 085
Mob: 9880032560

Published by
Bharath Publication
No. 40, 5th Main, Dattatreya Nagar,
Bangalore - 560 085

First Impression	:	2021
Page	:	192
©	:	Author
Price	:	Rs. 200/-
Copies	:	1000
Paper Used	:	70 gsm NS Maplitho
Printers	:	Sadhana Mudranalaya #120, Ist Floor, Balepet, Bangalore - 560 053 Mob : 94800 88960

ಅರಿಕೆ

ಕನ್ನಡದಲ್ಲಿ ನಾಟಕಗಳ ರಚನೆ ಕಂಡು ಬರುತ್ತಿರುವುದು ಈಚಿನ ಮುನ್ನೂರು ವರ್ಷಗಳಲ್ಲಿ. ಹಾಗೆಂದು ಅದಕ್ಕೆ ಪೂರ್ವದಲ್ಲಿ ಕನ್ನಡ ರಂಗಭೂಮಿ ಅಸ್ತಿತ್ವದಲ್ಲೇ ಇಲ್ಲವೆಂದು ಹೇಳುವಂತಿಲ್ಲ. ಅನೇಕ ಬಗೆಯ ಜನಸಂಮುಖಿ ರಂಗಮಾಧ್ಯಮಗಳು ಕರ್ನಾಟಕದಲ್ಲಿ ಪ್ರಚಲಿತವಿದ್ದುವೆಂಬುದಕ್ಕೆ ಅಸಂಖ್ಯ ಶಾಸನಗಳಲ್ಲಿ, ಅನೇಕ ಸಾಹಿತ್ಯ ಪ್ರಕಾರಗಳಲ್ಲಿ, ಗಾದೆ ಮಾತುಗಳಲ್ಲಿ, ಜಾನಪದ ದಂತಕಥೆಗಳಲ್ಲಿ ಉಲ್ಲೇಖಗಳು ದೊರೆಯುತ್ತವೆ. ಹಾಗೆ ನೋಡಹೋದರೆ ಜಾನಪದ ರಂಗ ಪರಂಪರೆಯ ತವರು ಕರ್ನಾಟಕ. ಜಾನಪದ ರಂಗ ಸಂಪ್ರದಾಯಗಳಲ್ಲಿ ಯಕ್ಷಗಾನಕ್ಕೆ ಹಿರಿಯ ಸ್ಥಾನವಿದೆ. ಕನ್ನಡಿಗರ ಕಲ್ಪನಾ ಸೃಷ್ಟಿ, ಜೀವನ ದೃಷ್ಟಿ, ನುಡಿನಡೆಗಳ ಪ್ರತಿರೂಪವಾಗಿ ಜನ್ಮ ತಳೆದ ಕಲೆ ಯಕ್ಷಗಾನ. ಗ್ರಾಮೀಣ ಜನತೆಯನ್ನು ಕಳೆದ ಏಳು ಶತಕಗಳಿಂದ ಮನ ತಣಿಸುತ್ತಾ ಬಂದಿದೆ. ಆಟ, ದೊಡ್ಡಾಟ, ಬಯಲಾಟ, ದಶಾವತಾರ, ಮೂಡಲಪಾಯ, ಘಟ್ಟದ ಕೋರೆ, ಗೊಂಬೆಯಾಟ, ಸಣ್ಣಾಟ, ಕೃಷ್ಣ ಪಾರಿಜಾತ ಮುಂತಾದ ವಿಭಿನ್ನ ಹೆಸರುಗಳಿಂದ, ವಿಭಿನ್ನ ರೂಪದಲ್ಲಿ, ವಿಭಿನ್ನ ಪ್ರದೇಶಗಳಲ್ಲಿ ಈ ಕಲೆ ಹರಡಿದೆ. ಇಂದು ವಿದ್ವಾಂಸರುಗಳಿಂದ 'ಪಡುವಲಪಾಯ ಯಕ್ಷಗಾನ' ಎಂದು ಕರೆಸಿಕೊಳ್ಳುವ ಆದರೆ ಜನವರ್ಗದಲ್ಲಿ 'ಯಕ್ಷಗಾನ ಬಯಲಾಟ' 'ದಶಾವತಾರ ಆಟ' 'ಆಟ' ಎಂದು ಗುರುತಿಸಿಕೊಳ್ಳುವ ಯಕ್ಷಗಾನವು ಕರಾವಳಿ ಹಾಗೂ ಮಲೆನಾಡಿನಲ್ಲಿ ಜೀವಂತವಾಗಿದೆ. ಹಳೆಯ ಮೈಸೂರು ಭಾಗದಲ್ಲಿ ಮೂಡಲಪಾಯ ಯಕ್ಷಗಾನವು ಖ್ಯಾತವಾಗಿದ್ದರೆ, ಬಯಲುಸೀಮೆಯಲ್ಲಿ ಬಯಲಾಟ, ದೊಡ್ಡಾಟ ಪ್ರಚಲಿತವಿದೆ. ಉತ್ತರ ಕರ್ನಾಟಕದಲ್ಲಿ ಸಣ್ಣಾಟ, ದಾಸರಾಟ, ಕೃಷ್ಣ ಪಾರಿಜಾತಗಳು ಇಂದಿಗೂ ಪ್ರದರ್ಶನಗೊಳ್ಳುತ್ತಿವೆ. ಹೀಗೆ ವೈವಿಧ್ಯಮಯವಾದ ಯಕ್ಷಗಾನ ರಂಗಭೂಮಿಯು ಮೂಲತ: ಗ್ರಾಮೀಣ ಕಲೆ. ಜನಪದರ ಉತ್ಕೃಷ್ಟ ಸೃಜನಶೀಲತೆಗೆ ಸಾಕ್ಷಿಯಾಗಿರುವ ಕಲೆ. ಆದರೆ ಇಂದು ಗ್ರಾಮೀಣ ಪ್ರದೇಶದ ತನ್ನ ನೆಲೆಯನ್ನು ನಗರ ಪ್ರದೇಶಗಳೆಡೆಗೆ ಚಾಚುತ್ತಿರುವುದು ಕುತೂಹಲಕರ ಸಂಗತಿಯಾಗಿದೆ. ಜಾಗತೀಕರಣ, ಖಾಸಗೀಕರಣದ ಫಲವಾದ ನಗರೀಕರಣದ ತೀವ್ರತೆ, ಸಂಚಾರ ಸವಲತ್ತುಗಳ ಆಧಿಕ್ಯ, ನಗರಕ್ಕೆ ವಲಸೆ ಬಂದ

ಜನವರ್ಗಕ್ಕೆ ತಮ್ಮ ಪಾರಂಪರಿಕ ಕಲೆಯ ಬಗ್ಗಿನ ಪ್ರೀತಿ, ವಿದ್ಯಾವಂತ ಪ್ರೇಕ್ಷಕರ ಅಭಿಮಾನ ಹಾಗೂ ಸರಕಾರದ ನಗರ ಕೇಂದ್ರಿತ ಪ್ರೋತ್ಸಾಹಗಳು ಕಾಲಾನುಸಾರ ಬದಲಾವಣೆಗೆ ತೆರೆದುಕೊಳ್ಳುವ ಗುಣವುಳ್ಳ ಯಕ್ಷಗಾನದ ಶಕ್ತಿ ಈ ಬಗೆಯ ನೂತನ ಆಯಾಮಕ್ಕೆ, ಅದರಿಂದಾಗುವ ವ್ಯಾಪಕತೆಗೆ ಹಿನ್ನೆಲೆಯಾಗಿವೆ.

ನಮ್ಮ ಜನಪದ ಕಲಾಪ್ರಕಾರಗಳು ಗ್ರಾಮೀಣ ಸೊಗಡಿನೊಂದಿಗೆ ನಗರದ ಥಳುಕು ಬಳುಕಿಗೆ ಹೆಜ್ಜೆ ಹಾಕುತ್ತಿರುವುದು ಈ ಕಲಾಪ್ರಕಾರಗಳ ಬೆಳವಣಿಗೆಯಲ್ಲಿ ಹೊಸ ಮಜಲಾಗಿ ಪರಿಣಮಿಸಿದೆ. ಕಳೆದ ಅರವತ್ತು ವರ್ಷಗಳಲ್ಲಿ ಬೆಂಗಳೂರು ನಗರ ಇದಕ್ಕೆ ಸಾಕ್ಷಿಯಾಗುತ್ತಿದೆ. ಯಕ್ಷಗಾನದಂತಹ ಸಾಂಪ್ರದಾಯಿಕ ರಂಗಭೂಮಿಗೆ ಈ ಮಹಾನಗರ ಎರಡನೆಯ ತವರಾಗುತ್ತಿದೆ. ಬೆಂಗಳೂರಿನ ಸರ್. ಪುಟ್ಟಣ್ಣ ಚೆಟ್ಟಿ ಪುರಭವನ ಹಾಗೂ ರವೀಂದ್ರ ಕಲಾಕ್ಷೇತ್ರಗಳು ಸಶಕ್ತ ವೇದಿಕೆಯಾಗಿ ಪರಿಣಮಿಸಿರುವುದು ವಿಶೇಷ. ಯಕ್ಷಗಾನದ ಚಂಡೆಮದ್ದಳೆ ದನಿ 80 ವರ್ಷಗಳ ಕೆಳಗೆ ಇಲ್ಲಿ ಮಾರ್ದನಿಗೊಂಡವು. ಕನ್ನಡ ಸಾಹಿತ್ಯ ಪರಿಷತ್ತಿನ ರಜತ ಮಹೋತ್ಸವಾಚರಣೆಯ ಸಂದರ್ಭದಲ್ಲಿ, ಸಾವಿರದೊಂಬೈನೂರ ನಲವತ್ತರ ಜೂನ್ ಮೂವತ್ತರಂದು ಖ್ಯಾತ ಸಾಮಾಜಿಕ ಧುರೀಣರು, ವಕೀಲರು ಆಗಿದ್ದ ದಿ. ಕುಬಣೂರು ಬಾಲಕೃಷ್ಣರಾವ್ ಅವರು ಬೆಂಗಳೂರಿನಲ್ಲಿ ತಾಳಮದ್ದಲೆ ನಡೆಸಿ ಕೊಟ್ಟರು. ಇವರ ತಂಡ ಬೆಂಗಳೂರಿನ ಆಕಾಶವಾಣಿಯಲ್ಲಿ ಕೂಡ 'ತಾಳಮದ್ದಲೆ' ಪ್ರಸಾರ ಆಗುವಂತೆ ಮಾಡಿದರು. ಐವತ್ತರ ದಶಕದಲ್ಲಿ ಬೆಂಗಳೂರಿನಲ್ಲಿ ಯಕ್ಷಗಾನ ಪ್ರದರ್ಶನ ನಡೆಯಲು ಕಾರಣರಾದವರು ಕರಾವಳಿಯಿಂದ ಬಂದು ಇಲ್ಲಿ ನೆಲೆಸಿರುವ ಹೋಟೆಲ್ ಮಾಲೀಕರುಗಳು. ಪಾರಂಪಳ್ಳಿ ಶ್ರೀಧರ ಹಂದೆ, ಕೆ.ಎಲ್. ಐತಾಳ್, ಪಿ.ಕೆ. ಮಧ್ಯಸ್ಥ, ಕೊಡೇರಿ ಮಾಧವ ಕಾರಂತ, ನರಸಿಂಹ ಹೊಳ್ಳ, ನೀಲಕಂಠ ಐತಾಳ್, ಕೊಡೇರಿಯ ಕಾಳಿಂಗ ಕಾರಂತ, ಶಿವರಾಮ ಕಾರಂತ ಮುಂತಾದವರು ಊರಿನ ಯಕ್ಷಗಾನ ಕಲಾವಿದರನ್ನು ಬೆಂಗಳೂರಿಗೆ ಕರೆಸಿ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಿದರು. ಇವರುಗಳೇ ಮುಂದೆ 'ಗಜಾನನ ಯಕ್ಷಗಾನ ಮಂಡಳಿ' ಎಂಬ ಹೆಸರಿನಿಂದ ಯಕ್ಷಗಾನ ಹವ್ಯಾಸಿ ತಂಡ ಕಟ್ಟಿಕೊಂಡು, ಯಕ್ಷಗಾನವನ್ನು ಕಲಿತು ಬಡಗುತಿಟ್ಟು ಅತಿಥಿ ಕಲಾವಿದರೊಂದಿಗೆ ಸೇರಿಕೊಂಡು ಮಳೆಗಾಲದ ಅಬ್ಬರಕ್ಕೆ ಚಂಡೆಮದ್ದಳೆಯ 'ಅಬ್ಬರಬಿಡ್ತಿಗೆ'ಯ ಹೊಡೆತವನ್ನು ಸೇರಿಸಿದರು. ಆಗ ಯಕ್ಷಗಾನ ಪ್ರದರ್ಶನಗಳು ಹೆಚ್ಚಾಗಿ ನಡೆಯುತ್ತಿದ್ದುದು ಪುರಭವನದಲ್ಲಿ. ದಿ. ಕುರಿಯ ವಿಠಲ ಶಾಸ್ತ್ರಿಗಳ ನೇತೃತ್ವದಲ್ಲಿ ಲಾಲ್‌ಬಾಗ್‌ನ ಗಾಜಿನ ಮನೆಯಲ್ಲಿ ತೆಂಕುತಿಟ್ಟು ಯಕ್ಷಗಾನ ಪ್ರದರ್ಶನ ನಡೆದುದ್ದಕ್ಕೆ ರಷ್ಯಾ ದೇಶದ ಅಧ್ಯಕ್ಷರಾದ ಕಾಮ್ರೆಡ್ ಬುಲ್ಗಾನಿನ್ ಸಾಕ್ಷಿಯಾಗಿದ್ದರು. ಹೀಗೆ

ಯಕ್ಷಗಾನ, ತಾಳಮದ್ದಲೆ, ಗೊಂಬೆಯಾಟಗಳು ಬೆಂಗಳೂರು ನಗರದಲ್ಲಿ ದಾಂಗುಡಿಯಿಟ್ಟಿದ್ದನ್ನು ಕಾಣಬಹುದು.

ರವೀಂದ್ರ ಕಲಾಕ್ಷೇತ್ರದ ನಿರ್ಮಾಣದೊಂದಿಗೆ ಪುರಭವನ ಹಾಗೂ ಕಲಾಕ್ಷೇತ್ರಗಳು ಯಕ್ಷಗಾನ ಕಲಾಪ್ರದರ್ಶನಕ್ಕೆ ಪ್ರಮುಖ ತಾಣಗಳಾದವು. ತೆಂಕುತಿಟ್ಟು, ಬಡಗುತಿಟ್ಟು, ಮೂಡಲಪಾಯ, ಶ್ರೀಕೃಷ್ಣ ಪಾರಿಜಾತ, ದೊಡ್ಡಾಟ, ಮುಂತಾದ ಕಲಾಪ್ರಕಾರಗಳ ಅಸಂಖ್ಯ ಕಲಾವಿದರು ಇಲ್ಲಿ ತಮ್ಮ ಪ್ರತಿಭಾ ವಿಲಾಸವನ್ನು ಮೆರೆದಿದ್ದಾರೆ. ಈ ಎರಡು ಸಭಾಭವನಗಳ ಮೂಲಕ ಬಹಳಷ್ಟು ಕಲಾವಿದರು ಜನಮನ್ನಣೆ ಗಳಿಸಿದ್ದಾರೆ. ಅದೇ ಅವರ ಕಲಾಬದುಕಿಗೆ ಚಿಮ್ಮು ಹಲಗೆಯಾಗಿ ಕೂಡ ಪರಿಣಮಿಸಿದೆ. ಕಲಾಕ್ಷೇತ್ರದ ಆವರಣ ಅನೇಕ ಜಾನಪದ ರಂಗಪರಂಪರೆಯ ಮರುಹುಟ್ಟಿಗೆ ಕೂಡ ಕಾರಣವಾಗಿದೆ. ಅಲ್ಲಿರುವ ನಯನ ಸಭಾಂಗಣ ಚಿಕ್ಕಚೊಕ್ಕ ಕಾರ್ಯಕ್ರಮಗಳಿಗೆ ಅವಕಾಶವಿತ್ತರೆ ರವೀಂದ್ರ ಕಲಾಕ್ಷೇತ್ರ ಸಾವಿರಾರು ಪ್ರೇಕ್ಷಕರ ಕಣ್ಣಿಗೆ ರಸದೌತಣ ನೀಡುವ ತಾಣವಾಗಿದೆ. ಹಿಂಭಾಗದಲ್ಲಿರುವ ಸಂಸಬಯಲು ರಂಗಮಂದಿರವಂತು ಯಕ್ಷಗಾನದಂತಹ ಕಲೆಗಳ ಪ್ರದರ್ಶನಕ್ಕೆ ಹೇಳಿ ಮಾಡಿಸಿದ ಬಯಲು ರಂಗಮಂದಿರವಾಗಿದೆ. ಪೂರ್ವದಲ್ಲಿ ಸರ್. ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ ಹೆಚ್ಚಾಗಿ ನಡೆಯುತ್ತಿದ್ದ ಯಕ್ಷಗಾನ ಪ್ರದರ್ಶನಗಳು ಕಳೆದ ಮೂವತ್ತು ವರ್ಷಗಳಿಂದ ರವೀಂದ್ರ ಕಲಾಕ್ಷೇತ್ರದಲ್ಲಿ ಜರಗುತ್ತಿದೆ. ಎಲ್ಲಾ ಬಗೆಯ ಕಲಾ ಬೆಳವಣಿಗೆಗೆ ತನ್ನ ಕೊಡುಗೆ ನೀಡುತ್ತಿರುವ ರವೀಂದ್ರ ಕಲಾಕ್ಷೇತ್ರ ಸುವರ್ಣ ಸಂಭ್ರಮದ ನೆಪದಲ್ಲಿ ಯಕ್ಷಗಾನ, ಬಯಲಾಟ, ಮೂಡಲಪಾಯ, ಶ್ರೀಕೃಷ್ಣ ಪಾರಿಜಾತದಂತಹ ಕಲಾಪ್ರಕಾರಗಳ ಪ್ರದರ್ಶನಗಳನ್ನು 'ನೆನಪಿನೋಕುಳಿ' ಎಂಬ ಕಾರ್ಯಕ್ರಮದಡಿಯಲ್ಲಿ ನಡೆಸಿರುವುದು ಗಮನಾರ್ಹ.

ಈ ಕೃತಿಯಲ್ಲಿ ಯಕ್ಷಗಾನದ ನಂಟನ್ನು ಹೊಂದಿರುವ ಅನೇಕರು ತಮ್ಮ ವಿಚಾರಧಾರೆಯನ್ನೂ, ಬೆಂಗಳೂರಿನೊಂದಿಗಿನ ತಮ್ಮ ಒಡನಾಟವನ್ನೂ, ತಮ್ಮ ಪ್ರದರ್ಶನ ಗಳಿಸಿದ ಯಶಸ್ಸನ್ನು, ಅದರಿಂದ ತಾವು ಪಡೆದ ಅನುಭವಗಳನ್ನು, ಚಿರಕಾಲ ನೆನಪಿನಲ್ಲಿ ಉಳಿದಂತಹ ಘಟನೆಯನ್ನು, ಇಲ್ಲಿನ ಪ್ರೇಕ್ಷಕರ ಅಭಿಮಾನ ಹಾಗೂ ಪ್ರೀತಿಯನ್ನೂ ಲೇಖನಗಳ ಮೂಲಕ ದಾಖಲಿಸಿದ್ದಾರೆ. ಹೀಗಾಗಿ ವೈವಿಧ್ಯಮಯ ಅನುಭವಗಳು, ಪ್ರಾಂಜಲ ಅನಿಸಿಕೆಗಳು, ನಿಕರವಾದ ಪ್ರದರ್ಶನಗಳ ಮಾಹಿತಿಗಳು, ವೈಯಕ್ತಿಕ ಕಲಾ ಬದುಕಿನ ವಿವರಗಳು ಇಲ್ಲಿ ಸೇರಿವೆ. ವಿಷಯದಲ್ಲಿ ವೈವಿಧ್ಯತೆ ಇದ್ದರೂ ಯಕ್ಷಗಾನಕ್ಕೆ ಸಂಬಂಧಿಸಿದಂತೆ ಏಕಸೂತ್ರತೆಯನ್ನು ಕಾಣಬಹುದು. ಇವು ಕೇವಲ ದಾಖಲೆಗಳ ಮಾಹಿತಿ ಕೋಶವಾಗಿಲ್ಲ. ಈ ಲೇಖನಗಳ ಮೂಲಕ

ನಗರೀಕರಣಗೊಳ್ಳುತ್ತಿರುವ ನಮ್ಮ ಸಾಂಪ್ರದಾಯಿಕ ರಂಗಭೂಮಿಯ ಏಳುಬೀಳುಗಳ ಪರಿಚಯವಾಗುತ್ತದೆ. ಪ್ರಸಿದ್ಧ ಕಲಾವಿದರು, ಸಂಘಟಕರು ಹೇಳಿರುವ ಅನೇಕ ವಿಚಾರಗಳು ಯಕ್ಷಗಾನದ ಬೆಳವಣಿಗೆಗೆ ದಿಕ್ಸೂಚಿಯಾಗಬಲ್ಲವು. ಅದೇ ರೀತಿ ಹವ್ಯಾಸಿ ಕಲಾವಿದರ ಲೇಖನಗಳಲ್ಲಿ ಹೊಸ ದೃಷ್ಟಿ ಗೋಚರವಾಗುತ್ತಿದ್ದು ಅವು ಹೊಸ ಸೃಷ್ಟಿಗೆ ನಾಂದಿಯಾಗಬಲ್ಲವು. ಯಕ್ಷಗಾನ ಕಲೆಯ ಕುರಿತಾದ ಚಿಂತನೆಗಳು ಕೂಡ ಇಲ್ಲಿ ಬರಹ ರೂಪದಲ್ಲಿ ಬಂದಿವೆ. ಇವಲ್ಲದೆ ಈ ಕೃತಿಯಲ್ಲಿ ಕೆಲವು ಹಿರಿಯ ಕಲಾವಿದರ ಹಾಗೂ ಸಂಘಟಕರ ಸಂದರ್ಶನಗಳು, ಜೀವನ ಚಿತ್ರಗಳು ಅಡಕಿರಿದಿವೆ. ಸಂಪಾದಕರು ಕೇಳಿದ ಅನೇಕ ಪ್ರಶ್ನೆಗಳಿಗೆ ಉತ್ತರ ರೂಪದಲ್ಲಿ ಬಂದ ಸಂದರ್ಶನಗಳಲ್ಲಿ ಅನೇಕ ಹೊಸ ಹೊಳಪುಗಳು ದಾಖಲಾಗಿವೆ. ಯಕ್ಷಗಾನಕ್ಕೆ ಸಂಬಂಧಿಸಿದ ಪ್ರಾಜ್ಞರು, ತೆಂಕುತಿಟ್ಟು, ಬಡಗುತಿಟ್ಟು, ಬಡಾಬಡಗು ತಿಟ್ಟುಗಳ ಕಲಾವಿದರು ಇಲ್ಲಿ ನಗರೀಕರಣಕ್ಕೆ ಸಂಬಂಧಿಸಿದಂತೆ ತಮ್ಮ ಅಭಿಪ್ರಾಯಗಳನ್ನು ಕೊಟ್ಟಿರುವುದರಿಂದ ಬೆಂಗಳೂರು ಮಹಾನಗರದಲ್ಲಿ ಈ ಕಲೆ ದಾಂಗುಡಿಯಿಟ್ಟ ಬಗೆ, ಮುಂದೆ ಬೆಳೆಯಬೇಕಾದ ರೀತಿಯ ಬಗ್ಗೆ ಅರಿವು ದೊರೆಯುತ್ತದೆ. ಮೂಡಲಪಾಯ ಹಾಗೂ ಶ್ರೀಕೃಷ್ಣ ಪಾರಿಜಾತದ ಕಲಾವಿದರ ಅಭಿಪ್ರಾಯಗಳು ಇಲ್ಲಿರುವುದರಿಂದ ಅಖಿಲ ಕರ್ನಾಟಕದ ವ್ಯಾಪ್ತಿ ದೊರೆಕಿಸಲು ಪ್ರಯತ್ನಿಸಲಾಗಿದೆ. ಬೆಂಗಳೂರಿಗರಿಗೆ ಚಿರಪರಿಚಿತರಾಗಿದ್ದ ಭಾಗವತ ನಾರ್ಣಪ್ಪ ಉಪ್ಪೂರರ ಬಗ್ಗೆ ಹಾಗೂ ತೆಂಕುತಿಟ್ಟು ಯಕ್ಷಗಾನವನ್ನು ಬೆಂಗಳೂರಲ್ಲಿ ಪ್ರಚುರಪಡಿಸಲು ಸಾಕಷ್ಟು ಶ್ರಮಿಸಿದ್ದ ಮದ್ದಲೆ ವಾದಕ ಹಾಗೂ ಸಾಹಿತಿ ತಾಳ್ತಜೆ ಕೇಶವಭಟ್ಟರ ಕುರಿತ ಲೇಖನಗಳು ಇಲ್ಲಿವೆ. ಹಿಂದೆಲ್ಲಾ ಬೆಂಗಳೂರಿನಲ್ಲಿ ಯಕ್ಷಗಾನದ ಚಂಡೆಯ ಸದ್ದು ಕೇಳುತ್ತಿದ್ದದ್ದು ಮಳೆಗಾಲದ ಶನಿವಾರ, ಭಾನುವಾರದಂದು ರಾತ್ರಿ ಮಾತ್ರ. ಆದರೆ ಈಗ ವರ್ಷದ ಎಲ್ಲ ದಿನಗಳಲ್ಲೂ ಚಂಡೆಯ ಸದ್ದನ್ನು ಕೇಳಬಹುದಾಗಿದೆ. ಇದಕ್ಕೆ ಕಾರಣರಾದವರು ಯಕ್ಷಗಾನ ಹವ್ಯಾಸಿ ಕಲಾವಿದರು. ಕಳೆದ ಶತಮಾನದ ಕೊನೆಯ ಎರಡು ದಶಕ ಹಾಗೂ ಈ ಶತಕದಲ್ಲಿ ಅಸಂಖ್ಯ ಯಕ್ಷಗಾನ ಸಂಘ ಸಂಸ್ಥೆಗಳು ಬೆಂಗಳೂರಿನಲ್ಲಿ ಹುಟ್ಟಿಕೊಂಡಿವೆ. ಮೇರು ಕಲಾವಿದರನ್ನು ಅನುಕರಿಸಿಯೋ ಅನುಸರಿಸಿಯೋ ಕಷ್ಟಪಟ್ಟು ಯಕ್ಷಗಾನ ಕಲಿತು ಪ್ರದರ್ಶನ ನೀಡುವ ಹವ್ಯಾಸಿ ಕಲಾವಿದರು ಬೆಂಗಳೂರಿನಲ್ಲಿ ಯಕ್ಷಗಾನ ಜೀವಂತವಾಗಿ ಉಳಿಸಲು ಕಾರಣರಾಗಿದ್ದಾರೆ. ಅಂತಹ ಸಂಘ ಸಂಸ್ಥೆಗಳ ಕುರಿತು ದೀರ್ಘ ಲೇಖನ ಇಲ್ಲಿ ದಾಖಲಾಗಿದೆ. ಅದೇ ರಿತಿ ಯಕ್ಷಗಾನ ಪ್ರಸಂಗಗಳ ಡಿಜಟಲೀಕರಣಕ್ಕೆ ಬೆಂಗಳೂರು ನೆಲೆಯಾಗುತ್ತಿದೆ. ಬೆಂಗಳೂರಿನ 'ಯಕ್ಷವಾಹಿನಿ (ರಿ) ಸಂಸ್ಥೆ'ಯು ಈಗಾಗಲೇ

600ಕ್ಕೂ ಹೆಚ್ಚು ಪ್ರಸಂಗಗಳನ್ನು ಡಿಜಿಟಲ್ ರೂಪಕ್ಕೆ ಅಳವಡಿಸಿದೆ. ಕರ್ನಾಟಕ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾದ ಪ್ರೊ॥ ಎಂ.ಎ. ಹೆಗಡೆಯವರ ದೂರದರ್ಶಿತ್ವ ಹಾಗೂ ಪ್ರೋತ್ಸಾಹದ ಫಲವಾಗಿ ಈ ಸಂಸ್ಥೆ ವೈವಿಧ್ಯಮಯ ಕಾರ್ಯಗಳ ಮೂಲಕ ಆಧುನಿಕತೆಯ ಸ್ಪರ್ಶವನ್ನು ಪ್ರಸಂಗ ಸಾಹಿತ್ಯಕ್ಕೆ ನೀಡುತ್ತಿದೆ. ಈ ಸಂಸ್ಥೆಯ ಸಾಧನೆಯ ಪರಿಚಯವು ಕೂಡ ಇಲ್ಲಿ ಲೇಖನ ರೂಪದಲ್ಲಿ ಬಂದಿದೆ. ಹೀಗೆ ಈ ಕೃತಿಯಲ್ಲಿ ಯಕ್ಷಗಾನದ ನಗರೀಕರಣ, ಆಧುನಿಕತೆಗೆ ಸ್ಪಂದನೇ ಹಾಗೂ ಬೆಂಗಳೂರಿನಲ್ಲಿ ಅದರ ಹೆಜ್ಜೆಗುರುತುಗಳನ್ನು ಒಟ್ಟೊಟ್ಟಿಗೆ ಅರಿಯಬಹುದಾಗಿದೆ.

ಈ ಕೃತಿ ರವೀಂದ್ರ ಕಲಾಕ್ಷೇತ್ರದ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ರಚಿಸಿದ್ದು, ಅದಕ್ಕಾಗಿಯೇ ನಾಡಿನ ಯಕ್ಷಗಾನ ಕಲಾವಿದರನ್ನು ಸಂಪರ್ಕಿಸಲಾಯಿತು. ಕೆಲವರು ತಮ್ಮ ಅನುಭವಗಳನ್ನು ಲೇಖನದ ರೂಪದಲ್ಲಿ ಬರೆದುಕೊಟ್ಟರು. ಕೆಲವರು ಸಂದರ್ಶನದ ಮೂಲಕ ಸಂಪಾದಕರೊಂದಿಗೆ ತಮ್ಮ ಅನಿಸಿಕೆ ಹಂಚಿಕೊಂಡರು. ಹೀಗೆ ಸಂಗ್ರಹಿತವಾದ ಲೇಖನ / ಸಂದರ್ಶನಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವಲ್ಲಿ ವಿಳಂಬವಾಯಿತು. ಶ್ರೀ ರಾಜಗೋಪಾಲ ಕನ್ಯಾನ ಅವರ ಒತ್ತಾಸೆಯಿಂದ ಹಾಗೂ ಪ್ರಕಾಶಕರಾದ ಶ್ರೀ ರವಿಚಂದ್ರ ರಾವ್ ಅವರ ಸಹಕಾರದಿಂದ ಪುಸ್ತಕ ನಿಮ್ಮ ಕೈ ಸೇರುತ್ತಿದೆ. ಇದನ್ನು ಅಂದವಾಗಿ ಮುದ್ರಿಸಿ ಪ್ರಕಟಿಸಿದ ಭರತ್ ಪಬ್ಲಿಕೇಷನ್‌ರವರಿಗೆ ನನ್ನ ಕೃತಜ್ಞತೆಗಳು. ಸಂಪರ್ಕಿಸಿದಾಗ ಸಹಮತ ವ್ಯಕ್ತಪಡಿಸಿ, ಪ್ರೀತಿಯಿಂದ ಸ್ಪಂದಿಸಿದ ಎಲ್ಲಾ ಯಕ್ಷಗಾನ ಕಲಾಬಂಧುಗಳಿಗೆ ನಾನು ಚಿರಋಣಿ. ಈ ಕೃತಿಯ ಮೂಲಕ ಬೆಂಗಳೂರಿನಲ್ಲಿ ಯಕ್ಷಗಾನದ ಕುರಿತಾದ ಸಮಗ್ರ ಚಿತ್ರಣ ದೊರೆತರೆ ನನ್ನ ಶ್ರಮ ಸಾರ್ಥಕ.

ಮೊದಲಿಗೆ ಈ ಬಗೆಯ ಪುಸ್ತಕದ ರೂಪು ರೇಷೆಯನ್ನು ಸೂಚಿಸಿದವರು ಕರ್ನಾಟಕ ಕಲಾದರ್ಶಿನಿಯ ಶ್ರೀನಿವಾಸ್ ಸಾಸ್ತಾನರು. ಮುಂದೆ ಕರ್ನಾಟಕ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾದ ಪ್ರೊ. ಎಂ.ಎ. ಹೆಗಡೆಯವರು ಆದಷ್ಟು ಬೇಗ ಕೃತಿ ಪ್ರಕಟವಾಗಬೇಕೆಂದು ಒತ್ತಾಸೆ ನೀಡಿದರು. ಅವರಿಬ್ಬರಿಗೂ ನಾನು ಅಭಾರಿ. ಕರಡು ಸಿದ್ಧಪಡಿಸುವಲ್ಲಿ ಸಹಕರಿಸಿದ ನನ್ನ ಪತ್ನಿ ಪ್ರೇಮಾಗೆ ಪ್ರೀತಿಯ ನೆನಕೆಗಳು.

15.08.2020 **ಡಾ. ಆನಂದರಾಮ ಉಪಾಧ್ಯ**

ಬೆಂಗಳೂರು

ಪ್ರಕಾಶಕರ ಮಾತು...

"ಧರ್ಮವೇ ಜಯವೆಂಬುದು ಯಕ್ಷಗಾನ"

ಸಹಸ್ರಾರು ವರ್ಷಗಳಿಂದ ಪರಿಪೋಷಣೆಗೊಂಡು ಬಂದಿರುವ ಭಾರತೀಯ ಸಂಸ್ಕೃತಿ ಅನನ್ಯವಾದದ್ದು. ಇಲ್ಲಿನ ಧರ್ಮ, ಕಲೆ, ಸಾಹಿತ್ಯ ಸಂಗೀತ, ಜಾನಪದ ಪರಂಪರೆ, ಆಚಾರ ವಿಚಾರಗಳು, ರೀತಿ ನೀತಿಗಳು ಈ ಸಂಸ್ಕೃತಿಯನ್ನು ಸಂವರ್ಧಿಸಿಕೊಂಡು ಬಂದಿವೆ. ಇವುಗಳಲ್ಲಿ ಕರ್ನಾಟಕದ ಪ್ರಾತಿನಿಧಿಕ ಕಲೆಯಾದ ಯಕ್ಷಗಾನದ ಪಾತ್ರವು ಮಹತ್ತರವಾದದ್ದು. 600-700 ವರ್ಷಗಳಷ್ಟು ಇತಿಹಾಸ ಉಳ್ಳ ಯಕ್ಷಗಾನ ರಂಗಭೂಮಿಯು ಕರ್ನಾಟಕದ ಜನಜೀವನದ ಮೇಲೆ ಮಾಡಿದ ಪ್ರಭಾವ ಅಪಾರ. ಗ್ರಾಮೀಣರ ಬದುಕಿನಿಂದ ರೂಪುಗೊಂಡ ಈ ಕಲೆ ಜನರಿಗೆ ಅನೇಕ ಆದರ್ಶಗಳನ್ನು ಹುಟ್ಟು ಹಾಕಿತು. ರಾಮಾಯಣ, ಮಹಾಭಾರತ, ಭಾಗವತ, ಪುರಾಣಗಳನ್ನು ಆಧರಿಸಿ ರಚಿತಗೊಂಡ ಪ್ರಸಂಗಗಳು ನಮ್ಮ ಜನರಿಗೆ ಒಳ್ಳೆಯ ನೀತಿ ವಾಕ್ಯಗಳನ್ನು ತಿಳಿಸಿಕೊಟ್ಟಿವೆ. ಆರಾಧನಾ ಕಲೆಯಾದ ಯಕ್ಷಗಾನಕ್ಕೆ ದೇವಸ್ಥಾನಗಳು ಆಶ್ರಯವನ್ನು ಕೊಟ್ಟಿವೆ. ಹೆಚ್ಚಾಗಿ ಗ್ರಾಮದ ದೇವಸ್ಥಾನಗಳ ಅಂಗಣದಲ್ಲೇ ಜನರು ಕಲೆತು ಕಲೆಯನ್ನು ಕಲಿಯುತ್ತಿದ್ದರು. ಅದೇ ರೀತಿ ಕರಾವಳಿಯ ಕೆಲವು ದೇವಸ್ಥಾನಗಳು ಕೂಡ ಹರಕೆ ಮೇಳಗಳ ಮೂಲಕ ಯಕ್ಷಗಾನವನ್ನು ಉಳಿಸಿ ಬೆಳೆಸುತ್ತಿವೆ. ಹೀಗೆ ಹಳ್ಳಿಗರ ಕಲೆಯಾಗಿ ಯಕ್ಷಗಾನ ಬೆಳೆದು ಬಂದಿದೆ. ನಮ್ಮ ಭಾರತೀಯ ಪರಂಪರೆಯನ್ನು ಬೆಳೆಸಿಕೊಂಡು ಬಂದಿದೆ. ನಮ್ಮ ಧರ್ಮವನ್ನು ಉಳಿಸಿಕೊಂಡು ಬಂದಿದೆ.

ಈ ಶತಮಾನದಲ್ಲಿ ನಗರಗಳು ಬಹಳ ತ್ವರಿತವಾಗಿ ಬೆಳೆಯುತ್ತಿವೆ. ಹಳ್ಳಿಯ ಜನರು ಕೂಡ ನಗರಕ್ಕೆ ಸಾಕಷ್ಟು ವಲಸೆ ಬರುತ್ತಿದ್ದಾರೆ. ಇಲ್ಲಿನ ಆಧುನಿಕ ಬದುಕು ಅವರಿಗೆ ಸಿನೇಮಾ, ಆರ್ಕೆಸ್ಟ್ರಾ, ಆಧುನಿಕ ಡ್ಯಾನ್ಸ್ ಮುಂತಾದ ಹೊಸ ಬಗೆಯ ಮನರಂಜನೆಕಡೆಗೆ ಸೆಳೆಯುವಂತೆ ಮಾಡಿದೆ. ಇವೆಲ್ಲವೂ ಜನರನ್ನು ಮತ್ತಷ್ಟು ವಿಷಯಾಸಕ್ತಿಯ ಕಡೆಗೆ ಕೊಂಡೊಯ್ಯುತ್ತದೆ. ಇಂತಹ ವಿಷಮ ಸ್ಥಿತಿಯಲ್ಲಿ ನಮ್ಮ ಧರ್ಮವನ್ನು ಬೆಳೆಸಿದ, ನಮ್ಮ ಸಂಸ್ಕೃತಿಯನ್ನು ಪೋಷಿಸಿದ ಪಾರಂಪರಿಕೆ, ಭಾರತೀಯನಾದ ಕಲೆಗಳ ಪರಿಚಯ ಆಗಬೇಕಾಗಿದೆ. ಹಳ್ಳಿಯಿಂದ ಬಂದವರಿಗೆ ಅವರ ಊರಿನ ಪಾರಂಪರಿಕ ಕಲೆಗಳ ಪ್ರದರ್ಶನ ನೋಡಲು ಸಿಗಬೇಕಾಗಿದೆ. ಆಗ

ಮಾತ್ರ ಅವರು ಆಧುನಿಕ ಮನರಂಜನೆಗಳ ಸೆಳೆತದಿಂದ ತಪ್ಪಿಸಿಕೊಳ್ಳಲು ಸಾಧ್ಯ. ಯಕ್ಷಗಾನವು ನಮ್ಮ ಕರ್ನಾಟಕದ ಪ್ರಭಾವಿ ಸಾಂಪ್ರದಾಯಿಕ ರಂಗಭೂಮಿಯಾಗಿದ್ದು ನಗರ ಪ್ರದೇಶದಲ್ಲಿ ಹೆಚ್ಚು ಹೆಚ್ಚು ವ್ಯಾಪಿಸುತ್ತಾ, ಜನರ ಮೇಲೆ ಒಳ್ಳೆಯ ಪ್ರಭಾವವನ್ನು ಬೀರುತ್ತಾ ಇದೆ. ಬೆಂಗಳೂರಿನಲ್ಲಿ ಕಳೆದ 70 ವರ್ಷಗಳಿಂದ ಯಕ್ಷಗಾನವು ಬೇರೂರಿ ಸದೃಢವಾಗಿ ನೆಲೆ ನಿಂತಿದೆ. ಇದರ ಬಗ್ಗೆ ಸಮಗ್ರ ಮಾಹಿತಿ ದೊರೆತಲ್ಲಿ ಇನ್ನಷ್ಟು ವಿಸ್ತರಿಸಲು, ಇನ್ನಷ್ಟು ಆಕರ್ಷಿಸಲು ಮಾಡಬೇಕಾದ ಕಾರ್ಯ ಯೋಜನೆ ರೂಪಿಸಲು ಸಾಧ್ಯವಾಗುತ್ತದೆ

ಈ ನಿಟ್ಟಿನಲ್ಲಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ಸುವರ್ಣ ಮಹೋತ್ಸವ ಸಮಿತಿಯು ಯೋಜಿಸಿ ಗ್ರಂಥವೊಂದನ್ನು ತರಲು ಉದ್ದೇಶಿಸಿತ್ತು. ಈ ಸಂದರ್ಭದಲ್ಲಿ 'ನೆನಪಿನೋಕುಳಿ' ಎಂಬ ಕಾರ್ಯಕ್ರಮವನ್ನು ಆಯೋಜಿಸಿ, ಒಂದು ವರ್ಷ ಪರ್ಯಂತ ಕಾರ್ಯಕ್ರಮ ನಡೆಸಿತು. ಒಂದು ತಿಂಗಳನ್ನು ಯಕ್ಷಗಾನ ಕಲೆಗೆ ಮೀಸಲಿರಿಸಿ, ಯಕ್ಷಗಾನ ಕಲಾವಿದರನ್ನು, ಸಂಘ ಸಂಸ್ಥೆಗಳನ್ನು ಕರೆಸಿ ಪ್ರದರ್ಶನ, ಗೋಷ್ಠಿಗಳನ್ನು ಏರ್ಪಡಿಸಿತ್ತು. ಈ ಸಂಭ್ರಮದ ನೆನಪಿಗಾಗಿ ಹೊರತರಬೇಕೆಂದಿದ್ದ ಕೃತಿಯ ಪ್ರಕಾಶನವು ನಡೆಯಲಿಲ್ಲ. ಆದರೆ ಈಗ ನಿಮ್ಮ ಕೈಸೇರಲಿರುವ 'ಯಕ್ಷಪಥ'ವು ಈ ಎಲ್ಲಾ ಹಿನ್ನೆಲೆಯಲ್ಲಿ ರಚಿತಗೊಂಡಿದ್ದಾಗಿದೆ. ಇದರ ಮೂಲಕ ಬೆಂಗಳೂರಿನಲ್ಲಿ ಯಕ್ಷಗಾನ ಬೆಳೆಯಲು ಪುರಭವನ ಹಾಗೂ ಕಲಾಕ್ಷೇತ್ರದ ಕೊಡುಗೆ ಎಷ್ಟು ಎಂಬುದನ್ನು ಅರಿಯಬಹುದಾಗಿದೆ.

ಡಾ. ಆನಂದರಾಮ ಉಪಾಧ್ಯರು ಯಕ್ಷಗಾನ ವಿದ್ವಾಂಸರು ಕಳೆದ ಐವತ್ತು ವರ್ಷಗಳಿಂದ ಬೆಂಗಳೂರಿನಲ್ಲಿ ನೆಲೆ ನಿಂತವರು. ಇಲ್ಲಿನ ಅನೇಕ ಯಕ್ಷಗಾನ ಸಂಘ ಸಂಸ್ಥೆಗಳ ಒಡನಾಟ ಇಟ್ಟುಕೊಂಡವರು. ಅದೇ ರೀತಿ ಯಕ್ಷಗಾನ ಕಲಾವಿದರ ಸಂಪರ್ಕ ಉಳ್ಳವರು. ಮೇಲಾಗಿ ಯಕ್ಷಗಾನ ಪ್ರಸಂಗ ಸಾಹಿತ್ಯದ ಬಗ್ಗೆ ಮೊದಲಿಗೆ ಅಧ್ಯಯನ ಮಾಡಿದವರು. 1984ರಲ್ಲೇ 'ಯಕ್ಷಗಾನ ಮಹಾಭಾರತ ಪ್ರಸಂಗಗಳು ಎಂಬ ಮಹಾ ಪ್ರಬಂಧ ಬರೆದು ಪಿ.ಹೆಚ್.ಡಿ. ಪದವಿ ಗಳಿಸಿದವರು. ಯಕ್ಷಗಾನಕ್ಕೆ ಸಂಬಂಧಿಸಿದಂತೆ ಈಗಾಗಲೇ ಐದು ಕೃತಿಗಳನ್ನು ಬರೆದು ಪ್ರಕಟಿಸಿದವರು. ಬೆಂಗಳೂರಿನಲ್ಲಿ ಯಕ್ಷಗಾನ ನೆಲೆ ನಿಂತ ಬಗ್ಗೆ ಅನೇಕರ ಅಭಿಪ್ರಾಯಗಳನ್ನು ಇಲ್ಲಿ ಅವರು ಸಂಗ್ರಹಿಸಿಕೊಟ್ಟಿದ್ದಾರೆ. ಪುರಭವನ ಹಾಗೂ ರವೀಂದ್ರ ಕಲಾಕ್ಷೇತ್ರಗಳಲ್ಲಿ ಮೊದಲಿಗೆ ಪ್ರದರ್ಶನಗೊಳ್ಳುತ್ತಿದ್ದ ಯಕ್ಷಗಾನ ಈಗ ಬೆಂಗಳೂರಿನ ಎಲ್ಲಾ ಬಡಾವಣೆಗಳಲ್ಲೂ ಪ್ರಸಾರವಾಗುತ್ತಿರುವುದುರ ಬಗ್ಗೆ ಪಕ್ಷಿನೋಟ ಒಂದು ಇಲ್ಲಿ

ದೊರೆಯುತ್ತದೆ. 'ಯಕ್ಷಪಥ'ದ ಮೂಲಕ ಡಾ. ಉಪಾಧ್ಯರು ಬೆಂಗಳೂರಿನಲ್ಲಿ ಯಕ್ಷಗಾನದ ಹೆಜ್ಜೆಗುರುತುಗಳನ್ನು ಸಮರ್ಥವಾಗಿ ದಾಖಲಿಸಿದ್ದಾರೆ. ಅನೇಕರು ಲೇಖನಗಳನ್ನು ಕೊಟ್ಟಿದ್ದಾರೆ. ಕೆಲವರನ್ನು ಸಂಪಾದಕರೇ ಸಂಪರ್ಕಿಸಿ, ಸಂದರ್ಶನ ನಡೆಸಿ ಅದನ್ನು ಲೇಖನ ರೂಪದಲ್ಲಿ ದಾಖಲಿಸಿದ್ದಾರೆ. ಇದಲ್ಲದೇ ಆನಂದರಾಮ ಉಪಾಧ್ಯರು ಹಾಗೂ ಅವರ ಮಿತ್ರರು ಕೆಲವು ಲೇಖನಗಳ ಮೂಲಕ ಈಚಿನ ಬೆಳವಣಿಗೆಯ ಚಿತ್ರಣವನ್ನು ದೊರಕಿಸಿಕೊಟ್ಟಿದ್ದಾರೆ. ಬೆಂಗಳೂರಿನಲ್ಲಿ ಯಕ್ಷಗಾನಕ್ಕೆ ಸಂದ ಜನಮನ್ನಣೆಯ ಅರಿವು ಈ ಕೃತಿಯಿಂದ ಲಭಿಸುತ್ತದೆ. ಇಂತಹ ಪುಸ್ತಕವನ್ನು ನಮ್ಮ ಪ್ರಕಾಶನಕ್ಕೆ ಕೊಟ್ಟ ಡಾ. ಆನಂದರಾಮ ಉಪಾಧ್ಯರಿಗೆ ಹಾಗೂ ಅವರನ್ನು ಪರಿಚಯಿಸಿಕೊಟ್ಟ ಯಕ್ಷಗಾನ ಅರ್ಥದಾರಿ ಹಾಗೂ ಸಂಘಟಕರಾದ ಶ್ರೀ ರಾಜಗೋಪಾಲ ಕನ್ಯಾನ ಅವರಿಗೆ ನಾವು ಆಭಾರಿಗಳು. ನಮ್ಮ ಸಂಸ್ಥೆ ಭಾರತೀಯ ಧರ್ಮ, ಸಂಸ್ಕೃತಿಯ ಪ್ರಸಾರಕ್ಕೆ ಸದಾ ತುಡಿಯುತ್ತಿರುವ ಸಂಸ್ಥೆಯಾಗಿದೆ. "ಯಕ್ಷಪಥ"ವು ನಮ್ಮ ಸಂಸ್ಕೃತಿಯನ್ನು ಹಾಗೂ ಧರ್ಮವನ್ನು ಬೆಳೆಸಲು ಸಹಕರಿಸುವುದರಿಂದ ನಮಗೆ ಈ ಕೃತಿಯನ್ನು ಹೊರತರಲು ಸಂತೋಷವಾಗುತ್ತದೆ. ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ಸಾಧನಾ ಮುದ್ರಣಾಲಯದವರಿಗೆ ಹಾಗೂ ತಪ್ಪಿಲ್ಲದೆ ಡಿಟಿಪಿ ಮಾಡಿಕೊಟ್ಟ 'ದಿ ಪಬ್ಲಿಷರ್ ಫ್ರೆಂಡ್' ಅವರಿಗೆ ನಾವು ಕೃತಜ್ಞರು. ಬೆಂಗಳೂರಿನಲ್ಲ ಯಕ್ಷಗಾನ ಬೆಳೆದು ಬಂದ ದಾರಿಯ ಬಗ್ಗೆ 'ಯಕ್ಷಪಥ' ನೀಡುವ ಅನೇಕ ಒಳನೋಟಗಳು ಸಾಂಸ್ಕೃತಿಕವಾಗಿ ಮಹತ್ವವಾಗಿವೆ, ದಾಖಲೆಯಾಗಿ ಉಳಿಯಲಿವೆ. ಯಕ್ಷಗಾನ ಆಸಕ್ತರ ಮನಸ್ಸನ್ನು ಈ ಪುಸ್ತಕ ತಣಿಸಿದರೆ ನಮ್ಮ ಶ್ರಮ ಸಾರ್ಥಕ.

26.10.2020
ವಿಜಯದಶಮಿ

ಕೆ. ರವಿಚಂದ್ರ ರಾವ್
ಸಾಧನ ಪ್ರಕಾಶನ
ಬೆಂಗಳೂರು.

ಪರಿವಿಡಿ

ಕಲಾಕ್ಷೇತ್ರದಿಂದ ಕಲಾಕದಂಬದವರೆಗೆ ನೆನಪಿನೋಕುಳಿ

– ಡಾ|| ರಾಧಾಕೃಷ್ಣ ಉರಾಳ

ರವೀಂದ್ರ ಕಲಾಕ್ಷೇತ್ರವೆಂದರೆ ಕಲಾವಿದರ ಪಾಲಿನ ಪುಣ್ಯಕ್ಷೇತ್ರ, ಕರ್ಮಭೂಮಿ. ಇಲ್ಲಿ ಪ್ರದರ್ಶನ ನೀಡುವುದೆಂದರೆ, ನೀಡಿದ್ದೇವೆಂದರೆ ಅದು ಹೆಮ್ಮೆಯ ಸಂಗತಿ. ಈಗ್ಗೆ ಮೂರು ದಶಕಗಳ ಹಿಂದೆ ಅಷ್ಟೇನು ರಂಗಭೂಮಿಗಳಿಲ್ಲದ, ಕೆಲವೆಡೆ ಇದ್ದರೂ ರವೀಂದ್ರ ಕಲಾಕ್ಷೇತ್ರವೇ ಸಾಂಸ್ಕೃತಿಕ ಕೇಂದ್ರವೆನಿಸಿದ್ದ ಕಾಲ. ಯಕ್ಷಗಾನ, ನೃತ್ಯ, ನಾಟಕ, ಸಂಗೀತ ಯಾವುದೇ ಆದರೂ ಆ ಕಲಾವಿದರಿಗೆ ಇಲ್ಲಿ ಪ್ರದರ್ಶನ ನೀಡುವಲ್ಲಿ ಸಿಗುವ ಸಂತಸ ಬೇರೆಲ್ಲಿಯೂ ಸಿಗಲಾರದು. ಅದಕ್ಕೆ ಕಾರಣ ಇಲ್ಲಿನ ವಿಶಾಲ ವೇದಿಕೆ, ರಂಗದ ಬದಿಭಾಗದ ನೇಪಥ್ಯ ಸ್ಥಳ, ಚೌಕಿಮನೆ (ಗ್ರೀನ್ ರೂಮ್), ಪ್ರೇಕ್ಷಾಂಗಣ, ಧ್ವನಿಬೆಳಕು, ಆಸನ ವ್ಯವಸ್ಥೆ ಇತ್ಯಾದಿ.

ಎಂಭತ್ತರ ದಶಕದಲ್ಲಿ ನಾನು ಯಕ್ಷತರಂಗ ಮಕ್ಕಳ ಮೇಳದಲ್ಲಿ ಬಾಲ ಕಲಾವಿದನಾಗಿ ಬಂದಿದ್ದಾಗ ರವೀಂದ್ರ ಕಲಾಕ್ಷೇತ್ರ ಭವ್ಯ ರಂಗಮಂದಿರ ಕಂಡು ಬೆರಗಾದವನು. ಆಗ ಇಲ್ಲಿನ ರಂಗಸ್ಥಳದಲ್ಲಿ, ತುಂಬಿದ ಪ್ರೇಕ್ಷಕರೆದುರು ನಿರ್ವಹಿಸಿದ್ದ ಚಂದ್ರಹಾಸದ ವಿಷಯೆ, ಭೀಷ್ಮ ವಿಜಯದ ಅಂಬೆ ಪಾತ್ರಗಳೂ, ಅಂದಿನ ಪ್ರದರ್ಶನ ಕುರಿತಾಗಿ ಪತ್ರಿಕೆಗಳು ಬರೆದ ಪ್ರಶಂಸಾ ಬರಹಗಳನ್ನು ಕಂಡಾಗ ಆ ದಿನಗಳು ನೆನಪಾಗಿ ಕಾಡುತ್ತವೆ. ಆಗಿನ್ನು 8–9 ನೇ ತರಗತಿ. ಬೇಸಿಗೆ ರಜೆಯಲ್ಲಿ ನಮ್ಮ ಮಕ್ಕಳ ಮೇಳದ ತಿರುಗಾಟ ಬೆಂಗಳೂರು, ಶಿವಮೊಗ್ಗ, ಆಂಧ್ರದ ಕೆಲವು ಪ್ರದೇಶಗಳಲ್ಲಿ ನಡೆಯುತ್ತಿದ್ದು 40–50 ಪ್ರದರ್ಶನಗಳನ್ನು ನೀಡಿದ್ದರೂ ಕೂಡಾ ಕಲಾಕ್ಷೇತ್ರದಲ್ಲಿ ಪ್ರದರ್ಶನ ಕೊಟ್ಟಾಗ ಸಿಕ್ಕ ಖುಷಿ ಬೇರೆಲ್ಲೂ ಸಿಕ್ಕಿರಲಿಲ್ಲ.

ನನ್ನ ಕಾಲೇಜು ಜೀವನ, ಹೊಟ್ಟೆಪಾಡಿಗಾಗಿ ಗೋವಾ, ಬೆಂಗಳೂರು, ಮುಂಬೈ, ತಿರುಗಾಟದ ಸಮಯದ ನಂತರ ಬೆಂಗಳೂರಿನಲ್ಲಿ ಇದ್ದಾಗ ನನ್ನ ಸಂಜೆಯ

ಸಮಯದ ಗೆಳೆಯನಾಗಿದ್ದದ್ದು ಈ ರವೀಂದ್ರ ಕಲಾಕ್ಷೇತ್ರ. ಇಲ್ಲಿನ ಸಾಂಸ್ಕೃತಿಕ ಚಟುವಟಿಕೆ. ಕೆಲವೊಮ್ಮೆ ಟಿಕೆಟ್ ದರ 5–10ರೂ. ಎಂದಾಗ ಅದನ್ನು ಕೊಡಲಾಗದ ಅಸಹಾಯಕತೆಯಲ್ಲಿ ನೋಡದೆ ಹೋದದ್ದು, ಕೆಲವೊಮ್ಮೆ ಅವರಿವರ ಪರಿಚಯದಲ್ಲಿ ಹಾಗೋ ಹೀಗೋ ನೋಡಿದ್ದು, ನೇರವಾಗಿ ಒಳ ನುಸುಳಿ ಪ್ರದರ್ಶನ ನೋಡಿದ ಖುಷಿಯಲ್ಲಿ ಮನೆ ಸೇರಿದ ದಿನಗಳು ಕಲಾಕ್ಷೇತ್ರವನ್ನು ಕಂಡಾಗಲೆಲ್ಲ ಆಗಾಗ ನೆನಪಾಗುತ್ತದೆ.

ರಾತ್ರಿಯಿಡೀ ನಡೆವ ಯಕ್ಷಗಾನಕ್ಕೆ ಕಲಾಕ್ಷೇತ್ರ ಕೊಡಬೇಕೋ ಬೇಡವೋ ಎಂಬ ಗೊಂದಲ ಅದನ್ನು ಪಡೆವುದಕ್ಕಾಗಿ ಹೋರಾಟಗಳ ಮಧ್ಯೆ ಈಗಲೂ ಯಕ್ಷಗಾನ ಪ್ರದರ್ಶನ ನಡೆಯುತ್ತಿದೆ. ಅಹೋರಾತ್ರಿ ಯಕ್ಷಗಾನಕ್ಕೆ ಅಂದಿನಿಂದ ಇಂದಿನವರೆಗೂ ಇಲ್ಲಿ ಕಿಕ್ಕಿರಿದು ಜನ ತುಂಬುತ್ತಿರುವುದು ಇತಿಹಾಸ. ಕಲಾಕ್ಷೇತ್ರದ ಎಡಭಾಗದ ಪ್ರವೇಶ ದ್ವಾರದಲ್ಲೇ ಇದ್ದ ಕಾರಂತರ ಕ್ಯಾಂಟೀನ್ ನಲ್ಲಿ ಬಿಸಿ ಬಿಸಿ ಇಡ್ಲಿ, ಟೀ ಎಲ್ಲವೂ ಊರಿನಲ್ಲಿ ಆಟಗಾರರ ನೆನೆಪನ್ನು ಮರುಕಳಿಸುತ್ತಿತ್ತು.

ಚಿತ್ರನಟ ದಿ। ಸುನೀಲ್ ಯಕ್ಷಗಾನ ವೇಷ ಮಾಡಿದ್ದನ್ನು, ದಣಿದದ್ದನ್ನು ಅದನ್ನು ನೋಡುವುದಕ್ಕೆಂದೇ ವಿಶೇಷ ಜನಸಾಗರ ಸೇರಿದ್ದನ್ನು ನೋಡಿದ್ದಲ್ಲದೆ ಜನಾಕರ್ಷಣೆಗಾಗಿಯೇ ಇಂತಹ ಅನೇಕ ಯಕ್ಷಗಾನ ಪ್ರದರ್ಶನಗಳಿಗೆ ಕಲಾಕ್ಷೇತ್ರ ರಂಗಸ್ಥಳವಾಗಿದ್ದನ್ನು ಪ್ರೇಕ್ಷಕನಾಗಿ ಕುಳಿತು ನಿದ್ದೆಗೆಟ್ಟು ನೋಡಿದ್ದಿದೆ. ಕೆ. ಮೋಹನ್ ಅವರ ನೇತೃತ್ವದ ಯಕ್ಷದೇಗುಲದ ಹತ್ತಾರು ಪ್ರದರ್ಶನಗಳಲ್ಲಿ ಕಲಾವಿದನಾಗಿ ಭಾಗವಹಿಸಿದ್ದು ಅದರಲ್ಲಿಯೂ "ಕಂಸವಧೆ 300" "ಇಳೆಯಣ್ಣನ ಕಥೆ 500, ಮತ್ತು 1000", ಯಕ್ಷಗಾನದ ಸಾಂಪ್ರದಾಯಿಕ ನೃತ್ಯ ಪರಿಚಯಿಸುವ "ವೇಷ ಕೌಶಲ್ಯ" ಹಾರಾಡಿ ಮಹಾಬಲ ಗಾಣಿಗರಿಗೆ ಸನ್ಮಾನ, ಅವರ ಜೋಡಿ ಕೋರೆ ಮುಂಡಾಸಿನ ಕಿರಾತ ಅವರೊಂದಿಗೆ ಭೀಷ್ಮ ವಿಜಯದಲ್ಲಿ ಅಂಬೆಯಾಗಿ ಭಾಗವಹಿಸಿದ್ದು, ಕೊಂಡದಕುಳಿ ರಾಮಚಂದ್ರ ಹೆಗಡೆ, ಗೋಡೆ ನಾರಾಯಣ ಹೆಗಡೆ, ಜಾನಪದ ಕಲಾಶ್ರೀ ಚಿಟ್ಟಾಣಿ ರಾಮಚಂದ್ರ ಹೆಗಡೆ ಮೊದಲಾದ ಯಕ್ಷ ದಿಗ್ಗಜರುಗಳೊಂದಿಗೆ ಯಕ್ಷಗಾನ ನಟನಾಗಿ ನನ್ನ ಮನದಿಂದ ಅಳಿಸಲಾಗದ ನೆನಪನ್ನು ಉಳಿಸಿದೆ.

ಬಹುಶಃ ಯಕ್ಷಗಾನ ಕ್ಷೇತ್ರವೊಂದರಲ್ಲೇ ನಾನು ತೊಡಗಿದ್ದರೆ ಇಂದು ನಾನು ರವೀಂದ್ರ ಕಲಾಕ್ಷೇತ್ರದಲ್ಲಿ ಗುರ್ತಿಸಿಕೊಳ್ಳುವ ರೀತಿಯಲ್ಲಿ ನನ್ನ ಪರಿಚಯದ ವಲಯ, ವಿಸ್ತಾರ ಇರುತ್ತಿರಲಿಲ್ಲವೋ ಏನೋ? ಆದರೆ ನಾಟಕ ರಂಗದಲ್ಲೂ ನಾನು ಕಾಲಿರಿಸಿದ್ದು ಯಕ್ಷ – ರಂಗ ಸೇತುವಾಗಿ ನನ್ನನ್ನು ತೊಡಗುವಂತೆ ಮಾಡಿದೆ. ರಂಗಭೂಮಿಗೆ

ನಾನು ನೃತ್ಯ ನಿರ್ದೇಶಕನಾಗಿ ಕಾಲಿರಿಸುವಂತೆ ಮಾಡಿದ್ದು ಸದಾನಂದ ಭಟ್ ನೇತೃತ್ವದ ಹಂದರ ತಂಡದ "ವೈಶಂಪಾಯನ ತೀರ" ನಾಟಕ. ಮಹಾಬಲಮೂರ್ತಿ ಕೊಡ್ಲೆಕೆರೆ ಅವರ ಕಥೆಯಾಧಾರಿತ ಯಕ್ಷಗಾನ ಕಲಾವಿದರ ಬದುಕನ್ನಾಧರಿಸಿದ ಈ ನಾಟಕವನ್ನು ಸಿಜಿಕೆ ನಿರ್ದೇಶಿಸಿದ್ದು ರಂಗಭೂಮಿಗೆ ನನ್ನನ್ನು ನೃತ್ಯ ನಿರ್ದೇಶಕನಾಗಿ ಪರಿಚಯಿಸಿ ರಂಗ ನಿರ್ದೇಶನದ ತಂತ್ರವನ್ನು ಕಲಿಸಿದವರು.

ಸಿಜಿಕೆ ನಾಟಕವೆಂದರೆ ರವೀಂದ್ರ ಕಲಾಕ್ಷೇತ್ರದಲ್ಲಿ ಒಂದು ವಿಶೇಷ ಸಂಚಲನ. ಕಿಕ್ಕಿರಿದು ತುಂಬುವ ಪ್ರೇಕ್ಷಾಂಗಣ. "ವೈಶಂಪಾಯನ ತೀರ"ದ ಪ್ರಥಮ ಪ್ರದರ್ಶನ. ಕೃಷ್ಣನ ವಿಶ್ವರೂಪ ತೋರುವುದಕ್ಕಾಗಿ ನಾನೇ ಯಕ್ಷ ವೇಷಧಾರಿಯಾಗಿ ರಂಗ ಪ್ರವೇಶಿಸಿ ಕುಣಿದಿದ್ದೆ, ಮಂಡಿ ತಿರುಗಿದ್ದೆ, ಪ್ರೇಕ್ಷಕರ ಚಪ್ಪಾಳೆಯನ್ನೂ ಗಿಟ್ಟಿಸಿಕೊಂಡಿದ್ದೆ. ಆದರೆ ನನಗೆ ಸವಾಲಾಗಿದ್ದು, ಆನಂತರ ಖುಷಿ ಕೊಟ್ಟದ್ದು ಆ ವೇಷವಲ್ಲ. ಬದಲಾಗಿ ರಂಗದಲ್ಲೇ ಸದಾನಂದ ಭಟ್ ಅವರನ್ನು ಭೀಮನಾಗಿ, ಮಂಜು ಕುಂದಾಪುರ ಅವರನ್ನು ಕೌರವನಾಗಿ ಸಿದ್ಧಗೊಳಿಸುವಂತಾದ್ದು. ಎಲ್ಲರಿಗೂ ತಿಳಿದ ಹಾಗೆ ಯಕ್ಷಗಾನ ವೇಷವೊಂದು ಸಿದ್ಧಗೊಳ್ಳಬೇಕೆಂದರೆ ಕನಿಷ್ಠ ಒಂದು ತಾಸು ಬೇಕೇ ಬೇಕು. ಆದರೆ ಈ ನಾಟಕದಲ್ಲಿ ರಂಗದಲ್ಲಿ ಕೆಲ ಪಾತ್ರಗಳು ಸಂಭಾಷಣೆ ನಡೆಸಿದ ನಂತರ ಅಡ್ಡ ಹಿಡಿದಿದ್ದ ತೆರೆ ಸರಿಸುವ 7–8 ನಿಮಿಷಗಳ ಅವಧಿಯಲ್ಲಿ ರಂಗದ ಮೇಲೇ ಪಾತ್ರವನ್ನು ಸಿದ್ಧಗೊಳಿಸಬೇಕಿತ್ತು!!

"ನೀವು ಹೇಗೆ ಮಾಡ್ತೀರೋ, ಬಿಡ್ತೀರೋ.. ಏನು ವೇಷ ಆಭರಣ ಹಾಕ್ತೀರೋ ಗೊತ್ತಿಲ್ಲ. ಆದರೆ ಯಕ್ಷಗಾನ ವೇಷವಾಗಿ ಕಾಣಿಸಬೇಕು. ಅದು ನಿಮಗಿರೋ ಚಾಲೆಂಜ್. ನಿಮ್ಮ ಟ್ಯಾಲೆಂಟ್. ಮಾಡಿ ತೋರಿಸಿ" ಅಂತ ಹೇಳಿದವರು ಸಿಜಿಕೆ. ಸುದರ್ಶನ ಉರಾಳ, ಬಾಲಕೃಷ್ಣ ಭಟ್ ಅವರೂ ಈ ಸಂಧರ್ಭಕ್ಕೆ ಜೊತೆಯಾಗಿ ನಿಂತು ಸಹಕರಿಸಿದರು. ನನ್ನ ಈ ಪ್ರತಿಭೆ ಕಾರ್ಯ ವೈಖರಿ ಕಂಡು ಇಷ್ಟಪಟ್ಟ ಸಿಜಿಕೆ ತಮ್ಮ ಮುಂದಿನೆಲ್ಲ ನಾಟಕ ಪ್ರದರ್ಶನಗಳಲ್ಲಿ ನನ್ನನ್ನು ತೊಡಗಿಸಿಕೊಂಡಿದ್ದರು. ದಂಡೆ, ಚಂದ್ರಶೇಖರ ಕಂಬಾರರ "ಚಕೋರಿ", ರಂಗನಿರಂತರಕ್ಕೆ ಡಾ. ಕೆ.ರಾಮಕೃಷ್ಣಯ್ಯ ನಿರ್ದೇಶಿಸಿದ ಅಲ್ಲಮನ ಬಯಲಾಟ, ಆರ್. ನಾಗೇಶ್ ನಿರ್ದೇಶನದ "ದಿಲ್ಲಿ ಚಲೋ" ಸುರೇಶ ಆನಗಳ್ಳಿ ನಿರ್ದೇಶನದ "ಮೇಘದೂತ", ಪ್ರಸನ್ನ ಅವರ "ಯಂತ್ರರಾಕ್ಷಸ ಮರ್ಧಿನಿ", ಕೆ.ಎಸ್.ಡಿ.ಎಲ್ ಚಂದ್ರು ಅವರ "ಯಹೂದಿ ಹುಡುಗಿ, ಮೈಕೋ ಶಿವಣ್ಣರ "ಜೀವನ ನಾಟಕ", ಪ್ರಮೋದ್ ಶಿಗ್ಗಾಂವ್, ರಾಮಕೃಷ್ಣ ಬೆಳ್ತೂರ್, ದಿನೇಶ್ ಮಂಗ್ಳೂರ್ ಮೊದಲಾದ ಹೀಗೆ ಅನೇಕ ಕನ್ನಡದ ರಂಗ ನಿರ್ದೇಶಕರುಗಳ

ಒಡಾನಾಟದಲ್ಲಿ ನೃತ್ಯ ನಿರ್ದೇಶಕನಾಗಿ, ಕಲಾವಿದನಾಗಿ ಪಾಲ್ಗೊಳ್ಳುವ ಮೂಲಕ ಕಲಾಕ್ಷೇತ್ರದ ಬಂಧ ಗಟ್ಟಿಗೊಳ್ಳುತ್ತಲೇ ಹೋಯ್ತು.

ಆವರೆಗೆ ರಂಗಭೂಮಿಯಲ್ಲಿ ಹೆಚ್ಚಾಗಿ ನೃತ್ಯ ನಿರ್ದೇಶಕನಾಗಿಯೇ ಕಾಣಿಸಿಕೊಳ್ಳುತ್ತಿದ್ದ ನಾನು ನಾಟಕ ಎಂ.ಎ. ಸಮಯದಲ್ಲಿ ಸಿಕ್ಕ ಚಂಪಾ ಶೆಟ್ಟಿಯವರ ಒತ್ತಾಯದ ಮೇರೆಗೆ ಅವರ ನಿರ್ದೇಶನದ ಒಂದು ಅದ್ಭುತ ನಾಟಕ "ಗಾಂಧಿಬಂದ" ದಲ್ಲಿ ಐತು ಎಂಬ ಡೊಳ್ಳು ಹೊಡೆಯುವ ಹರಿಜನ ಪಾತ್ರವಾಗಿ ಕಾಣಿಸಿಕೊಂಡೆ. ನಂತರದಲ್ಲಿ "ಅಕ್ಕು" ನಾಟಕದಲ್ಲಿ ಪುಟ್ಟಮ್ಮತ್ತೆ ಹೀಗೆ ಪ್ರತೀ ಬಾರಿಯೂ ಮಾಡಿದ ನನ್ನ ಪಾತ್ರವನ್ನೂ ನನ್ನ ರಂಗಭೂಮಿ ಗೆಳೆಯರೇ ಗುರ್ತಿಸದೆ ಬೆರಗಾಗಿದ್ದರು. ಯಕ್ಷಗಾನವೆಂದರೆ ದಕ ಉಕ ಅವರಿಗೆ ಸರಿ ಎನ್ನುತ್ತಿದ್ದ ಎಷ್ಟೋ ಮಂದಿ ಗೆಳೆಯರು ನನ್ನ ಒತ್ತಾಯದ ಮೇರೆಗೆ ನಾನು ಯಕ್ಷಗಾನ ಕಲಾವಿದ ಎಂಬುದನ್ನೂ ತಿಳಿದು ಅಭಿಮಾನದಿಂದ ಬಂದು ನೋಡಿದ್ದಲ್ಲದೆ ನಂತರ ಇಡೀ ನಮ್ಮ ತಂಡದ ಅಭಿಮಾನಿಗಳಾಗಿಯೇ ಬದಲಾಗಿದ್ದಾರೆ. ಹಾಗೆಯೇ ಯಕ್ಷಗಾನದ ಬಹಳಷ್ಟು ಮಂದಿ ನಮ್ಮ ನಾಟಕ ನೋಡಿ ಮೆಚ್ಚಿ ಮಾತನಾಡಿದ್ದಾರೆ. ಹೀಗೆ ಯಕ್ಷಗಾನ, ರಂಗಭೂಮಿಯ ಕೊಂಡಿಯನ್ನಾಗಿ, ಕಲೆಗಳ ಸಂಗಮಕ್ಕೆ ಪ್ರಚೋದನಯೆಯಾಗಿ ನನ್ನ ಸಿದ್ಧ ಮಾಡಿದ್ದು ರವೀಂದ್ರ ಕಲಾಕ್ಷೇತ್ರ.

ಈ ಕಲಾ ಪ್ರೇರಣೆ, ಪ್ರೇಕ್ಷಕರ ಸ್ಪಂದನೆ ನನ್ನದೇ ಆದ ಕಲಾಕದಂಬ ಆರ್ಟ್ ಸೆಂಟರ್ ಹುಟ್ಟುಹಾಕಲು ಕಾರಣವಾಯ್ತು. ಎಸ್.ಎನ್.ಪಂಜಾಜೆಯವರ ಮುಖಂಡತ್ವದಲ್ಲಿ ನಡೆದ ಮೂಡಲಪಾಯ, ಪಡುವಲಪಾಯ, ದೊಡ್ಡಾಟ, ಸಣ್ಣಾಟಗಳು ಸೇರಿದಂತೆ ನಡೆದ ಯಕ್ಷಗಾನ ಸಮ್ಮೇಳನ, ಅಹೋರಾತ್ರಿ ನಡೆದ ಯಕ್ಷಗಾನ ಕಾರ್ಯಕ್ರಮದಲ್ಲಿ ನಮ್ಮ ತಂಡ ಭಸ್ಮಾಸುರ ಮೋಹಿನಿ ಯಕ್ಷಗಾನ ಪ್ರದರ್ಶಿಸಿತ್ತು.

ದಿನಗಳೆದಂತೆ ರವೀಂದ್ರ ಕಲಾಕ್ಷೇತ್ರ ಸಿಗುವುದು ಕಷ್ಟವಾದಾಗ, ಬರುವ ದೂರದ ಪ್ರೇಕ್ಷಕರಿಗೂ ಟ್ರಾಫಿಕ್ ಕಿರಿಕಿರಿಯಾದಾಗ ನಗರದ ವಿವಿಧ ಬಡಾವಣೆಗಳಲ್ಲೂ ಸಾಂಸ್ಕೃತಿಕ ಚಟುವಟಿಗಳನ್ನು ನಡೆಸಬೇಕೆನ್ನುವ ಕಾರಣದಿಂದ, ನನ್ನ ಕಲಾಕದಂಬ ಆರ್ಟ್ ಸೆಂಟರ್ ಸಂಸ್ಥೆಯ ಮೂಲಕ ಯೋಜನೆಗಳನ್ನು ರೂಪಿಸಿದೆ. ಯುವ ಪೀಳಿಗೆಯಲ್ಲಿ ಸಾಂಸ್ಕೃತಿಕ ಬೀಜ ಬಿತ್ತುವ, ನೆಲೆಯಲ್ಲಿ ಆರಂಭ ಗೊಂಡಿದ್ದೆ ಬೇಸಿಗೆ ಶಿಬಿರ ತರಗತಿ ಹಾಗೂ ಮಾಸದ ಮೆಲುಕು ಸರಣಿ. ಕಲಾಕ್ಷೇತ್ರದ ಕಾರ್ಯಕ್ರಮಗಳಿಂದ ಪ್ರೇರಿತನಾದ ನಾನು ಆರಂಭಿಸಿದ ಹೆಜ್ಜೆ ತರಗತಿ ಇಂದು ಮುರಳೀಧರ ನಾವಡ, ವಿಶ್ವನಾಥ ಉರಾಳ, ಅಂಬರೀಶ್ ಭಟ್, ದೇವರಾಜ ಕರಬ, ಸತ್ಯನಾರಾಯಣ್,

ಸಚ್ಚಿದಾನಂದಮೂರ್ತಿ, ಕೆ.ಎನ್. ಅಡಿಗ ಮೊದಲಾದವರ ಸಹಕಾರದಿಂದ ಪ್ರತೀ ತಿಂಗಳಾಂತ್ಯದಲ್ಲಿ ನಡೆವ ಸರಣಿಯಾಗಿ ಇಂದು "ಮಾಸದ ಮೆಲುಕು 75"ರ ಹೊಸ್ತಿಲಿನಲ್ಲಿದೆ.

ಬಿಎಸ್.ಎನ್.ಎಲ್. ನೌಕರರ ಮಕ್ಕಳಿಗೆ ಏರ್ಪಡಿಸಿದ್ದ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಕ್ಕಳು ಪ್ರದರ್ಶನ ನೀಡಿದ ಯಕ್ಷಗಾನದ ನಿರ್ದೇಶಕನೂ ಆಗಿದ್ದೆ. ಒಟ್ಟಿನಲ್ಲಿ ಕಳೆದ ಮೂರೂವರೆ ದಶಕದಲ್ಲಿ ಈ ರವೀಂದ್ರ ಕಲಾಕ್ಷೇತ್ರದ ವೇದಿಕೆಯಲ್ಲಿ ನಿರ್ದೇಶಕನಾಗಿ, ರಂಗ ನೃತ್ಯ ನಿರ್ದೇಶಕನಾಗಿ, ಯಕ್ಷಗಾನ ಕಲಾವಿದನಾಗಿ, ನೇಪಥ್ಯ ಕಲಾವಿದನಾಗಿ, ಪ್ರೇಕ್ಷಕನಾಗಿ ಮಾತ್ರವಲ್ಲದೆ ಮನಸಿಗೆ ಬೇಸರವೆನಿಸಿದಾಗ ಒಮ್ಮೆ ಅಲ್ಲಿ ಸುತ್ತಿ ರಂಗ ಕಲಾವಿದರನ್ನು, ರಂಗದ ಮುಂದೆ ಹಿಂದಿನ ವಿವಿಧ ಮುಖಗಳನ್ನು, ಮುಖವಾಡಗಳನ್ನು, ನಾನಾ ತರದ ವ್ಯಕ್ತಿಗಳನ್ನು ವ್ಯಕ್ತಿತ್ವಗಳನ್ನು ಕಂಡು ಹರಟಿ ಬಂದರೆ ಮನಸು ಹಗುರೆನಿಸುವ ತಾಣವಾಗಿಯೂ ಕಲಾಕ್ಷೇತ್ರದೊಂದಿಗಿನ ಸಂಬಂಧ ಎಂದೂ ಅಳಿಸಲಾಗದ್ದು. ರಂಗ ತಾಲೀಮು, ಶಿಸ್ತಿನಿಂದ ಹಿಡಿದು ಆರ್ಯಭಟ ಪ್ರಶಸ್ತಿಯನ್ನು ಪಡೆಯುವವರೆಗೂ ಕಲಾಕ್ಷೇತ್ರದ ನೆನಪು ವರ್ಣಮಯವಾಗಿದೆ.

– **ಡಾ॥ ರಾಧಾಕೃಷ್ಣ ಉರಾಳ ಕೆ.**
#858, ಕಲಾಗುಡಿ, ವಿಶ್ವೇಶ್ವರಯ್ಯ ಲೇ ಔಟ್,
4 ನೇ ಬ್ಲಾಕು, ಬೆಂಗಳೂರು–61. ದೂ: 9448510582

ಲೇಖಕರ ಕಿರುಪರಿಚಯ

ತಮ್ಮ ಅಚ್ಚುಕಟ್ಟಾದ ಸ್ತ್ರೀ ವೇಷದ ಮೂಲಕ ಹವ್ಯಾಸಿ ಕಲಾವಿದರಾಗಿ, ಅತಿಥಿ ಕಲಾವಿದರಾಗಿ ಖ್ಯಾತಿ ಗಳಿಸಿದವರು. ಕಲಿಯುವವರಿಗೆ ಯಕ್ಷಗಾನ ಶಿಕ್ಷಣವನ್ನು ಸಮರ್ಥವಾಗಿ ಧಾರೆಯೆರೆಯಬಲ್ಲ ಶಕ್ತಿಯುಳ್ಳ ಇವರು ಬೆಂಗಳೂರು ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಯಕ್ಷದೇಗುಲದಲ್ಲಿ ಸಾಕಷ್ಟು ವರ್ಷಗಳಷ್ಟು ಸೇವೆ ಸಲ್ಲಿಸಿ ಇದೀಗ ತಮ್ಮದೇ ಆದ 'ಯಕ್ಷ ಕಲಾ ಕದಂಬ ಆರ್ಟ್ಸ್' ಸೆಂಟರ್ ಸ್ಥಾಪಿಸಿ ಯಕ್ಷಗಾನ ಪ್ರದರ್ಶನಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಚಿಕ್ಕಕಲ್ಲಸಂದ್ರದ ಸಿದ್ಧಿವಿನಾಯಕ ದೇವಸ್ಥಾನದಲ್ಲಿ ಪ್ರತಿತಿಂಗಳು 'ಮಾಸದ ಮೆಲುಕು' ಎಂಬ ಹೆಸರಿನಲ್ಲಿ ಯಕ್ಷಗಾನವನ್ನು ತಪ್ಪದೇ ಕಳೆದ 75 ತಿಂಗಳುಗಳಿಂದ ನಡೆಸಿಕೊಂಡು ಬರುತ್ತಿದ್ದಾರೆ. ಡಾ॥ ಉರಾಳರು ಯಕ್ಷಗಾನ ಮಾತ್ರವಲ್ಲದೆ ನಾಟಕರಂಗದಲ್ಲಿ ಸಕ್ರಿಯರು. ವೈದೇಹಿಯವರ ಕಥೆಗಳನ್ನು ಆಧರಿಸಿ ಪ್ರದರ್ಶನಗೊಳ್ಳುತ್ತಿರುವ 'ಅಕ್ಕು' ನಾಟಕದ ಪ್ರಧಾನ ಪಾತ್ರದಲ್ಲಿ ರಾಜ್ಯದಾದ್ಯಂತ ಹೆಸರು ಮಾಡಿದ್ದಾರೆ. ಯಕ್ಷಗಾನ ಸ್ತ್ರೀ ಪಾತ್ರಗಳಲ್ಲಿ ಅದ್ವಿತೀಯ ಅಭಿನಯಗಳ ಮೂಲಕ ಎಲ್ಲ ರಸಿಕರ ಮನ ಗೆದ್ದಿರುವ ಕಲಾವಿದರು. 'ಅಮ್ಮಚ್ಚಿ ಎಂಬ ನೆನಪು' ಚಲನ ಚಿತ್ರದಲ್ಲಿ ಪಾತ್ರ ಮಾಡಿ ಜನಪ್ರಿಯರಾಗಿದ್ದಾರೆ.

ರವೀಂದ್ರ ಕಲಾಕ್ಷೇತ್ರದಲ್ಲಿ ಮೊಳಗಿದ ಚಂಡೆ

-ಎ.ಪಿ. ಕಾರಂತ್

ಕರಾವಳಿ ಹಾಗೂ ಮಲೆನಾಡ ಜನರಿಗೆ ಯಕ್ಷಗಾನದೊಂದಿಗೆ ಗಾಢಸಂಬಂಧ ಅಸದೃಶ್ಯವಾದದ್ದು. ಉದ್ಯೋಗ ಅರಸಿ ಹುಟ್ಟೂರನ್ನು ಬಿಟ್ಟು ಯಾವುದೇ ದೂರದ ಊರಿಗೆ ಹೋದರೂ ಬಾಲ್ಯದಲ್ಲಿ ಅಂಟಿಕೊಂಡ ಆಟ ನೋಡುವ ಗೀಳು ಬಿಡಲಾರದ್ದು. ಬೆಂಗಳೂರು, ಮುಂಬಯಿ, ದೆಹಲಿ, ದುಬೈ ಮುಂತಾದ ಮಹಾನಗರಗಳಿಗೆ ಜೀವನೋಪಾಯಕ್ಕಾಗಿ ಹೋಗಿ ನೆಲೆಸಿದರೂ ತಮ್ಮೊಂದಿಗೆ ತಮ್ಮ ನೆಚ್ಚಿನ ಕಲೆಯನ್ನು ಮನಸ್ಸಿನಲ್ಲಿ ತುಂಬಿಕೊಂಡೇ ಇರುತ್ತಾರೆ. ಅವಕಾಶ ಸಿಕ್ಕಿದಾಗೆಲ್ಲ ಆ ಕಲೆಯನ್ನು ಆಸ್ವಾದಿಸದೇ ಇರುವುದಿಲ್ಲ. ಕಳೆದ ಶತಮಾನದಲ್ಲಿ ಹಾಗೆ ಬೆಂಗಳೂರಿಗರಿಗೆ ಬಂದ ಅಸಂಖ್ಯ ಕರಾವಳಿಯವರ ಪಾಲಿಗೆ ಯಕ್ಷಗಾನದ ಸೊಗಡು ಲಭಿಸುತ್ತಿದ್ದುದು ಮಳೆಗಾಲದಲ್ಲಿ. ಬೇಸಿಗೆಯಲ್ಲಿನ ಆಟದ ಕಾಲ ಮುಗಿದು ಯಕ್ಷಗಾನ ಕಲಾವಿದರು ಪ್ರವಾಸೀ ಮೇಳದ ಹೆಸರಿನಲ್ಲಿ ಬೆಂಗಳೂರಿಗೆ ಬಂದಾಗ ಅವರ ಪ್ರದರ್ಶನಕ್ಕೆ ಆಶ್ರಯ ತಾಣವಾಗುತ್ತಿದ್ದುದು ಒಂದೋ ಟೌನ್‌ಹಾಲ್ ಇಲ್ಲವೇ ರವೀಂದ್ರ ಕಲಾಕ್ಷೇತ್ರ. ಚಾತಕಪಕ್ಷಿಯಂತೆ ಕಾಯುತ್ತಿದ್ದ ಯಕ್ಷಗಾನದ ಅಭಿಮಾನಿಗಳಿಗೆ ಯಕ್ಷಸಿಂಚನವಾಗುತ್ತಿದ್ದುದು ಮಳೆಗಾಲದಲ್ಲಿ ಮಾತ್ರ. ಹೋಟೆಲ್ ಉದ್ಯಮಿಗಳು, ಹೋಟೆಲ್ ನೌಕರರು, ಬ್ಯಾಂಕ್ ಉದ್ಯೋಗಿಗಳೆಲ್ಲ ರಾತ್ರಿಯೆಲ್ಲಾ ಕುಳಿತು ಆಟ ನೋಡಿ, ಮಾರನೇ ದಿನದಂದು ಅದೇ ಗುಂಗಿನಲ್ಲಿದ್ದು, ಸಿಕ್ಕಿದವರೊಡನೆಲ್ಲ ಅದರ ಬಗ್ಗೆ ಚರ್ಚಿಸುತ್ತಿದ್ದ ಕಾಲವದು. ಅಂತಹ ದಿನಗಳನ್ನು ನೆನಪಿಸಿಕೊಳ್ಳುವುದೆಂದರೆ ಮನಸ್ಸಿಗೆ ಹಿತ ಹಾಗೂ ಮುದ. ರವೀಂದ್ರ ಕಲಾಕ್ಷೇತ್ರಕ್ಕೆ ಐವತ್ತು ತುಂಬಿ ಸಂಭ್ರಮಿಸುವ ಗಳಿಗೆಯಲ್ಲಿ ನಾಲ್ಕು ದಶಕಗಳ ಕಾಲ ಇಲ್ಲಿನ ಆವರಣದಲ್ಲಿ ಆಟ ನೋಡಿ ಸಂಭ್ರಮಿಸಿದ ದಿನಗಳ ನೆನಪನ್ನು ಹಂಚಿಕೊಳ್ಳುವುದು ಸಂತೋಷದ ಸಂಗತಿ.

ಹೋಟೆಲ್ ಉದ್ಯೋಗಿಯಾಗಿ, 1980ರಿಂದ ನಾಲ್ಕು ವರ್ಷಗಳ ಕಾಲ ಯಕ್ಷಗಾನ ನೋಡಲೆಂದು ಇಲ್ಲಿಗೆ ಬರುವುದೇ ಸಂಭ್ರಮದ ಸಂಗತಿಯಾಗಿತ್ತು.

ಮುಂದೆ 1984 ರಿಂದ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ಹೋಟೆಲ್ ಉದ್ಯಮಿಯಾಗಿದ್ದು ಯಕ್ಷಗಾನದ ಒಡನಾಟ ದಕ್ಕಿದ್ದು ಪುಣ್ಯವಿಶೇಷ. ಯಕ್ಷಗಾನ ಪ್ರದರ್ಶನಕ್ಕೆಂದೇ ಹೆಚ್.ಬಿ. ರಾಜೀವಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಹಾಗೂ ನನ್ನ ಕಾರ್ಯದರ್ಶಿತನದಲ್ಲಿ ಬೆಂಗಳೂರಿನಲ್ಲಿ 'ಯಕ್ಷಕಲಾರಂಗ' ಎಂಬ ಹವ್ಯಾಸಿ ಸಂಸ್ಥೆ ಹುಟ್ಟುಹಾಕಿದೆವು. ಇದರ ಉದ್ದೇಶ ಯಕ್ಷಗಾನ ಪ್ರದರ್ಶನ. ಉಳಿದ ಗೆಳೆಯರಾದ ನಾಗೇಶ ಶೆಟ್ಟಿ, ಶ್ರೀನಿವಾಸ ಅಲ್ಸೆ, ಸುಧೀಂದ್ರ ಹೊಳ್ಳ ಮುಂತಾದವರ ಸಹಕಾರದಲ್ಲಿ ವರ್ಷಂಪ್ರತಿ ಯಕ್ಷಗಾನ ಪ್ರದರ್ಶನವನ್ನು ಈ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ನಡೆಸಿಕೊಂಡು ಬರುತ್ತಿದ್ದೆವು. ಮೊದಲಿಗೆಲ್ಲ ಟೌನ್‌ಹಾಲ್‌ನಲ್ಲಿ ರಾತ್ರಿಯೆಲ್ಲಾ ಆಟ ನಡೆಯುತ್ತಿತ್ತು. ರವೀಂದ್ರ ಕಲಾಕ್ಷೇತ್ರದಲ್ಲಿ 1984ರಲ್ಲಿ ನಡೆದ ಯಕ್ಷಗಾನ ಪ್ರದರ್ಶನವು ವಿಳಂಬವಾಗಿ ಪ್ರಾರಂಭವಾದಾಗ ಪ್ರೇಕ್ಷಕರ ದಾಂಧಲೆಗೆ ಗುರಿಯಾಗಬೇಕಾಯಿತು. ಇದರಿಂದ ಮುಂದಿನ 3–4 ವರ್ಷಗಳ ಕಾಲ ರಾತ್ರಿಯ ಯಕ್ಷಗಾನ ಪ್ರದರ್ಶನಕ್ಕೆ ರವೀಂದ್ರ ಕಲಾಕ್ಷೇತ್ರ ಲಭ್ಯವಿಲ್ಲದಿದ್ದರೂ ಹಗಲಿನಲ್ಲಿ ಯಕ್ಷಗಾನ ಪ್ರದರ್ಶನ ನಡೆಯುತ್ತಿದ್ದವು. 1986ರಲ್ಲಿ ಖ್ಯಾತ ಸಾಹಿತಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ॥ ಚಂದ್ರಶೇಖರ ಕಂಬಾರ ಅವರು ನಾಟಕ ಅಕಾಡೆಮಿ ಅಧ್ಯಕ್ಷರಾಗಿದ್ದಾಗ ಪ್ರಾರಂಭಗೊಂಡ ಸಂಸ ಬಯಲು ರಂಗ ಮಂದಿರವು ಅನೇಕ ಉತ್ತಮ ಯಕ್ಷಗಾನ ಕಾರ್ಯಕ್ರಮಗಳಿಗೆ ಸಾಕ್ಷಿಯಾಯಿತು.

1980ರ ದಶಕದಲ್ಲಿ ಪ್ರದರ್ಶಿತಗೊಳ್ಳುತ್ತಿದ್ದ ಯಕ್ಷಗಾನವು ಪ್ರಸಿದ್ಧ ಸ್ತ್ರೀ ವೇಷಧಾರಿ ಕೋಟ ವೈಕುಂಠ ಅವರು ಬೆಂಗಳೂರಿಗೆ ಕರೆದುಕೊಂಡು ಬರುತ್ತಿದ್ದ ಅಮೃತೇಶ್ವರಿ ಮೇಳದವರ ಕಲಾವಿದರಿಂದ ಕೂಡಿಕೊಂಡಿತ್ತು. ಅದೇ ರೀತಿ ಅರಾಟೆ ಮಂಜುನಾಥ ಅವರ ಶ್ರೀ ಗಣೇಶ ಪ್ರವಾಸಿ ಯಕ್ಷಗಾನ ತಂಡವು ಅಸಂಖ್ಯ ಆಟಗಳನ್ನು ರವೀಂದ್ರ ಕಲಾಕ್ಷೇತ್ರದಲ್ಲಿ ಆಡಿ ಜನರನ್ನು ರಂಜಿಸಿದ್ದು ಈಗ ಇತಿಹಾಸ. 1990ರ ದಶಕದಲ್ಲಿ ಸಾಲಿಗ್ರಾಮ ಮೇಳವು ಶ್ರೀ ಕಿಶನ್ ಹೆಗ್ಡೆಯವರ ಮಾಲೀಕತ್ವದಲ್ಲಿ ಬೆಂಗಳೂರಿಗೆ ಬಂದಾಗ ದಿ. ಕಾಳಿಂಗನಾವಡರ ತಾರಾಮೌಲ್ಯದಿಂದಾಗಿ ಯಕ್ಷಗಾನದ ಅಭಿಮಾನಿ ಬಳಗಕ್ಕೆ ಕಲಾಪ್ರೇಮದ ಸಂಚಲನವನ್ನು ಉಂಟುಮಾಡಿ ಜನಮನವನ್ನು ಗೆದ್ದಿತು. 1984ರ ಆಗಸ್ಟ್‌ನಲ್ಲಿ ನಡೆದ ಕಾಳಿಂಗನಾವಡರದ್ದೇ ರಚನೆಯಾದ 'ನಾಗಶ್ರೀ' ಪ್ರಸಂಗವು ಉಂಟುಮಾಡಿದ ಅಲೆ ಮರೆಯಲಾರದ್ದು. ಅವರೇ ಭಾಗವತರಾಗಿದ್ದು ಜನರಲ್ಲಿ ಹುಚ್ಚನ್ನು ಎಬ್ಬಿಸಿದರು. ಆ ವರ್ಷದ ಅವರ ಪ್ರದರ್ಶನದಲ್ಲಿ ಮದ್ದಲೆಗಾರರಾಗಿ ಪ್ರಭಾಕರ ಭಂಡಾರಿ, ಚಂಡೆ ವಾದಕರಾಗಿ ಮಂದರ್ತಿರಾಮರ ಜೋಡಿ ಇದ್ದಿತ್ತು. ಮುಮ್ಮೇಳದಲ್ಲಿ ಶಿಥಿಲನಾಗಿ ಕೃಷ್ಣಯಾಜಿ ಬಳ್ಕೂರು, ಸುದರ್ಶನನಾಗಿ ಜಲವಳ್ಳಿ

ವೆಂಕಟೇಶ್‌ರಾವ್ ಪ್ರಭಾಂಗಿಣಿಯಾಗಿ ಅರಾಟೆ ಮಂಜುನಾಥರು ಶ್ವೇತದತ್ತನಾಗಿ ಐರೋಡಿ ಗೋವಿಂದಪ್ಪ, ದಾರುಕೆಯಾಗಿ ರಾಮನಾಯರಿ, ನಾಗಶ್ರೀಯಾಗಿ ಭಾಸ್ಕರ ಜೋಷಿ, ಶುಭ್ರಾಂಗನಾಗಿ ಶಿರಿಯಾರ ಮಂಜುನಾಯ್ಕ, ಕೈರವನಾಗಿ ಖ್ಯಾತ ಹಾಸ್ಯಗಾರರಾದ ಮುಖ್ಯಪ್ರಾಣ ಕಿನ್ನಿಗೋಳಿ, ಶೈಥಿಲ್ಯನಾಗಿ ಗೋಪಾಲ ಆಚಾರಿಯವರು ಅಭಿನಯಿಸಿದ್ದರು. ಆ ರಾತ್ರಿ ಕಂಡು ಉಂಡ ಆಟದ ಸೊಗಸು ಇಂದಿಗೂ ಮರೆಯಲಾಗುತ್ತಿಲ್ಲ. ಇದೇ ತಂಡದವರು 1985-86ರ ಸಂದರ್ಭದಲ್ಲಿ ಪ್ರದರ್ಶಿಸುತ್ತಿದ್ದ 'ಚೆಲುವೆ ಚಿತ್ರಾವತಿ' ಕೂಡ ಮರೆಯಲಾರದ್ದಾಗಿದೆ.

ಕೋಟ ವೈಕುಂಠ ಅವರು ಹಾಗೂ ಅರಾಟೆ ಮಂಜುನಾಥ ಅವರು ಅನೇಕ ಅತಿಥಿ ಕಲಾವಿದರನ್ನು ಈ ಬೆಂಗಳೂರಿನ ಕಲಾಕ್ಷೇತ್ರದ ರಂಗಕ್ಕೆ ಪರಿಚಯಿಸಿದ್ದಾರೆ. ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಆಟಗಳಲ್ಲಿ ಆ 15-20 ವರ್ಷಗಳಲ್ಲಿ ಬೆಂಗಳೂರಿಗರ ಪಾಲಿಗೆ ಚಿರಪರಿಚಿತರಾದವರು ಕೆರೆಮನೆ ಮಹಾಬಲ ಹೆಗಡೆ, ಕೆರೆಮನೆ ಶಂಭು ಹೆಗಡೆ, ಚಿಟ್ಟಾಣಿ ರಾಮಚಂದ್ರ ಹೆಗಡೆ, ಕುಂಬಳೆ ಸುಂದರ ರಾವ್, ಆ್ಯಕ್ಟರ್ ಜೋಷಿ, ವಾಸುದೇವ ಸಾಮಗ, ಸಾಲ್ಕೋಡು ಗಣಪತಿ ಹೆಗಡೆ, ಎಂ.ಎ.ನಾಯಕ್, ಗೋಡೆ ನಾರಾಯಣ ಹೆಗಡೆ, ಶಿರಿಮಠ ಪಂಜುನಾಯ್ಕ, ಶಿರಿಯಾರ ಮಂಜುನಾಯ್ಕ, ಗಜಾನನ ಭಂಡಾರಿ ಹಳದಿಪುರ, ಕುಂಬಳೆ ಶ್ರೀಧರರಾವ್, ಪುತ್ತೂರು ಶ್ರೀಧರ ಭಂಡಾರಿ, ಪುತ್ತೂರು ನಾರಾಯಣ ಹೆಗಡೆ, ಹಿರಿಯ ಹಾಸ್ಯಗಾರರುಗಳಾದ ಪೆರುವಾಡಿ ನಾರಾಯಣ ಭಟ್, ನಯನ್‌ಕುಮಾರ, ಪ್ರಸಿದ್ಧ ಸ್ತ್ರೀ ವೇಷಧಾರಿಗಳಾದ ಪಾತಾಳ ವೆಂಕಟರಮಣ ಭಟ್, ರಾಮನಾಯರಿ, ಜಲವಳ್ಳಿ ವೆಂಕಟೇಶ ರಾವ್, ಮಂಟಪ ಪ್ರಭಾಕರ ಉಪಾಧ್ಯ, ಕೃಷ್ಣಯಾಜಿ ಬಳ್ಕೂರು, ನಗರ ಜಗನ್ನಾಥ್ ಶೆಟ್ಟಿ, ಐರೋಡಿ ಗೋವಿಂದಪ್ಪ, ಭಾಸ್ಕರ ಜೋಷಿ, ತೀರ್ಥಹಳ್ಳಿ ಗೋಪಾಲಾಚಾರಿ, ಹಳ್ಳಾಡಿ ಜಯರಾಮಶೆಟ್ಟಿ, ಮುಖ್ಯಪ್ರಾಣ ಕಿನ್ನಿಗೋಳೀ, ಗೋಡೆನಾರಾಯಣ ಹೆಗಡೆ, ಭಾಗವತರುಗಳಾಗಿ ಖ್ಯಾತಿ ಗಳಿಸಿದ್ದ ಶ್ರೀ ನಾರಾಣಪ್ಪ ಉಪ್ಪೂರ, ಸುಬ್ರಹ್ಮಣ್ಯ ಧಾರೇಶ್ವರ, ಕಾಳಿಂಗನಾವಡ, ಗಜಾನನ ಭಂಡಾರಿ, ಕೆಮ್ಮಣ್ಣು ಆನಂದ ಮುಂತಾದವರು. ಆಗ ಪೆರ್ಡೂರು ಮೇಳದವರು ಪ್ರದರ್ಶಿಸುತ್ತಿದ್ದ ಪ್ರಸಂಗಗಳಲ್ಲಿ 'ಶೂದ್ರ ತಪಸ್ವಿನಿ' ಖ್ಯಾತಿಗೊಂಡಿತ್ತು. ಆ ಮೇಳದಲ್ಲಿ ಆಗ ಭಾಗವತರಾಗಿ ಶ್ರೀ ಸುಬ್ರಹ್ಮಣ್ಯ ಧಾರೇಶ್ವರ ಮದ್ದಲೆಗಾರರಾಗಿ ದುರ್ಗಪ್ಪ ಗುಡಿಗಾರರು, ಚಂಡೆಯಲ್ಲಿ ಮೂರೂರು ವಿಷ್ಣು ಭಟ್ ಇದ್ದರೆ ಮುಮ್ಮೇಳದಲ್ಲಿ ಗೋಡೆ ನಾರಾಯಣ ಹೆಗಡೆ, ತೀರ್ಥಹಳ್ಳಿ ಗೋಪಾಲಾಚಾರಿ, ನಗರ ಜಗನ್ನಾಥ ಶೆಟ್ಟಿ, ಮುಖ್ಯ ಪ್ರಾಣ ಕಿನ್ನಿಗೋಳಿ, ರಾಮನಾಯರಿಯವರು ಇದ್ದರು. ಅಂದು ಪ್ರಚುರದಲ್ಲಿದ್ದ ಪ್ರಸಂಗಗಳಲ್ಲಿ

ರಾಜಾಬ್ರಹ್‌ದ್ರಥ, ಯಕ್ಷಲೋಕ ವಿಜಯ, ಭಸ್ಮಾಸುರ ಮೋಹಿನಿ, ದ್ರುಪದ ಬಂಧನ, ಕೀಚಕ ವಧೆ, ಗದಾಯುದ್ಧ, ಭೀಷ್ಮವಿಜಯ, ಕಾಳಿದಾಸ, ಚಂದ್ರಹಾಸ ಚರಿತೆ ಮುಂತಾದವುಗಳು ಪ್ರಮುಖವಾದವು.

ಕಳೆದ ಶತಮಾನದ ತೆಂಕುತಿಟ್ಟು ಮೇಳಗಳಲ್ಲಿ ಹೆಚ್ಚಾಗಿ ಪ್ರದರ್ಶನಗೊಂಡು ಖ್ಯಾತಿ ಗಳಿಸಿದ ಪ್ರಸಂಗಗಳಲ್ಲಿ ಗುಣಸುಂದರಿ, ಪಾತಾಳ ವಿಜಯ, ತುಳಸಿಜಲಂಧರ ಮುಂತಾದವು. ಈ ಪ್ರಸಂಗಗಳು ಬೆಂಗಳೂರಿನಲ್ಲೂ ಜಯಭೇರಿ ಬಾರಿಸಿವೆ. ಇವುಗಳಲ್ಲದೆ ಪೌರಾಣಿಕ ಪ್ರಸಂಗಗಳಾದ ಪಟ್ಟಾಭಿಷೇಕ, ರಾವಣವಧೆ, ಕರ್ಣಾರ್ಜುನ ಕಾಳಗ ಮುಂತಾದವುಗಳು ಕೂಡ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶಿತವಾಗಿವೆ. ತೆಂಕಿನ ಕಲಾವಿದರಲ್ಲಿ ಶೇಣಿ ಗೋಪಾಲಕೃಷ್ಣ ಭಟ್, ಕುಂಬಳೆ ಸುಂದರರಾವ್, ಕೆ. ಗೋವಿಂದ ಭಟ್, ಪುತ್ತೂರು ನಾರಾಯಣ ಹೆಗಡೆ, ಕುಂಬಳೆ ಶ್ರೀಧರರಾವ್, ನಯನಕುಮಾರ್, ಪಾತಾಳ ವೆಂಕಟರಮಣ ಭಟ್, ಶ್ರೀಧರ ಭಂಡಾರಿ, ಬೇಗಾರ್ ಶಿವಕುಮಾರ್ ಮುಂತಾದವರು ಬೆಂಗಳೂರಿನ ಅಭಿಮಾನಿಗಳ ಪ್ರೀತಿಗೆ ಪಾತ್ರರಾಗಿದ್ದರು. ಒಮ್ಮೆ ಬೆಂಗಳೂರಿನ ಜೈನ ಯುವ ವೇದಿಕೆಯವರು ಆಯೋಜಿಸಿದ್ದ ಧರ್ಮಸ್ಥಳ ಮೇಳದವರ 'ಶ್ರೀ ಧರ್ಮಸ್ಥಳ ಕ್ಷೇತ್ರ ಮಹಾತ್ಮೆ'ಗೆ ಅಸಂಖ್ಯ ಜನರು ಸೇರಿದ್ದರು. ಅದೇ ರೀತಿ ಕಟೀಲು ಮೇಳದವರ 'ಶ್ರೀದೇವಿಮಹಾತ್ಮೆ' ಪ್ರಸಂಗಕ್ಕೆ 5000ಕ್ಕೂ ಹೆಚ್ಚು ಜನ ಪ್ರೇಕ್ಷಕರು ಸೇರಿದ್ದರು. ಕಲಾಕ್ಷೇತ್ರದ ಹೊರಗೆ ಸಂಸರಂಗ ಮಂದಿರದಲ್ಲಿ ಟಿ.ವಿ.ಸ್ಕ್ರೀನ್ ಮೂಲಕ ಕೂಡ ಜನ ಆಟ ನೋಡಿ ಭಕ್ತಿಪರವಶರಾಗಿದ್ದರು. ಕಾರ್ಯಕ್ರಮವನ್ನು ಕುತ್ಯಾರು ರಾಜೇಶ ಶೆಟ್ಟಿ ಮತ್ತು ಕರ್ನೂರು ಸುಭಾಷ ರೈಯವರು ಮದರ್ ಫೌಂಡೇಷನ್ ಆಶ್ರಯದಲ್ಲಿ ಆಯೋಜಿಸಿದ್ದರು. ವಾಹನಗಳ ನಿಲುಗಡೆ ಸಮಸ್ಯೆಯಿಂದ ಬೆಂಗಳೂರು ಪೋಲೀಸರೇ ದಿಗ್ಭ್ರಾಂತರಾಗಿದ್ದರು. ಆ ರೀತಿ ಜನ ಸೇರಿರುವ ಯಕ್ಷಗಾನ ಪ್ರದರ್ಶನ ಮತ್ತೊಂದಿಲ್ಲ. ರಾಜ್ಯ ಸರ್ಕಾರದ ಉನ್ನತ ಅಧಿಕಾರಿಯಾಗಿ, ಯಕ್ಷಗಾನದ ಬಗ್ಗೆ ತನು, ಮನ, ಧನ ಸಹಾಯ ಮಾಡುತ್ತಿರುವ, ಕಲಾವಿದರ ಬಗ್ಗೆ ಅಪಾರ ಪ್ರೀತಿ ಉಳ್ಳ ಟಿ. ಶ್ಯಾಮಭಟ್ ಅವರು ಆಯೋಜಿಸಿರುವ ತೆಂಕುತಿಟ್ಟಿನ ಕಲಾವಿದರ ಕೂಡುವಿಕೆಯಲ್ಲಿ ನಡೆದ 'ಶ್ರೀ ದೇವಿ ಮಹಾತ್ಮೆ' ಪ್ರದರ್ಶನ ಕೂಡ ಜನಸಾಗರದಿಂದ ಕಿಕ್ಕಿರಿದಿತ್ತು. ತೆಂಕುತಿಟ್ಟಿನ ಸಂಘಟಕರಲ್ಲಿ ಶ್ರೀ ಮಿತ್ತೂರು ಈಶ್ವರ ಭಟ್, ಎಸ್.ಎನ್. ಪಂಜಾಜೆ, ಪಾವಂಜೆ ಶಿವರಾಂ ಭಟ್, ಕೆ.ಕೆ. ಭಟ್ ಮುಂತಾದವರು ಮುಖ್ಯರು.

ಬೆಂಗಳೂರಿನ ಪ್ರಜ್ಞಾವಂತ ಯಕ್ಷಗಾನ ಆಸಕ್ತರ ಮೆಚ್ಚಿನ ಮೇಳವೆಂದರೆ

ಉತ್ತರ ಕನ್ನಡದ ಕೆರೆಮನೆಯವರ ಇಡಗುಂಜಿ ಮೇಳ. ಕಳೆದ ಶತಮಾನದ 8–9ನೇ ದಶಕಗಳಲ್ಲಿ ಕೆರೆಮನೆ ಮಹಾಬಲ ಹೆಗಡೆ, ಕೆರೆಮನೆ ಶಂಭು ಹೆಗಡೆ, ನೆಬ್ಬೂರು ನಾರಾಯಣ ಭಾಗವತ ಮುಂತಾದವರು ಆಕರ್ಷಣೆಯ ಕೇಂದ್ರವಾಗಿದ್ದರು. ಮಹಾಬಲ ಹೆಗಡೆಯವರ ಗದಾಯುದ್ಧದ ಕೌರವ, ಭೀಷ್ಮ ವಿಜಯದ ಭೀಷ್ಮ, ಚಂದ್ರಹಾಸದ ದುಷ್ಟ ಬುದ್ಧಿಯನ್ನು ಜನರು ನೆನೆಯುತ್ತಾರೆ. ಅದೇ ರೀತಿ ಕೆರೆಮನೆ ಶಂಭುಹೆಗಡೆಯವರ ರಾಮ ನಿರ್ಯಾಣದ ರಾಮ, ಶ್ರೀಕೃಷ್ಣ ಸಂಧಾನದ ಕೃಷ್ಣ, ನಳದಮಯಂತಿಯ ಬಾಹುಕ ನೆನಪಿಸಿಕೊಳ್ಳಬೇಕಾದ ಪಾತ್ರಗಳು. ಚಿಟ್ಟಾಣಿ ರಾಮಚಂದ್ರ ಹೆಗಡೆ ಹಾಗೂ ಮಂಟಪ ಪ್ರಭಾಕರ ಉಪಾಧ್ಯರ ಜೋಡಿಯಂತು ಆ ಕಾಲದ ಯುವಕರನ್ನು ಯಕ್ಷಗಾನ ರಂಗಭೂಮಿಯತ್ತ ಸೆಳೆಯುವಲ್ಲಿ ಯಶಸ್ವಿಯಾಗಿತ್ತು. ಅವರಿಬ್ಬರ ಜೋಡಿಯನ್ನು ಜನತೆ ಇಂದಿಗೂ ನೆನೆಯುತ್ತಾರೆ.

ಇನ್ನು ಹಗಲು ಕಾರ್ಯಕ್ರಮದ ಬಗ್ಗೆ ಹೇಳುವುದಾದರೆ ಅಂದು ಯಕ್ಷ ಕಲಾರಂಗದ ವತಿಯಿಂದ ನಡೆದ ಎರಡು ಕಾರ್ಯಕ್ರಮಗಳು ಉಲ್ಲೇಖನೀಯ. ದಿನಾಂಕ 10.8.1997ರಲ್ಲಿ ನಡೆದ ದಿ. ಕಾಳಿಂಗ ನಾವಡರ ಸಂಸ್ಮರಣೆ ಕಾರ್ಯಕ್ರಮ ಹಾಗೂ 1989ರ ಭಾನುವಾರ ಸಂಜೆ ನಡೆದ ಚಿಟ್ಟಾಣಿ ರಾಮಚಂದ್ರ ಹೆಗಡೆಯವರ ಸನ್ಮಾನ ಕಾರ್ಯಕ್ರಮಗಳು. ಕಲಾಕ್ಷೇತ್ರದ ಇತಿಹಾಸದಲ್ಲಿ ದಾಖಲಾಗಬೇಕಾದವುಗಳಾಗಿವೆ. ಕಾಳಿಂಗನಾವಡರ ಸಂಸ್ಮರಣ ಕಾರ್ಯಕ್ರಮವು ಬೆಳಿಗ್ಗೆ ಹತ್ತಕ್ಕೆ ಪ್ರಾರಂಭವಾಗಿ ರಾತ್ರಿ 10 ಗಂಟೆಯವರೆಗೆ ನಡೆಯಿತು. ಕಾರ್ಯಕ್ರಮವನ್ನು ಖ್ಯಾತ ನಾಟಕಕಾರರಾಗಿದ್ದ ಶ್ರೀ ಮಾಸ್ಟರ್ ಹಿರಣ್ಣಯ್ಯನವರು ಉದ್ಘಾಟಿಸಿದರು. ಜನಾನುರಾಗಿ ಶಾಸಕರಾಗಿದ್ದ ಶ್ರೀ ಕುಂಬಳೆ ಸುಂದರರಾವ್ ಮುಖ್ಯ ಅತಿಥಿಗಳಾಗಿದ್ದರು. ಅಂದು ನಡೆದ ಗೋಷ್ಠಿಗಳಲ್ಲಿ ಸರ್ವ ಶ್ರೀ ರಾಘವ ನಂಬಿಯಾರ್, ಶ್ರೀಧರ ಹಂದೆ, ಡಾ॥ ಆನಂದರಾಮ ಉಪಾಧ್ಯ, ಎಸ್. ಶಿವರಾಮ ಶೆಟ್ಟಿ, ಕೆ.ಕೆ. ನಾಯಕ್, ಕಡತೋಕ ಮಂಜುನಾಥ ಭಾಗವತ್, ಪೊಲ್ಯ ಲಕ್ಷ್ಮೀನಾರಾಯಣ ಶೆಟ್ಟಿ, ಸುಬ್ರಹ್ಮಣ್ಯ ಧಾರೇಶ್ವರ್, ಕೂಡ್ಲು ರಾಮಕೃಷ್ಣ, ಬಾಲಕೃಷ್ಣ ಶೆಟ್ಟಿ, ಬಳ್ಕೂರು ಕೃಷ್ಣಯಾಜಿ, ಅರಾಟೆ ಮಂಜುನಾಥ, ವಾಸುದೇವ ಸಾಮಗ, 'ಅನುಭವ'ದ ಅರವಿಂದ, ಸದಾಶಿವ ಅಮೀನ್, ರಮೇಶ್ ಬೇಗಾರ್ ಭಾಗವಹಿಸಿದ್ದರು. ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಸರ್ವಶ್ರೀ ಜಯಪ್ರಕಾಶ ಹೆಗ್ಡೆ, ವೈ.ಕೆ. ಮುದ್ದುಕೃಷ್ಣ, ಸಾ.ಶಿ. ಮರುಳಯ್ಯ, ಸದಾನಂದಗೌಡ, ಪಳ್ಳಿ ಶ್ರೀನಿವಾಸ ಹೆಗ್ಡೆ, ಬಿ. ಶ್ರೀಪತಿರಾವ್, ಜಿ. ಕರುಣಾಕರರಾವ್ ಪಾಲ್ಗೊಂಡಿದ್ದರು. ನಾವಡ ವಿರಚಿತ 'ನಾಗಶ್ರೀ'ಯ ಪ್ರದರ್ಶನ ಕೊನೆಯಲ್ಲಿ ಇದ್ದು, ಅತಿಥಿ ಕಲಾವಿದರ ಕೂಡುವಿಕೆಯಿಂದ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು.

ಮಾರನೆಯ ದಿನದ ಎಲ್ಲ ವರ್ತಮಾನ ಪತ್ರಿಕೆಗಳಲ್ಲಿ ಅಭೂತಪೂರ್ವವಾದ ಕಾರ್ಯಕ್ರಮದ ವರದಿ ಪ್ರಕಟಗೊಂಡಿತ್ತು. ದಕ್ಷಿಣ ಕನ್ನಡಿಗರ ವೇದಿಕೆಯ ಅಧ್ಯಕ್ಷರಾದ ಶ್ರೀ ಪುಂಡಲೀಕ ಹಾಲಂಬಿಯವರ ಸಹಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹ ಪ್ರಾಯೋಜಕತ್ವ ಈ ಕಾರ್ಯಕ್ರಮಕ್ಕೆ ಇತ್ತು. ಹೀಗೆ ಯಕ್ಷಗಾನದ ಯುಗ ಪ್ರವರ್ತಕರೆಂದೇ ಖ್ಯಾತರಾದ ಕಾಳಿಂಗ ನಾವಡರನ್ನು ಈ ಸಭಾಂಗಣದಲ್ಲಿ ಸಂಸ್ಮರಣೆ ಮಾಡಿದ ಕಾರ್ಯಕ್ರಮಕ್ಕೆ ಅಸಂಖ್ಯ ಯಕ್ಷಗಾನ ಅಭಿಮಾನಿಗಳು ನೆರೆದಿದ್ದರು. ಇದೇ ರೀತಿ ಇನ್ನೊಂದು ಹಗಲು ನಡೆದ ಸಭಾ ಕಾರ್ಯಕ್ರಮವೆಂದರೆ 27.5.90ರಲ್ಲಿ ನಡೆದ ಶ್ರೀ ಚಿಟ್ಟಾಣಿ ರಾಮಚಂದ್ರ ಹೆಗಡೆಯವರ ಸನ್ಮಾನ ಕಾರ್ಯಕ್ರಮ ಅದಕ್ಕೂ ಕೂಡ ಮಾಸ್ಟರ್ ಹಿರಣಯ್ಯನವರು ಹಾಗೂ ಮುಖ್ಯಮಂತ್ರಿ ಚಂದ್ರು ಅವರು ಆಗಮಿಸಿದ್ದರು. ಅಂದು ನಡೆದ ಭಸ್ಮಾಸುರ ಮೋಹಿನಿ ಯಕ್ಷಗಾನ ಪ್ರದರ್ಶನದಲ್ಲಿ ಚಿಟ್ಟಾಣಿ ರಾಮಚಂದ್ರ ಹೆಗಡೆಯವರು ಭಸ್ಮಾಸುರ, ಕೃಷ್ಣಯಾಜಿ ಬಳ್ಕೂರ ಅವರ ಈಶ್ವರ ಹಾಗೂ ಮಂಟಪ ಪ್ರಭಾಕರ ಉಪಾಧ್ಯಾಯರ ಮೋಹಿನಿ ಎಲ್ಲರ ಗಮನ ಸೆಳೆದಿತ್ತು.

ಅಂದಿನ ಪ್ರೇಕ್ಷಕವರ್ಗದಲ್ಲಿ ಸಿಂಹಪಾಲು ಹೋಟೆಲ್ ಉದ್ಯಮದ ಅದರಲ್ಲೂ ನೌಕರ ವರ್ಗದವರದ್ದಾಗಿತ್ತು. ನಾವಡ, ಚಿಟ್ಟಾಣಿ, ಮಂಟಪರೆಲ್ಲ ಹೋಟೆಲ್ ನೌಕರರ ಪಾಲಿಗೆ ತಾರೆಗಳಾಗಿದ್ದರು. ಅರಾಟೆ ಮಂಜುನಾಥ ಅವರ ಪ್ರಚಾರವು ಹೆಚ್ಚಾಗಿ ಹೋಟೆಲ್ ನೌಕರರನ್ನು ಕೇಂದ್ರೀಕರಿಸಿಕೊಂಡಿತ್ತು. ಆಟಗಳ ಮೊದಲು ಅರಾಟೆಯವರು ಹೆಚ್ಚಿನ ಹೋಟೆಲ್‌ಗಳಿಗೆ ತೆರಳಿ ಉದ್ಯಮಿಗಳಿಗೆ ಮಾತ್ರವಲ್ಲದೆ ಒಳಗೆ ಇರುವ ಕಾರ್ಮಿಕ ವರ್ಗಕ್ಕೂ ಕರಪತ್ರ ನೀಡಿ ಪ್ರೇಕ್ಷಕರು ಹೆಚ್ಚು ಸೇರುವಂತೆ ನೋಡಿಕೊಳ್ಳುತ್ತಿದ್ದರು. ರಿಕ್ಷಾ ಒಂದರಲ್ಲಿ ಕುಳಿತು ಬೆಂಗಳೂರಿನ ಕೇಂದ್ರ ಭಾಗವನ್ನೆಲ್ಲಾ ಸುತ್ತುತ್ತಿದ್ದರು. ಯಕ್ಷ ಕಲಾರಂಗವು ಮೊದಲಿಗೆ ದೊಡ್ಡ ಪೋಸ್ಟರ್‌ನ್ನು ಸಿದ್ಧಪಡಿಸಿ ಬೆಂಗಳೂರಿನ ನಾನಾ ಭಾಗದಲ್ಲಿ, ಅದರಲ್ಲೂ ಹೋಟೆಲ್‌ಗಳ ಮುಂದೆ ಅಂಟಿಸಿ, 'ಗೇಟ್ ಕಲೆಕ್ಷನ್' ಹೆಚ್ಚಾಗುವಂತೆ ಮಾಡುತ್ತಿತ್ತು. ಹೊಸ ಪ್ರಸಂಗಗಳಲ್ಲದೆ ಒಳ್ಳೆಯ ಪೌರಾಣಿಕ ಪ್ರಸಂಗಗಳು ಯಶಸ್ವಿಯಾಗಲು ಈ ಬಗೆಯ ಕಾರ್ಯಗಳು ಅಗತ್ಯವಾಗಿತ್ತು. ಕೋಟ ವೈಕುಂಠರು 1980ರ ಸುಮಾರಿಗೆ ಗಣೇಶನ ಹಬ್ಬದ ಮುನ್ನಾ ದಿನ ಏರ್ಪಡಿಸಿದ್ದ ಪ್ರದರ್ಶನಕ್ಕೆ 2000 ಜನ ಸೇರಿ ಆ ಕಾಲಕ್ಕೆ ದಾಖಲೆಯಾಗಿತ್ತು. ದಿನಪತ್ರಿಕೆಗಳಲ್ಲಿ ಜಾಹೀರಾತು ಹಾಗೂ 'ನಗರದಲ್ಲಿ ಇಂದು' ಕಾರ್ಯಕ್ರಮದಲ್ಲಿ ಪ್ರಚಾರ ಮಾಡಲಾಗುತ್ತಿತ್ತು. ಅಂದಿನ ಕಾರ್ಯಕ್ರಮಗಳಲ್ಲಿ ಸರಾಸರಿ ರೂ.5000/

-ಕ್ಕೆ ಮೇಲ್ಪಟ್ಟು ಹಣ ಸಂಗ್ರಹವಾಗುತ್ತಿತ್ತು. ಉತ್ತಮ ಪ್ರದರ್ಶನದ ಗಳಿಕೆ 12000 ದಿಂದ 15000 ವರೆಗೆ ಇರುತ್ತಿತ್ತು. ಹೀಗೆ ಅಂದಿನ ದಿನಗಳನ್ನು ಮೆಲುಕು ಹಾಕುವುದೇ ಸಂತಸದ ಸಂಗತಿ.

ಲೇಖಕರು : ಎ.ಪಿ. ಕಾರಂತ್

ಕಲಾಕ್ಷೇತ್ರ ಕ್ಯಾಂಟೀನ್ ಮಾಲೀಕರು,
ರವೀಂದ್ರ ಕಲಾಕ್ಷೇತ್ರದ ಆವರಣ, ಜೆ.ಸಿ. ರಸ್ತೆ,
ಬೆಂಗಳೂರು - 560 002
ಚ.ದೂ. : 98860 48807

ಲೇಖಕರ ಕಿರುಪರಿಚಯ

ಎ.ಪಿ. ಕಾರಂತ (ಎ. ಪದ್ಮನಾಭ ಕಾರಂತ)ರು ವೃತ್ತಿಯಲ್ಲಿ ಹೋಟೇಲ್ ಉದ್ಯಮಿ. ಆದರೆ ಆಸಕ್ತಿಯ ಕ್ಷೇತ್ರ ಯಕ್ಷಗಾನ, ನಾಟಕ, ಸಾಹಿತ್ಯ ಮುಂತಾದವು. ಕಳೆದ 3 ದಶಕಗಳಿಂದ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲೇ ಇದ್ದು ಯಕ್ಷಗಾನ ಕಲಾವಿದರ, ಸಂಘಟಕರ ಒಡನಾಟ ಹೊಂದಿದ್ದಾರೆ. ಶ್ರೀ ಎ.ಪಿ. ಕಾರಂತ ಹಾಗೂ ಶ್ರೀ ಹೆಚ್.ಬಿ. ರಾಜೀವಶೆಟ್ಟಿಯವರ 'ಯಕ್ಷಕಲಾರಂಗ'ವು ಪ್ರತಿವರ್ಷ ಯಕ್ಷಗಾನ ಕಾರ್ಯಕ್ರಮವೊಂದನ್ನು ಕಲಾಕ್ಷೇತ್ರದಲ್ಲಿ ಸಂಯೋಜಿಸಿ ಬೆಂಗಳೂರಿನ ಕಲಾರಾಧಕರಿಗೆ ಚಿರಪರಿಚಿತವಾಗಿದೆ. ಅದೇ ರೀತಿ ಇವರ ಮತ್ತು ರೇವಣ್ಣನವರ ಸಹಯೋಗದ 'ಭಾಗವತರು' ಎಂಬ ನಾಟಕ ತಂಡವು ಕೂಡ ಕ್ರಿಯಾಶೀಲವಾಗಿದೆ. ಕೇವಲ ಪ್ರದರ್ಶನಗಳಲ್ಲದೆ ವಿಚಾರಸಂಕಿರಣ, ಸನ್ಮಾನ, ಸಭೆ-ಸಮಾರಂಭಗಳೂ ಕೂಡ ಇವರ ನೇತೃತ್ವದಲ್ಲಿ 'ಕಲಾಕ್ಷೇತ್ರ'ದಲ್ಲಿ ನಡೆದಿವೆ.

ಬೆಂಗಳೂರು ಯಕ್ಷಗಾನಕ್ಕೆ ನಾಂದಿಯಾದ ರವೀಂದ್ರ ಕಲಾಕ್ಷೇತ್ರ

–ಕೆ. ಮೋಹನ್

ಯಕ್ಷಗಾನ ಒಂದು ಸಮಷ್ಟಿಕಲೆ. ಪ್ರಸಂಗಕಾರ, ಹಿಮ್ಮೇಳ ಹಾಗೂ ಮುಮ್ಮೇಳದ ಕಲಾವಿದರು, ಮೇಳದ ವ್ಯವಸ್ಥಾಪಕರು ಆಟ ಆಡಿಸುವವರು ಕೊನೆಯಲ್ಲಿ ನೋಡುವ ಪ್ರೇಕ್ಷಕರು ಹೀಗೆ ಎಲ್ಲರೂ ಸಮಗ್ರವಾಗಿ ಪಾಲ್ಗೊಂಡಾಗ ಮಾತ್ರ ಈ ಕಲೆ ಸಾರ್ಥಕವಾಗುತ್ತದೆ. ಹಿಂದೆಲ್ಲಾ ಮೇಳಗಳನ್ನು ದೇವಸ್ಥಾನದವರು ಸಂಘಟಿಸಿ, ಕಲಾವಿದರನ್ನು ಒಟ್ಟುಗೂಡಿಸಿ ಜನರ ಹರಕೆಗಳನ್ನು ತೀರಿಸುವ ಉದ್ದೇಶಗಳಿಂದ ಆಟ ಆಡಿಸುವ ವ್ಯವಸ್ಥೆ ಮಾಡುತ್ತಿದ್ದರು. ಈ ಮೂಲಕ ಕಲಾಪ್ರಸಾರ ನಡೆಯುತ್ತಿತ್ತು. ಕಳೆದ ಶತಮಾನದಲ್ಲಿ ಪ್ರಾರಂಭವಾದ ಡೇರೆಮೇಳಗಳಿಂದ ವಾಣಿಜ್ಯಾತ್ಮಕ ಅಂಶಗಳು ಸೇರಿಕೊಂಡವು. ಇದರಿಂದ ಹರಕೆ ಮೇಳಗಳ ಜೊತೆಯಲ್ಲಿ ಡೇರೆಮೇಳಗಳು ಬಂದವು. ಡೇರೆಮೇಳಗಳಿಂದ ಸಂಘಟಕರ ಪಾತ್ರವು ಹಿರಿದಾಯಿತು. ಅವರ ಜವಾಬ್ದಾರಿ ಹೆಚ್ಚಿತು. ನಗರೀಕರಣದಿಂದ ನಗರಗಳಲ್ಲಿ ಯಕ್ಷಗಾನ ಪ್ರದರ್ಶನ ಹೆಚ್ಚಾದವು. ನಗರಗಳಲ್ಲಿ ಯಕ್ಷಗಾನ ಪ್ರದರ್ಶನವನ್ನು ವ್ಯವಸ್ಥೆ ಮಾಡುವುದು ಸಂಘಟಕರಿಗೆ ಸವಾಲಿನ ಕೆಲಸ. ಹೀಗಿರುವಾಗ ಬೆಂಗಳೂರಿನಂತಹ ಮಹಾನಗರದಲ್ಲಿ ರವೀಂದ್ರ ಕಲಾಕ್ಷೇತ್ರದ ಆವರಣವು ಸಂಘಟಕರ ಆಯ್ಕೆಗೆ ಅಚ್ಚುಮೆಚ್ಚಿನದ್ದಾಗಿದೆ. ನಗರದ ಕೇಂದ್ರ ಸ್ಥಳದಲ್ಲಿದ್ದು ಎಲ್ಲ ಭಾಗದ ಯಕ್ಷಗಾನದ ಅಭಿಮಾನಿಗಳು ಸೇರುವ ಸ್ಥಳವಾಗಿ ಪರಿಣಮಿಸಿದೆ.

ಅರವತ್ತು ವರ್ಷಗಳ ಕೆಳಗೆ ಟೌನ್‌ಹಾಲ್‌ನಲ್ಲಿ ಯಕ್ಷಗಾನ ಪ್ರದರ್ಶನಗಳು ಮಳೆಗಾಲದಲ್ಲಿ ನಡೆಯುತ್ತಿದ್ದವು. ಆಗ ಬೆಂಗಳೂರಿನಲ್ಲಿ ಹೋಟೆಲ್ ನಡೆಸುತ್ತಿದ್ದ, ಪಿ. ಶ್ರೀಧರಹಂದೆಯವರು, ಕೊಡೆರಿಯ ಕಾಳಿಂಗ ಕಾರಂತ, ಮಹದೇವ ಕಾರಂತ, ಶಿವರಾಮ ಕಾರಂತರು, ಕೆ.ಎಲ್. ಐತಾಳರು, ಪಿ.ಕೆ. ಮಧ್ಯಸ್ಥರು, ನರಸಿಂಹ ಹೊಳ್ಳರು,

ನೀಲಕಂಠ ಐತಾಳ್ ಮುಂತಾದವರೆಲ್ಲ ಸೇರಿ 'ಗಜಾನನ ಯಕ್ಷಗಾನ ಸಂಘ' ಎಂಬ ಹೆಸರಿನಲ್ಲಿ ಯಕ್ಷಗಾನದ ಚಟುವಟಿಕೆಗಳನ್ನು ನಡೆಸುತ್ತಿದ್ದರು. ಆ ಕಾಲಕ್ಕೆ ಭಾಗವತರಾದ ನಾರಾಣಪ್ಪ ಉಪ್ಪೂರ, ತಿಮ್ಮಪ್ಪ ನಾಯಕ, ಹಾರಾಡಿ ರಾಮಗಾಣಿಗ, ಕೃಷ್ಣಗಾಣಿಗ, ವೀರಭದ್ರ ನಾಯಕ, ವಂಡಾರು ಬಸವ, ಮಂಜಯ್ಯ ಶೆಟ್ಟಿ, ಮೊಳಹಳ್ಳಿ ಹೆರಿಯ, ಉಡುಪಿ ಬಸವ, ಪೆರಡೂರು ರಾಮ ಮುಂತಾದ ಕಲಾವಿದರು ಇಲ್ಲಿಗೆ ಬಂದು ಯಕ್ಷಗಾನ ಪ್ರದರ್ಶನ ನೀಡುತ್ತಿದ್ದರು.

ಮುಂದೆ ಕೋಟ ವೈಕುಂಠ ಅವರು ಅಮೃತೇಶ್ವರಿ ಮೇಳದ ಕಲಾವಿದರನ್ನು ಆಯ್ದು ಯಕ್ಷಗಾನ ಪ್ರದರ್ಶನದ ವ್ಯವಸ್ಥೆಯನ್ನು ಬೆಂಗಳೂರಿನಲ್ಲಿ ಮಾಡುತ್ತಿದ್ದರು. ಆಗ ಭಾಗವತರಾಗಿ ನಾರಾಣಪ್ಪ ಉಪ್ಪೂರರು ಹೆಚ್ಚಾಗಿ ಇರುತ್ತಿದ್ದರು. ಮುಮ್ಮೇಳದ ಕಲಾವಿದರಾಗಿ ಚಿಟ್ಟಾಣಿ ರಾಮಚಂದ್ರ ಹೆಗಡೆ, ಶಿರಿಯಾರ ಮಂಜುನಾಯ್ಕ, ಕೋಟ ವೈಕುಂಠ, ಗಜಾನನ ಹೆಗಡೆ, ರಾಮನಾಯರಿಯ ಮುಂತಾದವರು ಭಾಗವಹಿಸುತ್ತಿದ್ದರು.

ಪೌರಾಣಿಕ ಪ್ರಸಂಗಗಳು ಹೆಚ್ಚಾಗಿ ನಡೆಯುತ್ತಿದ್ದ ಕಾಲವದು. ಆ ಕಾಲದಲ್ಲಿ ವಸಂತ ಸೇನೆ, ರಾಜಾ ಬ್ರಹದ್ರಥ, ಚಿರಕನ್ನಿಕೆ, ಕಚದೇವಯಾನಿ, ಭೀಷ್ಮ ವಿಜಯ, ದಕ್ಷಯಜ್ಞ, ಕೀಚಕ ವಧೆ, ಲವಕುಶ, ಭಸ್ಮಾಸುರ ಮೋಹಿನಿ, ಚಂದ್ರಹಾಸ, ಗದಾಯುದ್ಧ ಮುಂತಾದ ಪ್ರಸಂಗಗಳ ಪ್ರದರ್ಶನಗಳು ಬೆಂಗಳೂರಿನ ಟೌನ್‌ಹಾಲ್‌ನಲ್ಲಿ ಇಲ್ಲವೇ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯುತ್ತಿದ್ದವು. ಈ ಸಮಯದಲ್ಲೇ ದಿ. ಪಿ. ಶ್ರೀಧರ ಹಂದೆಯವರು ಕೂಡ ಆಯ್ದ ಕಲಾವಿದರ ಪ್ರದರ್ಶನಗಳನ್ನು ಏರ್ಪಡಿಸುತ್ತಿದ್ದರು. ಅವರು ಬಡಗುತಿಟ್ಟಿಗೆ ಉತ್ತರ ಕನ್ನಡದ (ಬಡಾಬಡಗು ತಿಟ್ಟು) ಕಲಾವಿದರಾದ ಕೆರೆಮನೆ ಮಹಾಬಲ ಹೆಗಡೆ, ಕೆರೆಮನೆ ಗಜಾನನ ಹೆಗಡೆ, ಕೆರೆಮನೆ ಶಂಭು ಹೆಗಡೆಯವರನ್ನು ಪರಿಚಯಿಸಿದವರು. ಬೆಂಗಳೂರಿನಲ್ಲಿ ಇದೇ ಕಲಾವಿದರ ಪ್ರದರ್ಶನ ನಡೆಸುವ ಮೂಲಕ ಅಪಾರ ಪ್ರೇಕ್ಷಕ ವರ್ಗದವರ ಬೆಂಬಲ ಯಕ್ಷಗಾನ ಕಲೆಗೆ ಲಭಿಸುವಂತಾಯಿತು. ಇದೇ ರೀತಿ ಅರಾಟೆ ಮಂಜುನಾಥ್ ಅವರು ತಮ್ಮ ಗಣೇಶ ಯಕ್ಷಗಾನ ಪ್ರವಾಸಿ ಸಂಸ್ಥೆ ಮೂಲಕ ರವೀಂದ್ರ ಕಲಾಕ್ಷೇತ್ರದಲ್ಲಿ ಏರ್ಪಡಿಸಿದ ಪ್ರಸಂಗಗಳಿಗೆ ಜನರು ಸಾವಿರಾರುಗಟ್ಲೆಯಲ್ಲಿ ಸೇರುತ್ತಿದ್ದರು. ಅನೇಕ ಹೋಟೆಲ್ ಉದ್ಯಮಿಗಳು ಈ ಪ್ರಸಿದ್ಧ ಸ್ತ್ರೀ ವೇಷಧಾರಿಗಳಿಗೆ ಧನ ಸಹಾಯದ ಬೆಂಬಲ ನೀಡಿದರೆ, ಹೋಟೆಲ್ ನೌಕರರು ಕಲಾಕ್ಷೇತ್ರದ ಆವರಣಕ್ಕೆ ಮಳೆ, ಚಳಿ ಎಂದು ಎಣಿಸದೇ ಬಂದು ತಮ್ಮ ಅಮೂಲ್ಯ ಉಳಿತಾಯದ ಹಣವನ್ನು ಟಿಕೇಟು ಕೊಳ್ಳುವ ಮೂಲಕ ವ್ಯಯಿಸಿ ಈ ಕಲೆಯನ್ನು ಬೆಂಗಳೂರಿನಲ್ಲಿ ಉಳಿಸಿ ಬೆಳೆಸಲು ಸಹಕರಿಸಿದರು.

ಆ ಕಾಲದಲ್ಲಿ ನಡೆದ ಯಕ್ಷಗಾನ ಪ್ರದರ್ಶನಗಳಲ್ಲಿ ಸದಾ ನೆನಪಿನಲ್ಲಿ ಉಳಿಯುವ ಒಂದೆರಡು ಪ್ರಸಂಗವೆಂದರೆ, 1970ರ ಸುಮಾರಿಗೆ ಕಲಾಕ್ಷೇತ್ರದ ಆವರಣದಲ್ಲಿ ನಡೆದ 'ಭೀಷ್ಮವಿಜಯ' ಅದಕ್ಕೆ ಕೆರೆಮನೆಯವರಾದ, ರಾಷ್ಟ್ರಪ್ರಶಸ್ತಿ ಪುರಸ್ಕೃತ ಶಿವರಾಮ ಹೆಗಡೆ, ಕೆರೆಮನೆ ಮಹಾಬಲ ಹೆಗಡೆ, ಕೆರೆಮನೆ ಗಜಾನನ ಹೆಗಡೆ, ಕೆರೆಮನೆ ಶಂಭು ಹೆಗಡೆಯವರು ಭಾಗವಹಿಸಿದ್ದರು. ಅತ್ಯಂತ ಯಶಸ್ವಿ ಪ್ರದರ್ಶನ ಅದಾಗಿತ್ತು. ಅದೇ ರೀತಿ ಇನ್ನೊಂದು ಅಚ್ಚಳಿಯದೆ ನೆನಪಿನಲ್ಲಿ ಉಳಿದ ಪ್ರದರ್ಶನವೆಂದರೆ 1980ರಲ್ಲಿ ಉತ್ತರ ಕನ್ನಡದ ಹಾಸ್ಯಗಾರ ಮೇಳದವರ ಪ್ರದರ್ಶನ. 'ಮಾಗಧ ವಧೆ' ಎಂಬ ಆ ಪ್ರದರ್ಶನ ಇಂದು ಕೂಡ ಕಣ್ಣು ಮುಂದೆ ಕಟ್ಟಿದಂತಿದೆ. ಭಾಗವತರಾಗಿ ಕಡತೋಕ ಕೃಷ್ಣ ಭಾಗವತರಿದ್ದು ಕೃಷ್ಣ ಹಾಸ್ಯಗಾರರ ಕೃಷ್ಣ ಹಾಗೂ ಪಿ.ವಿ. ಹಾಸ್ಯಗಾರರ ಮಾಗಧ, ಅಂದಿನ ಪ್ರದರ್ಶನದ ಸಂಯೋಜನೆ ನಡೆಸಿದವರು ಡಾ॥ ಗೋಪಾಲಕೃಷ್ಣ ಹೆಗಡೆಯವರು. ಬೆಂಗಳೂರಿನ ಕಲಾಕ್ಷೇತ್ರದ ಆವರಣದಲ್ಲಿ ನಡೆದ ಪ್ರದರ್ಶನವೊಂದರಲ್ಲಿ ಮೂರೂರು ದೇವರ ಹೆಗಡೆಯವರು ಭಾಗವಹಿಸಿದ್ದರು. ವಸಂತಸೇನೆಯೆಂಬ ಪ್ರಸಂಗದಲ್ಲಿ ಅವರು ಬ್ರಾಹ್ಮಣನ ವೇಷ ಮಾಡಿದ್ದು ಅದೇ ರೀತಿ ಆ್ಯಕ್ಟರ್ ಜೋಷಿಯವರು 'ಕಾಳಿದಾಸ' ಪ್ರಸಂಗದಲ್ಲಿ ಮಾಡಿದ 'ಕಾಳಿದಾಸ' ಪಾತ್ರ, ಭೀಷ್ಮ ವಿಜಯದಲ್ಲಿ ಕೆರೆಮನೆ ಗಜಾನನ ಹೆಗಡೆಯವರ 'ಅಂಬೆ' ಇವೆಲ್ಲಾ ಚಿರಕಾಲ ಮನಸ್ಸಿನಲ್ಲಿ ಉಳಿಯುವ ಪಾತ್ರಗಳು.

ಅತಿಥಿ ಕಲಾವಿದರ ಕೂಡುವಿಕೆಯಿಂದ ರವೀಂದ್ರ ಕಲಾಕ್ಷೇತ್ರದಲ್ಲಿ 29.5.1980ರಂದು 'ಯಕ್ಷದೇಗುಲ' ಸಂಸ್ಥೆಯ ಮೂಲಕ ನಡೆದ ದಕ್ಷಯಜ್ಞ, ಭೀಷ್ಮವಿಜಯ ಹಾಗೂ ಚಂದ್ರಾವಳಿ ವಿಲಾಸಕ್ಕೆ ತೆಂಕುಬಡಗು ಕಲಾವಿದರೆಲ್ಲ ಸೇರಿ 32 ಜನರು ಸೇರಿದ್ದು ವಿಶೇಷವಾಗಿತ್ತು. ನಾರಾಣಪ್ಪ ಉಪ್ಪೂರರು ಹಾಗೂ ಕಾಳಿಂಗ ನಾವಡರ ಭಾಗವತಿಕೆ ಇದ್ದು, ಹಿರಿಯ ಭಾಗವತರಾದ ಕಾಳಿಂಗ ನಾವಡರ ತಂದೆ ಶ್ರೀ ರಾಮಚಂದ್ರ ನಾವಡರನ್ನು ಸನ್ಮಾನಿಸಲಾಯಿತು. ಅಂದಿನ ಪ್ರದರ್ಶನಗಳಲ್ಲಿ ಕೆರೆಮನೆ ಮಹಾಬಲ ಹೆಗಡೆಯವರ ಭೀಷ್ಮ, ಮಂಟಪ ಪ್ರಭಾಕರ ಉಪಾಧ್ಯರ ಅಂಬೆ, ಬಳ್ಕೂರು ಕೃಷ್ಣಯಾಜಿಯವರ ಸಾಲ್ವ, ಕೆ. ಗೋವಿಂದ ಭಟ್‌ರ ದಕ್ಷ, ಕುಂಬಳೆ ಸುಂದರ ರಾಯರ ಈಶ್ವರ, ಶೇಣಿಯವರ ಚಂದಗೋಪ ಕೊಳ್ಯೂರು ರಾಮಚಂದ್ರ ರಾಯರ ಚಂದ್ರಾವಳಿ ಪಾತ್ರಗಳು ಅಭಿಮಾನಿಗಳ ಮೆಚ್ಚುಗೆಗೆ ಗುರಿಯಾಗಿತ್ತು. ಆರು ಜನ ಕಲಾವಿದರು ಆ ಪ್ರದರ್ಶನಕ್ಕೆ ಮಂಗಳೂರಿನಿಂದ ವಿಮಾನದಲ್ಲಿ ಮೊದಲ ಬಾರಿಗೆ ಪ್ರಯಾಣಿಸಿ ಬೆಂಗಳೂರಿಗೆ ಬಂದದ್ದು ವಿಶೇಷವಾಗಿತ್ತು.

ಸ್ವಲ್ಪ ಕಾಲ ರವೀಂದ್ರ ಕಲಾಕ್ಷೇತ್ರದಲ್ಲಿ ಪೂರ್ಣ ರಾತ್ರಿಯ ಯಕ್ಷಗಾನಕ್ಕೆ ಅವಕಾಶವಿದ್ದಿರಲಿಲ್ಲ. ಅಭಿಮಾನಿಗಳು ಅತಿಸಂಖ್ಯೆಯಲ್ಲಿ ಆಗಮಿಸಿ ಆಗುವ ಗಲಾಟೆ, ಗೊಂದಲಗಳನ್ನೇ ಕಾರಣವಾಗಿ ನೀಡಲಾಗಿತ್ತು. ಆದರೆ ಹಗಲು ಪ್ರದರ್ಶನಕ್ಕೆ ಬಾಧಕವಿರಲಿಲ್ಲ. ಯಕ್ಷದೇಗುಲದ 300ನೇ ಆಟವಾಗಿ ನಡೆಸಿದ 'ಕಂಸ ವಧೆ'ಗೆ ಅಸಂಖ್ಯ ಕಲಾಸಕ್ತರು ಆಗಮಿಸಿದ್ದರು. ಅಂದು ಕಂಸನ ಪಾತ್ರವನ್ನು ವಹಿಸಿದ್ದ (ಕೆ. ಮೋಹನ್) ನನ್ನ ಜೊತೆಯಲ್ಲಿ ಕೃಷ್ಣಮೂರ್ತಿ ತುಂಗರು, ರಾಧಾಕೃಷ್ಣ ಉರಾಳರು, ವಿಶ್ವನಾಥ ಶೆಟ್ಟಿಯವರು ಇದ್ದರೆ ಭಾಗವತಿಕೆಯಲ್ಲಿ ಲಂಬೋದರ ಹೆಗಡೆಯವರಿದ್ದರು. ಪ್ರಸಾದನಕ್ಕೆ ರಾಮ ಅವರ ಸಹಕಾರವಿತ್ತು.

ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಚಿಟ್ಟಾಣಿ ರಾಮಚಂದ್ರ ಹೆಗಡೆಯವರು ಪಾತ್ರವಹಿಸಿರುವ 'ವಾಲಿ ವಧೆ' ಪ್ರಸಂಗ ಪ್ರದರ್ಶನಕ್ಕೆ ಆ ಕಾಲದ ಖ್ಯಾತ ಚಿತ್ರ ನಟ ದಿ. ಉದಯಕುಮಾರ್ ಆಗಮಿಸಿದ್ದು, ಚಿಟ್ಟಾಣಿಯವರ ಕಲಾಪ್ರತಿಭೆಗೆ ಮೆಚ್ಚಿ ವೇದಿಕೆಗೆ ಬಂದು ಸಾಷ್ಟಾಂಗ ನಮಸ್ಕಾರ ಮಾಡಿದ್ದು, ನೆನಪಿನಲ್ಲಿ ಉಳಿದ ಘಟನೆ. ಚಿಟ್ಟಾಣಿಯವರ 'ಕಾಳಿದಾಸ' ಕೂಡ ಆ ಕಾಲದಲ್ಲಿ ಜನಾನುರಾಗ ಗಳಿಸಿತ್ತು. ಆ ಕಾಲದಲ್ಲಿ ಬಡಗುತಿಟ್ಟಿನ ಪ್ರಸಂಗಗಳಲ್ಲಿ ಪ್ರಾಚಾರ್ಯ ಎಂ. ನಾರ್ಣಪ್ಪ ಉಪ್ಪೂರರು, ನರಸಿಂಹ ದಾಸರು, ಕಾಳಿಂಗನಾವಡರು ಭಾಗವತರಾಗಿದ್ದರೆ ಮದ್ದಲೆಯಲ್ಲಿ ತಿಮ್ಮಪ್ಪ ನಾಯಕರು, ಶಂಕರ ಭಾಗವತರು, ಗಜಾನನ ಭಂಡಾರಿಯವರು ಅದೇ ರೀತಿ ಚಂಡೆಯಲ್ಲಿ ಹೊಳಗದ್ದೆ ಗಜಾನನ ಭಂಡಾರಿಯವರು ಇದ್ದರು. ಮುಖ್ಯ ಪಾತ್ರಗಳಲ್ಲಿ ಕೆರೆಮನೆ ಮಹಾಬಲ ಹೆಗಡೆ, ಚಿಟ್ಟಾಣಿ ರಾಮಚಂದ್ರ ಹೆಗಡೆ, ಆ್ಯಕ್ಟರ್ ಜೋಷಿ ಗಜಾನನ ಭಂಡಾರಿ ಹಳದೀಪುರ, ಕೋಟ ವೈಕುಂಠ, ಎಂ.ಎ. ನಾಯಕ್, ಆರಾಟೆ ಮಂಜುನಾಥ್, ಶಿರಿಯಾರ ಮಂಜುನಾಯ್ಕ, ಬಳ್ಕೂರು ಕೃಷ್ಣ ಯಾಜಿ, ರಾಮನಾಯರಿ ಶಿರಿಮಠ ಪಂಜುನಾಯ್ಕ, ಸರ್ಪಕಟ್ಟೆಹೆರಿಯ ಮುಂತಾದವರು ಮಿಂಚುತ್ತಿದ್ದರು. 'ಯಕ್ಷದೇಗುಲ' ಸಂಸ್ಥೆ ರವೀಂದ್ರ ಕಲಾಕ್ಷೇತ್ರದಲ್ಲಿ 1984ರ ಸುಮಾರಿಗೆ ಬೆಂಗಳೂರಿಗರಿಗೆ ಶುಂಠಿ ಸತ್ಯನಾರಾಯಣ ಭಟ್‌ರ ಸಂಚಾಲಕತ್ವದ ಬಚ್ಚಗಾರು ಮೇಳವನ್ನು ಕರೆಸಿ 'ಚಂದ್ರಹಾಸ ಚರಿತ' ಎಂಬ ಪ್ರದರ್ಶನವನ್ನು ಉಚಿತವಾಗಿ ಏರ್ಪಡಿಸಿದ ಹೆಗ್ಗಳಿಕೆ ಹೊಂದಿದೆ. ಅದೇ ದಿನ ಟೌನ್‌ಹಾಲ್‌ನಲ್ಲಿ ಕೂಡ ಬಡಗುತಿಟ್ಟಿನ ಅತಿಥಿ ಕಲಾವಿದರ ಕೂಡುವಿಕೆಯಿಂದ ಯಕ್ಷಗಾನ ಪ್ರದರ್ಶನವು ನಡೆದಿತ್ತು.

ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿರುವ ಸಂಸ ರಂಗ ಬಯಲು ಮಂದಿರವು ಕೂಡ ಯಕ್ಷಗಾನ ಚಟುವಟಿಕೆಗೆ ಸಹಕಾರ ನೀಡಿದೆ. ಯಕ್ಷದೇಗುಲ ಸಂಸ್ಥೆಯವರ

ಹಲವು ಕಾರ್ಯಕ್ರಮ ಇಲ್ಲಿ ನಡೆದಿವೆ. 1997ರ ಕಾರ್ಯಕ್ರಮವಾಗಿ 'ಯಕ್ಷಗಾನ ಉತ್ಸವ' ನಡೆದಿದ್ದು ಅದರಲ್ಲಿ 3 ದಿನಗಳ ಕಾಲ ಬೇರೆ ಬೇರೆ ಹವ್ಯಾಸಿ ತಂಡಗಳ ಪ್ರದರ್ಶನ ನಡೆದವು. ತೆಂಕುತಿಟ್ಟಿನ ಪ್ರದರ್ಶನವನ್ನು ಪುತ್ತೂರಿನ ಯಕ್ಷಗಾನ ತಂಡ ನೀಡಿದ್ದರೆ, ಅಂಬಲಪಾಡಿಯ ಲಕ್ಷ್ಮಿ ಜನಾರ್ದನ ಯಕ್ಷಗಾನ ಮಂಡಳಿ ಹಾಗೂ ಯಕ್ಷದೇಗುಲವು ಬಡಗುತಿಟ್ಟಿನ ಪ್ರದರ್ಶನ ನೀಡಿದವು. ಇದೇ ರೀತಿ 1998ರಲ್ಲಿ ಖ್ಯಾತ ಭಾಗವತ ಶ್ರೀ ವಿಠಲ ಘೋರ್ಪಡೆಯವರಿಗೆ 'ಚಿನ್ನದ ತಾಳ'ವನ್ನು ಕೊಟ್ಟು ಸನ್ಮಾನಿಸಿದ್ದು ವಿಶೇಷವಾಗಿತ್ತು. 1996ರಲ್ಲಿ ಖ್ಯಾತ ಸಾಹಿತಿ ಸೂರ್ಯನಾರಾಯಣ ಚಡಗರ ಅಧ್ಯಕ್ಷತೆಯಲ್ಲಿ ಯಕ್ಷಗಾನ ರಂಗಕ್ಕೆ ಎಲೆಮರೆ ಕಾಯಿಯಂತೆ ಸೇವೆ ಸಲ್ಲಿಸಿದ ಶ್ರೀ ಸದಾನಂದ ಹೆಬ್ಬಾರ ಅವರಿಗೆ 'ಚಿನ್ನದ ಉಂಗುರ'ವಿತ್ತು ಗೌರವಿಸಿದೆ. 1995ರಲ್ಲಿ ಖ್ಯಾತ ರಂಗತಜ್ಞ ಹೆಚ್.ಕೆ. ರಂಗನಾಥ್ ಅವರ ಅಧ್ಯಕ್ಷತೆಯಲ್ಲಿ ಮುಖ್ಯ ಅತಿಥಿಗಳಾಗಿ, ಕನ್ನಡ ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ವೈ.ಕೆ. ಮುದ್ದುಕೃಷ್ಣರು ಬಂದಿದ್ದರು. ಹಾರಾಡಿ ಮಹಾಬಲ ಗಾಣಿಗ ಅವರನ್ನು ಅಂದು ಸನ್ಮಾನಿಸಲಾಯಿತು. 'ಯಕ್ಷದೇಗುಲ' ತಂಡವು 'ಭೀಷ್ಮ ವಿಜಯ' ಪ್ರಸಂಗವನ್ನು ಇದೇ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶಿಸಿ ಎಲ್ಲರ ಗಮನಸೆಳೆದಿತ್ತು. ಅಂದು ಹಾರಾಡಿ ಮಹಾಬಲ ಅವರು ಜೋಡಿಕೋರೆ ಮುಂಡಾಸು ಹಾಕಿದ್ದು ವಿಶೇಷವಾಗಿತ್ತು. ಯಕ್ಷದೇಗುಲದ ಸಂಯೋಜನೆಯಲ್ಲಿ ಹತ್ತು ಪ್ರಮುಖ ಯಕ್ಷಗಾನದ ದೃಶ್ಯಾವಳಿಗಳನ್ನು ಒಂದೇ ವೇದಿಕೆಯಲ್ಲಿ ಬೆಂಗಳೂರಿನ ರಸಿಕರಿಗೆ ಉಣಬಡಿಸಿದ್ದು ಕೂಡ ವಿಶೇಷವಾದದ್ದು. ಇದರಲ್ಲಿ ಚಿಟ್ಟಾಣಿ ರಾಮಂದ್ರ ಹೆಗಡೆ, ಮಂಟಪ ಪ್ರಭಾಕರ ಉಪಾಧ್ಯ, ಕೊಂಡದಕುಳಿರಾಮಚಂದ್ರ ಹೆಗಡೆ ಮುಂತಾದವರು ಅತಿಥಿ ಕಲಾವಿದರಾಗಿದ್ದರೆ, ಯಕ್ಷದೇಗುಲದ ಭಾಗವತರಾದ ಲಂಬೋದರ ಹೆಗಡೆ, ಕಲಾವಿದರಾದ ಸುಬ್ರಹ್ಮಣ್ಯ ಹೊಳ್ಳ, ಕೃಷ್ಣಮೂರ್ತಿ ತುಂಗ, ರಾಧಾಕೃಷ್ಣ ಉರಾಳ, ವಿಶ್ವನಾಥ ಶೆಟ್ಟಿ, ಕೆ. ಪ್ರೀತಿ, ಪ್ರಿಯಾಂಕ ಕೆ. ಮುಂತಾದವರು ಭಾಗವಹಿಸಿದ್ದರು.

ಶಿರಳಗಿ ತಿಮ್ಮಪ್ಪ ನಾಯಕರಿಗೆ ಸನ್ಮಾನ ಏರ್ಪಡಿಸಿದ್ದ ಕಾರ್ಯಕ್ರಮ ಕೂಡ ಸಂಸರಂಗ ಮಂದಿರದಲ್ಲಿ ನಡೆದಿದ್ದು ಅಂದು 'ಕೌಸಲ್ಯ ವಿವಾಹ' ಪ್ರಸಂಗದ ಪ್ರದರ್ಶನ ಏರ್ಪಟ್ಟಿತ್ತು. ಕನ್ನಡ ಸಂಸ್ಕೃತಿ ಇಲಾಖೆಯವರ ನಯನ ರಂಗ ಮಂದಿರದಲ್ಲಿ ಯಕ್ಷದೇಗುಲ ಸಂಸ್ಥೆಯ ಕೆಲವೊಂದು ವಿಚಾರಸಂಕಿರಣಗಳನ್ನು ಏರ್ಪಡಿಸಿದೆ. ಇವುಗಳಲ್ಲಿ ಮುಖ್ಯವಾದವೆಂದರೆ 2002ರಲ್ಲಿ ನಡೆದ ಯಕ್ಷಗಾನದ ಪ್ರಸ್ತುತತೆ ಎಂಬುದು. ಪೂರ್ವರಂಗದ ಬಗ್ಗೆ ಕೂಡ ಇಲ್ಲೇ ವಿಚಾರ ಸಂಕಿರಣ ಹಾಗೂ ಪ್ರಾತ್ಯಕ್ಷಿಕೆ ನಡೆದಿತ್ತು. ಇವೆಲ್ಲವೂ 'ಯಕ್ಷದೇಗುಲ' ಆಯೋಜಿಸಿದ ಕಾರ್ಯಕ್ರಮಗಳಾಗಿವೆ.

ಡಾ॥ ಶಿವರಾಮ ಕಾರಂತರ ಜನ್ಮ ಶತಾಬ್ಧಿಯ ಅಂಗವಾಗಿ 2002ರಲ್ಲಿ ಸಂಸ ರಂಗಮಂದಿರದಲ್ಲಿ 'ಕಾರಂತ–100' 'ಈಳೆಯಣ್ಣನ ಕಥೆ–1000' ಎಂಬ ವಿನೂತನ ಕಾರ್ಯಕ್ರಮ 'ಯಕ್ಷದೇಗುಲ' ಹಮ್ಮಿಕೊಂಡಿತ್ತು. ಸಾಕ್ಷರತೆ ಸಾರುವ ಪ್ರಸಂಗವಾದ 'ಈಳೆಯಣ್ಣನ ಕತೆ'ಯೆಂಬ ಪ್ರಸಂಗದ (ಈಳೆಯಣ್ಣ ವಿಶ್ವನಾಥ ಶೆಟ್ಟಿ, ಅಕ್ಷರ–ತುಂಗ, ನಿರಕ್ಷರ–ಕೋಟ ಸುರೇಶ್) 1000ನೇ ಪ್ರದರ್ಶನ ಅಲ್ಲಿ ನಡೆಯಿತು. ಕನ್ನಡ ಸಂಸ್ಕೃತಿ ಇಲಾಖೆ 'ಕನ್ನಡ ಭವನ' ಕಟ್ಟುವ ಮೊದಲು ಖಾಲಿ ಇದ್ದ ಜಾಗದಲ್ಲಿ ತಾತ್ಕಾಲಿಕವಾದ ಷಡ್ ಮಾದರಿಯ 'ಕೈಲಾಸಂ ಕಲಾಕ್ಷೇತ್ರ' ಎಂಬ ರಂಗಮಂದಿರವನ್ನು ಚಪ್ಪರದ ವ್ಯವಸ್ಥೆಯೊಂದಿಗೆ ನಿರ್ಮಿಸಿದ್ದು 1984ರಲ್ಲಿ 'ಯಕ್ಷದೇಗುಲ', 'ಮಾಗಧ ವಧೆ' ಎಂಬ ಪ್ರಸಂಗದ ಪ್ರದರ್ಶನ ಅಲ್ಲಿ ನಡೆಸಿದ್ದು ಉಲ್ಲೇಖಾರ್ಹ. (ಮಾಗಧನಾಗಿ ಕೆ. ಮೋಹನ್, ಕೃಷ್ಣನಾಗಿ ಗೋಪಾಲಾಚಾರಿ, ಭೀಮನಾಗಿ ಚಂದನ್, ಭಾಗವತರಾಗಿ ವಿದ್ವಾನ್ ಗಣಪತಿ ಭಟ್, ಮದ್ದಲೆ ವಾದಕರಾಗಿ ಶ್ರೀ ಅನಂತ ಪದ್ಮನಾಭ್ ಪಾತಕರಿದ್ದರು).

ಹೀಗೆ ರವೀಂದ್ರ ಕಲಾಕ್ಷೇತ್ರದ ಆವರಣವು 'ಯಕ್ಷದೇಗುಲ'ದ ಯಕ್ಷಗಾನದ ಪ್ರಸ್ತುತಿಗೆ ಹಲವು ರೀತಿಯಿಂದ ಸಹಕರಿಸಿದೆ. ಇಲ್ಲಿನ ಎಲ್ಲ ರಂಗವೇದಿಕೆಗಳಲ್ಲೂ ಯಕ್ಷಗಾನ ಪ್ರದರ್ಶನವಿತ್ತು, ಬೆಂಗಳೂರಿನಲ್ಲಿ ಯಕ್ಷಗಾನ ಪ್ರಸಾರ ಮಾಡುವಲ್ಲಿ ಯಕ್ಷದೇಗುಲ 37 ವರ್ಷಗಳಿಂದ ಶ್ರಮಿಸುತ್ತಿದೆ.

ಲೇಖಕರು : ಕೆ. ಮೋಹನ್
'ಯಕ್ಷದೇಗುಲ' ಸ್ಥಾಪಕರು,
ತ್ಯಾಗರಾಜನಗರ, ಬೆಂಗಳೂರು.
ಚ.ದೂ. : 94485 10606

ಲೇಖಕರ ಕಿರುಪರಿಚಯ

ವೃತ್ತಿಯಲ್ಲಿ ಬ್ಯಾಂಕ್ ಉದ್ಯೋಗಿಯಾಗಿ ನಿವೃತ್ತಿ ಹೊಂದಿರುವ ಶ್ರೀ ಕೆ. ಮೋಹನ್ ಅವರು 'ಯಕ್ಷದೇಗುಲ' ಎಂಬ ಸಂಸ್ಥೆಯನ್ನು ಹುಟ್ಟುಹಾಕಿ ಯಕ್ಷಗಾನ ಪ್ರಸಾರದ ಕೈಂಕರ್ಯವನ್ನು ಕೈಗೆತ್ತಿಕೊಂಡಿದ್ದಾರೆ. ಅಸಂಖ್ಯ ಯಕ್ಷಗಾನ ಪ್ರಸಂಗಗಳಲ್ಲಿ ಪಾತ್ರಧಾರಿಯಾಗಿರುವ ಮೋಹನರು ಬೆಂಗಳೂರಿನ ಯಕ್ಷಗಾನ ಪ್ರೇಕ್ಷಕರಿಗೆ ಚಿರಪರಿಚಯ. 'ಗದಾಯುದ್ಧ'ದ ಕೌರವ, 'ಕೀಚಕವಧೆ'ಯ ಕೀಚಕ, ಚಂದ್ರಹಾಸದ 'ದುಷ್ಟಬುದ್ಧಿ' ಮುಂತಾದ ಪಾತ್ರಗಳಲ್ಲಿ ಹೆಸರು ಮಾಡಿದ್ದಾರೆ. ಇವರ 'ಯಕ್ಷದೇಗುಲ' ಕರ್ನಾಟಕದಲ್ಲಿ ಮಾತ್ರವಲ್ಲ, ರಾಷ್ಟ್ರದಾದ್ಯಂತ ಹಾಗೂ ವಿದೇಶಗಳಲ್ಲೂ ಕೂಡ ಪ್ರದರ್ಶನ ನೀಡಿದೆ. ಇವರ ನಿರ್ದೇಶನದ 'ಇಳೆಯಣ್ಣನ ಕಥೆ' 1500ಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡಿದೆ. ಯಕ್ಷಗಾನ ಕಲಿಕಾ ತರಬೇತಿಯನ್ನು ನೀಡುತ್ತಿರುವ 'ಯಕ್ಷದೇಗುಲ'ದಲ್ಲಿ ಮಕ್ಕಳ ಮೇಳ ಹಾಗೂ ಪ್ರೌಢರ ಮೇಳಗಳೆರಡೂ ಇವೆ.

'ಯಕ್ಷಗಾನ ಪ್ರಸಾರದಲ್ಲಿ ಕಲಾಕ್ಷೇತ್ರ' - ಸಾಲಿಗ್ರಾಮ ಮಕ್ಕಳ ಮೇಳದ ಅನುಭವ

-ಎಚ್. ಶ್ರೀಧರ್ ಹಂದೆ

ಕೇವಲ ನಾಲ್ಕಾರು ಯಕ್ಷಗಾನ ಬಯಲಾಟದ ಮೇಳಗಳ ಪ್ರದರ್ಶನಗಳನ್ನು ನೋಡಿ ಆನಂದಿಸುತ್ತಿದ್ದ ಕಾಲದಲ್ಲಿ ತೆಂಕು ಮತ್ತು ಬಡಗಿನಲ್ಲಿ ಡೇರೆಯ ಮೇಳಗಳು ಅಸ್ತಿತ್ವಕ್ಕೆ ಬಂದ ಕಾಲ. ಜನಾಕರ್ಷಣೆಗಾಗಿ ಸಿನೆಮಾ-ನಾಟಕಗಳ ಪ್ರಭಾವಕ್ಕೆ ಸಿಲುಕಿ ಮೂಲ ಯಕ್ಷಗಾನದ ಚೆಲುವು-ನಿಲುವು-ಶೈಲಿಗಳ ಅಖಂಡತೆಗೆ ದಕ್ಕೆ ಬರುವ ಸಮಯ. ಕಲಾವಿದರಿಗೆ ಉತ್ತಮ ಸೌಲಭ್ಯ, ಯಕ್ಷಗಾನ ಕ್ಷೇತ್ರದ ವಿಸ್ತರಣೆ ಇತ್ಯಾದಿ ಅನುಕೂಲಗಳು ಡೇರೆಯ ಮೇಳಗಳಿಂದ ಲಭ್ಯವಾದರೂ ಪರಂಪರೆಯಿಂದ ನಡೆದುಬಂದ ತಿಟ್ಟು-ಮಟ್ಟು-ಶೈಲಿಗಳು ಒಂದೊಂದಾಗಿ ನಶಿಸಿಹೋಗುತ್ತಿರುವ ಸಂದರ್ಭ - ಅವುಗಳನ್ನು ಯಥಾ ಸಾಧ್ಯ ಉಳಿಸಿ, ಬೆಳಸಿ ಮುಂದಿನ ಪೀಳಿಗೆಗೆ ಪರಿಚಯಿಸುವ ಉದ್ದೇಶದಿಂದ 1975 ಅಕ್ಟೋಬರ್ 10 ವಿಜಯದಶಮಿಯಂದು 'ಸಾಲಿಗ್ರಾಮ ಮಕ್ಕಳ ಮೇಳ' ಜನ್ಮ ತಾಳಿತು.

ಶಿಕ್ಷಕ ರಾಷ್ಟ್ರಪ್ರಶಸ್ತಿ ಹಾಗೂ ರಾಜ್ಯಪ್ರಶಸ್ತಿ ಪುರಸ್ಕೃತರಾದ ಕಾರ್ಕಡ ಶ್ರೀನಿವಾಸ ಉಡುಪ ಮತ್ತು ಹೆಚ್. ಶ್ರೀಧರ ಹಂದೆ ಇವರ ಕನಸಿನ ಕೂಸಾದ ಈ ಮಕ್ಕಳ ಯಕ್ಷಗಾನ ತಂಡಕ್ಕೆ ಇದೀಗ 45ರ ಹರೆಯ. ಶಿಕ್ಷಕದ್ವಯರಾದ ಇವರೀರ್ವರು ತಮ್ಮ ಶಾಲೆಗಳಲ್ಲಿ ಮಾತ್ರವಲ್ಲ ಪರಿಸರದ ಹೆಚ್ಚಿನ ಶಾಲೆಗಳ ವಾರ್ಷಿಕೋತ್ಸವದಲ್ಲಿ ನಾಟಕ ಹಾಗೂ ಯಕ್ಷಗಾನ ತರಬೇತಿಗೆ ಹೋಗುತ್ತಿದ್ದರು. ಶ್ರೀರಂಗ, ಬಿ.ವಿ. ಕಾರಂತ, ಪರ್ವತವಾಣಿ ಮುಂತಾದವರಿಂದ ನಾಟಕ ಕಲೆಯಲ್ಲೂ ಪರಿಣತಿ ಪಡೆದ ಈ ಶಿಕ್ಷಕರು ಸ್ವತಃ ಗಮಕಿಗಳು, ನಟರು, ನಿರ್ದೇಶಕರು, ಬರಹಗಾರರೂ ಆಗಿದ್ದರು. ತಮ್ಮ ಶಾಲೆಯ ಹಾಗೂ ಪರಿಸರದ ವಿದ್ಯಾಸಂಸ್ಥೆಗಳಲ್ಲಿನ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಕಲೆಹಾಕಿ ನಿರಂತರ ತರಬೇತಿ ನೀಡಿ ಅಂದು ತಮ್ಮ ಪರಿಸರದಲ್ಲಿ ಮೆರೆಯುತ್ತಿದ್ದ

ಹಿಂದಿನ ಹಾರಾಡಿ-ಮಟ್ಪಾಡಿ ತಿಟ್ಟಿನ ಯಕ್ಷಗಾನ ಉಳಿಸಿ-ಬೆಳೆಸಬೇಕೆಂಬ ಉದ್ದೇಶದಿಂದ ರೂಪುಗೊಂಡ ಮಕ್ಕಳ ಮೇಳದ ಮೊದಲ ಪ್ರದರ್ಶನ 'ವೀರವೃಷಸೇನ' ಸಂಪನ್ನಗೊಂಡುದು ಮಂಗಳೂರಿನ ಕಲಾಕುಂಜ ಸಭಾಭವನದಲ್ಲಿ, ದಕ್ಷಿಣ ರೋಟರಿ ಅಧ್ಯಕ್ಷ ಶ್ರೀ ಮಧುಸೂದನ ಡಿ. ಕುಶೆ, ಕೆ.ಎನ್. ಬಾಸ್ರಿ, ಕೆ.ಆರ್. ಕಾರಂತ, ಕೆ.ಎಂ. ಉಡುಪ, ಕೆ.ಎಸ್. ಉಪಾಧ್ಯ ಮುಂತಾದವರ ಸಹಕಾರದಿಂದ. ಪ್ರೇಕ್ಷಕರ ಒಕ್ಕೊರಲ ಮೆಚ್ಚುಗೆ, ಪ್ರತಿಷ್ಠಿತ ಪತ್ರಿಕೆಗಳ ಉತ್ತಮ ವಿಮರ್ಶೆಗಳಿಂದ ಬಾಲಕರ ಪ್ರದರ್ಶನದ ಗಟ್ಟಿತನ ಸಾಬೀತಾಗಿತ್ತು. ಬೆಂಗಳೂರು, ಚೆನ್ನೈ, ಮುಂಬಯಿ, ಗೋವಾ, ಹೈದ್ರಾಬಾದ್, ಗುಜರಾತ್, ದೆಹಲಿ-ಎನ್.ಎಸ್.ಡಿ., ಬಾಲಭವನ ಮುಂತಾದ ಕಡೆಗಳಿಂದ ಮಕ್ಕಳ ಆಟದ ಪ್ರದರ್ಶನಗಳಿಗೆ ಬೇಡಿಕೆ ಬಂದದ್ದೇ ಬಂದದ್ದು. ಮಕ್ಕಳ ಮೇಳದ ಗೌರವಾಧ್ಯಕ್ಷ ಮಾನ್ಯ ಧರ್ಮಸ್ಥಳದ ಧರ್ಮಾಧಿಕಾರಿ ಡಾ॥ ವೀರೇಂದ್ರ ಹೆಗಡೆ ಇವರ ಆಶೀರ್ವಾದದ ಬಲ ನಮಗೆ ಸ್ಫೂರ್ತಿ ನೀಡುತ್ತಿದೆ.

ಈ ಸಾಲಿಗ್ರಾಮ ಮಕ್ಕಳ ಮೇಳದ ಕಲಾವಿದರು ಹರಿಹರೆಯದ ಚಿಣ್ಣರು. ಅವರು ಶೈಕ್ಷಣಿಕ ಪ್ರಗತಿಗೆ ಅಡ್ಡಿಯಾಗದಂತೆ ವಿದ್ಯಾರ್ಥಿಗಳ ಬಿಡುವಿನ ವೇಳೆ ಅವರ ಮನೆಗಳಲ್ಲಿ, ಶಾಲೆಗಳಲ್ಲಿ ಮತ್ತು ನಿರ್ದೇಶಕರ ಮನೆಗಳಲ್ಲಿ ನೀಡಿದ ತರಬೇತಿಯಿಂದ ಇಡೀ ತಂಡವೇ ನಿರ್ದಿಷ್ಟವಾದ ಶಿಸ್ತಿಗೆ ಒಳಪಟ್ಟು ನೀಡಿದ ಸಮಯ ಮಿತಿಯ ಪ್ರದರ್ಶನಗಳ ಗುಣಮಟ್ಟದಿಂದ ದೇಶದಾದ್ಯಂತ ಮಾತ್ರವಲ್ಲ, ಸಾಗರೋತ್ತರ ಖಂಡಗಳಿಗೂ ಪ್ರಪ್ರಥಮ ಯಕ್ಷಗಾನವನ್ನು ಕೊಂಡೊಯ್ದ ಶ್ರೇಯಸ್ಸು ಮಕ್ಕಳ ಮೇಳದ ಪಾಲಾಯ್ತು. ಸಮೀಪದ ಉಡುಪಿ-ಕುಂದಾಪುರಗಳನ್ನೇ ಕಂಡರಿಯದ ಇಲ್ಲಿನ ಬಾಲಕಲಾವಿದರಿಗೆ, ರಾಜಧಾನಿ ಬೆಂಗಳೂರಿಗೆ ತೆರಳಿ ಪ್ರದರ್ಶನ ನೀಡುವ ಭಾಗ್ಯ ಒದಗಿಬಂದುದು 1976ರಲ್ಲಿ. ಅದಕ್ಕೆ ಕಾರಣಕರ್ತರು ನಮ್ಮೂರಿನ ಪಾರಂಪಳ್ಳಿ ಸದಾಶಿವ ಐತಾಳ ಸಹೋದರರು ಹಾಗೂ ಬೆಂಗಳೂರಿನ ನಿವಾಸಿ ನಮ್ಮವರೇ ಆದ ಕೆ. ರಾಮಕೃಷ್ಣ ಕಾರಂತರು. ಒಂದೇ ಪ್ರದರ್ಶನ ನೀಡಲು ಹೋದ ಈ ಮಕ್ಕಳ ತಂಡಕ್ಕೆ ಸುಮಾರು 10 ಪ್ರದರ್ಶನಗಳಿಗೆ ಅವಕಾಶ ಮಾಡಿರುವವರು ಕೆನರಾ ಬ್ಯಾಂಕಿನ ಮುಖ್ಯಸ್ಥರಾದ ಶ್ರೀ ಎಸ್.ಆರ್. ಪ್ರಭುಗಳು. ಹೆಚ್ಚಿನ ಪ್ರದರ್ಶನಗಳು ಭವ್ಯವಾದ ರವೀಂದ್ರ ಕಲಾಕ್ಷೇತ್ರದಲ್ಲಿ ಹಾಗೂ ಸಮೀಪದ ಪುರಭವನದಲ್ಲಿ ಎನ್ನುವುದನ್ನು ಮರೆಯಲಾಗದು. ಹಳ್ಳಿಗಳ, ಅವ್ಯವಸ್ಥಿತ ಸಭಾ ಭವನಗಳನ್ನೇ ಕಂಡ ಮೇಳದ ಬಾಲ ಕಲಾವಿದರಿಗೆ ಹಿಗ್ಗೋ ಹಿಗ್ಗು. ಆ ಎರಡೂ ರಂಗಮಂದಿರಗಳಲ್ಲಿ ಮಕ್ಕಳ ಮೇಳದ ಭೀಮ, ಅರ್ಜುನ, ದ್ರುಪದ ಇವರೆಲ್ಲ ಗಾತ್ರದಲ್ಲಿ ಅತಿ ಚಿಕ್ಕವರಾಗಿ ತೋರುತ್ತಿದ್ದರು. ಆದರೆ ಅಲ್ಲಿನ ಬೆಳಕಿನ ವ್ಯವಸ್ಥೆ, ಧ್ವನಿವರ್ಧಕ, ಪ್ರೇಕ್ಷಕರ ಸುಖಾಸನ,

ಮೇಕಪ್ ರೂಂ, ರಂಗಮಂಟಪದ ವಿನ್ಯಾಸ, ಸಿಬ್ಬಂದಿ ವರ್ಗದವರ ಸಹಕಾರ ಇತ್ಯಾದಿಗಳಿಂದ ಇಲ್ಲಿನ ಪುಟಾಣಿ ಪಾತ್ರಧಾರಿಗಳು ಪ್ರಬುದ್ಧರಂತೆ ರಂಜಿಸಿದರು.

1978ರಲ್ಲಿ ಮೂರನೆ ಬಾರಿ ಮಕ್ಕಳ ಮೇಳಕ್ಕೆ ಬೆಂಗಳೂರು ಪ್ರವಾಸದ ಭಾಗ್ಯ ಒದಗಿಬಂತು. ಎ.ಡಿ.ಎ ಕಲಾಮಂದಿರ, ಪುರಭವನ, ಕೆನರಾಬ್ಯಾಂಕ್ ಸಭಾ ಭವನ, ಹೀಗೆ ರವೀಂದ್ರ ಕಲಾಕ್ಷೇತ್ರದ ಪರಿಸರವೇ ಕಲೆ–ಸಾಹಿತ್ಯ–ಸಂಸ್ಕೃತಿಗಳ ಆಡುಂಬೊಲ ಎಂದರೂ ಅತಿಶಯೋಕ್ತಿ ಆಗಲಾರದು. ಮಕ್ಕಳ ಮೇಳದ ಹೆಚ್ಚಿನ ಪ್ರದರ್ಶನಗಳು ಈ ಆವರಣದಲ್ಲೇ ನಡೆದಿತ್ತು. ಪುರಭವನದ ಪಕ್ಕ ಕೆನರಾ ಬ್ಯಾಂಕ್ ಸಭಾಭವನವನದಲ್ಲಿ ಆ ವರುಷ ಮೇ ತಿಂಗಳಲ್ಲಿ ಒಂದು ದಿನ ಮೇಳದ 'ಕೃಷ್ಣಾರ್ಜುನ' ಪ್ರಸಂಗದ ಪ್ರದರ್ಶನ, ಬಯಲಾಟ ಮುಗಿದ ಬಳಿಕ ಚೌಕಿಗೆ (ಬಣ್ಣದ ಮನೆ) ಮಕ್ಕಳಿಗೆ ವೇಷ ಕಳಚಲಿಕ್ಕೂ ಆಸ್ಪದ ನೀಡದೆ ಕಲಾ ಅಭಿಮಾನಿಗಳ ಮುತ್ತಿಗೆ, ಮೆಚ್ಚುಗೆ, ಪಾತ್ರಧಾರಿಗಳಿಗೆ ಕೈಕುಲಕಿ ಅಭಿನಂದನೆಗಳ ಮಹಾಪೂರ. ಅವರಲ್ಲಿ ಒಬ್ಬ ಮಹನೀಯರು ತಮ್ಮ ವಿಳಾಸದ ಚೀಟಿ ನೀಡುತ್ತ 'ನಾಳೆ ಬೆಳಿಗ್ಗೆ ನಮ್ಮಲ್ಲಿಗೆ ಅಗತ್ಯ ಬಂದು ಹೋಗಬೇಕು' ಎಂದು ಆಹ್ವಾನಿಸಿದರು ನಿರ್ದೇಶಕರೀರ್ವರನ್ನು.

ಮಾರನೆಯ ದಿನ ಬೆಳಿಗ್ಗೆ ಅವರ ಭೇಟಿ ಮಾಡಿದಾಗಲೇ ತಿಳಿಯಿತು ಅವರು ಮತ್ತಾರೂ ಅಲ್ಲ, ಘನ ವಿದ್ವಾಂಸರಾದ ಶ್ರೀಯುತ ಹೆಚ್.ಕೆ. ರಂಗನಾಥ ಇವರು ಎಂದು. 'ನಿಮ್ಮ ಮೇಳ'ವನ್ನು 'ಅಮೇರಿಕಾಕ್ಕೆ ಕೊಂಡು ಹೋಗುವ ಯೋಚನೆ ಇದೆ. ಇದಕ್ಕೆ ನಿಮ್ಮ ಒಪ್ಪಿಗೆ ಇದೆಯೇ?' ಎಂದು ನೇರವಾಗಿ ಕೇಳಿದರು. ನಾವು ಮೂಕವಿಸ್ಮಿತರಾದೆವು. ಕ್ಷಣಕಾಲ ಮೌನ ಆವರಿಸಿತು. ಸಾವರಿಸಿಕೊಂಡು ವಿಷಯ ಏನೆಂದು ಕೇಳಿದೆವು. ಅಮೇರಿಕಾದ ಪಡುಗಡಲ ತೀರದ 'ಸೇನೋಸೆ'ಯಲ್ಲಿ ಅಂತಾರಾಷ್ಟ್ರೀಯ ಮಕ್ಕಳ ಉತ್ಸವ ನಡೆಯಲಿದೆ. ಬೇರೆ ಬೇರೆ ದೇಶಗಳಿಂದ ಮಕ್ಕಳ ಕಲಾತಂಡಗಳಿಗೆ ಆಹ್ವಾನ ಇತ್ತಿದ್ದಾರೆ. ಭಾರತದಿಂದ ಒಂದು ಉತ್ತಮ ಕಲಾತಂಡವನ್ನು ಕರೆದೊಯ್ಯುವ ಜವಾಬ್ದಾರಿ ನನ್ನ ಪಾಲಿಗೆ ಬಂದಿದೆ. ರಾಷ್ಟ್ರದಾದ್ಯಂತ ಹುಡುಕಾಡಿದೆ. ನಿನ್ನಿನ ನಿಮ್ಮ ಪ್ರದರ್ಶನ ನೋಡಿ ತೃಪ್ತಿಯಾಯಿತು. ನಮ್ಮ ಕರ್ನಾಟಕದಿಂದಲೇ ನಿಮ್ಮ ಮಕ್ಕಳ ಮೇಳವನ್ನು ಕೊಂಡು ಹೋಗಬಹುದು ಎನ್ನುವ ತೀರ್ಮಾನಕ್ಕೆ ಬಂದಿದ್ದೇನೆ' ಎಂದರು. ನಮ್ಮ ಮೌನ ಮುಖಮುದ್ರೆಯನ್ನು ನೋಡಿ 'ಹೆದರುವ ಅಗತ್ಯವಿಲ್ಲ, ರಾಜ್ಯಸರ್ಕಾರ ಹೋಗಿಬರುವ ವೆಚ್ಚವನ್ನು ಭರಿಸುತ್ತದೆ, ಅಲ್ಲಿನ ಎಲ್ಲ ವ್ಯವಸ್ಥೆ ಅಮೇರಿಕಾ ಸರಕಾರ ನೋಡಿಕೊಳ್ಳುತ್ತದೆ' ಎಂದು ಧೈರ್ಯ ತುಂಬಿದರು. ಹಾಗೆ ಕಲಾಕ್ಷೇತ್ರದ ಆವರಣವೇ ನಮ್ಮ ಮಕ್ಕಳ ಮೇಳಕ್ಕೆ ಚಿಮ್ಮುಹಲಗೆಯಾಗಿದೆ.

ಕೇವಲ 20 ದಿನದ ಅವಧಿ ಬಾಕಿ ಇದೆ. ಎಲ್ಲ ಮಕ್ಕಳನ್ನು ಕರೆದೊಯ್ಯುವಂತಿಲ್ಲ, ಬಾಲ ಕಲಾವಿದರ ಆಯ್ಕೆ ಆಗಬೇಕು, ಪಾಸ್‌ಪೋರ್ಟ್, ಉಡುಗೆ-ತೊಡುಗೆ, ಸೀಮಿತ ಅವಧಿಯ ಪ್ರಸಂಗಗಳ ತರಬೇತಿ, ವೈದ್ಯಕೀಯ ಪರೀಕ್ಷೆ, ವೀಸಾ, ಒಂದೇ-ಎರಡೇ ಇವುಗಳೆಲ್ಲದರ ತಯಾರಿಗೆ ಬೆಂಬಲವಾಗಿ ನಿಂತವರು ಶ್ರೀ ಕೆ.ಎಮ್. ಉಡುಪ, ಮಾನ್ಯರಾದ ಕೆ.ಕೆ. ಪೈ, ಟಿ.ಎ. ಪೈ ಮೊದಲಾದವರು. ಆ ಕಾಲದ ನಮ್ಮ ಮುಖ್ಯಮಂತ್ರಿಗಳು ಶ್ರೀ ದೇವರಾಜ ಅರಸರು, ಮಾನ್ಯ ಮಂತ್ರಿಗಳಾದ ಕೆ.ಹೆಚ್ ಶ್ರೀನಿವಾಸ ಇವರೆಲ್ಲರ ಪ್ರೋತ್ಸಾಹ, ವಾರ್ತಾ ಇಲಾಖೆಯ ನಿರ್ದೇಶಕರಾಗಿದ್ದ ಶ್ರೀ ಕಪ್ಪಣ್ಣ ಇವರ ಸಹಕಾರ ಮರೆಯಲಾಗದು. ಈ ಮಧ್ಯೆ ವಿಧಾನಸೌಧದ ಸುಂದರ ಸಭಾಭವನದಲ್ಲಿ ಶಾಸಕರಿಗಾಗಿ ಪ್ರದರ್ಶನ ನೀಡಬೇಕಾಯ್ತು. ಅಂದಿನ ಮಕ್ಕಳ 'ವೀರವೃಷಸೇನ' ನೋಡಿದ ಮಾನ್ಯ ಮುಖ್ಯಮಂತ್ರಿಗಳ ಬಾಯಿಯಿಂದ 'ಈ ಮಕ್ಕಳನ್ನು ಅಮೇರಿಕದ ಜನ ಭಾರತಕ್ಕೆ ವಾಪಾಸು ಕಳುಹಿಸದಿದ್ದರೆ!' ಎನ್ನುವ ಹರ್ಷೋದ್ಗಾರವೂ ಮೊಳಗಿತ್ತು. ಶಾಸಕರೆಲ್ಲರ ಕೈ ಚಪ್ಪಾಳೆಯ ಮಧ್ಯೆ, ಶ್ರೀಯುತ ಕಪ್ಪಣ್ಣ ಇವರ ನೇತೃತ್ವದಲ್ಲಿ ಇದೇ ಕಲಾಕ್ಷೇತ್ರದಲ್ಲಿ ಕೆಲವು ದಿನ ಮಕ್ಕಳ ತರಬೇತಿ, ಪ್ರದರ್ಶನವೂ ನಡೆದಿದ್ದವು. ಅಮೇರಿಕಾದಲ್ಲಿ ಸುಮಾರು ಹತ್ತು ಪ್ರದರ್ಶನಗಳನ್ನು ನೀಡಬೇಕಾಗಿತ್ತು. 'ಇದು ಸ್ಪರ್ಧೆ ಆಗಿದ್ದರೆ ಬಂದಿರುವ ಎಲ್ಲ ತಂಡಗಳಲ್ಲಿ ಭಾರತದ ಸಾಲಿಗ್ರಾಮ ಮಕ್ಕಳೇ ಪ್ರಥಮ ಸ್ಥಾನ ಪಡೆಯುತ್ತಿದ್ದರು' ಎನ್ನುವ ಪತ್ರಿಕೆಗಳ ವಿಮರ್ಶೆಯೂ ಬಂದಿತ್ತು. 'ಸಾಲಿಗ್ರಾಮ ಮಕ್ಕಳ ಮೇಳವನ್ನು ವಿದೇಶಕ್ಕೆ ಕರೆದೊಯ್ದದ್ದು ನನ್ನ ಬದುಕಿನಲ್ಲಿ ಮಾಡಿದ ಒಳ್ಳೆಯ ಕೆಲಸಗಳಲ್ಲಿ ಒಂದು" ಎಂದು ತಮ್ಮ ಆತ್ಮಚರಿತ್ರೆಯಲ್ಲಿ ಮಾನ್ಯ ರಂಗನಾಥರು ದಾಖಲಿಸಿದ್ದಾರೆ ಎನ್ನುವುದು ಗಮನಾರ್ಹ. ಹಿಂತಿರುಗುವಾಗ ಇಂಗ್ಲೆಂಡಿನ ಭಾರತೀ ವಿದ್ಯಾಭವನದಲ್ಲಿ ಶ್ರೀ ಮತ್ತೂರು ಕೃಷ್ಣಮೂರ್ತಿಯವರ ಆತಿಥ್ಯದಲ್ಲಿ 'ವೀರ ವೃಷಸೇನ' ಆಂಗ್ಲ ಪ್ರೇಕ್ಷಕರ ಮನಸೂರೆಗೊಂಡಿತು.

ನಂತರದ ದಿನಗಳಲ್ಲಿ ಬೆಂಗಳೂರಿಗೆ ಬಂದಾಗ ರವೀಂದ್ರ ಕಲಾಕ್ಷೇತ್ರದಲ್ಲಿ ಹಲವಾರು ಪ್ರದರ್ಶನಗಳನ್ನು ನೀಡುವ ಅವಕಾಶ ಮಕ್ಕಳ ಮೇಳಕ್ಕೆ ದೊರೆತಿದೆ. ವೀರವೃಷಸೇನ, ಗುರುದಕ್ಷಿಣೆ, ಕೃಷ್ಣಾರ್ಜುನ, ಬಬ್ರುವಾಹನ ಇತ್ಯಾದಿ ಪ್ರಸಂಗಗಳ ಪ್ರದರ್ಶನಗಳು ಕಳೆಗಟ್ಟುವಲ್ಲಿ ಇದರ ವಿನ್ಯಾಸ ಬಹಳಷ್ಟು ಪೂರಕವಾಗಿತ್ತು. ನಗರದ ಎಲ್ಲ ಕಡೆಗಳಿಂದ ಬಂದುಹೋಗುವ ಪ್ರೇಕ್ಷಕರಿಗೂ ಕೇಂದ್ರ ಸ್ಥಾನದಲ್ಲಿದ್ದ ಈ ರವೀಂದ್ರ ಕಲಾಕ್ಷೇತ್ರ ನಗರದ ಮೂಲೆಮೂಲೆಗಳಿಂದ ಬಂದು ಹೋಗುವ ವಾಹನ ಸೌಕರ್ಯಗಳಿಂದಲೂ ಕೂಡಿರುವುದು ಇದರ ಗುಣಾತ್ಮಕ ಅಂಶಗಳಲ್ಲಿ ಒಂದು.

ಮೇಲಾಗಿ ಕಲಾವಿದರಿಗೆ ಹಾಗೂ ಪ್ರೇಕ್ಷಕರಿಗೆ ಉತ್ತಮ ಊಟೋಪಚಾರ ವ್ಯವಸ್ಥೆಯನ್ನು ಮಾಡುತ್ತಿರುವ ಉಪಹಾರ ಗೃಹ, ಮಾಲೀಕ ಶ್ರೀಯುತ ಎ.ಪಿ. ಕಾರಂತ, ಸಿಬ್ಬಂದಿ ವರ್ಗ ಎಲ್ಲರೂ ಕಲಾಸಕ್ತರೂ, ಆತ್ಮೀಯರೂ ಆಗಿದ್ದಾರೆ ಎನ್ನುವುದು ಗಮನಾರ್ಹ. ಈ ಮಧ್ಯೆ ಕೆಲವು ಗೊಂದಲಗಳು ಇದ್ದರೂ ನಮ್ಮ ಮಕ್ಕಳ ಪ್ರದರ್ಶನಗಳಿಗೆ ಯಾವ ತೊಂದರೆಯೂ ಆಗಿಲ್ಲ.

1985ರಲ್ಲಿ ಬೆಹರಿನ್ ಪ್ರವಾಸದ ನಂತರ 1988ರಲ್ಲಿ ಕರ್ನಾಟಕ ಸರಕಾರ ಸಾಲಿಗ್ರಾಮ ಮಕ್ಕಳ ಮೇಳವನ್ನು ವಿಶ್ವ ಕನ್ನಡ ಸಮ್ಮೇಳನಕ್ಕಾಗಿ ಇಂಗ್ಲೆಂಡಿನ ಮೆಂಚೆಸ್ಟರಿಗೆ ಕಳುಹಿಸಿತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ. ಆವಾಗ ಮುಖ್ಯಮಂತ್ರಿಗಳಾಗಿದ್ದವರು ಶ್ರೀ ರಾಮಕೃಷ್ಣ ಹೆಗಡೆಯವರು. ಸಂಸ್ಕೃತಿ ಇಲಾಖೆಯ ನಿರ್ದೇಶಕರು ಮಾನ್ಯ ವಿಠಲಮೂರ್ತಿಯವರು. ಮೆಂಚೆಸ್ಟರಿನ ಕನ್ನಡ ಸಂಘದ ಅಧ್ಯಕ್ಷೆ ಶ್ರೀಮತಿ ಡಾ|| ಭಾನುಮತಿಯವರು 'ಅಮೇರಿಕಕ್ಕೆ ಹೋದ ಮಕ್ಕಳ ತಂಡವನ್ನೇ ತಮ್ಮಲ್ಲಿಗೆ ಕಳುಹಿಸಿಕೊಡಬೇಕೆ'ಂಬ ಬೇಡಿಕೆ ಸರಕಾರಕ್ಕೆ ಸಲ್ಲಿಸಿದ್ದರಂತೆ. ಆ ಸಂದರ್ಭ ಇದೇ ರವೀಂದ್ರ ಕಲಾಕ್ಷೇತ್ರದ ತರಬೇತಿ ಮಂದಿರದಲ್ಲಿ ಮಕ್ಕಳ ತರಬೇತಿ ಕೆಲವು ದಿನ ನಡೆದಿತ್ತು. ಅಂದೂ ಅಲ್ಲಿನ ವ್ಯವಸ್ಥೆ ಚೇತೋಹಾರಿಯಾಗಿತ್ತು. ಡಾ. ಶಿವರಾಮ ಕಾರಂತ, ಗಾಯಕರಾದ ಅಶ್ವಥ್, ನಟವರ ಶಂಕರನಾಗ್ ನಮ್ಮ ಭಾರತದ ಸಾಂಸ್ಕೃತಿಕ ತಂಡದ ಗಣ್ಯರಾಗಿದ್ದರು.

ಪ್ರಪ್ರಥಮ ಯಕ್ಷಗಾನವನ್ನು ಸೀಮೋಲ್ಲಂಘನ ಮಾಡಿದ 30ನೇ ವರುಷದ ಹರುಷ ಸಮಾರಂಭದ ಬೆಳಿಗ್ಗೆ ಡಾ. ಪ್ರಭಾಕರ ಜೋಶಿ, ಡಾ. ಸಿ. ಆನಂದರಾಮ ಉಪಾಧ್ಯ, ಕುಂಬ್ಳೆ ಸುಂದರರಾವ್, ಶ್ರೀ ಕಪ್ಪಣ್ಣ, ಕೆ. ಮೋಹನ್ ಮುಂತಾದ ಗಣ್ಯರನ್ನೊಳಗೊಂಡ ಯಕ್ಷಗಾನ ಗೋಷ್ಠಿ ನಡೆದುದು ಇದೇ ರವೀಂದ್ರ ಕಲಾಕ್ಷೇತ್ರದಲ್ಲಿ. ನಡೆಸಿಕೊಟ್ಟವರು ಶ್ರೀನಿವಾಸ ಸಾಸ್ತಾನ.

ಡಾ. ಕಾರಂತರ ಸಮ್ಮಾನ ಸಮಾರಂಭ ಈ ಕಲಾಕ್ಷೇತ್ರದಲ್ಲಿ ನಡೆದಾಗ ಸಾಲಿಗ್ರಾಮ ಮಕ್ಕಳ ಮೇಳದ ಪ್ರದರ್ಶನ ಮತ್ತೆ ಸಂಪನ್ನಗೊಂಡಿತ್ತು. ಪ್ರತಿ ವರುಷ "ಮಕ್ಕಳು ಬದಲಾಗುತ್ತಾರೆ. ಇದೇ ಗುಣಮಟ್ಟ ಮುಂದೆಯೂ ಉಳಿಸಿಕೊಳ್ಳಲು ಸಾಧ್ಯವೇ?" ಎಂಬ ಉದ್ಗಾರ ಕಾರಂತಜ್ಜನ ಬಾಯಿಯಿಂದ ಹೊರಬಂತು. ಅದನ್ನೇ ಪಂಥಾಹ್ವಾನದ ಆಶೀರ್ವಾದ ಎಂದು ತಿಳಿದು ಮಕ್ಕಳ ಮೇಳ ನಡೆಸುತ್ತಿದ್ದೇವೆ. ಕಳೆದ 45 ವರುಷಗಳಲ್ಲಿ 150–160ಕ್ಕೂ ಹೆಚ್ಚಿನ ಪ್ರದರ್ಶನಗಳಿಗೆ ಅವಕಾಶ ನೀಡಿದ ರವೀಂದ್ರ ಕಲಾಕ್ಷೇತ್ರವನ್ನೇ ಇಲ್ಲಿನ ಬಾಲ ಕಲಾವಿದರು ಎಂದಿಗೂ ಮರೆಯಲಾರರು.

ಮಕ್ಕಳ ಮೇಳದ ಪ್ರಾರಂಭದ ದಿನಗಳಲ್ಲಿ ಬಾಲ ಕಲಾವಿದರಾಗಿದ್ದು ಈಗ ದೊಡ್ಡ ದೊಡ್ಡ ಉದ್ಯೋಗದಲ್ಲಿರುವವರು ಇದೇ ಬೆಂಗಳೂರಿನಲ್ಲಿ ಒಟ್ಟಾಗಿ ಸೇರಿ ತಾವು ವಯಸ್ಕರೆಂಬುದನ್ನು ಮರೆತು ಮತ್ತೆ ಯಕ್ಷಗಾನದ ಪ್ರದರ್ಶನಕ್ಕೆ ಅಣಿಯಾಗಿ ಪ್ರದರ್ಶಿಸಿದ್ದು ಕೂಡ ಇದೇ ಆವರಣದಲ್ಲಿ. ನಾಲ್ಕು ದಶಕಗಳ ಕೆಳಗೆ ಮಕ್ಕಳ ಮೇಳದಲ್ಲಿ ಕಲಿತ ಇವರು ಈ ಯಕ್ಷಗಾನ ಕಲೆಯನ್ನು ಅಚ್ಚುಕಟ್ಟಾಗಿ ಪ್ರದರ್ಶಿಸಿ ನಿಜವಾದ ಅರ್ಥದಲ್ಲಿ 'ಗುರುದಕ್ಷಿಣೆ'ಯನ್ನು ಗುರುವಂದನೆ ಕಾರ್ಯಕ್ರಮದ ಮೂಲಕ ನೀಡಿದ್ದು ಉಲ್ಲೇಖನಾರ್ಹ.

ಶ್ರೀಮತಿ ಮಾಲಿನಿ ಮಲ್ಯ ಇವರ ಕೇಳಿಕೆಯಂತೆ ಕಾರಂತರ ಯಕ್ಷಗಾನ ಬ್ಯಾಲೆಯು ಪುನರ್ ನಿರ್ಮಾಣವಾದಾಗ ಇದೇ ಕಲಾಕ್ಷೇತ್ರದಲ್ಲಿ ಶ್ರೀ ಉಪೇಂದ್ರ ಸೋಮಯಜಿಗಳು ಹಾಗೂ ಈ ಲೇಖಕರೊಂದಾಗಿ 'ಪಂಚವಟಿ' ಪ್ರದರ್ಶನ ನಡೆಸಿದ್ದೆವು. ಪ್ರದರ್ಶನ ನೀಡಲು ಬಂದಾಗ ಮಾತ್ರವಲ್ಲ ಅನ್ಯ ಕಾರ್ಯ ನಿಮಿತ್ತ ನಾವಾಗಲೀ, ಇಲ್ಲಿನ ಬಾಲಕಲಾವಿದರಾಗಲೀ ಬೆಂಗಳೂರಿಗೆ ಬಂದಾಗ ಕಲಾಕ್ಷೇತ್ರಕ್ಕೆ ಭೇಟಿ ನೀಡುತ್ತಿದ್ದೆವು. ಪ್ರತಿದಿನ ನಾಟಕವೋ, ಯಕ್ಷಗಾನವೋ, ಸಾಹಿತ್ಯ ಸಮಾರಂಭವೋ, ಸೆಮಿನಾರುಗಳೋ, ಶಿಬಿರಗಳೊ ಯಾವುದಾದರೊಂದು ಪ್ರದರ್ಶನ ನಡೆಯುತ್ತಲೇ ಇರುತ್ತದೆ. ಎಂದೂ ಖಾಲಿ ಕಲಾಕ್ಷೇತ್ರವನ್ನು ನಾವು ನೋಡಿಯೇ ಇಲ್ಲ. ಮಂದಿರದ ಮುಂಭಾಗ ಒಳಗೆ ಹೊರಗೆ ಹಾಕಲಾದ ಪ್ರದರ್ಶನಗಳ ಫಲಕಗಳನ್ನು ನೋಡುವುದೇ ಒಂದು ಬಗೆಯ ಆನಂದ. ಮುಂದಿನ ಸೋಪಾನಗಳ ಮೇಲೆ ಕುಳಿತು ಏಕಾಂತವಾಗಿ ಸಮಯ ಕಳೆಯುತ್ತಿದ್ದರೆ ಒಂದು ರೀತಿಯ ನೆಮ್ಮದಿ. ಬೆಂಗಳೂರಿನ ಪ್ರೇಕ್ಷಣೀಯ ಸ್ಥಳಗಳಲ್ಲಿ ರವೀಂದ್ರ ಕಲಾಕ್ಷೇತ್ರವೂ ಒಂದು ಎಂದರೆ ತಪ್ಪಾಗದು.

ರವೀಂದ್ರ ಕಲಾಕ್ಷೇತ್ರದ 50ರ ಸಂಭ್ರಮದ ಮೊದಲ ದಿನ ನಮ್ಮ ಮಕ್ಕಳ ಮೇಳದ ಪ್ರದರ್ಶನಕ್ಕೂ ಅವಕಾಶ ಒದಗಿಸಿದ್ದರು. ಅಂದಿನ ಎಲ್ಲ ವ್ಯವಸ್ಥೆಗಳನ್ನು ಮಾಡಿದ ಶ್ರೀಯುತ ಶ್ರೀನಿವಾಸ ಕಪ್ಪಣ್ಣ ಮತ್ತು ಶ್ರೀ ಶ್ರೀನಿವಾಸ ಸಾಸ್ತಾನ ಇವರಿಗೆ ಕೃತಜ್ಞತೆಗಳು. ಸಂಸ್ಕೃತಿ ಇಲಾಖೆ, ಸರಕಾರ ಎಲ್ಲರಿಗೂ ಅಭಿನಂದನೆಗಳು. ಇದೇ ವೇದಿಕೆಯಲ್ಲಿ ಕುಣಿದ ಮಕ್ಕಳು ಇಂದು ಉನ್ನತ ಪದವಿ ಪಡೆದು ವೈದ್ಯರು, ಇಂಜಿನಿಯರು, ಲೆಕ್ಕಪರಿಶೋಧಕರು, ಸಿನೆಮಾ ನಟರು ಆಗಿ ದೇಶ-ವಿದೇಶಗಳಲ್ಲಿ ಕಲೆ-ಸಾಹಿತ್ಯ-ಸಂಸ್ಕೃತಿಯ ಉಪಾಸಕರಾಗಿದ್ದಾರೆ. ಉತ್ತಮ ಹವ್ಯಾಸಿ ಕಲಾವಿದರಾಗಿದ್ದಾರೆ, ವೃತ್ತಿನಿರತ ಕಲಾವಿದರೊಂದಿಗೆ ನಟರಾಗಿ ಯಕ್ಷಗಾನ ಪರಂಪರೆಯನ್ನು ಉಳಿಸುವಲ್ಲಿ ಪ್ರಯತ್ನಶೀಲರಾಗಿದ್ದಾರೆ. ಪ್ರಜ್ಞಾವಂತ ಪ್ರೇಕ್ಷಕರಾಗಿದ್ದಾರೆ,

ಎಲ್ಲಕ್ಕಿಂತ ಮೇಲಾಗಿ ನಿಜ ಅರ್ಥದ ಮನುಷ್ಯರಾಗಿದ್ದಾರೆ. ಇವುಗಳ ಹಿಂದೆ ಯಕ್ಷಗಾನದ ಕೊಡುಗೆ ಅಪಾರ ಎನ್ನುವುದು ಸತ್ಯ.

ಎಚ್. ಶ್ರೀಧರ್ ಹಂದೆ

ಸಂಚಾಲಕರು,

ಸಾಲಿಗ್ರಾಮ ಮಕ್ಕಳ ಮೇಳ (ರಿ)

ಪಟೇಲರ ಮನೆ, ಕೋಟ 576 221

ಚ.ದೂ. : 99459 63005

ಲೇಖಕರ ಕಿರುಪರಿಚಯ

ಯಕ್ಷಗಾನದ ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ಉಳಿಯುವ ಕೆಲವೇ ಹೆಸರುಗಳಲ್ಲಿ ಸಾಲಿಗ್ರಾಮದ ಮಕ್ಕಳ ಮೇಳವೂ ಒಂದು. ದಿ. ಕಾರ್ಕಡ ಶ್ರೀನಿವಾಸ ಉಡುಪ ಹಾಗೂ ಶ್ರೀ ಎಚ್. ಶ್ರೀಧರ ಹಂದೆಯವರು 1975ರಲ್ಲಿ ಮೊದಲ ಬಾರಿಗೆ ಶ್ರೀ ಜಗದ್ಗುರು ಕೃಪಾಪೋಷಿತ ಮಕ್ಕಳ ಮೇಳ ಸಾಲಿಗ್ರಾಮ ಎಂಬ ಸಂಸ್ಥೆಯನ್ನು ಪ್ರಾರಂಭಿಸಿದರು. ಆ ಮಕ್ಕಳ ಕಲಾಭಿವ್ಯಕ್ತಿಗೆ ಸಮಸ್ತ ಯಕ್ಷಗಾನ ಆಸಕ್ತರು ಮಾರುಹೋದರು. ಅದರ ಫಲವಾಗಿ ಈ ಮಕ್ಕಳ ಮೇಳ ಮೊದಲಬಾರಿಗೆ ವಿದೇಶಕ್ಕೆ ಸೀಮೋಲಂಘನಗೈಯಿತು. ಕಳೆದ 42 ವರ್ಷಗಳಿಂದ ಅದೇ ಶಿಸ್ತನ್ನು, ಅದೇ ಸಂಪ್ರದಾಯಬದ್ಧ ನಡೆಯನ್ನು, ಮನಸೂರೆಗೊಳ್ಳುವ ಪ್ರದರ್ಶನವನ್ನು ಈ ಮಕ್ಕಳ ಮೇಳ ನೀಡುತ್ತ ಬರುವಲ್ಲಿ ಶ್ರೀಧರ ಹಂದೆಯವರ ಶ್ರಮ ಅಡಗಿದೆ. ಸ್ವತಃ ಉತ್ತಮ ಭಾಗವತರು, ಹಾರಾಡಿ ಮತ್ತು ಮಟ್ಪಾಡಿ ಮಟ್ಟುಗಳ ಬಗ್ಗೆ ಆಳ ಅರಿವು ಮತ್ತು ಅದು ಉಳಿಯಬೇಕೆಂಬ ಹಂಬಲ ಉಳ್ಳವರು, ಕಲಾ ಪರಂಪರೆಯ ಬಗ್ಗೆ ಅಚಲವಾದ ನಿಷ್ಠೆ ಉಳ್ಳವರು ಆದ ಶ್ರೀಧರ ಹಂದೆಯವರು ರಾಷ್ಟ್ರಪ್ರಶಸ್ತಿ ಪುರಸ್ಕೃತ ಶಿಕ್ಷಕರೂ ಆಗಿದ್ದಾರೆ. ಅವರಿಗೆ ಇದೇ ಕಲಾಕ್ಷೇತ್ರದಲ್ಲಿ ಯಕ್ಷಸಂಪದದವರಿಂದ ಅದ್ದೂರಿಯ ಸನ್ಮಾನವೂ ನಡೆದಿದೆ. ಅಭಿಮಾನಿಗಳಿಂದ 'ಸಿರಿಸಂಪದ'ವೆಂಬ ಅಭಿನಂದನಾ ಗ್ರಂಥವು ಸಮರ್ಪಣೆಯಾಗಿದೆ.

ಯಕ್ಷಗಾನ ಚೈತ್ರಯಾತ್ರೆಗೆ ಸಹಕರಿಸಿದ ಕಲಾಕ್ಷೇತ್ರ

-ಕುಂಬಳೆ ಸುಂದರರಾವ್

(ಸಂದರ್ಶನ)

ಅಸಾಧಾರಣ ವಾಕ್‌ಚಾತುರ್ಯ, ಕನ್ನಡ ಶಬ್ದ ಸಂಪತ್ತಿನ ಮೇಲೆ ಅಪೂರ್ವವಾದ ಹಿಡಿತ, ಶಾಸ್ತ್ರ, ಪುರಾಣ, ಉಪನಿಷತ್, ರಾಮಾಯಣ, ಭಾಗವತ, ಮಹಾಭಾರತಗಳಲ್ಲಿ ಆಳವಾದ ಜ್ಞಾನ, ಮನಹಿಡಿದಿಡಬಲ್ಲ ನಿರೂಪಣಾ ಶಕ್ತಿ, ಸುಲಲಿತ ಹಾಗೂ ಸರಳ ಸುಂದರ ಭಾಷೆ, ಪಾತ್ರದ ಒಳಗನ್ನು ಅರಿತು ಭಾವಪೂರ್ಣವಾಗಿ ಹಿಡಿದಿಡಬಲ್ಲ ಶಕ್ತಿ ಇವುಗಳ ಮೂಲಕ ಯಕ್ಷಗಾನ ರಂಗದಲ್ಲಿ ಹಿರಿಯ ಸ್ಥಾನ ಗಳಿಸಿದವರು ಶ್ರೀ ಕುಂಬಳೆ ಸುಂದರರಾವ್ ಅವರು. ರಾಜ್ಯ ವಿಧಾನಸಭೆಗೆ ಜನತೆಯಿಂದ ಆಯ್ಕೆಗೊಂಡ ಮೊದಲ ಯಕ್ಷಗಾನ ಕಲಾವಿದ, ಯಕ್ಷಗಾನ ಬಯಲಾಟ ಅಕಾಡೆಮಿಗೆ ನಿಯುಕ್ತಿಗೊಂಡ ಮೊದಲ ಅಧ್ಯಕ್ಷ, ಯಕ್ಷಗಾನ ಕಲಾವಿದನಾಗಿ ಸಂಸ್ಕಾರ ಭಾರತಿಯ ರಾಜ್ಯಾಧ್ಯಕ್ಷನಾಗಿ ಕಾರ್ಯನಿರ್ವಹಿಸಿದ ಹಿರಿಮೆ. ಹೀಗೆ ಹಲವು ಇತಿಹಾಸಗಳನ್ನು ಇವರು ಸೃಷ್ಟಿ ಮಾಡಿದ್ದಾರೆ. 1934ರಲ್ಲಿ ಜನಿಸಿದ ಶ್ರೀ ಸುಂದರರಾಯರು ತಮ್ಮ 19ನೇ ವಯಸ್ಸಿನಲ್ಲಿ ಕೂಡ್ಲು ಗೋಪಾಲಕೃಷ್ಣ ಯಕ್ಷಗಾನ ಮಂಡಳಿಯ ಮೂಲಕ ಯಕ್ಷಗಾನ ರಂಗಕ್ಕೆ ಪಾದಾರ್ಪಣೆ ಮಾಡಿದವರು. ಮುಂದೆ ಇರಾ ಸೋಮನಾಥೇಶ್ವರ ಯಕ್ಷಗಾನ ಮಂಡಳಿ, ಸುರತ್ಕಲ್ ಮೇಳಗಳಲ್ಲಿ ಸೇವೆ ಸಲ್ಲಿಸಿ 1968ರಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ಕೃಪಾಪೋಷಿತ ಯಕ್ಷಗಾನ ಮಂಡಳಿಯಲ್ಲಿ ಶಾಸಕರಾಗುವವರೆಗೆ ಸುದೀರ್ಘ 25 ವರ್ಷಗಳ ಸೇವೆ ಸಲ್ಲಿಸಿದವರು. ಯಕ್ಷಗಾನದ ಕಲಾವಿದರಾಗಿದ್ದು 1994ರಲ್ಲಿ ಶಾಸಕರಾಗಿ ಆಯ್ಕೆಗೊಂಡ ಅವರು ಸರಕಾರದ ಗಮನವನ್ನು ಯಕ್ಷಗಾನದ ಸಮಸ್ಯೆಗಳ ಕಡೆಗೆ ಹೊರಳಿಸಿದವರು. ಅಭಿಜಾತ ಪ್ರತಿಭೆಯಿಂದ, ಪ್ರತ್ಯುತ್ಪನ್ನಮತಿಯಿಂದ ಹುಟ್ಟುವ ಪ್ರಾಸಬದ್ಧ ಮಾತುಗಾರಿಕೆಯಿಂದ 'ಕುಂಬಳೆ ಪ್ರಾಸ'ವೆನ್ನುವ ವಿಶೇಷ ಪದದ ಹುಟ್ಟಿಗೆ ಕಾರಣರಾದವರು. ತಾಳಮದ್ದಲೆಯಲ್ಲೂ ಪ್ರಸಿದ್ಧ ಅರ್ಥಧಾರಿಯಾಗಿ ಮೆರೆದವರು.

ಯಕ್ಷಗಾನದ ಆಟದಲ್ಲಿ ಶೇಣಿ ಗೋಪಾಲಕೃಷ್ಣಭಟ್, ಕೆ. ಗೋವಿಂದಭಟ್, ಶ್ರೀ ರಮೇಶಾಚಾರ್ಯ, ಕೊಳ್ಯೂರು ರಾಮಚಂದ್ರರಾವ್, ಪುತ್ತೂರು ನಾರಾಯಣ ಹೆಗಡೆ, ಶ್ರೀಧರ ಭಂಡಾರಿ ಮುಂತಾದವರೊಂದಿಗೆ ಇದಿರು ವೇಷವಾಗಿ ಅಭಿನಯಿಸಿದ್ದಾರೆ. ಅದೇ ರೀತಿ ತಾಳಮದ್ದಲೆಯಲ್ಲಿ ಮಲ್ಪೆ ಶಂಕರನಾರಾಯಣ ಸಾಮಗ, ರಾಮದಾಸ ಸಾಮಗ, ಶೇಣಿ ಗೋಪಾಲಕೃಷ್ಣ ಭಟ್, ಪೆರ್ಲ ಕೃಷ್ಣಭಟ್, ತೆಕ್ಕಟ್ಟೆ ಆನಂದ ಮಾಸ್ತರ್, ಎಂ. ಪ್ರಭಾಕರ ಜೋಷಿ, ವಾಸುದೇವ ಸಾಮಗ ಮುಂತಾದವರೊಂದಿಗೆ ಹೆಗಲೆಣೆಯಾಗಿ ಸಂಭಾಷಿಸಿ ಖ್ಯಾತರಾಗಿದ್ದಾರೆ.

ಭಕ್ತಿಪ್ರಧಾನ ಹಾಗೂ ಭಾವಪ್ರಧಾನ ಪಾತ್ರಗಳಲ್ಲಿ ಮಿಂಚುವ ಕುಂಬಳೆ ಸುಂದರರಾವ್ ಅವರ ಕೃಷ್ಣ, ಶ್ರೀರಾಮ, ನಹುಷ, ವಿಶ್ವಾಮಿತ್ರ, ಹನೂಮಂತ, ಭರತ, ಕರ್ಣ, ಪರೀಕ್ಷಿತ, ಅತಿಕಾಯ, ಋತುಪರ್ಣ, ಧರ್ಮಸ್ಥಳ ಕ್ಷೇತ್ರ ಮಹಾತ್ಮೆಯ ಗೋವಿಂದ ದೀಕ್ಷಿತ, ಹೆಗ್ಗಡೆ ಮುಂತಾದ ಪಾತ್ರಗಳು ಜನಮಾನಸದಲ್ಲಿ ಬೇರೂರಿವೆ. ಬೆಂಗಳೂರಿನ ಕಲಾಭಿಮಾನಿಗಳಿಗೆ ಕುಂಬಳೆಯವರು ಚಿರಪರಿಚಿತರು. 1970ರಿಂದಲೂ ಸತತವಾಗಿ ಬೆಂಗಳೂರಿಗೆ ಅತಿಥಿ ಕಲಾವಿದರಾಗಿ ಆಗಮಿಸುತ್ತಿದ್ದು ಅಪಾರ ಅಭಿಮಾನಿಗಳನ್ನು ಹೊಂದಿದ್ದಾರೆ. ಬಡಗು, ತೆಂಕು ಎಂಬ ಭೇದವಿಲ್ಲದೆ ಎಲ್ಲರ ಪ್ರೀತಿ, ವಿಶ್ವಾಸ ಗಳಿಸಿದ್ದಾರೆ. ರವೀಂದ್ರ ಕಲಾಕ್ಷೇತ್ರ ಆವರಣದಲ್ಲಿ ಕನಿಷ್ಠ 600 ಪ್ರದರ್ಶನಗಳಲ್ಲಾದರೂ ಭಾಗಿಯಾಗಿದ್ದಾರೆ. ಅದೇ ರೀತಿ ಕಲಾಕ್ಷೇತ್ರದಲ್ಲಿ ನಡೆದ 8–10 ತಾಳಮದ್ದಲೆಗಳಲ್ಲಿ ಅರ್ಥಧಾರಿಯಾಗಿ ಹೆಸರು ಮಾಡಿದ್ದಾರೆ. ಯಕ್ಷಗಾನ, ಬಯಲಾಟ ಅಕಾಡೆಮಿ ಅಧ್ಯಕ್ಷರಾಗಿ, ಕಲಾವಿದರಾಗಿ, ಶಾಸಕರಾಗಿ ರವೀಂದ್ರ ಕಲಾಕ್ಷೇತ್ರದೊಂದಿಗಿನ ಅವರ ಅನುಭವ, ಅಭಿಪ್ರಾಯ ಹಾಗೂ ಅನಿಸಿಕೆಗಳಿಗೆ ಮಹತ್ವವಿದೆ.

❖ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯುವ ಮಳೆಗಾಲದ ಆಟಗಳ ಬಗ್ಗೆ ಮುಕ್ತ ಮನಸ್ಸನ್ನು ಪ್ರತಿ ಕಲಾವಿದ ಹೊಂದಿರುತ್ತಾನೆ. ಬೇರೆ ಬೇರೆ ಮನೋಧರ್ಮದ ಬೇರೆ ಬೇರೆ ಸ್ತರದ ಕಲಾವಿದರೊಂದಿಗೆ ಬೆರೆಯುವ ಅವಕಾಶ ಕಲಾವಿದನಿಗೆ ಇಲ್ಲಿ ಲಭಿಸುತ್ತದೆ. ಇಲ್ಲಿನ ಆಟಗಳಲ್ಲಿ ವೈವಿಧ್ಯಮಯ ಪ್ರಸಂಗಗಳನ್ನು ಆಡುವುದರಿಂದ ಕಲಾವಿದನಾದವನಿಗೆ ಬೆಳೆಯಲು ಅವಕಾಶ ದೊರೆಯುತ್ತದೆ. ಟೆಂಟ್ ಮೇಳಗಳಲ್ಲಿ, ಬಯಲಾಟದ ಮೇಳಗಳಲ್ಲಿ ಒಂದೋ ಎರಡೋ ಪ್ರಸಂಗಗಳನ್ನು ಆಡುವುದರಿಂದ ವೈವಿಧ್ಯದ ಕೊರತೆ ಹಾಗೂ ಅನುಭವಕ್ಕೆ ಅವಕಾಶ ಕಡಿಮೆ ಇರುತ್ತದೆ. ಆದರೆ ನಗರದ ಪ್ರದರ್ಶನಗಳಲ್ಲಿ ಯಾಂತ್ರಿಕತೆಯು

ತೊಡೆದುಹೋಗುತ್ತದೆ. ಪೂರ್ವಭಾವಿ ಸಿದ್ಧತೆ ಇರಬೇಕಾಗುತ್ತದೆ. ಹೊಂದಾಣಿಕೆ ಇಲ್ಲವಾದಲ್ಲಿ ಗೊಂದಲವಾಗಿ ಅಸಂಬದ್ಧವಾಗುತ್ತದೆ. ಪ್ರೇಕ್ಷಕರಿಗೆ ಕೂಡ ನಗರದಲ್ಲಿನ ಪ್ರದರ್ಶನಗಳಿಂದ ಬೇರೆ ಬೇರೆ ಮೇಳದ ಕಲಾವಿದರನ್ನು ಒಂದೇ ವೇದಿಕೆಯಲ್ಲಿ ನೋಡುವ ಅವಕಾಶ ಸಿಗುತ್ತದೆ. ರವೀಂದ್ರ ಕಲಾಕ್ಷೇತ್ರವು ಇದಕ್ಕೆ ಹೊರತಾಗಿಲ್ಲ.

❖ ಬೆಂಗಳೂರಿನ ಪುರಭವನದ ರೀತಿಯಲ್ಲಿ ರವೀಂದ್ರ ಕಲಾಕ್ಷೇತ್ರವು ಕೂಡ ಯಕ್ಷಗಾನದ ರಾತ್ರಿ ಪ್ರದರ್ಶನಕ್ಕೆ ದೊರೆಯುತ್ತಿತ್ತು. ಆದರೆ 1989ರಲ್ಲಿ ನಡೆದ ಯಾವುದೋ ಗಲಾಟೆಯಿಂದ ಮತ್ತು ರಾತ್ರಿಯ ಪ್ರೇಕ್ಷಕರು ಶುಚಿತ್ವದ ಬಗ್ಗೆ ಗಮನ ಕೊಡದ ಕಾರಣ ಕೆಲವು ವರ್ಷ ಯಕ್ಷಗಾನದ ರಾತ್ರಿ ಪ್ರದರ್ಶನಕ್ಕೆ ಕಲಾಕ್ಷೇತ್ರ ದೊರೆಯುತ್ತಿರಲಿಲ್ಲ. ಈ ವಿಚಾರವಾಗಿ ಶಾಸಕನಾಗಿ ವಿಧಾನಸಭೆಯಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಿದೆ. ಆಗ ಕರಾವಳಿಯ ಎಲ್ಲಾ ಶಾಸಕರು ಪಕ್ಷಭೇದ ಮರೆತು ನನ್ನ ಬೆಂಬಲಕ್ಕೆ ನಿಂತರು. ಆಗ ಶ್ರೀ ಜೆ.ಎಚ್. ಪಟೇಲ್ ಅವರು ಮುಖ್ಯಮಂತ್ರಿಯಾಗಿದ್ದರು. ಶ್ರೀಮತಿ ಲೀಲಾವತಿ ಆರ್. ಪ್ರಸಾದ್ ಅವರು ಕನ್ನಡ ಸಂಸ್ಕೃತಿ ಇಲಾಖೆ ಸಚಿವರಾಗಿದ್ದರು. ಉಳಿದ ಪ್ರದೇಶದ ಶಾಸಕರ ಬೆಂಬಲವಿರಲಿಲ್ಲ. ಆದರೆ ಅವರು ವಿರೋಧಿಸಲಿಲ್ಲ. ಕಡೆಗೆ ನಮ್ಮ ಒತ್ತಾಯಕ್ಕೆ ಮಣಿದ ಸರಕಾರ ಬಾಡಿಗೆಯನ್ನು ಸ್ವಲ್ಪ ಹೆಚ್ಚಿಸಿ ಯಕ್ಷಗಾನ ಪ್ರದರ್ಶನಕ್ಕೆ ಅನುವು ಮಾಡಿಕೊಟ್ಟಿತು. ಆ ಸಂದರ್ಭದಲ್ಲಿ ನಿರ್ದೇಶಕರಾದ ವೈ.ಕೆ. ಮುದ್ದುಕೃಷ್ಣ ಅವರು ಕೂಡ ಸಹಕರಿಸಿದರು. ಹೀಗೆ ರವೀಂದ್ರ ಕಲಾಕ್ಷೇತ್ರ ಮತ್ತೆ ಯಕ್ಷಗಾನ ಪ್ರಸಾರಕ್ಕೆ ತಂಗುದಾಣವಾಯಿತು.

❖ ಯಕ್ಷಗಾನಕ್ಕೆ ಒಂದು ಪ್ರತ್ಯೇಕ ಅಕಾಡೆಮಿ ಬೇಕೆನ್ನುವ ಆಗ್ರಹವನ್ನು ಮೊದಲಿನಿಂದಲೂ ಪ್ರತಿಪಾದಿಸುತ್ತಿದ್ದ ನನಗೇ ಆ ಅಕಾಡೆಮಿ ಮೊದಲ ಅಧ್ಯಕ್ಷ ಪದವಿ ದೊರೆತದ್ದು ಯೋಗಾಯೋಗ. ಹೊಸ ಅಕಾಡೆಮಿಯಾದ್ದರಿಂದ ಅನುದಾನ ಕಡಿಮೆಯಿತ್ತು. 2009–12ರ ಕಾಲಾವಧಿಯಲ್ಲಿ ಅನೇಕ ಹೊಸ ಬಗೆಯ ಕಾರ್ಯಕ್ರಮಗಳನ್ನು ಹುಟ್ಟುಹಾಕಲಾಯಿತು. ರವೀಂದ್ರ ಕಲಾಕ್ಷೇತ್ರದಲ್ಲಿ ಅಕಾಡೆಮಿಯ ಅನೇಕ ಕಾರ್ಯಕ್ರಮ ನಡೆದಿವೆ. ಅದೊಂದು ಸಾಂಸ್ಕೃತಿಕ ರಂಗಕ್ಕೆ ಕೇಂದ್ರ ಸ್ಥಳವಾದ್ದರಿಂದ ನಮ್ಮ ಯಕ್ಷಗಾನದ ಎಲ್ಲಾ ಕಾರ್ಯಕ್ರಮಗಳಿಗೆ

ಹೆಚ್ಚು ಜನಮನ್ನಣೆ ಕಲಾಕ್ಷೇತ್ರದಿಂದ ಲಭಿಸಿದೆ. ಬೇರೆ ಕಡೆಯಾಗಿದ್ದರೆ ಅದು ಸಾಧ್ಯವಾಗುತ್ತಿದ್ದಿಲ್ಲ. ಅನೇಕ ಪುಸ್ತಕಗಳು ಪ್ರಕಟವಾದವು, ಕ್ಯಾಸೆಟ್‌ಗಳು ಬಳಕೆಗೆ ಬಂದವು. ಪ್ರಶಸ್ತಿ ಸಮ್ಮಾನಗಳು ಅಲ್ಲಿ ಏರ್ಪಟ್ಟವು. ಇಲ್ಲೆಲ್ಲ ಕಲಾಕ್ಷೇತ್ರದ ಸಹಕಾರ ಅಕಾಡೆಮಿಗೆ ಲಭಿಸಿದೆ.

❖ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಯಕ್ಷಗಾನ ಪ್ರದರ್ಶನಗಳಲ್ಲಿ ತೆಂಕು, ಬಡಗುತಿಟ್ಟೆಂಬ ಭೇದವಿಲ್ಲದೆ ಭಾಗವಹಿಸಿರುವುದು ವಿಶೇಷ. ಪಾದುಕಾ ಪಟ್ಟಾಭಿಷೇಕದ ಭರತ, ಕರ್ಣಭೇದನದಲ್ಲಿ 3ನೆಯ ಕರ್ಣ, ಚಕ್ರೇಶ್ವರ ಪರಿಕ್ಷೀತದಲ್ಲಿ ಪರಿಕ್ಷೀತ, ಕುಶಲವರ ಕಾಳಗದ ರಾಮ, ದಕ್ಷಯಜ್ಞದ ಈಶ್ವರ, ಚಂದ್ರಾವಳಿಯ ಕೃಷ್ಣ ಮುಂತಾದ ಪಾತ್ರಗಳನ್ನು ಕಲಾಕ್ಷೇತ್ರದಲ್ಲಿ ಮಾಡಿದಾಗ ಇಲ್ಲಿನ ಪ್ರೇಕ್ಷಕರು ಮೆಚ್ಚಿಕೊಂಡಿದ್ದರು. ತಾಳಮದ್ದಲೆಯ ಅರ್ಥಗಾರಿಕೆಗಂತು ಅಪೂರ್ವ ಕರತಾಡನ ಲಭಿಸಿದೆ. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರಕ್ಕೆ ಬರುವ ಪ್ರೇಕ್ಷಕರು ಪ್ರಬುದ್ಧರು ಹಾಗೂ ನಾಗರೀಕರಾಗಿ ವರ್ತಿಸುವುದನ್ನು ಕಾಣಬಹುದು. ಬೆಂಗಳೂರಿನಲ್ಲಿ ವಹಿಸಿರುವ ಪಾತ್ರಗಳಿಗೆ ಎದಿರು ವೇಷಧಾರಿಗಳಾಗಿ ಕೆ. ಗೋವಿಂದ ಭಟ್, ಎರ್ಪಕಟ್ಟೆ ರಾಮರೈ, ಪುತ್ತೂರು ನಾರಾಯಣ ಹೆಗಡೆ, ಬಣ್ಣದ ಮಾಲಿಂಗ, ನಯನಕುಮಾರ್, ಪಾತಾಳ ವೆಂಕಟರಮಣ ಭಟ್ ಅವರು ಇದ್ದು, ಪ್ರಸಂಗ ಕಳೆ ಕಟ್ಟುವಂತೆ ಮಾಡಿದ್ದಾರೆ. ಇಲ್ಲಿ ನಡೆದ ತಾಳಮದ್ದಲೆಯಲ್ಲಿ ವಾಲಿಮೋಕ್ಷ, ಕೃಷ್ಣ ಸಂಧಾನ, ರಾವಣ ವಧೆ ಮುಖ್ಯವಾದವು. ಅವುಗಳಲ್ಲಿ ರಾಮನಾಗಿ, ವಿದುರನಾಗಿ, ಕೃಷ್ಣನಾಗಿ ನಿರ್ವಹಿಸಿದ್ದನ್ನು ಬೆಂಗಳೂರಿಗರು ಮೆಚ್ಚಿಕೊಂಡಿದ್ದಾರೆ. ಎಂ. ಪ್ರಭಾಕರ ಜೋಷಿ, ಶೇಣಿ ಗೋಪಾಲಕೃಷ್ಣ ಭಟ್, ಪೆರ್ಲ ಕೃಷ್ಣಭಟ್ ಮುಂತಾದವರು ತಾಳಮದ್ದಲೆಯಲ್ಲಿ ಭಾಗವಹಿಸಿದ್ದಾರೆ.

ರವೀಂದ್ರ ಕಲಾಕ್ಷೇತ್ರದಲ್ಲಿ ಸನ್ಮಾನಿತರಾಗುವ ಭಾಗ್ಯವು ಕೂಡ ಕಂಬಳೆಯವರಿಗೆ ಲಭಿಸಿದೆ. ಬೆಂಗಳೂರಿನ ಕರ್ನಾಟಕ ಕಲಾದರ್ಶಿನಿ ತಂಡದವರು, ಅದರಲ್ಲೂ ಶ್ರೀನಿವಾಸ ಸಾಸ್ತಾನ ಅವರು ಏರ್ಪಡಿಸಿದ ಆ ಸಮಾರಂಭಕ್ಕೆ ತಿಟ್ಟುಗಳ ಭೇದವಿಲ್ಲದೆ ಅಪಾರ ಸಂಖ್ಯೆಯಲ್ಲಿ ಅಭಿಮಾನಿ ಜನರು ಸೇರಿದ್ದರು. 50 ವರ್ಷಗಳ ಕೆಳಗೆ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ಪ್ರಾರಂಭವಾದ ಯಕ್ಷಗಾನದ ಚೈತ್ರಯಾತ್ರೆ ಈಗ ಎಲ್ಲಾ ಬಡಾವಣೆಗಳಲ್ಲೂ ಸಾಗಿ ಜನಾಂದೋಲನಕ್ಕೆ ಕಾರಣವಾಗಿರುವುದನ್ನು

ಕುಂಬಳೆ ಸುಂದರರಾಯರು ಮನಸಾ ಮೆಚ್ಚಿಕೊಳ್ಳುತ್ತಾರೆ. ರವೀಂದ್ರ ಕಲಾಕ್ಷೇತ್ರ ಬೆಂಗಳೂರಿನ ಯಕ್ಷಗಾನದ ಬೆಳವಣಿಗೆಗೆ ಒಂದು ಚಿಮ್ಮು ಹಲಗೆಯಾಗಿದೆ ಎಂಬುದು ಅವರ ನಿಶ್ಚಿತ ನಿಲುವು.

ಸಂದರ್ಶನ :ಕುಂಬಳೆ ಸುಂದರರಾವ್
ಮಾಜಿ ಶಾಸಕರು ಹಾಗೂ ಮಾಜಿ ಆಧ್ಯಕ್ಷರು,
ಯಕ್ಷಗಾನ ಬಯಲಾಟ ಅಕಾಡೆಮಿ
ಯಕ್ಷಾನುಗ್ರಹ, ಪಡೀಲು ಅಂಚೆ, ಮಂಗಳೂರು – 575 007
ದೂ. : 94483 28787

ಕಲಾಕ್ಷೇತ್ರದ ಮೂಲಕ ಅರಳಿದ ಪಾರಿಜಾತ

–ಮಲ್ಲವ್ವ ಮೇಗೇರಿ
(ಸಂದರ್ಶನ)

'ಸಣ್ಣಾಟದ ರಾಜ' ಎಂದು ಕರೆಯಲಾಗುತ್ತಿರುವ 'ಕೃಷ್ಣ ಪಾರಿಜಾತ'ವು ಕರ್ನಾಟಕದ ಉತ್ತರ ಭಾಗದ ಹೆಮ್ಮೆಯ ಕಲೆ. ಉಳಿದ ಜನಪದ ಕಲಾ ಸಂಪ್ರದಾಯಗಳಿಗಿಂತ ಭಿನ್ನಶೈಲಿಯ ಹಾಡುಗಾರಿಕೆ ಇರುವ 'ಕೃಷ್ಣ ಪಾರಿಜಾತ'ದಲ್ಲಿ ಸೂತ್ರಧಾರನ ಬದಲು ಪಾತ್ರಗಳೇ ಹಾಡುವುದು ವಿಶೇಷ. ಮೊದಲಿಗೆ ಅಪರಾಳ ತಮ್ಮಣ್ಣನು ಯಕ್ಷಗಾನ ರೂಪದಲ್ಲಿ ಬರೆದ ಹಾಡುಗಳನ್ನು ಮುಂದೆ ಕುಲಗೋಡ ತಮ್ಮಣ್ಣನು ರಂಗಪ್ರದರ್ಶನಕ್ಕೆ ಅಳವಡಿಸಿದನು. ಕಳೆದ ಶತಮಾನದಲ್ಲಿ ಕೌಜಲಗಿ ನಿಂಗವ್ವ, ರಾಮಚಂದ್ರ ಸಾವಂತ, ಅಪ್ಪಾಲಾಲ ನದಾಫ ಮುಂತಾದವರಿಂದ ಪಾರಿಜಾತಕ್ಕೆ ಒಂದು ಭದ್ರವಾದ ನೆಲೆ ದೊರೆಯಿತು. ಶ್ರೀಕೃಷ್ಣನ ಮೇಲಿನ ಭಕ್ತಿಯೇ ಇಲ್ಲಿ ರಸಾಸ್ವಾದನೆಯ ಪ್ರಮುಖ ಅಂಗ. ಕೃಷ್ಣ, ಸತ್ಯಭಾಮೆ, ರುಕ್ಮಿಣಿ ಪಾತ್ರಗಳೇ ಇಲ್ಲಿ ಪ್ರಧಾನ. ಹಿಮ್ಮೇಳದಲ್ಲಿ ಭಾಗವತನಿಗೆ ತಬಲದವರ ಸಹಕಾರವಿರುತ್ತದೆ. ಹೀಗೆ 7–8 ಜನರ ಕಿರುತಂಡದೊಂದಿಗೆ ಪಾರಿಜಾತ ಪ್ರಸ್ತುತಗೊಳ್ಳುತ್ತದೆ. ಈಗ ಕರ್ನಾಟಕದಲ್ಲಿ 50ಕ್ಕೂ ಹೆಚ್ಚು ಪಾರಿಜಾತ ತಂಡಗಳಿವೆ. ಈಚಿನ ದಿನಗಳಲ್ಲಿ ಹೆಚ್ಚು ಪ್ರಚಲಿತವಿರುವ ತಂಡಗಳಲ್ಲಿ ಬೈಲಹೊಂಗಲದ ಕೃಷ್ಣ ಪಾರಿಜಾತ ತಂಡವಾದ ಶ್ರೀ ಹರಿಕಲಾ ತಂಡ ಮುಖ್ಯವಾದದ್ದು. ಆ ತಂಡದಲ್ಲಿ ಕೊರವಂಜಿ, ಕೃಷ್ಣ ಪಾತ್ರಗಳನ್ನು ನಿರ್ವಹಿಸುವ ಮಲ್ಲವ್ವ ಮೇಗೇರಿಯವರು ಸಾಕಷ್ಟು ಬಾರಿ ಬೆಂಗಳೂರಿನಲ್ಲಿ, ಅದರಲ್ಲೂ ರವೀಂದ್ರ ಕಲಾಕ್ಷೇತ್ರದಲ್ಲಿ ಕೃಷ್ಣ ಪಾರಿಜಾತವನ್ನು ಪ್ರದರ್ಶಿಸಿದವರು. ಅವರ ಅಭಿಪ್ರಾಯ, ಅನಿಸಿಕೆಗಳು ಬಹಳ ಮುಖ್ಯವಾದವು. ಬೆಂಗಳೂರು ನಗರದಲ್ಲಿ ಈ ಕಲೆಯ ಪ್ರಸಾರ ಮಾಡುವಲ್ಲಿ ಅವರ ಪಾತ್ರ ಹಿರಿದು.

❖ ಕೃಷ್ಣ ಪಾರಿಜಾತಕ್ಕೆ ಅದರದೇ ಆದ ವೈಶಿಷ್ಟ್ಯವಿದೆ. ಇಲ್ಲಿ ಭಾಗವತನು ಪ್ರಧಾನ ಪಾತ್ರದಂತೆ ಇರುತ್ತಾನೆ. ಅವನನ್ನು ಉಳಿದ ಪಾತ್ರಗಳು 'ದೂತಿ' ಎಂದು ಕರೆಯುತ್ತಾರೆ. ಆತ ಮೊದಲಿಂದ ಕಡೆಯುವರೆಗೆ ರಂಗದ ಮೇಲಿದ್ದು ಉಳಿದ ಪಾತ್ರಗಳು ಹಾಡುವಾಗ ಹಿಮ್ಮೇಳದ ಅಗತ್ಯಗಳನ್ನು ಒದಗಿಸುತ್ತಾನೆ. ಹಾಡಿನ

ಸಂದರ್ಭದಲ್ಲಿ ಸ್ತ್ರೀ ಪಾತ್ರಗಳು ಕೆಲವೊಮ್ಮೆ ಕಿರುಕುಣಿತವನ್ನು ಕೂಡ ಮಾಡುತ್ತವೆ. ಪಾರಿಜಾತದಲ್ಲಿ ಬರುವ ಹಾಸ್ಯ ಪ್ರಸಂಗಗಳು ರಂಜನೆ ನೀಡುತ್ತವೆ. ಆಧ್ಯಾತ್ಮವು ಕೂಡ ಇಲ್ಲಿ ಸೇರಿಕೊಂಡಿರುತ್ತದೆ. ಆಶುವಾತಿನ ಚಮತ್ಕಾರಗಳು ಆಕರ್ಷಕವಾಗಿವೆ. ಚುರುಕಾದ ಸಂಭಾಷಣೆ ಹಾಗೂ ಮನದುಂಬುವ ಹಾಡುಗಳೇ ಕೃಷ್ಣ ಪಾರಿಜಾತದ ಸಾಮರ್ಥ್ಯದ ಅಳತೆಗೋಲು ನಮ್ಮ ತಂಡ ಹಾಗೂ ಇನ್ನೂ ಕೆಲವು ತಂಡಗಳು ಈ ಶಕ್ತಿಯು ಮೂಲಕವೇ ಎಲ್ಲರ ಗಮನಸೆಳೆದಿರುವುದು.

❖ ಕೃಷ್ಣಪಾರಿಜಾತದ ಅನೇಕ ಕಲಾಗ್ರಾಮಗಳು ಉತ್ತರ ಕರ್ನಾಟಕದ ಭಾಗದಲ್ಲಿವೆ. ಅವುಗಳಲ್ಲಿ ಮುಖ್ಯವಾದವುಗಳು ಜಮಖಂಡಿ, ಅಪಾರಾಳ, ಕುಂಚನೂರ, ಮಹಾಲಿಂಗಪೂರ, ಕುಲಗೋಡ, ಕೌಜಲಗಿ, ಯಾದವಾಡ, ಟಕ್ಕಳಕಿ, ದಾದನಟ್ಟಿ, ಬೈಲಹೊಂಗಲ, ಮುಧೋಳ ಮುಂತಾದವು. ಅದೇ ರೀತಿ 50ಕ್ಕೂ ಹೆಚ್ಚು ಕಲಾತಂಡಗಳಿದ್ದು, ಉತ್ತರ ಕರ್ನಾಟಕದಲ್ಲಿ ಮಾತ್ರವಲ್ಲದೆ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಸಂಚರಿಸುತ್ತಿವೆ. ಬೆಂಗಳೂರಿಗಂತು ಹಲವು ತಂಡಗಳು ಬಂದಿವೆ. ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಅನೇಕ ಕಾರ್ಯಕ್ರಮಗಳಲ್ಲಿ ಸಾಂಸ್ಕೃತಿಕ ಪ್ರದರ್ಶನದ ಅಂಗವಾಗಿ ಕೃಷ್ಣಪಾರಿಜಾತ ಪ್ರದರ್ಶನಗೊಂಡಿದೆ. ಹೀಗೆ ಬೆಂಗಳೂರಿಗೆ ಬಂದ ಕಲಾತಂಡಗಳಲ್ಲಿ ಜಮಖಂಡಿಯ ಅಪ್ಪಾಲಾಲರ ಕಂಪನಿ, ಕಾಖಂಡಕಿಯವರ ಕಂಪೆನಿ, ಯತನಟ್ಟಿಯ ಶ್ರೀ ಚೈತನ್ಯ ತಂಡ, ಲೋಕಾಪುರದ ಶಾಂತವ್ವ ಜಾಲಿಕಟ್ಟೆ ತಂಡ, ದಾದನಟ್ಟಿಯ ಕಾಶಪ್ಪನವರ ತಂಡ, ಮುದೋಳದ ವೆಂಕಟೇಶ್ವರ ಪಾರಿಜಾತ ತಂಡ, ಸಿರಿಗುಪ್ಪಿ ಕಂಪನಿ, ನಮ್ಮ ಶ್ರೀ ಹರಿಕಲಾ ತಂಡ ಮುಂತಾದವು ಮುಖ್ಯವಾದವುಗಳು.

❖ 1984ರಲ್ಲಿ ಗೂಢೂಸಾಬ ನಡಾಫರ ಜೊತೆಯಲ್ಲಿ ಪ್ರಾರಂಭವಾದ ಈ ನಮ್ಮ ತಂಡ 8–10 ಬಾರಿ ಬೆಂಗಳೂರಿಗೆ ಬಂದಿದೆ. ಕಲಾಕ್ಷೇತ್ರದಲ್ಲಿ ನಾಲ್ಕೈದು ಬಾರಿ ಕಾರ್ಯಕ್ರಮ ಕೊಟ್ಟಿದೆ. ಈಗ ಸಂಸ್ಥಾಪಕರಲ್ಲಿ ಒಬ್ಬರಾದ ಗೂಡೂಸಾಬರು ಇಲ್ಲ. ಹಿಂದೆ ಭಾಗವತರಾಗಿ ಪರಪ್ಪನವರು ಹಾಗೂ ಗೂಢಸಾಬರು ಇರುತ್ತಿದ್ದರು. ಆಗ ಕೃಷ್ಣನ ಪಾತ್ರವನ್ನು ಲೋಕಾಪುರದ ಶಂಕರಪ್ಪ ಹೂಗಾರ ಅವರು ನಿರ್ವಹಿಸುತ್ತಿದ್ದರು. ಆಗ ಕೊರವಂಜಿ ಪಾತ್ರವನ್ನು ರಾಜ್ಯಪ್ರಶಸ್ತಿ ಪುರಸ್ಕೃತ ಕಮಲವ್ವ ನೇಟಗುಡ್ಡ ಅವರು, ರುಕ್ಮಿಣಿ ಪಾತ್ರವನ್ನು ಶಾಂತಮ್ಮ ಅವರು, ಸತ್ಯಭಾಮಾ ಪಾತ್ರ ನನ್ನ ಪಾಲಿಗಿತ್ತು, ಆಗ ತಬಲಾ ವಾದಕರಾಗಿ ಸಿದ್ದಪ್ಪ ಸಾಣಿಕೊಪ್ಪ ಅವರು ಇರುತ್ತಿದ್ದರು. ಹೆಚ್ಚಿನವರು ಈಗ ಬದುಕುಳಿದಿಲ್ಲ. ಕೆಲವರು ನಿವೃತ್ತಿಗೊಂಡಿದ್ದಾರೆ. ಕೃಷ್ಣಪಾರಿಜಾತ ಶ್ರೀಹರಿ ಕಲಾ ತಂಡವು

ಈಗ ನನ್ನ ಮೇಲು ಉಸ್ತುವಾರಿಯಲ್ಲಿ ಇದೆ. ಕೃಷ್ಣ ಹಾಗೂ ಕೊರವಂಜಿ ಪಾತ್ರವನ್ನು ನಾನೇ ಸ್ವತಃ ನಿರ್ವಹಿಸುತ್ತಿದ್ದೇನೆ. ಭಾಗವತರಾಗಿ ತುಳಸಿಗೇರಿ ಚಿನ್ನಪ್ಪ, ತಬಲಾ ವಾದಕರಾಗಿ ಪುರುಷೋತ್ತಮ ಚಿತ್ತೂರ್ ಹಾಗೂ ಶಿವಾನಂದ ಬರಲಿಯವರು ಇದ್ದಾರೆ. ರಂಗದಲ್ಲಿ ಸತ್ಯಭಾಮೆಯಾಗಿ ಅಶ್ವಿನಿ, ರುಕ್ಮಿಣಿಯಾಗಿ ಶಕುಂತಲ ಪಾಲಪ್ಪ ಪಟಗುರ್ಗಿಯವರಿದ್ದಾರೆ. ಹಾರ್ಮೋನಿಯಂನಲ್ಲಿ ಪಿ.ಟಿ. ಮಾಸ್ತರ್ ಆಗಿರುವ ಹನುಮಂತಪ್ಪ ರಾಮಪ್ಪ ಬಡಿಗೇರ ಅವರು ಸಹಕರಿಸುತ್ತಿದ್ದಾರೆ.

❖ ಬೆಂಗಳೂರಿನ ಕಲಾಕ್ಷೇತ್ರದಲ್ಲಿ ಪ್ರದರ್ಶಿಸಿದ ಉಳಿದ ತಂಡಗಳಲ್ಲಿ ಕೆಲವು ಕಲಾವಿದರು ಇಲ್ಲಿ ಖ್ಯಾತಿ ಗಳಿಸಿದ್ದಾರೆ. ಅಂತಹವರಲ್ಲಿ ಬಿಳಗಿ ತಾಲ್ಲೂಕಿನ ಯತನಟ್ಟಿಂಯ ಶ್ರೀ ಕೃಷ್ಣಪಾರಿಜಾತ ಚೈತನ್ಯ ತಂಡದ ಜ್ಞಾನಪ್ಪ ದೊಡ್ಡಮನಿಯವರು ಒಬ್ಬರು. ಹದಿನೈದು ವರ್ಷಗಳಿಗೂ ಹೆಚ್ಚು ಕಾಲದ ಕಲಾಕ್ಷೇತ್ರದ ನಂಟು ಅವರಿಗೆ ಇದೆ. ಅದೇ ರೀತಿ ಮುದೋಳು ತಾಲ್ಲೂಕಿನ ಲೋಕಾಪುರದ ತಂಡದ ಶಾಂತವ್ವ ಜಾಲಿಕಟ್ಟೆಯವರು ಕೂಡ ಇನ್ನೋರ್ವ ಖ್ಯಾತನಾಮರು ಅದೇ ತಂಡದ ತಬಲಾ ವಾದಕ ಮಾದೇವ, ಕಲಾವಿದರಾದ ರಾಮವ್ವ ಕೂಡ ಹೆಸರು ಮಾಡಿದ್ದಾರೆ. ದಾದನಟ್ಟಿಯ ವೆಂಕಟೇಶ್ವರ ತಂಡದ ಭಾಗವತರಾದ ಶ್ರೀ ಹೊಸಮನಿಯವರ ಅಭಿಮಾನಿಗಳು ಬೆಂಗಳೂರಿನಲ್ಲಿ ಇದ್ದಾರೆ. ರವೀಂದ್ರ ಕಲಾಕ್ಷೇತ್ರ ಕೃಷ್ಣಪಾರಿಜಾತವನ್ನು ಬೆಳೆಸುವಲ್ಲಿ ಸಾಕಷ್ಟು ನೆರವು ನೀಡಿದೆ.

❖ ಕೃಷ್ಣಪಾರಿಜಾತವು ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಬಂದಿದೆ. ಮೊದಲಿಗೆ ಹಾಡಿಗೆ ಪ್ರಾಶಸ್ತ್ಯವಿದ್ದು ಹಾಡುಗಬ್ಬವಾಗಿ ಪ್ರಚಲಿತವಾಗಿದ್ದರೆ ಈಗ ರಂಗಸಂಪ್ರದಾಯವಾಗಿ ಅನೇಕ ಬದಲಾವಣೆಗೆ ಗುರಿಯಾಗಿದೆ. ಮೊದಲಿಗೆ ಕಥೆಯೇ ಮುಖ್ಯವಾಗಿದ್ದರೆ ಈಗ ಹಾಸ್ಯ ಹಾಗೂ ಆಧ್ಯಾತ್ಮ ವಿಚಾರಗಳು ಮುಖ್ಯನೆಲೆಗೆ ಬಂದಿವೆ. ಹಿಂದೆಲ್ಲಾ ಮೊದಲಿಗೆ ಬರುತ್ತಿದ್ದ ಗಣಪತಿ ಪೂಜೆ, ನಾರದನ ಪಾತ್ರಗಳೆಲ್ಲ ಮಹತ್ವ ಕಳೆದುಕೊಂಡಿವೆ. ಈಗೀಗ ರಾಜಕೀಯ ಸಾಮಾಜಿಕ ವಿಚಾರಗಳು ಕೃಷ್ಣಪಾರಿಜಾತದಲ್ಲಿ ಇಣುಕುತ್ತಿವೆ. ಹಿಂದೆ ಹೆಚ್ಚಾಗಿ ಕರ್ನಾಟಕ ಸಂಗೀತ ಶೈಲಿಯಲ್ಲಿದ್ದ ಪಾರಿಜಾತದ ಹಾಡುಗಾರಿಕೆ ಈಗ ಉತ್ತರಾದಿ ಕಡೆ ಹೊರಳುತ್ತಿದೆ. ಹಿಂದಿನ ಕಲಾವಿದರಿಗೆ ರಾಗ ತಾಳ ಜ್ಞಾನವಿದ್ದಿತ್ತು. ಈಗೀಗ ಅದು ಕಡಿಮೆಯಾಗಿದೆ. ಕೇವಲ. ಅನುಕರಣೆಯಿಂದ ಹಾಡನ್ನು ಹಾಡುತ್ತಾರೆ. ಮರಾಠಿ ನಾಟಕದ ಕೆಲವು ಹಾಡುಗಳ ಧಾಟಿ, ಕೆಲವೊಮ್ಮೆ ಸಿನೆಮಾ ಹಾಡುಗಳ ಧಾಟಿ ಈಗೀಗ ಪಾರಿಜಾತ ಪ್ರದರ್ಶನಗಳಲ್ಲಿ ಇಣುಕುತ್ತಿವೆ. ಹಿಂದೆ ಇದ್ದ ಕಲಾವಿದರಲ್ಲಿ ಸಂಗೀತ ಜ್ಞಾನ ಇತ್ತು.

- ಹಿಂದಿನ ಮಹಾನ್ ಕಲಾವಿದರಲ್ಲಿ ಕೌಜಲಗಿ ನಿಂಗವ್ವ, ರಾಮಚಂದ್ರ ಸಾವಂತ್, ವಿಠಲರಾವ್ ಟಕ್ಕಳಕೆ, ಅಪ್ಪಾಲಾಲ ನದಾಫ ಮುಂತಾದವರು ಕೃಷ್ಣಪಾರಿಜಾತವನ್ನು ಊರಿಂದ ಊರಿಗೆ ಹಬ್ಬಿಸುವಲ್ಲಿ ಪ್ರಮುಖರು. ಟಕ್ಕಳಕೆ ವಿಠಲರಾವ್ ಸ್ವಲ್ಪ ಕಾಲ ಅಪ್ಪಾಲಾಲರ ಕಂಪನಿಯಲ್ಲಿ ಇದ್ದವರು. ಮುಂದೆ ಅವರದೇ ಟಕ್ಕಳಕೆ ಕಂಪೆನಿ ಸ್ಥಾಪಿಸಿದವರು. ಅವರೊಬ್ಬ ಅದ್ಭುತ ಕಲಾವಿದ. ಅದೇ ರೀತಿ ಪಾರಿಜಾತದ ದಿಗ್ಗಜ, ಪಾರಿಜಾತದ ಕೋಗಿಲೆ ಎಂದೆಲ್ಲ ಹೆಸರು ಗಳಿಸಿದ ಅಪ್ಪಾಲಾಲ ನದಾಫರ ಸಾಧನೆ ಹಿರಿದು. ಅಂದಿನ ಪ್ರಧಾನಿ ಇಂದಿರಾಗಾಂಧಿಯವರು ಮುಂದೆ ಕೃಷ್ಣಪಾರಿಜಾತ ಪ್ರಸಂಗವನ್ನು ಪ್ರದರ್ಶಿಸಿದ ಖ್ಯಾತಿ ಅವರದು. ಅವರು ಕೂಡ ಬೆಂಗಳೂರಿನ ಕಲಾಕ್ಷೇತ್ರದಲ್ಲಿ 80ರ ದಶಕದಲ್ಲಿ ತಮ್ಮ ತಂಡದ ಪ್ರದರ್ಶನ ಮಾಡಿದವರು. ಬೈಲಹೊಂಗಲ ತಾಲ್ಲೂಕಿನ ಚಂಪಾಬಾಯಿ ಮೊದಲಿಗೆ ಕೌಜಲಗಿ ನಿಂಗವ್ವರ ಕಂಪೆನಿಯಲ್ಲಿ ಸೇರಿ, ಬೆಳಕಿಗೆ ಬಂದವರು. ಮುಂದೆ ಅವರು ಅಪ್ಪಾಲಾಲರ ಶ್ರೀ ಕಾಡಸಿದ್ದೇಶ್ವರ ಪಾರಿಜಾತ ಕಂಪೆನಿಗೆ ಸೇರಿ ಹೆಸರು ಗಳಿಸಿದವರು. ಅವರ ಕಲಾ ಪ್ರದರ್ಶನಗಳು ಬೆಂಗಳೂರಿನಲ್ಲಿ ಆಗಿವೆ.

- ಹೀಗೆ 'ಶ್ರೀಕೃಷ್ಣಪಾರಿಜಾತ' ತಂಡಗಳು ಗ್ರಾಮೀಣ ಪ್ರದೇಶದಿಂದ ನಗರಕ್ಕೆ ಬಂದು ಅದರ ಕಂಪನ್ನು ನಗರ ವಾಸಿಗಳಿಗೆ ಹಬ್ಬಿಸಿವೆ. ಇಂದು ಪಟ್ಟಣಕ್ಕೆ ವಲಸೆ ಬಂದ ಹಳ್ಳಿಯವರು ಈ ಕಲೆಯನ್ನು ಮೆಚ್ಚಿ ಪ್ರೋತ್ಸಾಹ ನೀಡುತ್ತಿದ್ದಾರೆ. ಹೀಗಾಗಿ ಹಳ್ಳಿ, ಪಟ್ಟಣಗಳೆಂಬ ಭೇದವಿಲ್ಲದೆ 'ಶ್ರೀಕೃಷ್ಣಪಾರಿಜಾತ'ದ ಪ್ರದರ್ಶನಗಳು ನಡೆಯುತ್ತಿವೆ. ಕರ್ನಾಟಕದ ಹೆಮ್ಮೆಯ ಕಲೆಯಾಗಿ 'ಶ್ರೀಕೃಷ್ಣಪಾರಿಜಾತ' ಹೊರಹೊಮ್ಮುತ್ತಿವೆ. ರವೀಂದ್ರ ಕಲಾಕ್ಷೇತ್ರವಂತೂ 'ಪಾರಿಜಾತ'ವನ್ನು ಅರಳಿಸುವಲ್ಲಿ ಸಾಕಷ್ಟು ಕೊಡುಗೆ ನೀಡಿದೆ.

ಸಂದರ್ಶನ :ಮಲ್ಲವ್ವ ಮೇಗೇರಿ

ಕೃಷ್ಣ ಪಾರಿಜಾತ ಶ್ರೀ ಹರಿ ಕಲಾತಂಡ,

ಬೈಲಹೊಂಗಲ

ಮೊ. : 9880057436

ಪ್ರದರ್ಶನಕ್ಕೆ ಮುದ ನೀಡುವ ಕಲಾಕ್ಷೇತ್ರ

-ಕೊಂಡದಕುಳಿ ರಾಮಚಂದ್ರ ಹೆಗಡೆ

(ಸಂದರ್ಶನ)

ಯಕ್ಷಗಾನ ರಂಗದಲ್ಲಿ ನಾಲ್ಕು ದಶಕಗಳ ಕಾಲ ದುಡಿದು ಈ ರಂಗಭೂಮಿಯಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದವರು ಶ್ರೀ ಕೊಂಡದ ಕುಳಿ ರಾಮಚಂದ್ರ ಹೆಗಡೆಯವರು. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಕೊಂಡದಕುಳಿ ಎಂಬ ಗ್ರಾಮದಲ್ಲಿ 1961ರಲ್ಲಿ ಜನಿಸಿದ ಶ್ರೀ ರಾಮಚಂದ್ರ ಹೆಗಡೆಯವರ ಅಜ್ಜಂದಿರಾದ ಕೊಂಡದ ಕುಳಿ ರಾಮ ಹೆಗಡೆ ಹಾಗೂ ಕೊಂಡದ ಕುಳಿ ಲಕ್ಷ್ಮಣ ಹೆಗಡೆಯವರು ಆ ಕಾಲಕ್ಕಾಗಲೇ ಜಿಲ್ಲೆಯಾದ್ಯಂತ ತಮ್ಮ ಪಾತ್ರ ನಿರ್ವಹಣೆಯ ಮೂಲಕ ಮನೆ ಮಾತಾದವರು. ಇವರು ಮೊದಲಿಗೆ ಗುಂಡಬಾಳೆ ಮೇಳವನ್ನು ಸೇರಿ ಯಕ್ಷ ಕಲಾ ಬದುಕನ್ನು ಪ್ರಾರಂಭಿಸಿದರು. ಮುಂದೆ ದಕ್ಷಿಣ ಕನ್ನಡದಲ್ಲಿನ ಸಾಲಿಗ್ರಾಮದ ಗುರುಪ್ರಸಾದಿತ ಯಕ್ಷಗಾನ ಮಂಡಳಿ ಹಾಗೂ ಉತ್ತರ ಕನ್ನಡದ ಶಿರಸಿಯ ಶ್ರೀ ಪಂಚಲಿಂಗೇಶ್ವರ ಮೇಳದ ಮುಖ್ಯ ಕಲಾವಿದರಾಗಿ ಕರಾವಳಿ ಹಾಗೂ ಮಲೆನಾಡಿನಲ್ಲಿ ಮನೆಮಾತಾದರು. ಈಚೆಗೆ ಕುಂಭಾಶಿಯಲ್ಲಿ ನೆಲೆಸಿರುವ ಅವರು ತಮ್ಮದೇ ಆದ ಪೂರ್ಣಚಂದ್ರ ಯಕ್ಷಕಲಾ ಪ್ರತಿಷ್ಠಾನವನ್ನು ಹುಟ್ಟು ಹಾಕಿ ಆ ಮೂಲಕ ಕಾಲಮಿತಿಯ ಯಕ್ಷಗಾನ ಪ್ರದರ್ಶನವನ್ನು ರಾಷ್ಟ್ರದಾದ್ಯಂತ ನೀಡುತ್ತಾ ಖ್ಯಾತರಾಗಿದ್ದಾರೆ. ಕಳೆದ 25-30 ವರ್ಷಗಳಿಂದ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯುವ ಯಕ್ಷಗಾನ ಪ್ರದರ್ಶನಗಳಲ್ಲಿ ಅತಿಥಿ ಕಲಾವಿದರಾಗಿ ಭಾಗವಹಿಸಿ ಬೆಂಗಳೂರಿನ ರಸಿಕರ ಮನಸೂರೆಗೊಂಡಿದ್ದಾರೆ. ಇವರ ಪೂರ್ಣಚಂದ್ರ ಯಕ್ಷಗಾನ ಮೇಳವು ಬೆಂಗಳೂರಿನ ಮಹಾಲಕ್ಷ್ಮಿ ಲೇಔಟ್‌ನ ವೀರಾಂಜನೆಯ ದೇವಸ್ಥಾನದ ಸಭಾಭವನದಲ್ಲಿ ಪ್ರತಿವರ್ಷ ಮಳೆಗಾಲದಲ್ಲಿ 7 ದಿನಗಳ ಸಪ್ತಾಹವನ್ನು ನಡೆಸುತ್ತ ಅನೇಕ ಉತ್ತಮ

ಪೌರಾಣಿಕ ಪ್ರಸಂಗಗಳನ್ನು ಬೆಂಗಳೂರಿನ ಪಶ್ಚಿಮ ವಲಯದ ಪ್ರೇಕ್ಷಕರಿಗೆ ಉಣಬಡಿಸುತ್ತಿದೆ. ಕಲಾಕ್ಷೇತ್ರದಲ್ಲಿ ನಡೆದ ಪ್ರದರ್ಶನಗಳಲ್ಲಿ ಸುಧನ್ವ ಕಾಳಗದ ಸುಧನ್ವ, ದಕ್ಷಯಜ್ಞದ ಈಶ್ವರ, ಲವಕುಶರ ಕಾಳಗದ ಶ್ರೀರಾಮ, ಶ್ರೀ ಕೃಷ್ಣಸಂಧಾನದ ಕೃಷ್ಣ, ಚಂದ್ರಹಾಸದ ದುಷ್ಟಬುದ್ಧಿ, ಭೀಷ್ಮ ವಿಜಯದ ಭೀಷ್ಮ, ಮಾಗಧವಧೆಯ ಮಾಗಧ ಮುಂತಾದ ಪಾತ್ರಗಳು ಇವರಿಗೆ ಹೆಸರು ತಂದುಕೊಟ್ಟಿವೆ. ಬೆಂಗಳೂರಿನ ಪ್ರಜ್ಞಾವಂತ ಪ್ರೇಕ್ಷಕರು ಇವರ ಗಂಭೀರ ಪಾತ್ರಚಿತ್ರಣವನ್ನು ಮನಸಾರೆ ಹೊಗಳುತ್ತಾರೆ. ಪಾತ್ರದ ಅಂತರಂಗವನ್ನು ಅರಿತು, ಅದರ ಕಲಾಸೌಂದರ್ಯವನ್ನು ಅಭಿವ್ಯಕ್ತಗೊಳಿಸುವಲ್ಲಿ ಇವರ ಹೆಚ್ಚುಗಾರಿಕೆಯಿದೆ. ಇವರ ಮಾತುಗಾರಿಕೆ ಕೂಡ ಗಂಭೀರ ಹಾಗೂ ಪ್ರೌಢ ಶಬ್ಧ ಸಂಪತ್ತಿನಿಂದ ಕೂಡಿದೆ. ಪೌರಾಣಿಕ ಪ್ರಸಂಗಗಳನ್ನೇ ಹೆಚ್ಚಾಗಿ ಮೆಚ್ಚುವ ಇವರಿಗೆ ಬೆಂಗಳೂರಿನ ಕಲಾಕ್ಷೇತ್ರದಲ್ಲಿ ಜೋಡಿಯಾಗಿ ಕಾಣಿಸಿಕೊಳ್ಳುವ ಕಲಾವಿದರೆಂದರೆ ಶ್ರೀ ತೋಟಿಮನೆ ಗಣಪತಿ ಹೆಗಡೆ, ಶ್ರೀ ಕೃಷ್ಣಯಾಜಿ ಬಳ್ಕೂರು, ಗೋಪಾಲಾಚಾರಿ ತೀರ್ಥಹಳ್ಳಿ, ಸುಬ್ರಹ್ಮಣ್ಯ ಚಿಟ್ಟಾಣಿ ಮುಂತಾದವರು. ಇವರ ಹೆಜ್ಜೆಗಾರಿಕೆಯ ಬಗ್ಗೆ ಅರಿವಿದ್ದು ರಂಗದಲ್ಲಿ ಸೊಗಸಾದ ನೃತ್ಯ ವಿನ್ಯಾಸಕ್ಕೆ ಅನುವಾಗುವಂತೆ ಹಾಡುವ ಭಾಗವತರುಗಳಲ್ಲಿ ಕೊಳಗಿ ಕೇಶ ಹೆಗಡೆ, ಜನ್ಸಾಲೆ ರಾಘವೇಂದ್ರಾಚಾರ್, ವಿದ್ವಾನ್ ಗಣಪತಿ ಭಟ್‌ರು ಮುಖ್ಯರಾಗಿದ್ದಾರೆ. ಹೀಗೆ ಬೆಂಗಳೂರಿನ ಯಕ್ಷಗಾನ ಆಸಕ್ತರ ಮನಸೆಳೆದಿರುವ ಕೊಂಡದಕುಳಿಯವರು ಕಲಾಕ್ಷೇತ್ರದ ಪ್ರದರ್ಶನಗಳ ಕುರಿತು ಆಡುವ ಮಾತಿಗೆ ಹೆಚ್ಚು ಬೆಲೆ ಇದೆ. ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿರುವ ಇವರಿಗೆ ಬೆಂಗಳೂರು ನಗರದಲ್ಲಿ ನಡೆಯುತ್ತಿರುವ ಯಕ್ಷಗಾನ, ಮೂಡಲಪಾಯ ಹಾಗೂ ಬಯಲಾಟ ಕಲೆಗಳ ಒಳಹೊರಗು ಚೆನ್ನಾಗಿ ತಿಳಿದಿರುವಂತಹದ್ದು.

1. ಜಾಗತೀಕರಣ ಹಿನ್ನೆಲೆಯಲ್ಲಿ ಯಕ್ಷಗಾನ, ಬಯಲಾಟ, ಮೂಡಲಪಾಯದಂತಹ ಕಲೆಗಳ ಉಳಿವು ಹೇಗೆ ಸಾಧ್ಯ? ವಿವರಿಸಬಹುದೇ?

ಕೊಂಡದ ಕುಳಿ : ಜಾಗತೀಕರಣ ಎಲ್ಲಾ ಕ್ಷೇತ್ರದ ಮೇಲೆ ಪ್ರಭಾವ ಬೀರುತ್ತಿದೆ. ನಮ್ಮ ನಡೆ-ನುಡಿಗಳಲ್ಲಿ, ಆಚಾರ-ವಿಚಾರಗಳಲ್ಲಿ, ನಮ್ಮ ಮಕ್ಕಳ ಮಾನಸಿಕ ತೊಳಲಾಟಗಳಲ್ಲಿ ಇದರ ಪರಿಣಾಮವನ್ನು ಗುರುತಿಸಬಹುದು. ಆದರೆ ಯಕ್ಷಗಾನದಂತಹ ಸುಪುಷ್ಟ, ಸಂಪನ್ನ, ಸತ್ವಯುತ ಕಲೆಯ ಉಳಿವಿನ ಬಗ್ಗೆ, ಬೆಳವಣಿಗೆಯ ಬಗ್ಗೆ ಭಯಪಡಬೇಕಾದ ಅವಶ್ಯಕತೆ ಇಲ್ಲ. ಜಗತ್ತನ್ನು ಸುತ್ತಿ ಬಂದಂತಹ

ಹುಡುಗರು ಕೂಡ ಯಕ್ಷಗಾನದ ಕಡೆ ಒಲವು ತೋರುತ್ತಿದ್ದಾರೆ. ನಮ್ಮ ಕಲೆ ಉಳಿಯಬೇಕಾದರೆ ಅತ್ಯಂತ ಮೌಲ್ಯಯುತವಾದ ಪ್ರಸಂಗಗಳನ್ನು ಪ್ರದರ್ಶಿಸಿ, ಸೂಕ್ತ ಸಂದೇಶವನ್ನು ಸಾರುವ ಅವಶ್ಯಕತೆ ನಗರ ಪ್ರದೇಶದಲ್ಲಿ ಇಂದು ಹೆಚ್ಚು ಅಗತ್ಯವಿದೆ.

2. ಯಕ್ಷಗಾನದಂತಹ ಸಾಂಪ್ರದಾಯಿಕ ಕಲೆಗಳನ್ನು ಉಳಿಸಿ ಬೆಳೆಸುವಲ್ಲಿ, ರವೀಂದ್ರ ಕಲಾಕ್ಷೇತ್ರದ ಪಾತ್ರದ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಕೊಂಡದಕುಳಿ : ಕರ್ನಾಟಕದ ರಾಜಧಾನಿ ಬೆಂಗಳೂರಿನ 'ರವೀಂದ್ರ ಕಲಾಕ್ಷೇತ್ರ'ಕ್ಕೂ ಯಕ್ಷಗಾನಕ್ಕೂ ಅವಿನಾಭಾವ ಸಂಬಂಧವಿದೆ. ಅನೇಕ ಗಣ್ಯ ಮಹನೀಯರ ಒತ್ತಾಯಕ್ಕೆ ಸ್ಪಂದಿಸಿದ ಸರಕಾರ ಇಡೀ ರಾತ್ರಿ ಯಕ್ಷಗಾನ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಿಕೊಟ್ಟು ಜನರ ಭಾವನೆಗೆ ತಲೆಬಾಗಿದೆ. ಇದಕ್ಕಾಗಿ ಕನ್ನಡ ಸಂಸ್ಕೃತಿ ಇಲಾಖೆಯನ್ನು, ಯಕ್ಷಗಾನ ಕಲಾವಿದರ, ಕಲಾಭಿಮಾನಿಗಳ ಪರವಾಗಿ ಅಭಿನಂದಿಸುತ್ತೇನೆ. ರಾಜಧಾನಿಯಲ್ಲಿ ಅತ್ಯಂತ ಕಡಿಮೆ ಬಾಡಿಗೆ ಪಡೆದು, ಅವಕಾಶ ಕಲ್ಪಿಸಿಕೊಟ್ಟಿರುವುದರಿಂದ ಇಂದು ರವೀಂದ್ರ ಕಲಾಕ್ಷೇತ್ರದಲ್ಲಿ ಅತ್ಯಂತ ಹೆಚ್ಚು ಯಕ್ಷಗಾನ ಪ್ರದರ್ಶನಗಳು ನಡೆಯುತ್ತಿವೆ. ಕಲಾಕ್ಷೇತ್ರವು ಲಕ್ಷೋಪಲಕ್ಷ ಯಕ್ಷ ಪ್ರೇಕ್ಷಕರಿಗೆ ರಸದೌತಣ ಸವಿಯಲು ಕಾರಣವಾಗಿದೆ. ಇದು ನಮಗೆಲ್ಲಾ ಹೆಮ್ಮೆಯ ವಿಷಯ.

3. ಕಲಾಕ್ಷೇತ್ರದೊಂದಿಗಿನ ನಿಮ್ಮ ನಂಟು ಎಷ್ಟು ಕಾಲದ್ದು ಮತ್ತು ಯಾವ ಬಗೆಯದ್ದು ತಿಳಿಸಬಹುದಾ?

ಕೊಂಡದ ಕುಳಿ : ನನ್ನ 18ನೇ ವಯಸ್ಸಿನಿಂದ ಬೆಂಗಳೂರು ಟೌನ್‌ಹಾಲ್‌ನಲ್ಲಿ ವೇಷಧಾರಿಯಾಗಿ ಪ್ರವೇಶ ಮಾಡಿರುತ್ತೇನೆ. ಈಚೆಗೆ ಸಾಧಾರಣ 25–30 ವರ್ಷಗಳಿಂದ ರವೀಂದ್ರ ಕಲಾಕ್ಷೇತ್ರದಲ್ಲಿ ಪಾತ್ರ ನಿರ್ವಹಿಸುತ್ತಿದ್ದೇನೆ. ಪ್ರೇಕ್ಷಕರು 'ರವೀಂದ್ರ ಕಲಾಕ್ಷೇತ್ರ'ದಲ್ಲಿ ಯಕ್ಷಗಾನ ನೋಡಿದಷ್ಟು ಸಂತೋಷ ಬೇರೆ ಕಡೆ ಸಿಗುವುದಿಲ್ಲ ಎಂದು ಹೇಳುತ್ತಾರೆ. ವಿಶಾಲವಾದ ಮೇಕಪ್ ರೂಮ್, ವ್ಯವಸ್ಥಿತವಾದ ರಂಗವೇದಿಕೆ ಕಲಾವಿದರಿಗೆ ಸಂತಸ ತರುವಂತಹದು.

4. ಯಕ್ಷಗಾನ ಕಲಾವಿದರಾಗಿ ಇಲ್ಲಿ ನಡೆದ ಪ್ರದರ್ಶನಗಳಲ್ಲಿ ನಿಮ್ಮ ಕೊಡುಗೆ ಎಂತಹುದು?

ಕೊಂಡದಕುಳಿ : ನಾನು ರವೀಂದ್ರ ಕಲಾಕ್ಷೇತ್ರದಲ್ಲಿ ಗದಾಯುದ್ಧದ ಕೌರವ,

ಕೃಷ್ಣ ಸಂಧಾನದ ಕೃಷ್ಣ, ಪಂಚವಟಿಯ ರಾಮ, ರಾವಣ ವಧೆಯ ರಾವಣ, ಪಟ್ಟಾಭಿಷೇಕದ ದಶರಥ, ಬ್ರಹ್ಮ ಕಪಾಲದ ಬ್ರಹ್ಮ – ಈಶ್ವರ, ಲಂಕಾದಹನದ ಹನುಮಂತ, ಕಾರ್ತವೀರ್ಯಾರ್ಜುನದ ಕಾರ್ತವೀರ್ಯ, ಮಾಗಧ ವಧೆಯ ಜರಾಸಂಧ ಮುಂತಾದ ಅನೇಕ ಪಾತ್ರಗಳನ್ನು ಮಾಡಿದ್ದೇನೆ. ಸಾಧಾರಣ ವರ್ಷಕ್ಕೆ ಸರಾಸರಿ 20 ಪಾತ್ರದಂತೆ 30 ವರ್ಷಗಳಲ್ಲಿ ಆರುನೂರಕ್ಕೂ ಹೆಚ್ಚು ಪ್ರದರ್ಶನಗಳಲ್ಲಿ ಪಾತ್ರಧಾರಿಯಾಗಿ ಭಾಗವಹಿಸಿದ್ದೇನೆ.

5. **ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಪ್ರದರ್ಶನಗಳಲ್ಲಿ ಉಳಿದ ಕಲಾವಿದರೊಂದಿಗೆ, ಸಂಘಟಕರೊಂದಿಗಿನ ಸಂಬಂಧ ಎಂತಹುದು? ಪ್ರೇಕ್ಷಕರ ಬಗ್ಗೆ ನಿಮ್ಮ ಅಭಿಪ್ರಾಯವೇನು?**

ಕೊಂಡದಕುಳಿ : ಇಲ್ಲಿನ ಪ್ರದರ್ಶನಗಳಲ್ಲಿ ಎಲ್ಲರೂ ಅತಿಥಿ ಕಲಾವಿದರಾಗಿ ಭಾಗವಹಿಸುವುದರಿಂದ ಹೆಚ್ಚಿನ ಸಂಘರ್ಷಗಳಿರುವುದಿಲ್ಲ. ಆದರೆ ಪೂರ್ವನಿಶ್ಚಿತ ಸ್ವರೂಪ ಪ್ರದರ್ಶನಕ್ಕೆ ಇರುವುದಿಲ್ಲವಾದ್ದರಿಂದ ಒಮ್ಮೊಮ್ಮೆ ಪ್ರಸಂಗ ಒಳ್ಳೆ ಕಳೆ ಕಟ್ಟುತ್ತದೆ. ಒಮ್ಮೊಮ್ಮೆ ಪೇಲವವಾಗುತ್ತದೆ. ಹೆಚ್ಚಾಗಿ ಸಂಘಟಕರು ಕಲಾವಿದರ ಬಗ್ಗೆ ಗೌರವದಿಂದಲೇ ನಡೆದುಕೊಳ್ಳುತ್ತಾರೆ. ಇಲ್ಲಿನ ಪ್ರೇಕ್ಷಕರಿಗೆ ಕಲಾವಿದರ ಬಗ್ಗೆ ಬಹಳ ಅಭಿಮಾನವಿದೆ. ಕಲಾಕ್ಷೇತ್ರಕ್ಕೆ ಬರುವವರಂತು ಉತ್ತಮ ಕಲಾಸ್ವಾದನೆಯನ್ನು ಬಯಸುವ ರಸಿಕರಾಗಿರುತ್ತಾರೆ. ಪೌರಾಣಿಕ ಪ್ರಸಂಗಕ್ಕೆ ಈ ರಂಗವೇದಿಕೆಯಲ್ಲಿ ಹೆಚ್ಚು ಒಲವು ಕಂಡುಬರುತ್ತದೆ.

6. **ನಿಮ್ಮ ಕಲಾಸಾಧನೆಗೆ ಕಲಾಕ್ಷೇತ್ರದ ಕೊಡುಗೆ ಎಂತಹುದು? ಗೌರವ ಸಮ್ಮಾನಗಳು ನಡೆದಿವೆಯಾ? ವಿವರಿಸಬಹುದಾ?**

ಕೊಂಡದಕುಳಿ : ಬೆಂಗಳೂರಿನ ಪ್ರದರ್ಶನಗಳು ಪ್ರತಿಯೊಬ್ಬ ಕಲಾವಿದನ ಬದುಕಿಗೆ ಮುಖ್ಯವಾದದ್ದು. ಇಲ್ಲಿನ ವಿದ್ಯಾವಂತ ಹಾಗೂ ಪ್ರಜ್ಞಾವಂತ ಪ್ರೇಕ್ಷಕರ ಮೌಲ್ಯಮಾಪನ ಕಲಾವಿದನ ಬೆಳವಣಿಗೆಗೆ ಅಗತ್ಯ. ನಾನು ಕೂಡ ಇಲ್ಲಿನ ಪ್ರದರ್ಶನದಿಂದ ಲಾಭ ಪಡೆದುಕೊಂಡಿದ್ದೇನೆ. ಸಹಕಲಾವಿದರ ಒಡನಾಟದಲ್ಲಿ ಬೆಳೆದಿದ್ದೇನೆ. ಹೆಚ್ಚು ಕಲಾನಿಷ್ಠೆಗೆ ಒತ್ತು ಕೊಟ್ಟಿದ್ದೇನೆ. ಐದಾರು ವರ್ಷಗಳ ಕೆಳಗೆ ರವೀಂದ್ರ ಕಲಾಕ್ಷೇತ್ರದಲ್ಲಿ ನನಗೂ ಕೂಡ ಅದ್ದೂರಿ ಸಮ್ಮಾನ ನಡೆದಿತ್ತು. ಅಂದು

ನನ್ನೊಂದಿಗೆ ಶ್ರೀ ಗೋಡೆ ನಾರಾಯಣ ಹೆಗಡೆ, ಶ್ರೀ ಸುಬ್ರಹ್ಮಣ್ಯ ಚಿಟ್ಟಾಣಿ, ಶ್ರೀ ಸುಧೀಂದ್ರ ಹೊಳ್ಳ ಅವರಿಗೂ ಕೂಡ ಸನ್ಮಾನ ನಡೆದಿತ್ತು. ಇದು ಮರೆಯಲಾರದ ಘಟನೆ, ರವೀಂದ್ರ ಕಲಾಕ್ಷೇತ್ರ ನಮಗೆಲ್ಲಾ ಬದುಕು ಕೊಟ್ಟಿರುವ ಯಕ್ಷಗಾನವನ್ನು ಬೆಳೆಸುವಲ್ಲಿ ಸದಾ ಸಹಕರಿಸಲೆಂಬುದೇ ನನ್ನ ಪ್ರಾರ್ಥನೆ.

ಸಂದರ್ಶನ :ಕೊಂಡದಕುಳಿ ರಾಮಚಂದ್ರ ಹೆಗಡೆ

'ಪೂರ್ಣಚಂದ್ರ' ಕುಂಭಾಶಿ – 576 257
ಕುಂದಾಪುರ ತಾಲ್ಲೂಕು
ಮೊ. 94480 00471

ಮರೆಯಲಾಗದ ಕಲಾಕ್ಷೇತ್ರದ 'ನಾಗಶ್ರೀ'

– ಕೊಳಗಿ ಕೇಶವ ಹೆಗಡೆ

(ಸಂದರ್ಶನ)

ಭಾವಪೂರ್ಣ ಹಾಡುಗಾರಿಕೆ, ಪಾತ್ರಧಾರಿಗಳ ಹೆಜ್ಜೆಗಾರಿಕೆಯ ಬಗ್ಗೆ ಸದಾ ಗಮನ, ರಂಗ ನಿರ್ವಹಣೆಯಲ್ಲಿ ಎಚ್ಚರ, ಶುದ್ಧವಾದ ರಾಗಾಲಾಪನೆ, ಪೌರಾಣಿಕ ಪ್ರಸಂಗಗಳಲ್ಲಿ ಮಿಂಚಬಲ್ಲ ಶಕ್ತಿ ಇವೆಲ್ಲವುಗಳಿಂದ ಬಹಳ ಬೇಡಿಕೆಯ ಭಾಗವತರುಗಳಲ್ಲಿ ಶ್ರೀ ಕೇಶವ ಹೆಗಡೆ ಕೊಳಗಿಯವರು ಮುಖ್ಯರು. ಇವರ ತಂದೆ ಕೊಳಗಿ ಅನಂತ ಹೆಗಡೆಯವರು ಖ್ಯಾತ ವೇಷಧಾರಿಗಳಾಗಿ ಮುಮ್ಮೇಳದಲ್ಲಿ ಪ್ರಸಿದ್ಧರು. ಆದರೆ ಇವರು ಆಯ್ಕೆ ಮಾಡಿಕೊಂಡದ್ದು ಹಿಮ್ಮೇಳದ ಭಾಗವತಿಕೆಯನ್ನು. 1964ರಲ್ಲಿ ಜನಿಸಿದ ಕೇಶವ ಹೆಗಡೆಯವರು ಇಪ್ಪತ್ತನೆಯ ವಯಸ್ಸಿನಲ್ಲಿ ಯಕ್ಷಗಾನ ರಂಗವನ್ನು ಪ್ರವೇಶಿಸಿದರು. ನಾರ್ಣಪ್ಪ ಉಪ್ಪೂರರ ಹಾಗೂ ಭಾಗವತ ಕೆ.ಪಿ. ಹೆಗಡೆಯವರ ಶಿಷ್ಯರಾಗಿ ಭಾಗವತಿಕೆಯನ್ನು ಶ್ರದ್ಧೆಯಿಂದ ಅಭ್ಯಾಸ ಮಾಡಿದರು. ಗುಂಡಬಾಳೆಯ ಮೇಳದ ಮೂಲಕ ವೃತ್ತಿ ಜೀವನವನ್ನು ಆರಂಭಿಸಿದ ಇವರು ಮುಂದೆ ಮುಲ್ಕಿ ಮೇಳ, ಕಮಲಶೀಲೆ ಮೇಳ, ಸಾಲಿಗ್ರಾಮ ಮೇಳ, ಶಿರಸಿ ಪಂಚಲಿಂಗೇಶ್ವರ ಮೇಳ, ಬಚ್ಚಗಾರು ಮೇಳಗಳಲ್ಲಿ ಕಲಾ ವ್ಯವಸಾಯವನ್ನು ನಡೆಸಿದರು. ಈಗ ಕೊಂಡದಕುಳಿ ರಾಮಚಂದ್ರ ಹೆಗಡೆಯವರ ಪೂರ್ಣಚಂದ್ರ ಯಕ್ಷಗಾನ ಮೇಳ, ಹಾಗೂ ಕೃಷ್ಣ ಯಾಜಿಯವರ ಯಾಜಿ ಮಿತ್ರ ಮಂಡಳಿಗೆ ಕೂಡ ಭಾಗವತರಾಗಿ ಕಲಾಸೇವೆ ಮಾಡುತ್ತಿದ್ದಾರೆ. ಹೀಗೆ ಮೂರು ದಶಕಗಳ ಭಾಗವತಿಕೆಯ ಅನುಭವವನ್ನು ಹೊಂದಿದ್ದಾರೆ. ಖ್ಯಾತರಾದ ದಿ. ಕಾಳಿಂಗ ನಾವಡರ ಉಚ್ಛ್ರಾಯ ಕಾಲದಲ್ಲಿ ಅವರ ಜೊತೆ ಸಹಭಾಗವತರಾಗಿ (ಸಂಗೀತಗಾರ) ರವೀಂದ್ರ ಕಲಾಕ್ಷೇತ್ರದ ಪ್ರದರ್ಶನಗಳಲ್ಲಿ ಮೊದಲಿಗೆ ಕಾಣಿಸಿಕೊಂಡವರು ಶ್ರೀ ಕೊಳಗಿ ಕೇಶವ ಹೆಗಡೆ. ಈಚೆಗಂತು ಬೆಂಗಳೂರಿನ ಕಲಾರಸಿಕರಿಗೆ ಇವರು ಚಿರಪರಿಚಿತರು. ನಿಯಮಿತವಾಗಿ ಕೊಂಡದ ಕುಳಿಯವರೊಂದಿಗೆ, ಯಾಜಿಯವರೊಂದಿಗೆ ಮಾತ್ರವಲ್ಲದೆ ಕಲಾಕ್ಷೇತ್ರದಲ್ಲಿ ನಡೆಯುವ

ಪ್ರವಾಸಿ ಯಕ್ಷಗಾನ ಸಂಸ್ಥೆಗಳ ಪ್ರದರ್ಶನಗಳಲ್ಲಿ ಅತಿಥಿ ಭಾಗವತರಾಗಿ ಬಂದು ಪಾಲ್ಗೊಳ್ಳುತ್ತಿದ್ದಾರೆ. ಈ ಕಾರಣ ರವೀಂದ್ರ ಕಲಾಕ್ಷೇತ್ರದ ಇವರ ಅನಿಸಿಕೆಗಳಿಗೆ ಮಹತ್ವವಿದೆ.

1. ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯುವ ಯಕ್ಷಗಾನ ಪ್ರದರ್ಶನಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಕೊಳಗಿ ಕೇಶವ ಹೆಗಡೆ: ಹಿಂದಿನ ಪ್ರದರ್ಶನಗಳೆಲ್ಲ ಬಹುಳ ಅಚ್ಚುಕಟ್ಟಾಗಿತ್ತು. ಕಾಳಿಂಗ ನಾವಡರ ಕಾಲದಲ್ಲಿ ಅವರ ಅಭಿಮಾನಿಗಳ ಮುಂದೆ ಹಾಡುತ್ತಿದ್ದಾಗಿನ ಸಂತೋಷ ಅವಿಸ್ಮರಣೀಯ. ಆ ಸಂಭ್ರಮದ ದಿನಗಳು ಮತ್ತೆ ಬರಲಾರವು. ಈಚೆಗೆ 4–5 ವರ್ಷಗಳವರೆಗೆ ಕೂಡ ಉತ್ತಮ ಸಂಖ್ಯೆಯಲ್ಲಿ ಪ್ರೇಕ್ಷಕರು ಬರುತ್ತಿದ್ದರು. ಆದರೆ ಕಳೆದ 3–4 ವರ್ಷಗಳಲ್ಲಿ ಪ್ರೇಕ್ಷಕರ ಕೊರತೆ ಕಾಣಿಸುತ್ತಿದೆ. ಅದರಲ್ಲೂ ರಸಾಸ್ವಾದನೆ ಮಾಡುವ ಪ್ರೇಕ್ಷಕರು ಕಲಾಕ್ಷೇತ್ರದಲ್ಲಿ ನಡೆಯುವ ರಾತ್ರಿ ಪ್ರದರ್ಶನಗಳಲ್ಲಿ ಕಾಣಸಿಗುತ್ತಿಲ್ಲ.

2. ನಿಮ್ಮ ಹಾಗೂ ರವೀಂದ್ರ ಕಲಾಕ್ರೇತ್ರದ ನಂಟಿನ ಬಗ್ಗೆ ವಿವರಿಸಬಹುದಾ?

ಕೊಳಗಿ ಕೇಶವ ಹೆಗಡೆ: ದಿ. ಕಾಳಿಂಗ ನಾವಡರ ಕಾಲದಿಂದ ನಾನು ಇಲ್ಲಿನ ಪ್ರದರ್ಶನಗಳಲ್ಲಿ ಭಾಗವಹಿಸುತ್ತಿದ್ದೇನೆ. ಸುಮಾರಿಗೆ 500ರಷ್ಟು ಪ್ರದರ್ಶನಗಳು ನನ್ನ ಭಾಗವತಿಕೆಯಲ್ಲಿ ಇಲ್ಲಿ ನಡೆದಿವೆ. ಹೆಚ್ಚಾಗಿ ಪೌರಾಣಿಕ ಪ್ರಸಂಗಗಳಿಗೆ ಭಾಗವತಿಕೆ ಮಾಡಿದ್ದೇನೆ. ಕೆಲವೊಂದು ಹೊಸ ಪ್ರಸಂಗಗಳು ಕೂಡ ಇಲ್ಲಿ ನನ್ನ ಭಾಗವತಿಕೆಯಲ್ಲಿ ಪ್ರದರ್ಶನ ಕಂಡಿವೆ. ಹೊಸ ಪ್ರಸಂಗಗಳಿಗೆ ಹೆಚ್ಚು ಪ್ರೇಕ್ಷಕರು ಆಗಮಿಸುತ್ತಾರೆ. ಆದರೆ ಈಚೆಗೆ ಹೊಸ ಪ್ರೇಕ್ಷಕರು ಕಾಣಿಸುತ್ತಿಲ್ಲ. ನಗರ ಪ್ರದೇಶದಲ್ಲಿ ಹಳೆಯ ಪ್ರೇಕ್ಷಕರೇ ಹೆಚ್ಚಾಗಿ ಕಾಣಿಸುತ್ತಾರೆ.

3. ನೀವು ನೆನಪಿಸಿಕೊಳ್ಳಬಹುದಾದ ಪ್ರದರ್ಶನ ಇವುಗಳಲ್ಲಿ ಯಾವುದು?

ಕೊಳಗಿ ಕೇಶವ ಹೆಗಡೆ: 28 ವರ್ಷಗಳ ಹಿಂದೆ ನಾನು ನಡೆಸಿಕೊಟ್ಟ 'ನಾಗಶ್ರೀ' ಪ್ರಸಂಗ ಇನ್ನೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ನಿಂತಿದೆ. ಅದರಲ್ಲಿ ಖ್ಯಾತ ವೇಷಧಾರಿ ಶ್ರೀ ಕೃಷ್ಣ ಯಾಜಿಯವರು ಶಿಥಿಲನಾಗಿ, ರಾಜೀವಶೆಟ್ಟಿದಾರಿಕೆಯಾಗಿ, ಹಳ್ಳಾಡಿ ಜಯರಾಮಶೆಟ್ಟಿಯವರು ಕೈರವನಾಗಿ, ಜಲವಳ್ಳಿ ವೆಂಕಟೇಶ್ ರಾವ್ ಅವರು ಸುದರ್ಶನನಾಗಿ ಅಂದು ಅಭಿನಯಿಸಿದ್ದು, ಅಮೋಘವಾಗಿತ್ತು. ನಾವಡರ ಭಾಗವತಿಕೆಯಲ್ಲಿ ಅವರ ಜೊತೆಯಲ್ಲಿ ಇದ್ದು ಸಹಭಾಗವತನಾಗಿ ಕೂಡ 'ನಾಗಶ್ರೀ'

ಪ್ರಸಂಗದಲ್ಲಿ ಹಾಡಿದ್ದೇನೆ. ಕಲಾಕ್ಷೇತ್ರದಲ್ಲಿ ಪ್ರದರ್ಶಿತಗೊಂಡ ನಾಗಶ್ರೀಗೆ ಜನರ ಸ್ಪಂದನೆ ಇನ್ನಷ್ಟು ಹಾಡಲು ಹುರುಪು ಕೊಟ್ಟಿದೆ. ಇಂದು ಕಾಲಮಿತಿಯ ಪೌರಾಣಿಕ ಪ್ರಸಂಗಗಳು ಹೆಚ್ಚಿವೆ. ನಮ್ಮ ಪ್ರದರ್ಶನಗಳು ಕಾಲಕಾಲಕ್ಕೆ ಹೊಸ ಪ್ರೇಕ್ಷಕರನ್ನು ಸೆಳೆಯುವಂತಿರಬೇಕು. ಆಗ ಈ ಕಲೆ ಇನ್ನಷ್ಟು ವಿಸ್ತಾರಗೊಳ್ಳುತ್ತದೆ. ಪ್ರೇಕ್ಷಕರ ಕೊರತೆಯ ಸಮಸ್ಯೆ ಸಂಘಟಕರಿಗೆ ಮಾತ್ರವಲ್ಲ ಕಲಾವಿದರನ್ನೂ ಬಾಧಿಸುತ್ತದೆ. ಇದಕ್ಕೆ ಸಂಚಾರದ ಸಮಸ್ಯೆ, ರಾತ್ರಿಯಿಡೀ ಜಾಗರಣೆ ಮಾಡಬೇಕಾದ್ದು ಕಾರಣ ಇರಬಹುದು. ರವೀಂದ್ರ ಕಲಾಕ್ಷೇತ್ರದಂತಹ ದೊಡ್ಡ ಸಭಾಭವನದಲ್ಲಿ ಬೆರಳೆಣಿಕೆಯ ಪ್ರೇಕ್ಷಕರಿದ್ದರೆ, ಹಿಮ್ಮೇಳದ, ಮುಮ್ಮೇಳದ ಕಲಾವಿದರಿಗೆ ಹುಮ್ಮಸ್ಸು ಬರುವುದಿಲ್ಲ. ನನಗಂತೂ ಒಳ್ಳೆಯ ಹಾಗೂ ಅಪಾರ ಪ್ರೇಕ್ಷಕರು ನೆರೆದಿದ್ದರೆ ಸ್ವಾಭಾವಿಕವಾದ ಉತ್ಸಾಹ ಬಂದು ಭಾಗವತಿಕೆ ಮಾಡಲು ಖುಷಿಯಾಗುತ್ತದೆ.

4. **ಬೇರೆ ನಗರಗಳ ಸಭಾಭವನಕ್ಕೆ ಹೋಲಿಸಿದರೆ, ಕಲಾಕ್ಷೇತ್ರದ ಬಗ್ಗೆ ನಿಮ್ಮ ಅಭಿಪ್ರಾಯವೇನು? ಇಲ್ಲಿ ಏನಾದರೂ ಸುಧಾರಣೆ ಅಗತ್ಯವಿದೆಯೇ?**

ಕೊಳಗಿ ಕೇಶವ ಹೆಗಡೆ: ನಾನು ಕೆಲವು ತಂಡದೊಂದಿಗೆ ದುಬೈ, ಸಿಂಗಾಪುರ, ಅಮೆರಿಕಾ ದೇಶಗಳಿಗೆ ತೆರಳಿದ್ದೇನೆ. ಅಲ್ಲಿನ ಸಭಾಭವನಗಳ ವೈಭವವೇ ಬೇರೆ. ಅಲ್ಲಿನ ಒಟ್ಟು ವಾತಾವರಣವೇ ಭಿನ್ನ. ಪ್ರೇಕ್ಷಕರೂ ಕೂಡ ಪ್ರಜ್ಞಾವಂತರಾಗಿರುತ್ತಾರೆ. ಇನ್ನು ನಮ್ಮ ದೇಶದ ಹೈದರಾಬಾದ್, ಚೆನ್ನೈ, ದೆಹಲಿ, ಮುಂಬಯಿ ನಗರಗಳ ಸಭಾಭವನಗಳಲ್ಲೂ ಭಾಗವತಿಕೆ ಮಾಡಿದ್ದೇನೆ. ಈ ಹಿನ್ನೆಲೆಯಲ್ಲಿ ನಮ್ಮ ರವೀಂದ್ರ ಕಲಾಕ್ಷೇತ್ರದ ಧ್ವನಿವರ್ಧಕ ವ್ಯವಸ್ಥೆ ಸುಧಾರಿಸಬೇಕು ಎನ್ನಿಸುತ್ತದೆ. ಬೆಳಕಿನ ವ್ಯವಸ್ಥೆಯಾದರೂ ಯಕ್ಷಗಾನಕ್ಕೆ ಅಷ್ಟಾಗಿ ಮುಖ್ಯವಾಗುವುದಿಲ್ಲ. ಇಲ್ಲಿಯದ್ದು ಉತ್ತಮವಾಗಿಯೇ ಇದೆ. ಇಲ್ಲಿನ ಪ್ರೇಕ್ಷಕರು ಉತ್ತಮ ಅಭಿರುಚಿವುಳ್ಳವರಾಗಿದ್ದಾರೆ. ಆದ ಕಾರಣ ಕಲಾಕ್ಷೇತ್ರದ ಭಾಗವತಿಕೆ ನನಗೆ ಯಾವಾಗಲೂ ಹಿತ ಎನಿಸುತ್ತದೆ.

5. **ರವೀಂದ್ರ ಕಲಾಕ್ಷೇತ್ರದ ಸುವರ್ಣ ಸಂಭ್ರಮದಲ್ಲಿ ಪಾಲ್ಗೊಂಡ ನಿಮ್ಮ ಅನಿಸಿಕೆ ಏನು?**

ಕೊಳಗಿ ಕೇಶವ ಹೆಗಡೆ: ಮೊದಲ ಬಾರಿಗೆ ಸುವರ್ಣ ಸಂಭ್ರಮದ ಅಂಗವಾಗಿ ನಡೆದ ನೆನಪಿನೋಕುಳಿಯ ಕಾರ್ಯಕ್ರಮ ಅನಿರೀಕ್ಷಿತವಾಗಿ ರದ್ದಾದ್ದು ಕಲಾವಿದರಾದ ನಮಗೆಲ್ಲಾ ಬೇಸರ ತಂದಿತ್ತು. ಆದರೆ ಎರಡನೆಯ ಬಾರಿಗೆ ವ್ಯವಸ್ಥಿತವಾಗಿ ನಡೆಯಿತು. ಖುಷಿ ಕೊಟ್ಟಿತು. ಮೊದಲ ಬಾರಿಗೆ ಊರಿನಿಂದ ಬಂದದ್ದಕ್ಕೆ ಸಂಚಾರದ ವೆಚ್ಚವನ್ನು ಕೊಟ್ಟಿರುವುದು ಸಮಾಧಾನ ತಂದಿದೆ. ಆದರೆ ಪ್ರದರ್ಶನ ರದ್ದಾದಕ್ಕೆ ಬೇಸರವಿದೆ.

ಆದರೂ ಯಕ್ಷಗಾನ ಕಲೆಯ ಬೆಳವಣಿಗೆಗೆ ಕಲಾಕ್ಷೇತ್ರದ ಕೊಡುಗೆಯಂತು ಅಪಾರ. ಅದಕ್ಕಾಗಿ ಧನ್ಯವಾದಗಳು. ಕಲಾಕ್ಷೇತ್ರದ 'ಸುವರ್ಣ ಸಂಭ್ರಮದ ನೆನಪಿನೋಕುಳಿ' ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ನನ್ನ ನೆನಪಿನಲ್ಲಿ ಉಳಿಯುವ ಕಾರ್ಯಕ್ರಮಗಳಲ್ಲಿ ಒಂದಾಗಿದೆ. ಅಂದು ಹಬ್ಬದ ರೀತಿಯ ವಾತಾವರಣವಿತ್ತು. ಇದಕ್ಕಾಗಿ ಕನ್ನಡ ಸಂಸ್ಕೃತಿ ಇಲಾಖೆಗೆ ನನ್ನ ಅಭಿನಂದನೆಗಳು.

ಸಂದರ್ಶನ :ಕೊಳಗಿ ಕೇಶವ ಹೆಗಡೆ

ಅಂಚೆ : ಶಿರಳಗಿ, ಸಿದ್ದಾಪುರ ತಾಲ್ಲೂಕು

ಉತ್ತರ ಕನ್ನಡ ಜಿಲ್ಲೆ

ಮೊ. 98808 64121

ಅತಿರಂಜಕತೆಯ ಯಕ್ಷಗಾನ ಪ್ರದರ್ಶನಗಳು

-ಅಜಿತೇಶ ಹೆಗಡೆ ಸಾಗರ

(ಸಂದರ್ಶನ)

ವಿಶಿಷ್ಟ ಚಿಂತನೆಗಳ ಮೂಲಕ ಯಕ್ಷಗಾನ ಹವ್ಯಾಸಿ ಕಲಾವಿದರಲ್ಲಿ ವಿಭಿನ್ನರಾಗಿ ಕಾಣಿಸಿಕೊಳ್ಳುತ್ತಿರುವವರು ಶ್ರೀ ಅಜಿತೇಶ ಜಿ. ಹೆಗಡೆಯವರು. ನಗರೀಕರಣದ ವೇಗಕ್ಕೆ ಪ್ರತಿಸ್ಪರ್ಧಿಯೋ ಎಂಬಂತೆ ಯಕ್ಷಗಾನ ಕಲೆಯು ಕೂಡ ವೇಗವನ್ನು ಪಡೆದುಕೊಳ್ಳುತ್ತಿರುವ ಇಂದಿನ ದಿನಗಳಲ್ಲಿ ಯಕ್ಷಗಾನದ ಮೂಲ ಸತ್ವ ನಿಧಾನಗತಿಯಲ್ಲಿದೆ ಎಂದು ಪ್ರತಿಪಾದಿಸುತ್ತಾ, ಅದನ್ನೇ ನಿಷ್ಠೆಯಿಂದ ಅಭ್ಯಾಸ ಮಾಡಿ ಪ್ರದರ್ಶಿಸುತ್ತಾ ಯಕ್ಷಗಾನದ ಸಾಂಪ್ರದಾಯಿಕ ಆಯಾಮವನ್ನು ಪ್ರಸ್ತುತಪಡಿಸುತ್ತಿರುವ ವಿರಳಾತಿವಿರಳರಲ್ಲಿ ಅಜಿತೇಶ ಹೆಗಡೆಯವರು ಮುಖ್ಯರು. ಬೆಂಗಳೂರಿನಲ್ಲಿ ಇವರ ಸಂಘಟನೆ ಮೂವತ್ತಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡಿದೆ. ಇವುಗಳಲ್ಲೆಲ್ಲಾ ಇವರೇ ಪ್ರಧಾನ ವೇಷಧಾರಿಗಳು. ಬೆಂಗಳೂರಿನ ನಾನಾ ಭಾಗಗಳಲ್ಲಿ ನಡೆದ 90ಕ್ಕೂ ಹೆಚ್ಚು ಯಕ್ಷಗಾನ ಪ್ರದರ್ಶನಗಳಲ್ಲಿ ಪಾತ್ರಗಳನ್ನು ನಿರ್ವಹಿಸಿದ್ದಾರೆ. ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಪ್ರದರ್ಶನಗಳಲ್ಲಿ ಅತಿಥಿ ಕಲಾವಿದರಾಗಿ ಭಾಗವಹಿಸಿ ಅನುಭವ ಗಳಿಸಿದವರು. ಈ ಕಾರಣ ಕಲಾಕ್ಷೇತ್ರದ ಹಿಂದಿನ, ಇಂದಿನ, ಮುಂದಿನ ಪ್ರದರ್ಶನಗಳ ಬಗ್ಗೆ ಅಧಿಕೃತವಾಗಿ ಮಾತನಾಡಬಲ್ಲ ಶಕ್ತಿ ಅಜಿತೇಶ ಹೆಗಡೆಯವರಿಗಿದೆ.

1971ರಲ್ಲಿ ಸಾಗರದಲ್ಲಿ ಜನಿಸಿದ ಅಜಿತೇಶರ ಪ್ರಾರಂಭಿಕ ಶಿಕ್ಷಣ ಸಾಗರದಲ್ಲೇ ನಡೆದು, ಎಳವೆಯಲ್ಲೇ ಯಕ್ಷಗಾನದಿಂದ ಆಕರ್ಷಿತರಾದವರು. ಮುಂದೆ ಸುರತ್ಕಲ್‌ನ ಎನ್‌ಐಐಟಿಯಲ್ಲಿ ತಾಂತ್ರಿಕ ಶಿಕ್ಷಣದ ಉನ್ನತ ಪದವಿ ಗಳಿಸಿ, ಬಹುರಾಷ್ಟ್ರೀಯ ಕಂಪೆನಿಯಾದ ಮೊಟೊರಾಲ್‌ನಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಸೇವೆ ಸಲ್ಲಿಸಿದವರು. ಎಂಟು ವರ್ಷಗಳ ಕೆಳಗೆ ಯಕ್ಷಗಾನ ತಪ್‌ಸಂಘ ಎಂಬ ಹವ್ಯಾಸಿ ಸಂಸ್ಥೆಯನ್ನು ಹುಟ್ಟುಹಾಕಿ, ಅದರ ಮೂಲಕ ಬೆಂಗಳೂರಿನಲ್ಲಿ ವಿಭಿನ್ನ ಬಗೆಯ ಕಲಾಪ್ರದರ್ಶನ ನೀಡುತ್ತಿದ್ದಾರೆ. ಕಳೆದ ಇಪ್ಪತ್ತು ವರ್ಷಗಳಿಂದ ಯಕ್ಷಗಾನವನ್ನು

ತಪಸ್ಸಿನಂತೆ ಕಲಿತು ಸಾಧನೆ ಮಾಡುತ್ತಿರುವ ಅಜಿತೇಶ್‌ರ ಪ್ರಾರಂಭಿಕ ಗುರುಗಳು ಗುಂಡ್ಮಿ ರಘುರಾಮ್‌ರು. ಮುಂದೆ ವೇಣುಗೋಪಾಲ್‌ರ ಭಾಗವತಿಕೆಯಲ್ಲಿ ತರಬೇತಿ ಪಡೆದವರು. ಈಚೆಗೆ ಸತೀಶ ಹೆಗಡೆ ದಂಟಕಲ್, ಗಜಾನನ ಭಟ್ ವಾನಳ್ಳಿ, ನಾಗರಾಜ ಮಗಳ್ಳಿಯವರು ಹಿಮ್ಮೇಳದಲ್ಲಿದ್ದು ಸಹಕರಿಸುತ್ತಿದ್ದರು. ಭಾವಸ್ಫುಟತೆಗೆ ಕೊಳಗಿ ಕೇಶವ ಹೆಗಡೆ, ಸುಬ್ರಹ್ಮಣ್ಯ ಧಾರೇಶ್ವರರನ್ನು ಮೆಚ್ಚುವ ಹೆಗಡೆಯವರು ಈಚೆಗೆ ಏಕಲವ್ಯನಂತೆ ಸೀಡಿಯ ಮೂಲಕ ಕೇಳುತ್ತಾ, ಹೆಜ್ಜಾ ಹಾಕುತ್ತಾ ತಾವೇ ದಿನವು 2 ತಾಸುಗಳಷ್ಟು ಯಕ್ಷಗಾನ ಕಲಿಕೆ ಮಾಡುವ ವಿಶಿಷ್ಟ ವ್ಯಕ್ತಿತ್ವದವರು. ಅಜಿತೇಶರಿಗೆ ಕಣ್ಣಿಮನೆ ಗಣಪತಿ ಹೆಗಡೆ, ಚಿಟ್ಟಾಣಿ ರಾಮಚಂದ್ರ ಹೆಗಡೆ, ಆರ್ಗೋಡು ಮೋಹನದಾಸ್ ಶೆಣೈ, ಕರುಣಾಕರ ಶೆಟ್ಟಿ ಹೊಸಂಗಡಿಯವರ ಮಾರ್ಗದರ್ಶನವು ಲಭಿಸಿದೆ. ರವೀಂದ್ರ ಕಲಾಕ್ಷೇತ್ರದಲ್ಲಿ ದೇವೇಂದ್ರ, ವಿಷ್ಣು, ಮಾಗಧವಧೆಯ ಅರ್ಜುನ ಮುಂತಾದ ಪಾತ್ರಗಳನ್ನು ವಹಿಸಿದ್ದಾರೆ. ಬೆಂಗಳೂರು ನಗರದ ಇತರ ಕಡೆಯಲ್ಲಿ ನಡೆದ ಪ್ರದರ್ಶನಗಳಲ್ಲಿ ಕರ್ಣಪರ್ವದ ಕರ್ಣ, ಕೃಷ್ಣ ಸಂಧಾನದ ಕೃಷ್ಣ, ಕೀಚಕ ವಧೆಯ ಕೀಚಕ, ರಾಮಪಟ್ಟಾಭಿಷೇಕದ ದಶರಥ, ಭೀಷ್ಮವಿಜಯದ ಭೀಷ್ಮ-ಅಂಬೆ, ಮೀನಾಕ್ಷಿ ಕಲ್ಯಾಣದ ಮೀನಾಕ್ಷಿ, ಗದಾಯುದ್ಧದ ಕೌರವ, ಕಂಸವಧೆಯ ಕಂಸ ಮುಂತಾದ ಪಾತ್ರ ನಿರ್ವಹಿಸುವ ಮೂಲಕ ಆಸಕ್ತರ ಗಮನಸೆಳೆದಿದ್ದಾರೆ. ಕಲಾಕ್ಷೇತ್ರದಲ್ಲಿನ ಪ್ರದರ್ಶನಗಳ ಕುರಿತು ಕೆಳಕಂಡಂತೆ ತಮ್ಮ ಅಭಿಪ್ರಾಯಗಳನ್ನು ನೀಡಿದ್ದಾರೆ.

1. **ನಗರೀಕರಣ ಯಕ್ಷಗಾನದಂತಹ ಸಾಂಪ್ರದಾಯಿಕ ಕಲೆಯ ಮೇಲೆ ಬೀರುವ ಪ್ರಭಾವವೆಂತಹುದು?** ತಿಳಿಸಿ.

ಅಜಿತೇಶ ಹೆಗಡೆ : ನಗರೀಕರಣದ ಮುಖ್ಯ ಫಲಿತ ಧಾವಂತ. ಸ್ಪರ್ಧೆ ಹಾಗೂ ವೇಗವೇ ಇಲ್ಲಿ ಪ್ರಧಾನ. ಈಚೆಗೆ ಯಕ್ಷಗಾನ ಕಲೆಯಲ್ಲೂ ಇವುಗಳು ಕಾಣಿಸುತ್ತಿವೆ. ಕಾಲಮಿತಿ ಪ್ರದರ್ಶನ ಬಂದಿರುವುದು ಇದರ ಫಲವಾಗಿಯೇ. ಪ್ರತಿಯೊಂದು ಕಲೆಗೂ ಅದರದೇ ಆದ ನಡೆ, ವೇಗ ಇರುತ್ತದೆ. ನಿಧಾನಗತಿಯೇ ಯಕ್ಷಗಾನದ ನಡೆ ಎಂಬುದು ನನ್ನ ಅಭಿಮತ. ಹಾಗೇ ಇದ್ದಾಗಲೇ ಅದು ಚೆಂದವಾಗುತ್ತದೆ. ನಗರೀಕರಣದಿಂದ ನಿಧಾನಗತಿ ನಾಶವಾಗುತ್ತಿದೆ. ಎಲ್ಲೆಡೆಯೂ ಅಬ್ಬರ, ವೇಗವಾದ ನರ್ತನ, ಹಾವಭಾವ, ಮಾತುಗಳು ವಿಜೃಂಭಿಸುತ್ತಿವೆ. ಧಾವಂತ ಗೋಚರಿಸುತ್ತಿದೆ. ಕಲಾಕ್ಷೇತ್ರದಲ್ಲಿ ನಡೆಯುವ ಪ್ರದರ್ಶನಗಳು ಇದಕ್ಕೆ ಹೊರತಾಗಿಲ್ಲ. ಸಾಂಪ್ರದಾಯಿಕ ಯಕ್ಷಗಾನದ ಸೊಗಸು ರವೀಂದ್ರ ಕಲಾಕ್ಷೇತ್ರದ ಪ್ರದರ್ಶನದಲ್ಲಿ ಅಷ್ಟಾಗಿ ಕಂಡುಬರುತ್ತಿಲ್ಲ. ಈ ಬಗ್ಗೆ ಕಲಾವಿದರು, ಸಂಘಟಕರು ಚಿಂತಿಸಬೇಕಾಗಿದೆ.

2. ಯಕ್ಷಗಾನ ಕಲೆಯನ್ನು ಉಳಿಸಿ ಬೆಳೆಸುವಲ್ಲಿ ರವೀಂದ್ರ ಕಲಾಕ್ಷೇತ್ರದ ಪಾತ್ರ ಎಂತಹುದು?

ಅಜಿತೇಶ ಹೆಗಡೆ : ಕಲಾಕ್ಷೇತ್ರ ಯಕ್ಷಗಾನದ ಪಾಲಿಗೆ ಅತ್ಯುತ್ತಮ ಸಭಾಭವನ. ಇಲ್ಲಿನ ಪ್ರೇಕ್ಷಕರಲ್ಲಿ ವೈವಿಧ್ಯವಿದೆ. ಎಲ್ಲಾ ವರ್ಗದ ಪ್ರೇಕ್ಷಕರು ಇಲ್ಲಿ ಇರುತ್ತಾರೆ. ವಿದ್ಯಾವಂತ ಅವಿದ್ಯಾವಂತರೆಂಬ ಭೇದವಿಲ್ಲ. ಸಾಫ್ಟ್‌ವೇರ್ ಇಂಜಿನಿಯರ್, ಹೋಟೆಲ್ ಮಾಣಿ, ಹೋಟೆಲ್ ಮಾಲೀಕರು, ಬ್ಯಾಂಕ್ ಅಧಿಕಾರಿ, ಉದ್ಯೋಗಿ, ಅಡಿಗೆಯವರು, ಫ್ಯಾಕ್ಟರಿಯ ಕೆಲಸದವರು, ಉದ್ಯಮಿಗಳು, ವೈದ್ಯರು, ಲೆಕ್ಕಪರಿಶೋಧಕರು ಎಲ್ಲರನ್ನು ಇಲ್ಲಿ ಕಾಣಬಹುದು. ಕರಾವಳಿ, ಮಲೆನಾಡಿನ ಜನರು ತಿಟ್ಟುಗಳ ಭೇದವಿಲ್ಲದೆ ಯಕ್ಷಗಾನವನ್ನು ಸವಿಯುತ್ತಾರೆ. ಹೀಗಾಗಿ ಕಲೆಯ ಪಾಲಿಗೆ ಮುಖ್ಯವಾದ ಸಭಾಭವನ ಇದು.

3. ರವೀಂದ್ರ ಕಲಾಕ್ಷೇತ್ರದೊಂದಿಗಿನ ನಿಮ್ಮ ಅನುಭವವನ್ನು ಹಂಚಿಕೊಳ್ಳಬಹುದೇ?

ಅಜಿತೇಶ ಹೆಗಡೆ : ಹವ್ಯಾಸಿ ಕಲಾವಿದನಾಗಿ ರವೀಂದ್ರ ಕಲಾಕ್ಷೇತ್ರದ ಪ್ರದರ್ಶನದಲ್ಲಿ ಸಂತೋಷಗೊಂಡಿದ್ದೇನೆ. ಅದು ಖುಷಿ ಕೊಟ್ಟಿದೆ. ಹಿರಿಯ ಕಲಾವಿದರೊಂದಿಗೆ ಆ ವೇದಿಕೆಯಲ್ಲಿ ಹೆಜ್ಜೆ ಹಾಕುವಾಗ ಹೆಮ್ಮೆ ಅನ್ನಿಸುತ್ತದೆ. ಬೆಂಗಳೂರು ನಗರದಲ್ಲಿ ಯಕ್ಷಗಾನವನ್ನು ಉಳಿಸಿ ಬೆಳೆಸುವಲ್ಲಿ ಇದರ ಪಾತ್ರ ಹಿರಿದು. ಸಂಘಟಕನಾಗಿ ನಮ್ಮಂತಹ ಹವ್ಯಾಸಿ ಸಂಘಗಳ ಪ್ರದರ್ಶನಕ್ಕೂ ಕಲಾಕ್ಷೇತ್ರ ಸಿಕ್ಕಿದರೆ ಬಹಳ ಒಳ್ಳೆದಾಗುತ್ತಿತ್ತು. ಆದರೆ ಹವ್ಯಾಸಿಗಳ ಪ್ರದರ್ಶನ ಹೆಚ್ಚಾಗಿ ಹಗಲು ಇಲ್ಲವೇ ಸಂಜೆ ನಡೆಯುವುದರಿಂದ ಕಲಾಕ್ಷೇತ್ರವನ್ನು ನಚ್ಚಿಕೊಳ್ಳುವುದು ಕಷ್ಟವಾಗುತ್ತದೆ. ಸರಕಾರಿ ಕಾರ್ಯಕ್ರಮ ಬಂದು ಪ್ರದರ್ಶನ ನಡೆಯುವುದು ರದ್ದಾದರೆ ಎಂಬ ಭಯದಿಂದ ಯಾರೂ ಅದನ್ನು ನಂಬಿಕೊಳ್ಳುವುದಿಲ್ಲ. ಉಳಿದ ಸಭಾಭವನಗಳಲ್ಲಿ ಹೀಗಾಗುವುದಿಲ್ಲ. ಈ ಕಾರಣ ಆಡಳಿತ ಮಂಡಳಿಯವರು ಈ ಕುರಿತು ಮರುಚಿಂತನೆ ನಡೆಸಬೇಕೆಂಬುದೇ ನನ್ನ ಕೋರಿಕೆ. ಆ ಮೂಲಕ ಹವ್ಯಾಸಿ ಯಕ್ಷಗಾನ ಸಂಘಗಳನ್ನು ಪ್ರೋತ್ಸಾಹಿಸಬೇಕೆಂಬುದೇ ನನ್ನ ವಿನಂತಿ.

4. ಇಲ್ಲಿ ಪ್ರದರ್ಶನಗಳನ್ನು ನೋಡುವ ಪ್ರೇಕ್ಷಕರಾಗಿ ನಿಮ್ಮ ಅಭಿಮತವೇನು?

ಅಜಿತೇಶ ಹೆಗಡೆ: ಕಲಾಕ್ಷೇತ್ರದ ಪ್ರದರ್ಶನಗಳಲ್ಲಿ ಅತಿರಂಜಕತೆ ಹೆಚ್ಚು. ಮೊದಲೇ ಹೇಳಿದಂತೆ ಕಮರ್ಷಿಯಲ್ ಅಂಶಗಳು ಹೆಚ್ಚಾಗಿ ಕಾಣಿಸುತ್ತಿವೆ. ಅಬ್ಬರ, ವೇಗ ಜಾಸ್ತಿ. ಕಲೆಯನ್ನು ಆಸ್ವಾದಿಸಲು ನಿಧಾನಗತಿ ಬೇಕು. ಇದಕ್ಕೆ ಕಲಾವಿದನಾದವನು

ಸಾಧನೆ ಮಾಡಬೇಕು. ಕೇವಲ ಹೆಜ್ಜೆಗಾರಿಕೆ ಮಾತು ಕಲಿತವರನ್ನು ಸೇರಿಸಿಕೊಂಡ ವಿಭಿನ್ನದೃಶ್ಯಗಳನ್ನು ಪೋಣಿಸಿ ಮಾಡುವ ಪ್ರದರ್ಶನದಿಂದ ಯಕ್ಷಗಾನ ಕಲೆಗೆ ಲಾಭವಾಗುವುದಿಲ್ಲ. ಪ್ರೇಕ್ಷಕನಿಗೂ ಉಪಯೋಗವಾಗುವುದಿಲ್ಲ. ಕಲಾಕ್ಷೇತ್ರದಲ್ಲೇ ಅದನ್ನು ಮರೆತುಬಿಡುತ್ತಾನೆ. ಅದರ ಬದಲು ಕಲಾವಿದರಾದವರು ಪ್ರಸಂಗದ ಪಾತ್ರದ ಅಂತರ್ಯವನ್ನು ಅರಿತು, ತಪಸ್ಸಿನ ರೀತಿ ಧೇನಿಸಿ, ಅಭ್ಯಾಸ ಮಾಡಿ ಶ್ರಮಪಟ್ಟು ಕರಗತ ಮಾಡಿಕೊಂಡು ಪ್ರದರ್ಶನದಲ್ಲಿ ಭಾಗಿಯಾದರೆ ಕಲೆಯ ಬೆಳವಣಿಗೆ ಸಾಧ್ಯ. ಇದಕ್ಕಾಗಿ ರವೀಂದ್ರ ಕಲಾಕ್ಷೇತ್ರದ ಪ್ರದರ್ಶನಗಳಿಗೆ Watch Dog (ಕಾವಲು ಸಮಿತಿ) ಮಾದರಿಯ ವ್ಯವಸ್ಥೆ ಇದ್ದು, ಕಲಾವಿದರಿಗೆ ತಿಳಿಹೇಳುವ ಹಿರಿಯರಿದ್ದರೆ ಈ ಕಲಾಪ್ರಕಾರದ ಬೆಳವಣಿಗೆ ಸಾಧ್ಯ. ಆಗ ಇಡೀ ರಾಜ್ಯವೇ ಬೆಂಗಳೂರಿನ ಕಡೆ ತಿರುಗಿ ನೋಡುತ್ತದೆ. ಇದೇ ಮಾದರಿಯಾಗಿ ಕರಾವಳಿ, ಮಲೆನಾಡು ಪ್ರದೇಶದಲ್ಲಿ ಮಾತ್ರವಲ್ಲ ಉಳಿದೆಲ್ಲೆಡೆ ಸುಧಾರಿತ ಯಕ್ಷಗಾನ ಬರಲು ಸಾಧ್ಯ ಎಂಬುದು ನನ್ನ ನಿಲುವು. ಸಾಧಕರಿಗೆ, ವ್ಯವಸಾಯಿಗಳಿಗೆ ಹಾಗೂ ಹವ್ಯಾಸಿಗಳಿಗೆ ಸರಕಾರದ ಪ್ರೋತ್ಸಾಹ ಸಮಾನವಾಗಿ ಲಭಿಸಬೇಕು. ಕಲೆ ಉಳಿಯುವುದು ಸಾಧಕರಂತಹವರ ಶ್ರಮದಿಂದ. ರವೀಂದ್ರ ಕಲಾಕ್ಷೇತ್ರ ಪಾತ್ರಧಾರಿಗಳಿಗೆ, ಪ್ರೇಕ್ಷಕರಿಗೆ ಅನಕೂಲ ಮಾಡಿಕೊಟ್ಟಿದೆ. ಆದರೆ ಸಾಧಕ ವರ್ಗವನ್ನು ಪೋಷಿಸಲು ಕೂಡ ಅದು ಮುಂದೆ ಬರಬೇಕು. ಅಲ್ಲಿನ ಸಂಸರಂಗ ಮಂದಿರ ಕೂಡ ಯಕ್ಷಗಾನದ ಬೆಳವಣಿಗೆಯಲ್ಲಿ ಸಹಕರಿಸಿದೆ. ಯಕ್ಷಗಾನ ಕಲಿಯಲು ಅಲ್ಲಿ ನಿರಂತರ ವ್ಯವಸ್ಥೆ ಮಾಡಿದರೆ ಸಾಧಕರಾಗುವವರಿಗೆ ಉತ್ತಮ. ಈ ನಿಟ್ಟಿನಲ್ಲಿ ಯೋಜಿಸಬೇಕಾಗಿದೆ.

ಸಂದರ್ಶನ :ಅಜಿತೇಶ ಹೆಗಡೆ ಸಾಗರ

ಯಕ್ಷಗಾನ ತಪಸ್ಸಂಗ, ದೇವಗಿರಿ ದೇವಸ್ಥಾನದ ಸಮೀಪ,
ಬನಶಂಕರಿ 2ನೇ ಹಂತ, ಬೆಂಗಳೂರು – 70
ಮೊ. 98440 12298

ನಮ್ಮ ಹೆಮ್ಮೆಯ ಸುಂದರ ಕಲಾದೇಗುಲ

–ಮಂಟಪ ಪ್ರಭಾಕರ ಉಪಾಧ್ಯ
(ಸಂದರ್ಶನ)

ಕಲಾಪರಂಪರೆಯ ಹಿನ್ನೆಲೆಯುಳ್ಳ ಮನೆತನದಿಂದ ಬಂದ ಮಂಟಪ ಪ್ರಭಾಕರ ಉಪಾಧ್ಯರು ಯಕ್ಷಗಾನ ರಂಗದಲ್ಲಿ ಸದಾ ಬೆಳವಣಿಗೆಗೆ ಹೊಂದುತ್ತಿರುವ ಸೃಜನಶೀಲ ಕಲಾವಿದರು. ಸ್ತ್ರೀ ಪಾತ್ರ ನಿರ್ವಹಣೆಯಲ್ಲಿ ಅಪ್ರತಿಮ ಸಾಧನೆ ಮಾಡಿ ತಮ್ಮದೇ ಆದ 'ಏಕವ್ಯಕ್ತಿ' ಪ್ರದರ್ಶನದ ಮೂಲಕ ನಾಡಿನಲ್ಲಿ ಮಾತ್ರವಲ್ಲ ಹೊರನಾಡಿನಲ್ಲೂ ಖ್ಯಾತಿ ಗಳಿಸಿದವರು. ಬಾಲ್ಯದಲ್ಲೇ ಯಕ್ಷಗಾನ ಕಲೆಯ ಸೆಳೆತಕ್ಕೆ ಸಿಕ್ಕ ಇವರು 1975ರಲ್ಲಿ ಉಡುಪಿ ಕಲಾಕೇಂದ್ರದಲ್ಲಿ ತರಬೇತಿಗೆ ಸೇರಿ, ಅಲ್ಲಿನ ಗುರುಗಳಾದ ನೀಲಾವರ ರಾಮಕೃಷ್ಣಯ್ಯನವರಿಂದ ಮೆಚ್ಚುಗೆ ಪಡೆದವರು. ಕೆರೆಮನೆ ಮಹಾಬಲ ಹೆಗಡೆಯವರ ಮಾರ್ಗದರ್ಶನದಲ್ಲಿ 1976ರಲ್ಲಿ ಪುನರ್ ಸಂಘಟನೆಗೊಂಡ ಕಮಲಶಿಲೆಯ ಮೇಳದ ಪ್ರಾರಂಭಿಕ ಕಾಲದ 'ಕಾಲಮಿತಿ ಪ್ರದರ್ಶನ'ದಲ್ಲಿ ಮುಖ್ಯ ಸ್ತ್ರೀ ಪಾತ್ರಧಾರಿಯಾಗಿ 'ಯಕ್ಷಗಾನ' ರಂಗಕ್ಕೆ ಕಾಲಿಟ್ಟರು. ಮುಂದೆ ಕಾಳಿಂಗ ನಾವಡರ ಭಾಗವತಿಕೆ ಇರುವ 'ಪೆರ್ಡೂರು ಮೇಳ' ಅನಂತರ ಶಂಭು ಹೆಗಡೆಯವರ ನಾಯಕತ್ವದ 'ಇಡಗುಂಜಿ ಮೇಳ'ದ ಮುಖ್ಯ ಸ್ತ್ರೀ ಪಾತ್ರಧಾರಿಯಾಗಿ ಅಪಾರ ಜನಪ್ರಿಯತೆ ಗಳಿಸಿದರು. ಮುಂದೆ ವೃತ್ತಿ ರಂಗಭೂಮಿ ತ್ಯಜಿಸಿ, ಬೆಂಗಳೂರಿಗೆ ಬಂದು ಐಸ್‌ಕ್ರೀಂ ಉದ್ಯಮ ಸ್ಥಾಪಿಸಿ ಅದರಲ್ಲಿ ತೊಡಗಿಕೊಂಡರು. ಆದರೂ ಯಕ್ಷಗಾನದ ಸೆಳೆತದಿಂದ ಹೊರಗುಳಿಯಲಾಗಲಿಲ್ಲ. 1980 ರಿಂದ 1990ರ ವರೆಗೆ ಬೆಂಗಳೂರಿನ ಅನೇಕ ಪ್ರದರ್ಶನಗಳಲ್ಲಿ ಅತಿಥಿ ಕಲಾವಿದರಾಗಿ ಭಾಗವಹಿಸಿ, ಬೆಂಗಳೂರಿನ ಯಕ್ಷಗಾನ ಅಭಿಮಾನಿಗಳ ಕಣ್ಮಣಿಯಾದರು. ಪುರಭವನ ಹಾಗೂ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಅಸಂಖ್ಯ ಪ್ರದರ್ಶನಗಳಲ್ಲಿ ಸ್ತ್ರೀ ಪಾತ್ರಧಾರಿಯಾಗಿ ಮಂಟಪರು ಮಿಂಚಿದವರು. ಮುಂದೆ ಸ್ವಲ್ಪ ಕಾಲ ಬಚ್ಚಗಾರು ಮೇಳದ ಅತಿಥಿ ಕಲಾವಿದರಾಗಿದ್ದರೂ ಯಾವ ಕಟ್ಟುಪಾಡಿಗೂ ಒಳಗಾಗದವರು. ಆಗ ಪ್ರಬುದ್ಧ

ಕಲಾವಿದನಾಗಿ ಬೆಳೆಯಬೇಕೆಂಬ ಇವರ ತುಡಿತಕ್ಕೆ ನೀರೆರೆದವರು ಶತಾವಧಾನಿ ಡಾ॥ ಆರ್. ಗಣೇಶ್ ಅವರು. ಅವರ ಕಲ್ಪನೆಯ ಕೂಸಾದ 'ಏಕವ್ಯಕ್ತಿ' ಯಕ್ಷಗಾನಕ್ಕೆ ಬಣ್ಣದ ಕುಲಾವಿಯನ್ನು ತೊಡಿಸಿದವರು ಮಂಟಪ ಪ್ರಭಾಕರ ಉಪಾಧ್ಯರು. 2000ರಲ್ಲಿ ವಿದ್ಯುಕ್ತವಾಗಿ ಲೋಕಾರ್ಪಣೆಗೊಂಡ ಏಕವ್ಯಕ್ತಿ 'ಭಾಮಿನಿ'ಯ ಮೂಲಕ ಕಾಣಿಸಿಕೊಂಡ ಮಂಟಪರು ಅಲ್ಲಿಂದ ಹಿಂದೆ ತಿರುಗಲೇ ಇಲ್ಲ. ಸಾವಿರದ ಐನೂರಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡಿರುವ 'ಏಕವ್ಯಕ್ತಿ' ಯಕ್ಷಗಾನದ 'ಹರಿಕಾರ'ರಾಗಿ ಮಂಟಪರು ನೆಲೆನಿಂತಿದ್ದಾರೆ. ಕಲಾಕ್ಷೇತ್ರವು ಅವರ ಕಲಾಕಾಣಿಕೆಗೆ ಇಂಬನ್ನು ಕೊಟ್ಟಿದೆ. ಅವರನ್ನು ಬೆಳೆಸುವಲ್ಲಿ ಸಹಕರಿಸಿದೆ. ಈ ಕಾರಣ ಅವರ ಆಶಯದ ನುಡಿಗಳು ಮಹತ್ವಿಕೆ ಪಡೆದಿವೆ.

- ಯಕ್ಷಗಾನದ ವಿವಿಧ ಪ್ರಾಕಾರಗಳಲ್ಲಿ ಒಂದಾದ ಪಡುವಲಪಾಯ (ಹಾಗೆಂದು ವಿದ್ವಾಂಸರು ಕರೆಯುವ) ಯಕ್ಷಗಾನದಲ್ಲಿನ ಬಡಗುತಿಟ್ಟಿನ ಕಲಾವಿದ ನಾನು. ನಮ್ಮ ಕಾಲದಲ್ಲೇ ಕಲೆ ನಮ್ಮ ಬೆಳವಣಿಗೆ ಮೀರಿ ಬದಲಾಗಿದೆ. ಬದಲಾವಣೆ ಪ್ರಕೃತಿ ನಿಯಮ. ಮಾಧ್ಯಮದಿಂದಾಗಿ, ಜಾಗತೀಕರಣದಿಂದಾಗಿ, ಬದುಕಿನ ರೀತಿನೀತಿಯಿಂದಾಗಿ, ಅವಶ್ಯಕತೆಯಿಂದಾಗಿ, ವೃತ್ತಿಪ್ರವೃತ್ತಿಗಳ ಸಂಘರ್ಷದಿಂದಾಗಿ, ಹಲವು ಕಲೆಗಳ ಸಾಕಾರದಿಂದಾಗಿ ಬದಲಾವಣೆ ದಾಂಗುಡಿ ಇಟ್ಟಿದೆ. ಹೀಗೆ ಒಂದಿಲ್ಲೊಂದು ಕಾರಣಗಳಿಂದ ಬದಲಾವಣೆ ಆಗಿದೆ. ಬದಲಾವಣೆಗಳೂ ಈ ಕಲೆಯನ್ನು ಬೆಳೆಸಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಬದಲಿಸಿ ಕೊಳ್ಳದ ಇತರ ಯಕ್ಷಗಾನ ಪ್ರಕಾರಗಳು ಬರಿಸಲಾರದಷ್ಟು ಅವನತಿಯಲ್ಲಿ ಇರುವುದನ್ನು ಕಾಣುತ್ತಿದ್ದೇವೆ. ಆ ಮಟ್ಟಿಗೆ ನಮ್ಮ ಪಡುವಲಪಾಯದ ತೆಂಕು-ಬಡಗು ತಿಟ್ಟುಗಳು ಬಲಿಷ್ಠವಾಗಿವೆ. ಅನೇಕ ಕಲಾವಿದರ, ವಿದ್ವಾಂಸರ, ಸಂಘಟಕರ, ರಸಿಕರ ಕೊಡುಗೆ ಗಣನೀಯವಾಗಿದೆ. ಇನ್ನು ಮುಂದೆ ಇದನ್ನು ಕಾಪಾಡಬೇಕೆಂಬ ಆಲೋಚನೆಯೂ ಈ ಜಾಗತೀಕರಣದ ಸಮಯದಲ್ಲಿ ಅನಿವಾರ್ಯವಾಗಿದೆ. ರಂಜನೆಯ ಜೊತೆಗೆ ಸಂಸ್ಕಾರವನ್ನು ನೆನಪಿಸುವಂತಹ ಎಲ್ಲಾ ಬದಲಾವಣೆಗಳು ಸ್ವಾಗತಾರ್ಹ ಎಂಬುದು ನನ್ನ ನಿಲುವು.

- ನಗರೀಕರಣದ ವೇಗದಲ್ಲಿ ಕಲಾನುಭವ ಹೊಂದಲು, ಅಲೌಕಿಕತೆಯ ಭಾವ ಅನುಭವಿಸಲು ಒಂದು ಸುಂದರವಾದ ತಾಣ ನಮ್ಮ 'ರವೀಂದ್ರ ಕಲಾಕ್ಷೇತ್ರ'. ಇದರ ಮಡಿಲಲ್ಲಿ ಬೆಳೆಯುವ ಮಕ್ಕಳಿಗೆ ತಾಯಿಯಂತೆ ಇರುವುದು ಕಲಾಕ್ಷೇತ್ರ.

ಯಕ್ಷಗಾನವು ಒಂದು ಮಗು. ಆ ಮಗುವಿಗೆ ಕಲಾಕ್ಷೇತ್ರ ಆಸರೆಯಾಗಿದೆ. ಅದೇ ರೀತಿ ಎಷ್ಟೋ ಕಲಾವಿದರನ್ನು ಈ ಕಲಾಕ್ಷೇತ್ರ ಬೆಳೆಸಿದೆ. ವಿಭಿನ್ನ ಮಾಧ್ಯಮದ ಅಸಂಖ್ಯ ಕಲಾವಿದರು ಇಲ್ಲಿ ಪ್ರದರ್ಶನ ನೀಡಿ ಕಲಾ ಉತ್ತುಂಗಕ್ಕೆ ಏರಿದ್ದಾರೆ. ತಾರಾವರೌಲ್ಯ ಗಳಿಸಿದ್ದಾರೆ. ಕಲಾಕ್ಷೇತ್ರ ಅವರಿಗೆಲ್ಲ ಚಿಮ್ಮುಹಲಗೆಯಾಗಿದೆ ಎಂಬುದು ಒಪ್ಪತಕ್ಕ ಮಾತೇ ಆಗಿದೆ.

❖ 1977 ರಿಂದ, ಅಂದರೆ 40 ವರ್ಷಗಳಿಂದ ಕಲಾಕ್ಷೇತ್ರದ ರಂಗಸ್ಥಳದಲ್ಲಿ ಕುಣಿದವನು ನಾನು. ಹಲವು ಪ್ರದರ್ಶನಗಳಲ್ಲಿ ಭಾಗಿಯಾಗಿದ್ದ ನನಗೆ ಪ್ರಾರಂಭದಲ್ಲಿ ನನ್ನ ಯೋಗ್ಯತೆ ಮೀರಿದ ಸಭಾಭವನ ಅದು ಅನ್ನಿಸುತ್ತಿತ್ತು. ಆದುದರಿಂದ ಧನ್ಯತೆಯೊಂದೇ ಆಗುವ, ಇರುವ ಭಾವ. ನಮ್ಮ ಏಕವ್ಯಕ್ತಿ ಪ್ರಯೋಗಗಳೂ ಸಾಕಷ್ಟು ಇಲ್ಲಿ ನಡೆದಿವೆ. ಬೆಳೆಯುತ್ತಾ ಇರುವ ಕಲಾವಿದ, ಹಲವು ಅವಶ್ಯಕತೆಗಳನ್ನು ಪೂರೈಸುವ ವ್ಯವಸ್ಥೆ ಉಳ್ಳ ರವೀಂದ್ರ ಕಲಾಕ್ಷೇತ್ರವನ್ನು ಬಯಸುವುದು ಕೂಡ ಸತ್ಯವಾಗಿದೆ. ಒಬ್ಬ ಕಲಾವಿದನ ಎಲ್ಲಾ ಶಕ್ತಿಯನ್ನು ಎಲ್ಲ ಪ್ರೇಕ್ಷಕರಿಗೆ ತಲುಪುವ ವ್ಯವಸ್ಥೆ ಈ ವೇದಿಕೆಯಲ್ಲಿರುವುದು ಇದರ ವಿಶೇಷತೆ. ಇಲ್ಲಿಗೆ ಬರುವ ಪ್ರೇಕ್ಷಕರ ಅಭಿರುಚಿ ಉತ್ತಮವಾಗಿದೆ.

❖ ರವೀಂದ್ರ ಕಲಾಕ್ಷೇತ್ರದಲ್ಲಿ ಪಾತ್ರಧಾರಿಯಾಗುವುದೇ ಒಂದು ಪ್ರತಿಷ್ಠೆಯಾಗುತ್ತಿದ್ದ ನನಗೆ ತೃಪ್ತಿಯಾಗುವಂತಹ ಪ್ರದರ್ಶನಗಳನ್ನು ನೀಡಿದ್ದೇನೆ. ಇಡಗುಂಜಿ ಮೇಳದ ಕಲಾವಿದನಾಗಿ, ಸಾಲಿಗ್ರಾಮ ಮೇಳದ ಕಲಾವಿದನಾಗಿ, ಅಮೃತೇಶ್ವರಿ ಮೇಳದ ಅತಿಥಿ ಕಲಾವಿದನಾಗಿ ಅನೇಕ ಪ್ರಸಂಗಗಳಲ್ಲಿ, ಅದರಲ್ಲೂ ಮುಖ್ಯವಾಗಿ ನಳದಮಯಂತಿ, ಸುಹಾಸಿನಿ, ಕೃಷ್ಣಸಂಧಾನ, ಹರಿಶ್ಚಂದ್ರ, ಚಂದ್ರಹಾಸ ಮುಂತಾದವುಗಳಲ್ಲಿ ಸ್ತ್ರೀಪಾತ್ರಧಾರಿಯಾಗಿ ಈ ರಂಗಸ್ಥಳದಲ್ಲಿ ಅಭಿನಯಿಸಿರುವುದು ತೃಪ್ತಿ ತಂದಿದೆ. ಬಚ್ಚಗಾರು ಮೇಳದ ಅತಿಥಿ ಕಲಾವಿದನಾಗಿದ್ದಾಗ ಚಿಟ್ಟಾಣಿ ರಾಮಚಂದ್ರ ಹೆಗಡೆಯಂತಹ ಅಭಿಜಾತ ಪ್ರತಿಭಾವಂತ ಕಲಾವಿದರೊಂದಿಗೆ ಜೊತೆ ವೇಷಧಾರಿಯಾಗಿ ಕಲಾಕ್ಷೇತ್ರದಲ್ಲಿ ನಡೆದ ಭಸ್ಮಾಸುರ ಮೋಹಿನಿ, ಚಿತ್ರಾಕ್ಷಿ ಪರಿಣಯ, ರಾಜಾ ಉಗ್ರಸೇನ, ಭೀಷ್ಮವಿಜಯ ಇವೆಲ್ಲವೂ ಖ್ಯಾತಿ ಗಳಿಸಿಕೊಟ್ಟಿವೆ. ಆಗ ನಾನು ಭರತ ನಾಟ್ಯವನ್ನು ಕಲಿತು ಬಂದದ್ದರಿಂದ ಇಲ್ಲಿನ ನೃತ್ಯ ಸನ್ನಿವೇಶಕ್ಕೆ ಉತ್ತಮ ಪ್ರತಿಕ್ರಿಯೆ ಮೂಡಲು ಈ ರಂಗಸ್ಥಳವೇ ಕಾರಣವಾಗಿದೆ. ಬೆಳಕಿನ ವ್ಯವಸ್ಥೆ ಕೂಡ ಉತ್ತಮವಾಗಿದೆ. ಈ ವೃತ್ತಿಮೇಳಗಳಲ್ಲದೆ ಹಲವು ಸಂಘಟನೆಗಳು ನಡೆಸಿದ ಪ್ರದರ್ಶನಗಳಲ್ಲಿ

ಭಾಗವಹಿಸಿ ಸಂತೋಷಗೊಂಡಿದ್ದೇನೆ. ಬೆಂಗಳೂರಿಗರೇ ಆಗಿರುವ ನಮ್ಮಂತಹವರ ಪಾಲಿಗೆ ರವೀಂದ್ರ ಕಲಾಕ್ಷೇತ್ರವು 'ನಮ್ಮ ಹೆಮ್ಮೆ'.

❖ ಒಂದಷ್ಟು ಕಾಲ ಯಕ್ಷಗಾನಕ್ಕೆ ಅದರಲ್ಲೂ ರಾತ್ರಿಯ ಪ್ರದರ್ಶನಗಳಿಗೆ ಕಲಾಕ್ಷೇತ್ರ ಅವಕಾಶ ಕೊಡಬಾರದೆಂಬ ನಿಯಮ ಕಲಾವಿದನಾಗಿ ನನಗೆ ತುಂಬಾ ನೋವನ್ನು ಕೊಟ್ಟಿತ್ತು. ಕಲೆಗಳಲ್ಲಿನ ತಾರತಮ್ಯ ನನ್ನೊಳಗೆ ರೋಷ ಹುಟ್ಟಿಸಿತ್ತು. ತಪ್ಪುಗಳಿಗೆ ಶಿಕ್ಷೆಯ ದಂಡವನ್ನು ಒಪ್ಪುವವನು ನಾನು. ಆದರೆ ಕಲೆಗೆ ಅಥವಾ ಕಲಾಮಾಧ್ಯಮಕ್ಕೆ ದಂಡವನ್ನು ಒಪ್ಪದವನು. ಕೆಲವು ಕಾಲದ ನಂತರ ಹಲವು ಗಣ್ಯ ಕಲಾವಿದರ ಮಧ್ಯಪ್ರವೇಶದಿಂದ ಇವೆಲ್ಲವು ಸರಿಯಾಯಿತು ಎನ್ನುವುದು ನೆಮ್ಮದಿಯ ಸಂಗತಿ. ಈಗ ಮಳೆಗಾಲದಲ್ಲಿ ಚಂಡೆ ಸದ್ದು ಅಲ್ಲಿ ಮೊಳಗುತ್ತಾ ಇರುತ್ತದೆ. ಅದೇ ಸಂತೋಷ ಕೊಡುತ್ತಿದೆ.

❖ ಕಲಾಕ್ಷೇತ್ರದ ಆವರಣವೇ ಸುಂದರ. ವಿಶಾಲವಾದ ಪರಿಸರವೇ ಕಲಾ ಮನಸ್ಸನ್ನು ಅರಳಿಸುವ, ನಗರದ ಜಂಜಾಟದಿಂದ ಬಿಡುಗಡೆಗೊಳಿಸುವ ಸ್ಥಳ. ಬೆಂಗಳೂರು ನಗರಕ್ಕಿಂತಲೂ ರಾಜ್ಯದ ಎಲ್ಲಾ ಕಡೆಯ ಕಲಾವಿದರಿಗೆ ಒಮ್ಮೆ ಇಲ್ಲಿ ಪ್ರದರ್ಶನ ಕೊಡಬೇಕೆಂಬ ಆಸೆ ಹುಟ್ಟಿಸುವಂತಿದೆ. ಕಲಾಕ್ಷೇತ್ರದ ಪ್ರತಿಷ್ಠೆ ಉಳಿದಿದೆ. ನಮ್ಮ 'ಏಕವ್ಯಕ್ತಿ' ಅಸಂಖ್ಯ ಪ್ರದರ್ಶನಗಳನ್ನು ಕಂಡಿದೆ. ಕಲಾಕ್ಷೇತ್ರದ 'ನೆನಪಿನೋಕುಳಿ' ಕಾರ್ಯಕ್ರಮದಲ್ಲಿ ಕೂಡ 'ಏಕವ್ಯಕ್ತಿ ಯಕ್ಷಗಾನ' ನಡೆದಿತ್ತು. ಶತಾವಧಾನಿ ಡಾ॥ ಆರ್. ಗಣೇಶ್ ಅವರ ಮಾರ್ಗದರ್ಶನದಲ್ಲಿ ಅರಳಿದ 'ಭಾಮಿನಿ', ಯಕ್ಷದರ್ಪಣ ಮುಂತಾದ ಪ್ರಸಂಗಗಳು ನಾನು ಮೊದಲೇ ಹೇಳಿದ ಬದಲಾವಣೆಯ ಗಾಳಿಗೆ ಮೈಯೊಡ್ಡಿ ಹೊರಬಂದಂತಹವುಗಳು. ಸಂಪ್ರದಾಯವನ್ನು ಮೀರದ, ಸಂಸ್ಕಾರವನ್ನು ತರುವ ಇಂತಹ ಪ್ರಯೋಗಗಳು ಹಾಗೂ ಪ್ರದರ್ಶನಗಳು ಬೆಂಗಳೂರು ರಸಿಕರ ಮನಸೆಳೆದಿವೆ. ಯುಗಳ ಯಕ್ಷಗಾನವೆಂಬ ಪರಿಕಲ್ಪನೆಯಲ್ಲಿ ಅರಳಿದ 'ವಿಜಯ ವಿಲಾಸ'ದಲ್ಲಿ ಉಲೂಪಿ, ಚಿತ್ರಾಂಗದೆ, ಸುಭದ್ರೆಯರ ಪಾತ್ರವನ್ನು ನಾನು ಮಾಡಿದರೆ, ಕೊಂಡದಕುಳಿ ರಾಮಚಂದ್ರ ಹೆಗಡೆಯವರು ಅರ್ಜುನನ ಪಾತ್ರವನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಯಶಸ್ವಿಗೊಳಿಸಿದ್ದರು. ಅದೇ ರೀತಿ ನಳದಮಯಂತಿ, ಮಂಥರೆಯ ಪ್ರಸಂಗಗಳು ಇಲ್ಲಿ ಪ್ರದರ್ಶನ ಕಂಡಿವೆ. ಕೊಂಡದಕುಳಿ ಮಾತ್ರವಲ್ಲದೆ ಚಪ್ಪರಮನೆ, ಡಾ॥ ಸುಂದರಿ ಸಂತಾನಂ ಅವರು ಕೂಡ ಬೆಂಗಳೂರಿನ ಸಹೃದಯರಿಗೆ ಈ ಪ್ರದರ್ಶನಗಳ ಮೂಲಕ ಪರಿಚಿತರಾಗಿದ್ದಾರೆ. ವಿದ್ವಾನ್ ಗಣಪತಿ ಭಟ್‌ರ ಹಾಡು, ಅನಂತ ಪದ್ಮನಾಭ ಪಾಠಕ್ ಅವರ ಮದ್ದಲೆ, ಇಡಗುಂಜಿ

ಕೃಷ್ಣಯಾಜಿಯವರ ಚಂಡೆ ಈ ಎಲ್ಲಾ ಯಶಸ್ಸಿನ ಹಿನ್ನೆಲೆಯಲ್ಲಿ ಇದೆ ಎಂಬುದು ಕೂಡ ಗಮನಾರ್ಹ.

❖ ಕಲೆಗೆ ಮಾನದಂಡ ಇರಲಾರದು. ಇರುವುದೂ ಇಲ್ಲ. ಕಲೆ ಒಂದು ಪರ್ವತ, ಏರು ತಗ್ಗು, ತುದಿ ಬುಡ, ಎಲ್ಲದರಿಂದಲೂ ಸುಂದರ. ಹಾಗೆಯೇ ಕಲಾಕ್ಷೇತ್ರ ಕಲಾಜಗತ್ತಿನ ಪರ್ವತ. ಇಲ್ಲಿ ಎಲ್ಲರಿಗೂ ಪ್ರವೇಶ. ಜಾತಿ–ಮತ–ಲಿಂಗಭೇದವಿಲ್ಲ. ಕಲಾಕುಸುಮಗಳು ಪ್ರದರ್ಶನಗಳ ಗುಣಮಟ್ಟ ಅಳೆಯದ –ಅಳೆಯಬಾರದ ವಿಶಾಲ ದೇಗುಲ. ಅದನ್ನು ಕಾಪಾಡುವುದು ಅದರಿಂದ ಉಪಕೃತವಾಗುವುದು ಪ್ರೇಕ್ಷಕನ ಹೊಣೆ. ಎಂದೂ ಇಂದೂ ಅಚಲವಾಗಿ ಸುಂದರವಾಗಿ ಆಕರ್ಷಿಸುತ್ತಿರುವ 'ರವೀಂದ್ರ ಕಲಾಕ್ಷೇತ್ರ ಐವತ್ತು' ನಮ್ಮ ಕಲಾಜಗತ್ತಿನ ಸ್ಮರಣೀಯ ಸ್ಮರಣೆ.

ಮಂಟಪ ಪ್ರಭಾಕರ ಉಪಾಧ್ಯರ ಮಾತಿನಲ್ಲಿ ರವೀಂದ್ರ ಕಲಾಕ್ಷೇತ್ರದ ಬಗ್ಗೆ ಧನ್ಯತೆ ಭಾವ ಇದೆ. ಬಡಗುತಿಟ್ಟಿನ ಪ್ರದರ್ಶನಗಳಲ್ಲಿ ಸ್ತ್ರೀವೇಷಗಳ ಮೂಲಕ ತಮ್ಮದೇ ಆದ ಛಾಪನ್ನು ಮೂಡಿಸಿದವರು ಅವರು. ಅವರ ಹಾಗೂ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಚಿಟ್ಟಾಣಿ ರಾಮಚಂದ್ರ ಹೆಗಡೆ ಅವರ 'ಭಸ್ಮಾಸುರ ಮೋಹಿನಿ' ಬೆಂಗಳೂರು ರಸಿಕರ ಪಾಲಿಗೆ ಮರೆಯಲಾರದ್ದು. ಅದೇ ರೀತಿ 'ಭೀಷ್ಮ ವಿಜಯ'ದ ಅಂಬೆ ಪಾತ್ರ ಇವರಿಗೆ ಯಶಸ್ಸು ತಂದುಕೊಟ್ಟಿದೆ. ಈ ಶತಮಾನದ ಯಕ್ಷಗಾನದ ನೂತನ ಆವಿಷ್ಕಾರವಾದ 'ಏಕವ್ಯಕ್ತಿ ಯಕ್ಷಗಾನ' ಮಂಟಪರನ್ನು ಯಕ್ಷಗಾನದ ಇತಿಹಾಸದಲ್ಲಿ ಚಿರಕಾಲ ಉಳಿಸುವಂಹದು. ಎಲ್ಲಕ್ಕಿಂತ ಮುಖ್ಯವಾಗಿ ಕೂಚುಪುಡಿ ಗ್ರಾಮದಲ್ಲಿ ನಡೆದ ಕಲಾಉತ್ಸವದಲ್ಲಿ ಪ್ರದರ್ಶಿತವಾದ 'ವಿಜಯ ವಿಲಾಸ'ದಲ್ಲಿನ ಇವರ ಕಲಾಭಿವ್ಯಕ್ತಿಗೆ ಕೂಚುಪುಡಿಯ ಪ್ರಸಿದ್ಧ ಕಲಾವಿದರಾದ ಪದ್ಮಶ್ರೀ ವೇದಾಂತ ಸತ್ಯನಾರಾಯಣ ಶರ್ಮ ಅವರು ಇವರಿಗೆ ಕನಕ ಪುಷ್ಪಾಭಿಷೇಕ ಮಾಡಿದ್ದು ಯಕ್ಷಗಾನಕ್ಕೆ ಇವರ ಮೂಲಕ ಸಂದ ವಿಶೇಷ ಗೌರವವಾಗಿದೆ. ಇವರ ಕಲಾವಿಕಾಸಕ್ಕೆ ಬೆಂಗಳೂರಿನ ಕಲಾಕ್ಷೇತ್ರವು ಕೊಡುಗೆ ನೀಡಿದೆ ಎಂಬುದು ಗಮನಾರ್ಹ.

ಸಂದರ್ಶನ :ಮಂಟಪ ಪ್ರಭಾಕರ ಉಪಾಧ್ಯ

ಏಕವ್ಯಕ್ತಿ ಖ್ಯಾತಿಯ ಸ್ತ್ರೀಪಾತ್ರಧಾರಿ
ಮಂಟಪ ಐಸ್‌ಕ್ರೀಂ, ನಂ.4, ಕೆ.ಜಿ. ಸರ್ಕಲ್,
ಬೆಂಗಳೂರು – 560009; ಮೊ. 94498 23232

ಯಕ್ಷ ಕ್ಷೇತ್ರ - ಕಲಾಕ್ಷೇತ್ರ

–ತಾರಾನಾಥ ವರ್ಕಾಡಿ

(ಸಂದರ್ಶನ)

ಯಕ್ಷಗಾನದ ಹೆಚ್ಚಿನ ಕಲಾವಿದರು ಯಕ್ಷಗಾನ ಕಲೆಗೆ ಮಾತ್ರ ಬದ್ಧರಾಗಿದ್ದು ಬೇರೆ ವಿಚಾರದ ಕಡೆಗೆ ಗಮನಹರಿಸುವುದೇ ಇಲ್ಲ. ಆದರೆ ಇದಕ್ಕೆ ಅಪವಾದವಾಗಿ ಇರುವವರು ತೆಂಕುತಿಟ್ಟಿನ ಪ್ರಸಿದ್ಧ ಕಲಾವಿದರಾದ ಶ್ರೀ ತಾರಾನಾಥ ವರ್ಕಾಡಿಯವರು. ಯಕ್ಷಗಾನದ ಖ್ಯಾತ ಕಲಾವಿದರಾಗಿ ಮಾತ್ರವಲ್ಲದೆ ತಾಳಮದ್ದಲೆಯ ಅರ್ಥಧಾರಿಯಾಗಿ, ಪತ್ರಕರ್ತರಾಗಿ, ಕವಿಯಾಗಿ, ಕತೆಗಾರರಾಗಿ, ವೈಚಾರಿಕ ಲೇಖಕರಾಗಿ ಎಲ್ಲಕ್ಕಿಂತ ಮುಖ್ಯವಾಗಿ ಪ್ರಸಂಗಕಾರರಾಗಿ ಪ್ರಸಿದ್ಧರಾದವರು ವರ್ಕಾಡಿಯವರು. ಕನ್ನಡದಲ್ಲಿ ಮಾತ್ರವಲ್ಲದೆ ತುಳುಭಾಷೆಯಲ್ಲೂ ಕೃಷಿ ಮಾಡಿ ಕೇರಳ ತುಳು ಅಕಾಡೆಮಿ ಪ್ರಶಸ್ತಿ ಗಳಿಸಿದವರು. ವೃತ್ತಿ ಯಕ್ಷಗಾನ ರಂಗಭೂಮಿಯಲ್ಲಿ 34 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿ ಅಲ್ಲಿಂದ ನಿವೃತ್ತಿ ಹೊಂದಿ, ಕಳೆದ ಏಳು ವರ್ಷಗಳಿಂದ 'ಬಲ್ಲಿರೇನಯ್ಯ' ಎಂಬ ಯಕ್ಷಗಾನ ಮಾಸಪತ್ರಿಕೆಯೊಂದರ ಸಂಪಾದಕರಾಗಿ ನಾಡಿನ ಉದ್ದಗಲಕ್ಕೆ ಹೆಸರು ಮಾಡಿದ್ದಾರೆ.

1963ರಲ್ಲಿ ಜನಿಸಿದ ತಾರಾನಾಥ ವರ್ಕಾಡಿಯವರು ತಮ್ಮ ಹದಿನಾರನೆಯ ವಯಸ್ಸಿನಲ್ಲಿ ಸುಂಕದಕಟ್ಟೆ ಮೇಳದ ಕಲಾವಿದರಾಗಿ ಯಕ್ಷಗಾನ ರಂಗ ಪ್ರವೇಶಿಸಿದರು. ಧರ್ಮಸ್ಥಳದ ಯಕ್ಷಗಾನ ಕಲಾ ಕೇಂದ್ರದಲ್ಲಿ ತರಬೇತಿ ಪಡೆದ ಇವರು ಕನ್ನಡದಲ್ಲಿ ಸ್ನಾತಕೋತ್ತರ ಪದವೀಧರರು. ಇವರಿಗೆ ಕುಣಿತದ ಗುರುಗಳಾಗಿ ಒದಗಿದವರು ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕೆ. ಗೋವಿಂದ ಭಟ್ ಹಾಗೂ ಕರ್ಗಲ್ಲು ವಿಶ್ವೇಶ್ವರ ಭಟ್ ಅವರು. ಅರ್ಥಗಾರಿಕೆಗೆ ಗುರುಗಳಾದವರು ಕೊರ್ಗಿ ವೆಂಕಟೇಶ ಉಪಾಧ್ಯರು, ಪ್ರಸಂಗರಚನೆಗೆ ಮಾರ್ಗದರ್ಶನ ನೀಡಿದವರು ಡಾ॥ ಸೀಮಂತೂರು ನಾರಾಯಣ ಶೆಟ್ಟಿಯವರು. ಹೀಗೆ ಪ್ರಸಿದ್ಧ ಗುರುಗಳ

ಮಾರ್ಗದರ್ಶನದಿಂದಾಗಿ ಎಲ್ಲ ರಂಗದಲ್ಲೂ ಮಿಂಚುವಂತಾಯಿತು. ವೃತ್ತಿ ಜೀವನದಲ್ಲಿ ಧರ್ಮಸ್ಥಳ ಶ್ರೀ ಮಂಜುನಾಥೇಶ್ವರ ಕೃಪಾಪೋಷಿತ ಯಕ್ಷಗಾನ ಮಂಡಳಿಯಲ್ಲಿ ಸುದೀರ್ಘ 27 ವರ್ಷಗಳ ಸೇವೆ ಸಲ್ಲಿಸಿದ್ದಾರೆ. ಇದಲ್ಲದೆ ಕದ್ರಿ, ನಂದಾವರ, ಆರುವ, ಬಪ್ಪನಾಡು ಮೇಳಗಳಲ್ಲೂ ತಿರುಗಾಟ ನಡೆಸಿದ್ದಾರೆ. ಹೀಗೆ ವೈವಿಧ್ಯಮಯ ಅನುಭವ, ಆಸಕ್ತಿ ಹಿನ್ನೆಲೆ ಉಳ್ಳ ವರ್ಕಾಡಿಯವರು ರವೀಂದ್ರ ಕಲಾಕ್ಷೇತ್ರದಲ್ಲೂ ಯಕ್ಷಗಾನ ಪಾತ್ರಧಾರಿಯಾಗಿ ಕಣ್ಮನ ಸೆಳೆದವರು. ಅವರ ಅಂತರಂಗದ ದನಿ ಇಲ್ಲಿ ಮಾರ್ದನಿಗೊಂಡಿದೆ.

❖ ಮಂಗಳೂರಿನ ಪುರಭವನದಂತೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ ಯಕ್ಷಗಾನದ ಖಾಯಂ ಕಲ್ಯಾಣ ಮಂಟಪ. ತಮ್ಮ ಹಣದ ಅವಶ್ಯಕತೆಗೆ ಕಲಾವಿದರು ನಡೆಸುವ ಸಹಾಯಾರ್ಥ ಪ್ರದರ್ಶನಗಳಿಂದ ಹಿಡಿದು ದೊಡ್ಡ ದೊಡ್ಡ ಶ್ರೀಮಂತರ ಕಾರ್ಯಕ್ರಮಗಳ ತನಕ ಅನೇಕ ವೈವಿಧ್ಯಮಯ ಕಾರ್ಯಕ್ರಮಗಳಾಗುವ ಈ ಪ್ರತಿಷ್ಠಿತ ರಂಗ ಮಂದಿರ ಕಲಾ ಕಾರ್ಯಕ್ರಮಗಳಿಗೆ ಅತ್ಯಂತ ಪ್ರಶಸ್ತ ತಾಣ. ಹೆಚ್ಚಾಗಿ ನಾಟಕಗಳೇ ನಡೆಯುತ್ತಿದ್ದ ಈ ರಂಗಮಂದಿರ ಇಂದು ಯಕ್ಷಗಾನದ ಪ್ರಸಿದ್ಧ ಪ್ರೇಕ್ಷಕ ಮಂದಿರವಾಗಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಐವತ್ತು ವರ್ಷಗಳನ್ನು ಪೂರೈಸಿರುವ ಈ ಕಲಾಕ್ಷೇತ್ರಕ್ಕೆ ಕಲಾವಿದರೆಲ್ಲರ ಪರವಾಗಿ ನಮ್ಮ ಮನದಾಳದ ಅಭಿನಂದನೆಗಳು.

❖ ಬೆಂಗಳೂರು ಮಹಾನಗರದಲ್ಲಿ ಯಕ್ಷಮಾತೆ ಎಂದು ಹೆಜ್ಜೆಯೂರಿದಳೋ ಗೊತ್ತಿಲ್ಲ. ಪಾವಂಜೆ ಶಿವರಾಮಭಟ್ಟರ ಅಭಿಪ್ರಾಯವನ್ನು ಆಧರಿಸಿ ಹೇಳುವುದಾದರೆ ಅವರೇ ಮೊದಲು ಬೆಂಗಳೂರಿಗೆ ತೆಂಕುತಿಟ್ಟು ಯಕ್ಷಗಾನವನ್ನು ಒಯ್ದವರು. ಇನ್ನೂ ಕೆಲವು ಹಿರಿಯ ತಲೆಗಳ ಮಾತನ್ನು ಕೇಳಿದರೆ ಅದಕ್ಕೂ ಮುನ್ನ ಕೆಲವು ತೆಂಕುತಿಟ್ಟಿನ ಆಟಗಳು ಆಗಿರಬಹುದೆಂದು ಗ್ರಹಿಸಬಹುದು. 1960ರ ಹೊತ್ತಿಗೆ ಕುಬಣೂರು ಬಾಲಕೃಷ್ಣ ರಾಯರ ತಂಡ ಬೆಂಗಳೂರಿನ ಆಕಾಶವಾಣಿಯಲ್ಲಿ ತಾಳಮದ್ದಲೆ ಕಾರ್ಯಕ್ರಮ ನೀಡಲು ತೆರಳಿತ್ತು. ಆಗ ಬೆಂಗಳೂರಿನಲ್ಲಿ ತಾಳಮದ್ದಲೆ ಕಾರ್ಯಕ್ರಮ ನಡೆಸಿದ್ದರು ಎಂಬುದು ಕೇಳಿಪಟ್ಟ ವಿಚಾರ. ಪದ್ಮಾನಂದ ಗುರೂಜಿ, ಟಿ. ಕೇಶವಭಟ್, ವಿಶುಕುಮಾರ್, ರಾಧಾಕೃಷ್ಣ ಕಲ್ಯಾಣಪುರ ಮುಂತಾದವರೆಲ್ಲ ಅವರಿಗೆ ಸಹಕರಿಸಿದ್ದರಂತೆ. ಹೀಗೆ ತೆಂಕುತಿಟ್ಟು ಯಕ್ಷಗಾನದ ಬೆಂಗಳೂರಿನ ನಂಟನ್ನು ಗುರುತಿಸಬಹುದು.

- ಆ ಕಾಲದಲ್ಲಿ ಇಲ್ಲಿನ ಹೋಟೆಲ್‌ನ ಉದ್ಯಮಿಗಳು ಯಕ್ಷಗಾನಕ್ಕೆ ಪ್ರೋತ್ಸಾಹ ನೀಡುತ್ತಿದ್ದರು. ಬೆಂಗಳೂರಿನಲ್ಲಿ ಮಹಿಳಾ ಮೇಳದ ಬೀಜ ಬಿತ್ತಿದವರು ಅಕ್ಕಾಣಿಯಮ್ಮ. ಅನಂತರ ಅನೇಕ ಕಲಾವಿದರು ತಯಾರಾದರು. ಇಂದು ಕರಾವಳಿಯಷ್ಟೇ ಹೆಚ್ಚು ಆಟಗಳು ಬೆಂಗಳೂರಿನಲ್ಲಿ ನಡೆಯುತ್ತಿವೆ. ವೃತ್ತಿಪರರ ಹೆಚ್ಚಿನ ಆಟಗಳು ನಡೆಯುವುದು ರವೀಂದ್ರ ಕಲಾಕ್ಷೇತ್ರದಲ್ಲಿ. ಈಗ ಹವ್ಯಾಸಿಗಳ ಪ್ರದರ್ಶನಗಳು ಕೂಡ ಎಲ್ಲಾ ಬಡಾವಣೆಗಳಲ್ಲಿ ನಡೆಯುತ್ತಿವೆ. ನಾನು ಮೊದಲಿಗೆ ಬೆಂಗಳೂರಿನಲ್ಲಿ ಪೆರ್ಡೂರು ಮೇಳದವರ 'ರಾವಣ ವಧೆ'ಯಲ್ಲಿ ರಾಮನಾಗಿ ಭಾಗವಹಿಸಿದ್ದೆ. ಅದೇ ರೀತಿ ಐಬಿಎಮ್‌ನಲ್ಲಿ ನಡೆದ ಪ್ರದರ್ಶನದಲ್ಲಿ ಸುಧನ್ವನಾಗಿಯೂ ಪಾತ್ರವಹಿಸಿದ್ದೆ. ಆಗ ತೆಂಕುತಿಟ್ಟಿನ ಕಲಾವಿದರ ತಂಡವನ್ನು ಬೆಂಗಳೂರಿನ ಪ್ರದರ್ಶನಕ್ಕೆ ಸಂಘಟಿಸುತ್ತಿದ್ದವರು ಶ್ರೀ ನಯನ್‌ಕುಮಾರ್ ಅವರು. ಅವರ ಸಂಘಟನೆಯ 'ರಂಭಾ ರೂಪರೇಖೆ'ಯಲ್ಲಿ ವೀರ ಮಣಿಯಾಗಿ ಇಂದ್ರಜಿತು ಕಾಳಗದಲ್ಲಿ ರಾಮನಾಗಿ, ಕೃಷ್ಣಲೀಲೆಯ ವಸುದೇವನಾಗಿ, ವಿಶ್ವಾಮಿತ್ರ ಮೇನಕೆಯಲ್ಲಿ ಮನ್ಮಥನಾಗಿ, ಪಾರಿಜಾತದಲ್ಲಿ ಕೃಷ್ಣನಾಗಿ, ಶ್ವೇತ ಕುಮಾರ ಚರಿತೆಯಲ್ಲಿ ಶ್ವೇತಕುಮಾರನಾಗಿ ಮೇಧಿ ನಿರ್ಮಾಣದಲ್ಲಿ ದೂಮ್ರಾಕ್ಷನಾಗಿ ಅಭಿನಯಿಸಿದ್ದೇನೆ. ಕಲಾಕ್ಷೇತ್ರದ ಎಲ್ಲಾ ಪ್ರದರ್ಶನಗಳು ನನಗೆ ಮುದ ನೀಡಿವೆ. ನನ್ನೊಂದಿಗೆ ಕುಂಬಳೆ ಸುಂದರರಾವ್ ಅವರು, ಕೆ. ಗೋವಿಂದ ಭಟ್‌ರು ನಯನಕುಮಾರ್ ಅವರು ಸಹಕಲಾವಿದರಾಗಿದ್ದರು.

- ರವೀಂದ್ರ ಕಲಾಕ್ಷೇತ್ರಕ್ಕೂ ಯಕ್ಷಗಾನವೆಂದರೆ ತುಂಬಾ ಇಷ್ಟ. ಅನ್ಯಾನ್ಯ ಕಾರಣಗಳಿಂದಾಗಿ ರವೀಂದ್ರ ಕಲಾಕ್ಷೇತ್ರವನ್ನು ಆಟದವರಿಗೆ ಕೊಡುವುದಿಲ್ಲ ಎಂಬ ಅಭಿಪ್ರಾಯ ಬಂತಾದರೂ ರವೀಂದ್ರರ ಕ್ಷೇತ್ರ ಯಕ್ಷಗಾನವನ್ನು ಬಿಡಲಿಲ್ಲ. ಅದು ಕವಿ ರವೀಂದ್ರರ ಆತ್ಮ ವ್ಯಾಪಿಸಿದ ತಾಣವಲ್ಲವೇ? ಪ್ರಾಚೀನ - ಅರ್ವಾಚೀನ ಕಾವ್ಯ ಸಾಹಿತ್ಯಗಳನ್ನು ತನ್ನ ಒಡಲಲ್ಲಿರಿಸಿ ವಾಚಿಕ ಸಮಾರಾಧನೆಯನ್ನು ನೀಡುವ ಯಕ್ಷಗಾನ ರವೀಂದ್ರ ಕಲಾಕ್ಷೇತ್ರದಿಂದ ದೂರವಾದರೆ ಕರ್ನಾಟಕಕ್ಕೆ ಅವಮಾನ?

- ನಾನೂ ಅನೇಕ ಬಾರಿ ಕಲಾಕ್ಷೇತ್ರದಲ್ಲಿ ಯಕ್ಷಗಾನ ತಾಳಮದ್ದಲೆಯ ಅರ್ಥಧಾರಿಯಾಗಿ ಭಾಗವಹಿಸಿದ್ದೇನೆ. ಕುಂಬಳೆ ಸುಂದರರಾವ್, ಕೆ. ಗೋವಿಂದಭಟ್, ಪ್ರಭಾಕರ ಜೋಷಿ ಮುಂತಾದವರ ಜೊತೆಯಲ್ಲಿ ಅರ್ಥ

ಹೇಳುವ ಅವಕಾಶ ಲಭಿಸಿತ್ತು. ಕಲಾಕ್ಷೇತ್ರದಲ್ಲಿ ಕೃಷ್ಣಸಂಧಾನದ ವಿದುರನಾಗಿ ಅರ್ಥ ಹೇಳಿದ್ದು ಇನ್ನೂ ನೆನಪಿದೆ. ಯಕ್ಷಗಾನ ಬಯಲಾಟ ಅಕಾಡೆಮಿಯ ಸದಸ್ಯನಾದ ಮೇಲಂತೂ ಮುಖ್ಯ ಅತಿಥಿಯಾಗಿ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ. ಸಭಾ ಕಾರ್ಯಕ್ರಮವಿರಲಿ, ತಾಳಮದ್ದಲೆ ಇರಲಿ, ಆಟವೇ ಇರಲಿ ಕಲಾಕ್ಷೇತ್ರದ ಸೊಗಸು ಬೇರೆ ಕಲಾಮಂದಿರಕ್ಕೆ ಬರಲಾರದು. ಇಲ್ಲಿ ಬರುವ ಶ್ರೋತೃಗಳು, ಪ್ರೇಕ್ಷಕರೂ ಕೂಡ ಸುಸಂಸ್ಕೃತರು. ಒಳ್ಳೆಯ ಕಲಾಪ್ರದರ್ಶನ ನೀಡಿದ ತೃಪ್ತಿ ಬರುತ್ತದೆ. ವಿಶೇಷವೆಂದರೆ ಕಲಾಕ್ಷೇತ್ರದ ವೇದಿಕೆಯಲ್ಲಿ ತೆಂಕು-ಬಡಗುತಿಟ್ಟುಗಳೆರಡರಲ್ಲೂ ಪಾತ್ರ ನಿರ್ವಹಿಸಿದ್ದೇನೆ. ಬಹಳ ಹುರುಪು ತುಂಬುವ ವೇದಿಕೆ ಇದು.

- ❖ ಕರಾವಳಿಯ ಯಕ್ಷಗಾನವನ್ನು ಬೆಂಗಳೂರಿನಲ್ಲಿ ಬೆಳೆಸುವಲ್ಲಿ ಕರಾವಳಿಗರ ಪಾತ್ರ ಬಹಳ ದೊಡ್ಡದು. ಇದರೊಂದಿಗೆ ರವೀಂದ್ರ ಕಲಾಕ್ಷೇತ್ರದ ಪಾತ್ರವೂ ಮಹತ್ವದ್ದು ಎಂದು ಹೇಳಲೇಬೇಕಾಗುತ್ತದೆ. ಪ್ರದರ್ಶನವನ್ನು ಸಂಘಟಿಸುವವರ ಕೈಗೆಟುಕುವಂತೆ ಕಲಾಕ್ಷೇತ್ರ ಸಿಗದೇ ಇರುತ್ತಿದ್ದರೆ ಇಷ್ಟೊಂದು ಆಟಗಳು ನಡೆಯುತ್ತಿರಲಿಲ್ಲ. ಇನ್ನೊಂದು ಬೆಳವಣಿಗೆಯೆಂದರೆ ಬೆಂಗಳೂರು ಬೇರೆ ಬೇರೆ ಭಾಗದಲ್ಲಿ ಯಕ್ಷಗಾನ ಪ್ರದರ್ಶನಗಳು ನಡೆಯುತ್ತಿವೆ. ಪುತ್ತೂರು ಶ್ರೀಧರ ಭಂಡಾರಿಯವರು ಕೂಡ ಅತಿಥಿ ಕಲಾವಿದರ ಕೂಡುವಿಕೆಯೊಂದಿಗೆ ಯಕ್ಷಗಾನ ಪ್ರದರ್ಶನವನ್ನು ಆಯೋಜಿಸುತ್ತಿದ್ದಾರೆ. ಎಡನೀರು ಮಠದ ಶ್ರೀಗಳವರ ಬೆಂಗಳೂರು ಚಾತುರ್ಮಾಸ್ಯದ ಸಂದರ್ಭದಲ್ಲಿ ಹದಿನೈದು ದಿನಗಳು ಇಲ್ಲೇ ಇದ್ದು ಬೇರೆ ಬೇರೆ ಪೌರಾಣಿಕ ಪ್ರಸಂಗಗಳನ್ನು ಪ್ರದರ್ಶಿಸಿದ ಸಂದರ್ಭದಲ್ಲಿಯೂ ಭಾಗಿಯಾಗಿದ್ದೆ. ಹೀಗೆ ಬೆಂಗಳೂರಿನ ಎಲ್ಲಾ ವರ್ಗದ ಪ್ರೇಕ್ಷಕರಿಗೂ ಈ ಕಲೆಯ ಸಾರವನ್ನು ತಿಳಿಸುವ, ಆ ಮೂಲಕ ರಂಜಿಸುವ, ಯಕ್ಷಗಾನವು ಸಾರುವ ಮಹತ್ತರ ಜೀವನ ಸಂದೇಶವನ್ನು ಬಿತ್ತರಿಸುವ ಕಾಯಕ ಮಾಡಲು ಸಾಧ್ಯವಾಗಿದೆ. ಹವ್ಯಾಸಿಗಳು ಕೂಡ ನಮ್ಮ ಕಾರ್ಯಕ್ರಮಗಳಿಗೆ ಇಲ್ಲಿ ಪ್ರೋತ್ಸಾಹ ಕೊಡುತ್ತಾರೆ.

- ❖ ಮಹಾನಗರದ ಮಧ್ಯದಲ್ಲಿದ್ದರೂ ಅತ್ಯಂತ ಕಡಿಮೆ ಖರ್ಚಿನಲ್ಲಿ ಆಟಗಳನ್ನು ನಿಭಾಯಿಸಬಹುದಾದ ಸಾಧ್ಯತೆ, ವಿಶಾಲವಾದ ಪಾರ್ಕಿಂಗ್ ವ್ಯವಸ್ಥೆ, ವೇದಿಕೆಯ ಪ್ರದರ್ಶನ ಪರಿಣಾಮಕಾರಿಯಾಗಿ ಸಭಾ ಸದರನ್ನು ತಲುಪುವುದು, ಹೆಚ್ಚಿನ

ಸುರಕ್ಷತೆ, ಚೆನ್ನಾದ ವ್ಯವಸ್ಥೆ ಇತ್ಯಾದಿ ಹಲವಾರು ಕಾರಣಗಳಿಂದ ರವೀಂದ್ರ ಕಲಾಕ್ಷೇತ್ರ ಕಲಾವಿದರಿಗೆ ಮತ್ತು ಪ್ರೇಕ್ಷಕರಿಗೆ ಅಚ್ಚುಮೆಚ್ಚು. ಇಲ್ಲಿ ನಡೆಯುವ ಆಟಗಳನ್ನು ನೋಡುವ ಮಜವೇ ಬೇರೆ! ತೆಂಕು-ಬಡಗುತಿಟ್ಟಿನ ಮಹಾ ಕಲಾವಿದರು ಮೆರೆದ, ಮಹಿಳಾ ಕಲಾವಿದೆಯರು ರಂಗಸ್ಥಳ ಹುಡಿ ಹಾರಿಸಿದ, ಬಾಲಕಲಾವಿದರು ಕುಣಿದ ರವೀಂದ್ರ ಕಲಾಕ್ಷೇತ್ರ ಹೊನ್ನ ಹಬ್ಬವನ್ನು ಬಹುಸಂಭ್ರಮದಿಂದ ಆಚರಿಸಿದೆ. ಅದು ಅತ್ಯಂತ ಹರ್ಷದಾಯಕ ವಿಚಾರ. ಈ ಕಲಾಕ್ಷೇತ್ರವು ಯಕ್ಷಕ್ಷೇತ್ರವಾಗಿ ನಿತ್ಯವೂ ರಂಗಸ್ಥಳದ ಮೆರುಗು ಹೆಚ್ಚಿಸುತ್ತಾ ಹೋಗಲಿ ಎಂಬುದು ನಮ್ಮಂತಹ ಕಲಾವಿದರ ಹಾರೈಕೆ.

ತನ್ನ ಸಾಹಿತ್ಯಕ ಶ್ರೀಮಂತಿಕೆಯಿಂದಾಗಿ ಯಕ್ಷಗಾನ ಕಲಾವಿದರಲ್ಲಿ ಎದ್ದುಕಾಣುವ ತಾರಾನಾಥ ವರ್ಕಾಡಿಯವರ ಮಾತುಗಳಲ್ಲಿ ಅಥಂಟಿಸಿಟಿಯಿದೆ. ಅವರು ಕೇವಲ ಯಕ್ಷಗಾನ ಕಲಾವಿದರಲ್ಲ. ಉತ್ತಮ ಪ್ರಸಂಗಕಾರರೂ ಹೌದು. ಅವರ ಆಸ್ತಿಕಪರ್ವ, ಶ್ರೀರಾಮ ಕಾರುಣ್ಯ, ಶಿಲ್ಪಕೌಶಲ, ಪಾದ ಪ್ರತೀಕ್ಷಾ, ತಪೋನಂದನ, ಶ್ವೇತಪಂಚಕ, ಪುಷ್ಪಪೂರ್ಣಮಾ ಮುಂತಾದ ಪ್ರಸಂಗಗಳು ಅಸಂಖ್ಯ ಪ್ರದರ್ಶನಗಳನ್ನು ಕಂಡಿವೆ. ಕನ್ನಡದಲ್ಲಿ ಮಾತ್ರವಲ್ಲದೆ ತುಳುವಿನಲ್ಲೂ ಜನಪ್ರಿಯ ಯಕ್ಷಗಾನ ಪ್ರಸಂಗಗಳನ್ನು ರಚಿಸಿದ್ದಾರೆ. ಪರೆಕದ ಪಿಂಗಾರ, ಸಿಂಧೂರ ತೇಜ, ಗೋಕರ್ಣೆ, ಪೂಜೆರ ತುಳಸಿ, ಕುಂಕುಮದ ಪರಕೆ ಮುಂತಾದವು ಜನಮನವನ್ನು ಗೆದ್ದಿವೆ. ಇವರ ವೈಚಾರಿಕ ಬರಹ "ಕಬ್ಬಿನ ಕೋಲು", ಡಾ॥ ನಾರಾಯಣ ಶೆಟ್ಟರ ಕುರಿತಾದ "ಅಭಿನವ ನಾಗವರ್ಮ" ಮುಂತಾದ ಕೃತಿಗಳು ಇವರನ್ನು ಒಬ್ಬ ಗಂಭೀರ ಲೇಖಕರಾಗುವಂತೆ ಮಾಡಿವೆ. ಇವರ ಸಂಪಾದಕತ್ವದ 'ಬಲ್ಲಿರೇನಯ್ಯ' ಯಕ್ಷಗಾನ ಮಾಸಪತ್ರಿಕೆ ಅಸಂಖ್ಯ ಚಂದಾದಾರರ ಪ್ರೀತಿ ಗಳಿಸಿದೆ. ವೈವಿಧ್ಯಮಯ ಯಕ್ಷಗಾನ ಸಂಬಂಧಿ ಲೇಖನಗಳು ಅಲ್ಲಿ ಪ್ರಕಾಶನಗೊಳ್ಳುತ್ತಿವೆ. ಶತಾವಧಾನ ಹಾಗೂ ಅಷ್ಟಾವಧಾನದ ಕಾರ್ಯಕ್ರಮದಲ್ಲೂ ಭಾಗವಹಿಸಿದ ಹೆಗ್ಗಳಿಕೆ ಇವರದು. ಅನೇಕ ಪ್ರಶಸ್ತಿಗಳು, ಸಮ್ಮಾನಗಳು ಇವರಿಗೆ ಲಭಿಸಿವೆ. ಕೇರಳ ಸರ್ಕಾರದ ತುಳು ಅಕಾಡೆಮಿ ಪ್ರಶಸ್ತಿ, ಕಂದಾವರ ಪ್ರಶಸ್ತಿ, ಜಯರಾಮಶೆಟ್ಟಿ ಪ್ರಶಸ್ತಿ, ಮುಂಬೈ, ದೆಹಲಿ, ಬೆಂಗಳೂರಿನ ಅನೇಕ ಸಂಘ-ಸಂಸ್ಥೆಗಳ ಸಂಮಾನ ಲಭಿಸಿದೆ. ಉಡುಪಿ ಕೃಷ್ಣಮಠ ಎಡನೀರು ಮಠ, ಸುತ್ತೂರು ಮಠ, ರಾಮಚಂದ್ರಪುರ ಮಠ, ಒಡಿಯೂರು ಮಠ ಹೀಗೆ ಅಸಂಖ್ಯ ಮಠಮಾನ್ಯಗಳು ಇವರನ್ನು ಕರೆದು ಗೌರವಿಸಿದೆ. ಹೀಗೆ ವೈವಿಧ್ಯಮಯ ರಂಗಗಳ ಸಹಚರ್ಯ ಹೊಂದಿರುವ, ಅಸಾಮಾನ್ಯ ಪ್ರತಿಭೆಯ ಶ್ರೀ ತಾರಾನಾಥ ವರ್ಕಾಡಿಯವರ 'ಕಲಾಕ್ಷೇತ್ರ

– ಯಕ್ಷಕ್ಷೇತ್ರ'ವಾಗಲಿ ಎಂಬ ಹಾರೈಕೆಯ ಹಿಂದೆ ಯಕ್ಷಗಾನ ಕಲೆಯ ಬಗ್ಗೆ ಇರುವ ಪ್ರಾಮಾಣಿಕ ಕಾಳಜಿಯನ್ನು ಗುರುತಿಸಬಹುದು.

ಸಂದರ್ಶನ :ತಾರಾನಾಥ ವರ್ಕಾಡಿ

ಖ್ಯಾತ ಕಲಾವಿದರು ಹಾಗೂ ಪತ್ರಕರ್ತರು
ಸಂಪಾದಕರು, ಬಲ್ಲಿರೇನಯ್ಯ
ಅಂಚೆ : ಬೆಳ್ಮಣ್ – 576 111, ಕಾರ್ಕಳ ತಾಲ್ಲೂಕು
ದೂರವಾಣಿ : 94497 14612

ಕಲಾಕ್ಷೇತ್ರದಲ್ಲಿ ಮೂಡಿದ ಮೂಡಲಪಾಯ ಪ್ರದರ್ಶನಗಳು

–ಕಲ್ಮನೆ ಎ.ಎಸ್. ನಂಜಪ್ಪ
(ಸಂದರ್ಶನ)

ಕ್ರಿ.ಶ.1480ರ ಸುಮಾರಿಗೆ ರಚಿತವಾದ 'ಕರಿಬಂಟನ ಕಾಳಗ' ಪ್ರಸಂಗದೊಂದಿಗೆ ಐದು ಶತಕಗಳ ಪ್ರಾಚೀನತೆ ಹೊಂದಿರುವ ಮೂಡಲಪಾಯ ಯಕ್ಷಗಾನವು ದಕ್ಷಿಣ ಕರ್ನಾಟಕದ ಹೆಮ್ಮೆಯ ಕಲೆಯಾಗಿದೆ. ಒಂದು ಕಾಲಕ್ಕೆ ದಾವಣಗೆರೆಯಿಂದ ಚಾಮರಾಜನಗರದವರೆಗಿನ ಬಯಲುಸೀಮೆಯಲ್ಲಿ ಅತ್ಯಂತ ಪ್ರಚಲಿತವಿದ್ದು ರಂಜನೆಯೊಂದಿಗೆ ಶಿಕ್ಷಣವನ್ನು ನೀಡುವುದರ ಮೂಲಕ ಜನಜೀವನದ ಅವಿಭಾಜ್ಯ ಅಂಗವಾಗಿತ್ತು. ಮೂಡಲಪಾಯದಲ್ಲಿ ಅರವತ್ತು ವರ್ಷಗಳಿಂದ ಸಕ್ರಿಯರಾಗಿದ್ದು ಅಪಾರ ಜನಾಭಿಮಾನವನ್ನು ಗಳಿಸಿರುವ ಜಾನಪದಶ್ರೀ ಕಲ್ಮನೆ ನಂಜಪ್ಪನವರು ಮುಖ್ಯರು. ತಿಪಟೂರು ತಾಲ್ಲೂಕಿನ ಅರಳುಗುಪ್ಪೆ ಗ್ರಾಮದ ಕಲ್ಮನೆ ಎ.ಎಸ್. ನಂಜಪ್ಪನವರು ತಮ್ಮ ಎಳನೆಯ ವಯಸ್ಸಿನಲ್ಲೇ ಮೂಡಲಪಾಯ ರಂಗಕ್ಕೆ ಧುಮುಕಿದವರು. ಇವರ ತಂದೆ ದಿ. ಕಲ್ಮನೆ ಶಿವನಂಜಪ್ಪನವರು ಮೂಡಲಪಾಯದ ದೇವೇಂದ್ರ, ಚಿತ್ರಕೇತು ಮುಂತಾದ ಪಾತ್ರಗಳ ಮೂಲಕ ಖ್ಯಾತರಾದರೆ ಚಿಕ್ಕಪ್ಪ ಶಿವನಂಜಪ್ಪನವರು ಭಾಗವತರಾಗಿ ಹೆಸರು ಗಳಿಸಿದವರು. ಇವರ ತಾಯಿಯ ತಂದೆ ದಿ. ಮಲ್ಲಿಕಾರ್ಜುನಪ್ಪನವರು ಈ ರಂಗದಲ್ಲಿ ಪಳಗಿದವರು. ಇವರ ಸೋದರಮಾವ ಸಿದ್ದಲಿಂಗಯ್ಯನವರೇ ಬಾಲ್ಯದಲ್ಲಿ ಗುರುಗಳಾಗಿದ್ದರು. ಹೀಗೆ ಕುಟುಂಬದ ಪರಿಸರವೆಲ್ಲ ಮೂಡಲಪಾಯ ರಂಗಭೂಮಿಯಿಂದ ಸುತ್ತುವರಿದಿತ್ತು.

ಕಲ್ಮನೆ ನಂಜಪ್ಪನವರು ತಮ್ಮ ಬಾಲ್ಯದ ದಿನಗಳಲ್ಲಿ ಶಾರದೆ, ಬಾಲಗೋಪಾಲ, ಲಕ್ಷ್ಮಿ ಮುಂತಾದ ಪಾತ್ರಗಳನ್ನು ನಿರ್ವಹಿಸಿ ಮುಂದೆ ದಕ್ಷಬ್ರಹ್ಮ, ರಕ್ತ ಬೀಜಾಸುರ, ಶ್ರೀರಾಮ, ಜಲಂಧರ ಮುಂತಾದ ಪ್ರಮುಖ ವೇಷಗಳನ್ನು ಧರಿಸಿದರು. ಭಾಗವತಿಕೆಯೇ

ಇವರಿಗೆ ಹೆಚ್ಚಾಗಿ ಒಲಿದಿದ್ದು. ಅದರಲ್ಲೇ ಮುಂದೆ ಖ್ಯಾತರಾದರು. ಅರಳುಗುಪ್ಪೆಯಲ್ಲಿ ಶ್ರೀ ಕಲ್ಲೇಶ್ವರಸ್ವಾಮಿ ಮೂಡಲಪಾಯ ಯಕ್ಷಗಾನ ಮಂಡಳಿ ಸ್ಥಾಪಿಸಿ, ನಾಡಿನೆಲ್ಲೆಡೆ ಮೂಡಲಪಾಯ ಪ್ರದರ್ಶಿಸಿ ರಾಜ್ಯದ ಪ್ರಮುಖ ಮೂಡಲಪಾಯ ತಂಡಗಳಲ್ಲಿ ಒಂದಾಗುವಂತೆ ಮಾಡಿದರು. ಈಗ ತಮ್ಮ 81ನೇ ವಯಸ್ಸಿನಲ್ಲೂ ರಂಗದ ಮೇಲೆ ಭಾಗವತರಾಗಿ ನಿಂತು ಗಂಟೆಗಟ್ಲೆ ಹಾಡುವ ಸಾಮರ್ಥ್ಯ ಉಳ್ಳವರು. ಇವರ ಪ್ರೋತ್ಸಾಹದಿಂದ ಇವರ ಗ್ರಾಮದವರು, ಸುತ್ತಲಿನವರು ಮೂಡಲಪಾಯ ಕಲಿತು, ಈಗ ನಾಲ್ಕೈದು ತಂಡಗಳು ಆ ಘಾಸಲೆಯಲ್ಲಿ ಇದ್ದು ಕನಿಷ್ಠ ತಿಂಗಳಿಗೆ 3–4 ಪ್ರದರ್ಶನಗಳು ಏರ್ಪಡುತ್ತಿವೆ. ಇವರ ಮಾರ್ಗದರ್ಶನದಲ್ಲಿ ಪುಟ್ಟಸ್ವಾಮಿ, ಸಿದ್ಧಲಿಂಗಯ್ಯ, ಲಕ್ಷ್ಮಣಯ್ಯ, ಶಂಕರಯ್ಯ, ನಾಗರಾಜು ಮುಂತಾದ ಯುವಕರು ಮೂಡಲಪಾಯ ಕಲಿತು ಪ್ರದರ್ಶನದಲ್ಲಿ ಯಶಸ್ವಿಯಾಗಿದ್ದಾರೆ. ಕಲ್ಮನೆ ನಂಜಪ್ಪನವರ ಶ್ರೀ ಕಲ್ಲೇಶ್ವರ ಸ್ವಾಮಿ ಮೂಡಲಪಾಯ ಯಕ್ಷಗಾನ ಮಂಡಳಿ ಬೆಂಗಳೂರಿನಲ್ಲಿ ಸಾಕಷ್ಟು ಪ್ರದರ್ಶನ ನೀಡಿದ್ದು ಹೆಸರು ಮಾಡಿದೆ. ರವೀಂದ್ರ ಕಲಾಕ್ಷೇತ್ರದ ಐವತ್ತು ವರ್ಷಗಳ ಕಾಲದಲ್ಲಿ 20ಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡಿದ್ದಾರೆ. ಕಲಾಕ್ಷೇತ್ರದ ಸುವರ್ಣ ಸಂಭ್ರಮದ ಈ ಸಂದರ್ಭದಲ್ಲಿ ಮೂಡಲಪಾಯದ ಬೆಳವಣಿಗೆಯ ಬಗ್ಗೆ ಹಾಗೂ ಕಲಾಕ್ಷೇತ್ರದ ಸಂಬಂಧದ ಬಗ್ಗೆ ಇವರ ಅಭಿಪ್ರಾಯಗಳು, ಅನಿಸಿಕೆಗಳು ಮೌಲಿಕವಾದದ್ದು. ಜಾನಪದಶ್ರೀ ಪ್ರಶಸ್ತಿ ಪುರಸ್ಕೃತರಾಗಿರುವ ನಂಜಪ್ಪನವರಿಗೆ ಪ್ರಶಸ್ತಿಗಳ ಸರಮಾಲೆಯೇ ಲಭಿಸಿದೆ.

 ಗ್ರಾಮೀಣ ಪ್ರದೇಶದ ಮೂಡಲಪಾಯದಂತಹ ಕಲೆಯ ಪ್ರದರ್ಶನಕ್ಕೆ ಬೆಂಗಳೂರು ಮಹಾನಗರದ ರವೀಂದ್ರ ಕಲಾಕ್ಷೇತ್ರವು ವೈಭವದ ಸಭಾಂಗಣವಿದ್ದಂತೆ. ಕಲಾವಿದರಿಗೆ ಇಲ್ಲಿ ಪ್ರದರ್ಶನ ನೀಡುವುದು ಹೆಮ್ಮೆಯ ವಿಷಯ. ಸಾಕಷ್ಟು ಪ್ರದರ್ಶನಗಳನ್ನು ಇಲ್ಲಿ ಕಲ್ಲೇಶ್ವರ ಸ್ವಾಮಿ ತಂಡ ನಡೆಸಿಕೊಟ್ಟಿದೆ. ಹೆಚ್ಚಾಗಿ ದೇವಿಮಹಾತ್ಮೆ, ಶಿವಜಲಂಧರ, ರತಿಕಲ್ಯಾಣ, ಕುಶ–ಲವರ ಕಾಳಗ ಮುಂತಾದ ಪ್ರಸಂಗಗಳ ಪ್ರದರ್ಶನವಾಗಿದೆ. ಕಳೆದ ಸಾಲಿನ 'ನೆನಪಿನೋಕುಳಿ' ಕಾರ್ಯಕ್ರಮದ ಅಂಗವಾಗಿ ನಮ್ಮ ತಂಡ ಮೊದಲ ದಿನ 'ಶ್ರೀದೇವಿ ಮಹಾತ್ಮೆ' ಪ್ರದರ್ಶಿಸಿತ್ತು. ಅಂದು ರಕ್ತ ಬೀಜಾಸುರನಾಗಿ ಎ.ಎನ್. ವಿರೂಪಾಕ್ಷಯ್ಯ ನಾರದನಾಗಿ ಎ.ಎನ್. ಜಗದೀಶ್, ದೇವಿಯಾಗಿ ವಸಂತಕುಮಾರ್, ದೇವೇಂದ್ರನಾಗಿ ರಾಜಪ್ಪ, ಮಹಿಷಾಸುರನಾಗಿ ವಿ.ಆರ್. ನಂದೀಶ್, ಸುಗ್ರೀವನಾಗಿ ಎ.ಜಿ. ನಾಗರಾಜ್, ಕುಸುಮ ಮಾಲಿನಿಯಾಗಿ ಸೋಮಲಾಪುರದ ಶರತ್, ಶುಕ್ರಾಚಾರಿಯಾಗಿ ಪುನಿತ್‌ಕುಮಾರ್, ಚಂಡ–

ಚಾಮುಂಡರಾಗಿ ಬಸವರಾಜ್-ಅರುಣಕುಮಾರ್, ಸಾರಥಿಯಾಗಿ ಪ್ರಕಾಶ ಮುಂತಾದವರು ಮುಮ್ಮೇಳದಲ್ಲಿದ್ದರು. ಹಿಮ್ಮೇಳದ ಭಾಗವತಿಕೆಯಲ್ಲಿ ಸ್ವತಃ ನಾನೇ ಇದ್ದು, ಮಲ್ಲೇಶ್, ವೀರಭದ್ರಯ್ಯ ಮುಂತಾದವರ ಸಹಕಾರವಿತ್ತು. ಎರಡು ತಾಸುಗಳ ಅಂದಿನ ಪ್ರದರ್ಶನ ಬೆಂಗಳೂರು ನಗರದ ನಾಗರೀಕರನ್ನು ಬಹುವಾಗಿ ರಂಜಿಸಿತು. ಭಾಗವಹಿಸಿದ ನಮ್ಮ ತಂಡದ ಕಲಾವಿದರೆಲ್ಲ ಸಂತೋಷಪಟ್ಟಿದ್ದಾರೆ.

❖ ಕಳೆದ 50-60 ವರ್ಷಗಳಲ್ಲಿ ನಮ್ಮ ಕಲ್ಲೇಶ್ವರ ಸ್ವಾಮಿ ಮೂಡಲಪಾಯ ಯಕ್ಷಗಾನ ಮಂಡಳಿ ಅಸಂಖ್ಯ ಪ್ರಸಂಗಗಳನ್ನು ಕಲಿತು ರಂಗದಲ್ಲಿ ಬೆಳಕಿಗೆ ತಂದಿದೆ. ಅದರಲ್ಲಿ ಮುಖ್ಯವಾದವುಗಳೆಂದರೆ ಕುರುಕ್ಷೇತ್ರ, ಕರ್ಣಪರ್ವ, ದೇವೀಮಹಾತ್ಮೆ, ದಕ್ಷಯಜ್ಞ, ಸತ್ಯಚಿತ್ರಕೇತು, ಕರಿಬಂಟನ ಕಾಳಗ, ಶಿವಜಲಂಧರ, ಅಹಿರಾವಣ ಮಹಿರಾವಣ, ಗಜಾಸುರ ವಧೆ, ಕುಶ-ಲವರ ಕಾಳಗ, ಮಾರ್ಕಂಡೇಯ ಚರಿತ್ರೆ ಮುಂತಾದವುಗಳು. ಮೊದಲೇ ತಿಳಿಸಿದ ಕಲಾವಿದರಲ್ಲದೆ ಸಹಭಾಗವತಿಕೆಯಲ್ಲಿ ಸಿದ್ದಲಿಂಗಯ್ಯ, ಮುಖವೀಣೆಯಲ್ಲಿ ದಬ್ಬೆಗಟ್ಟದ ಶಂಕರಪ್ಪ (ತುರುವೇಕೆರೆ ತಾಲ್ಲೂಕು) ಹಾಗೂ ಚಿಕ್ಕನಾಯಕನಹಳ್ಳಿಯ ರಾಜಣ್ಣ, ಮೃದಂಗದಲ್ಲಿ ಬಸವರಾಜ, ವೀರರಸಕ್ಕೆ ಅಗತ್ಯವಾಗುವ ಚಮ್ಮಾಳದಲ್ಲಿ ಎ.ಎನ್. ವಿರೂಪಾಕ್ಷ ಮುಂತಾದವರು ಸಹಕರಿಸಿದ್ದಾರೆ. ಭಾಗವತಿಕೆಯ ಜೊತೆಯಲ್ಲಿ ಮದ್ದಲೆ ವಾದನ ನನ್ನದೇ ಇರುತ್ತದೆ. ಹಿಂದೆ ಎಲ್ಲಾ ನಿಂತೇ ರಾತ್ರಿಯಿಡೀ ಹಾಡಿ ಬೆಳಗು ಮಾಡುತ್ತಿದ್ದೆವು. ಈಗ ಒಮ್ಮೊಮ್ಮೆ ವಯಸ್ಸಿನ ಕಾರಣದಿಂದ ಇಡೀ ರಾತ್ರಿ ಪ್ರದರ್ಶನವಿದ್ದರೆ ಸ್ವಲ್ಪ ಕಾಲ ಕುಳಿತು ಹಾಡಬೇಕಾಗುತ್ತದೆ. ಆದರೆ ಈಚೆಗೆ 3-4 ತಾಸುಗಳ 'ಕಾಲಮಿತಿ' ಪ್ರದರ್ಶನ ನಮ್ಮ ಮೂಡಲಪಾಯದಲ್ಲೂ ಹೆಚ್ಚಾಗಿ ಬಂದಿದೆ. 8 ಗಂಟೆಗೆ ಪ್ರಾರಂಭಿಸಿ 12 ಗಂಟೆಗೆಲ್ಲಾ ಪ್ರದರ್ಶನ ಮುಗಿಯುತ್ತದೆ. ಜನರು ಅದನ್ನೇ ಹೆಚ್ಚು ಇಷ್ಟಪಡುತ್ತಾರೆ. ಕಲಾವಿದರಿಗೂ ಸುಖವಾಗಿದೆ. ಈ ಕಾರಣ ಅದನ್ನೇ ಹೆಚ್ಚಾಗಿ ಕಲಿಸಲಾಗುತ್ತಿದೆ.

❖ ಗ್ರಾಮೀಣ ಪ್ರೇಕ್ಷಕರಿಗೂ ಹಾಗೂ ನಗರ ಪ್ರೇಕ್ಷಕರಿಗೂ ಬಹಳ ವ್ಯತ್ಯಾಸವಿದೆ. ರವೀಂದ್ರ ಕಲಾಕ್ಷೇತ್ರದಲ್ಲಿ ಒಂದೆರಡು ತಾಸುಗಳಲ್ಲಿ ಪ್ರದರ್ಶನ ಮುಗಿಯುತ್ತದೆ. ಆ ಸಂದರ್ಭದಲ್ಲಿ ಇಲ್ಲಿನ ಪ್ರೇಕ್ಷಕರು ಯಾವುದೇ ಗದ್ದಲ ಮಾಡುವುದಿಲ್ಲ. ಒಳ್ಳೆದಾದಾಗ ಪ್ರೋತ್ಸಾಹಿಸುತ್ತಾರೆ. ಗ್ರಾಮೀಣ ಪ್ರದೇಶದ ಪ್ರೇಕ್ಷಕರಲ್ಲಿ ಈ ಶಿಸ್ತನ್ನು ಕಾಣುವಂತಿಲ್ಲ. ಮಧ್ಯೆ ಮಧ್ಯೆ ಒಮ್ಮೊಮ್ಮೆ ಗಲಾಟೆಯಾಗುವುದೂ ಇರುತ್ತದೆ. ನಗರದಲ್ಲಿ ಹಾಗೆ ಆಗುವುದಿಲ್ಲ. ಕನ್ನಡ ಸಂಸ್ಕೃತಿ ಇಲಾಖೆಯವರು.

ನಮ್ಮ ಎಲ್ಲಾ ಮೂಡಲಪಾಯ ತಂಡಗಳಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ. ಯಕ್ಷಗಾನ ಬಯಲಾಟ ಅಕಾಡೆಮಿ ಪ್ರಾರಂಭವಾದ ಮೇಲಂತೂ ಈ ಕಲೆಯನ್ನು ಉಳಿಸಿ ಬೆಳೆಸಲು ಅನೇಕ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ. ನಮ್ಮ ತಂಡಗಳು ನಯನ ಸಭಾಂಗಣ, ಸಂಸಬಯಲು ರಂಗಮಂದಿರ, ಪುರಭವನದಲ್ಲಿ ಕೂಡ ಮೂಡಲಪಾಯ ಆಟವನ್ನು ಆಡಿವೆ. ದೂರದರ್ಶನದಲ್ಲಿ, ಆಕಾಶವಾಣಿಯಲ್ಲಿ ಕೂಡ ಆಗಾಗ ಮೂಡಲಪಾಯುವನ್ನು ಈಗ ಕಾಣಬಹುದು. ತಿಪಟೂರು, ತುಮಕೂರು, ಬೆಂಗಳೂರು ಮಾತ್ರವಲ್ಲದೆ ರಾಜ್ಯದ ಬೇರೆ ಜಿಲ್ಲೆಗಳಲ್ಲೂ ಕೂಡ ಮೂಡಲಪಾಯ ಯಕ್ಷಗಾನ ಪ್ರದರ್ಶನ ನಡೆದಿವೆ.

❖ ಈಗೀಗ ಯುವಕರು ಈ ಕಲೆಯ ಕಡೆಗೆ ಆಕರ್ಷಿತರಾಗುತ್ತಿದ್ದಾರೆ. ನಮ್ಮ ಊರಿನ ಕಲ್ಲೇಶ್ವರ ಯುವಕ ಸಂಘದವರು ಮೂಡಲಪಾಯವನ್ನು ಚೆನ್ನಾಗಿ ಅಭ್ಯಾಸ ಮಾಡಿ ನಾಲ್ಕೈದು ಕಡೆ ನಡೆದ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಗಳಿಸಿದ್ದಾರೆ. ಪುಟ್ಟಸ್ವಾಮಿ ಆ ತಂಡದ ಮುಖ್ಯಸ್ಥರಾಗಿದ್ದಾರೆ. ನಮ್ಮ ಊರಿನಲ್ಲಿ ಇದಕ್ಕಾಗಿ ಕಲಿಯುವ ವ್ಯವಸ್ಥೆ ಮಾಡಲಾಗಿದೆ. ಅರಳು ಗುಪ್ಪೆಯಲ್ಲಿ ಇದಕ್ಕಾಗಿ ಕಲಾಶಾಲೆ ತೆರೆದಿದ್ದೇನೆ. ಐದು ಮದ್ದಲೆ, ಮೂರು ಕಿರು ಮೃದಂಗಗಳಿದ್ದು, ಅನೇಕರು ತಮ್ಮ ಬಿಡುವಿನ ವೇಳೆಯಲ್ಲಿ ನನ್ನಿಂದ ಹೇಳಿಸಿಕೊಂಡು ಕಲಿಯುತ್ತಿದ್ದಾರೆ. ಅದೇ ರೀತಿ ಹಿಂದೆಲ್ಲಾ ನಮ್ಮ ತಂಡ ಭಾರದ ಮರದ ಕಿರೀಟ, ವೇಷಭೂಷಣಗಳನ್ನು ಹೊಂದಿತ್ತು. ಈಗ ಅದರ ಬದಲು ಅಲ್ಯೂಮಿನಿಯಂನಿಂದ ಮಾಡಿದ ಕಿರೀಟಗಳನ್ನು, ವೇಷಭೂಷಣಗಳನ್ನು ಬಳಸುತ್ತಿದ್ದೇವೆ. ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ 'ನೆನಪಿನೋಕುಳಿ' ಕಾರ್ಯಕ್ರಮದಲ್ಲಿ ಮೂರು ದಿನಗಳ ಕಾಲ ಈ ನಮ್ಮ ವೇಷಭೂಷಣಗಳನ್ನು ಪ್ರದರ್ಶನಕ್ಕೆ ಇಟ್ಟಿದ್ದೆವು. ನಮ್ಮ ಶಾಸಕರು ಕೂಡ ನಮ್ಮನ್ನು ಪ್ರೋತ್ಸಾಹಿಸುತ್ತಿದ್ದಾರೆ.

❖ ಇನ್ನೊಂದು ವಿಚಾರವೆಂದರೆ ಈಚೆಗೆ ಕೆಲವು ಶಾಲೆಗಳವರು ತಮ್ಮ ವಾರ್ಷಿಕೋತ್ಸವದಲ್ಲಿ ವಿದ್ಯಾರ್ಥಿಗಳ ಮೂಲಕ 'ಮೂಡಲಪಾಯ' ಪ್ರದರ್ಶನಕ್ಕೆ ಅನುವು ಮಾಡಿಕೊಡುತ್ತಿದ್ದಾರೆ. ಹತ್ತಿಪ್ಪತ್ತು ಶಾಲೆಗಳಿಗೆ ನಾವೇ ತೆರಳಿ ಒಂದು ತಿಂಗಳಷ್ಟು ತರಬೇತಿ ನೀಡಿ ಮಕ್ಕಳನ್ನು ಸಿದ್ಧಪಡಿಸುತ್ತಿದ್ದೇವೆ. ಇದು ಇನ್ನಷ್ಟು ಹೆಚ್ಚಾದರೆ ನಮ್ಮ ಮೂಡಲಪಾಯ ಉಳಿದು ಬೆಳೆಯುತ್ತದೆ. ಶಾಲಾಮಕ್ಕಳು ಕೂಡ ಈ ಕಲೆಯ ಬಗ್ಗೆ ಆಸಕ್ತರಾಗುತ್ತಾರೆ.

❖ ಮೂಡಲಪಾಯದ ಹಾಡುವ ಶೈಲಿ ಬೇರೆಯದ್ದೇ ಆಗಿದೆ. ದಕ್ಷಿಣಾದಿ ಸಂಗೀತಕ್ಕಿಂತ ಭಿನ್ನವಾಗಿರುತ್ತದೆ. ನಾಟಿ ರಾಗದಿಂದ ಆಟ ಪ್ರಾರಂಭವಾಗಿ ಸಾವೇರಿ ರಾಗದಲ್ಲಿ ಕೊನೆಗೊಳ್ಳುತ್ತದೆ. ನಮ್ಮಲ್ಲಿ ಶುದ್ಧತೆ ಕಡಿಮೆಯಾದರೂ ರಸದ ಅಭಿವ್ಯಕ್ತಿಗೆ ಹೆಚ್ಚು ಒತ್ತು ಕೊಡುತ್ತೇವೆ. ರಂಜನೆ ನಮಗೆ ಮುಖ್ಯ. ಬೇರೆ ಬೇರೆ ಹಬ್ಬಕ್ಕೆ ಬೇರೆ ಬೇರೆ ಪ್ರಸಂಗ ಆಡುವ ಪರಿಪಾಠ ನಮ್ಮಲ್ಲಿ ಇದೆ. ನಮ್ಮಲ್ಲಿ ಸಾರಥಿ ಪಾತ್ರ ಬಹಳ ಮುಖ್ಯವಾದದ್ದು. ಅವನು ಪ್ರೇಕ್ಷಕರಿಗೂ ಮತ್ತು ಪಾತ್ರದ ನಡುವಿನ ಕೊಂಡಿ ಹಾಗೇ ಇರುತ್ತಾನೆ. ಸಾರಥಿ ಪ್ರಾಸಬದ್ಧವಾದ, ಆಕರ್ಷಕ ನುಡಿಕಟ್ಟಿನ, ವಿಡಂಬನಾ ಪೂರಿತ ಸಂಭಾಷಣೆ ಪ್ರೇಕ್ಷಕರಿಗೆ ಸಂತೋಷ ಕೊಡುತ್ತದೆ. ಪಡುವಲಪಾಯ ಯಕ್ಷಗಾನಕ್ಕಿಂತ ನಮ್ಮ ಮೂಡಲಪಾಯ ಹೀಗೆ ಭಿನ್ನವಾಗಿದೆ.

❖ ಡಾ|| ಜೀ.ಶಂ. ಪರಮಶಿವಯ್ಯನವರು ನಮ್ಮ ಮೂಡಲಪಾಯಕ್ಕೆ ಸಾಕಷ್ಟು ಪ್ರೋತ್ಸಾಹ ನೀಡಿದ್ದಾರೆ. ಅವರು ತಿಪಟೂರು ತಾಲ್ಲೂಕಿನ ಕೊನೇಹಳ್ಳಿಯಲ್ಲಿ ಸ್ಥಾಪಿಸಿದ ಕಲಾಶಾಲೆ ಹಾಗೂ ಟ್ರಸ್ಟ್ ಕೂಡ ಮೂಡಲಪಾಯದ ಬೆಳವಣಿಗೆಗೆ ಸಾಕಷ್ಟು ಕಾರಣವಾಗಿದೆ. ಅದೇ ರೀತಿ ತುರುವೇಕೆರೆ ತಾಲ್ಲೂಕಿನಲ್ಲಿ ದಾಸಾಚಾರ್ ಅವರು ಶ್ರೀರಂಗನಾಥ ಮೂಡಲಪಾಯ ಯಕ್ಷಗಾನ ಮಂಡಳಿ ಮೂಲಕ ಈ ಕಲೆ ಬೆಳೆಸುತ್ತಿದ್ದಾರೆ. ಕೊನೇಹಳ್ಳಿಯ ಶಂಕರಪ್ಪನವರು ಕೂಡ ಖ್ಯಾತ ಕಲಾವಿದರು. ಗೌಡನ ಕಟ್ಟೆ ಬಸವರಾಜ್ ಕೂಡ ಪ್ರಸಿದ್ಧ ಮೂಡಲಪಾಯ ಕಲಾವಿದರು. ಹೀಗೆ ಇವತ್ತು ಮೂಡಲಪಾಯ ಯಕ್ಷಗಾನ ಸಾಕಷ್ಟು ಮನ್ನಣೆಗೆ ಬರುತ್ತಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಎಲ್ಲರನ್ನು ಪ್ರೋತ್ಸಾಹಿಸುತ್ತಿದ್ದಾರೆ. ಇದಕ್ಕಾಗಿ ಕಲಾವಿದರೆಲ್ಲರ ಪರವಾಗಿ ನಾನು ಆಭಾರಿ.

ಸಂದರ್ಶನ :ಕಲ್ಮನೆ ಎ.ಎಸ್. ನಂಜಪ್ಪ
ಜಾನಪದ ಶ್ರೀ ಪ್ರಶಸ್ತಿ ಪುರಸ್ಕೃತರು
ಅರಳುಗುಪ್ಪೆ ಗ್ರಾಮ, ರೆಟ್ಟಿನ್‌ಹಳ್ಳಿ,
ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ
ಚ.ದೂ.: 97402 35507

ನಗರೀಕರಣದ ನಡುವೆ ಪರಂಪರೆಯ ಪ್ರದರ್ಶನ

-ಕಾ.ನ. ದಾಸಾಚಾರ್
(ಸಂದರ್ಶನ)

ಆಧುನಿಕತೆಯ ಗಾಳಿ ನಮ್ಮ ನಡೆ-ನುಡಿಗಳ ಮೇಲೆ, ಆಚಾರ-ವಿಚಾರಗಳ ಮೇಲೆ ಜೀವನಶೈಲಿಯ ಮೇಲೆ ಮಾತ್ರವಲ್ಲ ನಮ್ಮ ಪರಂಪರಾಗತ ಕಲೆಗಳ ಮೇಲೆ ಕೂಡ ಸಾಕಷ್ಟು ಪ್ರಭಾವ ಬೀರಿರುವುದನ್ನು ಕಾಣಬಹುದು. ಜಾನಪದ ಕಲಾಪ್ರಕಾರಗಳು ಕೂಡ ಇದಕ್ಕೆ ಹೊರತಾಗಿಲ್ಲ. ಇಂತಹ ಸ್ಥಿತಿಯಲ್ಲಿ ಸಂಪ್ರದಾಯದ ಬಗ್ಗೆ ಅಪಾರ ನಿಷ್ಠೆ ಉಳ್ಳ ಕಲಾವಿದನಿಗೆ ಪರಂಪರೆಯೊಂದಿಗೆ ಬೆಳೆಯುವುದು ಸವಾಲಾಗುತ್ತದೆ. ಇಂತಹ ಸವಾಲನ್ನು ಎದುರಿಸಿ, ಕಲಾಪ್ರಕಾರವನ್ನು ಉಳಿಸುವುದು, ಮುಂದಿನ ಜನಾಂಗಕ್ಕೆ ತೋರಿಸಿಕೊಡುವುದು ಕಲಾವಿದನ ಕರ್ತವ್ಯವಾಗುತ್ತದೆ. ಈ ಬಗೆಯ ಕರ್ತವ್ಯದಲ್ಲಿ ಜಯಶೀಲರಾಗಿರುವವರು ತುರುವೇಕೆರೆ ತಾಲ್ಲೂಕಿನ ಮೂಡಲಪಾಯ ಯಕ್ಷಗಾನ ಕಲಾವಿದ ಕಾ.ನ. ದಾಸಾಚಾರ್ ಅವರು.

1949ರಲ್ಲಿ ಜನಿಸಿದ (20.12.1949) ದಾಸಾಚಾರ್ ಅವರು ತಮ್ಮ ಹತ್ತನೆಯ ವಯಸ್ಸಿನಲ್ಲಿ ಮೂಡಲಪಾಯ ಯಕ್ಷಗಾನದಲ್ಲಿ ಬಾಲಕಲಾವಿದನಾಗಿ ಸೇರಿಕೊಂಡವರು. ಇವರ ಪ್ರಾರಂಭದ ದಿನಗಳಲ್ಲಿ ಇವರಿಗೆ ಗುರುಗಳಾಗಿ ಮಾರ್ಗದರ್ಶಕರಾದವರು ಅಲಬೂರು ರಂಗಪ್ಪಯ್ಯ ಮತ್ತು ಹೊಸಳ್ಳಿ ಪುಟ್ಟಾಚಾರ್. ತಮ್ಮ ಮೂವತ್ತನೆಯ ವಯಸ್ಸಿನಲ್ಲಿ ತಮ್ಮ ಊರಾದ ಮುನಿಯೂರಿನಲ್ಲಿ ಶ್ರೀ ರಂಗನಾಥ ಮೂಡಲಪಾಯ ಯಕ್ಷಗಾನ ಮಂಡಳಿಯನ್ನು ಸ್ಥಾಪಿಸಿ ಕಳೆದ 38 ವರ್ಷಗಳಿಂದ ತಪ್ಪದೆ ವರ್ಷಂಪ್ರತಿ ಮೂಡಲಪಾಯ ಪ್ರದರ್ಶನಗಳನ್ನು ನೀಡುತ್ತಾ ಬಂದಿದಾರೆ. ಹಿಂದೆಲ್ಲಾ ರಾತ್ರಿ ಬೆಳಗುವಿನವರೆಗೆ ಪ್ರದರ್ಶನ ನೀಡಿದ್ದರೆ, 20 ವರ್ಷಗಳಿಂದ ಈಚೆಗೆ 'ಕಾಲಮಿತಿ'ಯಾದ ಎರಡು ತಾಸುಗಳ ಪ್ರದರ್ಶನವನ್ನು ಇವರ ತಂಡ ರಾಜ್ಯದಾದ್ಯಂತ ಪ್ರದರ್ಶಿಸಿದೆ. ಬೆಂಗಳೂರಿನಲ್ಲಂತು ಅನೇಕ ಕಾರ್ಯಕ್ರಮಗಳಲ್ಲಿ ಮೂಡಲಪಾಯ ಪ್ರದರ್ಶಿಸಿ ಖ್ಯಾತರಾಗಿದ್ದಾರೆ.

❖ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಹತ್ತಕ್ಕೂ ಹೆಚ್ಚು ಬಾರಿ ನಮ್ಮ ಮೂಡಲಪಾಯ ತಂಡದ ಪ್ರದರ್ಶನ ಜರುಗಿದೆ. ಪಕ್ಕದ ಪುರಭವನ, ನಯನ ಸಭಾಂಗಣ, ಸಂಸ ಬಯಲು ರಂಗಮಂದಿರದಲ್ಲೂ ಶ್ರೀ ರಂಗನಾಥ ಮೂಡಲಪಾಯ ತಂಡದ ಪ್ರದರ್ಶನವಾಗಿದೆ. ನಮ್ಮ ತಂಡ ಇಂದಿಗೂ ಕೂಡ ಪರಂಪರೆಯ ವೇಷಭೂಷಣಗಳನ್ನು ಬಳಸುತ್ತಿದೆ. ಕಿರೀಟವೆಲ್ಲ ಇಂದಿಗೂ ಕೂಡ ಹಳೆಯ ಕಾಲದ್ದೆ. ಹಗುರವಾದ ಮರದಿಂದ ಮಾಡಿದಂತಹವುಗಳು. ಕನಿಷ್ಠ 200 ವರ್ಷಗಳಿಂದ ಈ ಕಿರೀಟಗಳು ಬಳಕೆಯಾಗುತ್ತಿವೆ. ಕಲಾಕ್ಷೇತ್ರದಲ್ಲಿ ಅಭಿಮನ್ಯು ಕಾಳಗ, ಸುಧನ್ವ ಕಾಳಗ, ಕುಶಲವರ ಕಾಳಗ, ದೇವಿ ಮಹಾತ್ಮೆ, ಪಂಚವಟಿ, ಅಹಿರಾವಣ ಮಹಿರಾವಣ ಕಾಳಗಗಳನ್ನು ನಮ್ಮ ತಂಡ ಪ್ರದರ್ಶಿಸಿದೆ. ಇವಲ್ಲದೆ ಬೇರೆ ಕಡೆ ಪ್ರದರ್ಶಿಸಿದ ಐರಾವತ, ಇಂದ್ರಜಿತು ವಧೆ, ಬಾಣಾಸುರನ ಕತೆ, ಕೃಷ್ಣಾರ್ಜುನ ಕಾಳಗ ಕೂಡ ನಮ್ಮ ತಂಡದಲ್ಲಿ ಬಳಕೆಯಲ್ಲಿರುವ ಪ್ರಸಂಗಗಳು.

❖ ಮೊದಲಿನಿಂದಲೂ ನಮ್ಮ ತಂಡಕ್ಕೆ ಭಾಗವತಿಕೆಯನ್ನು ನಾನೇ ಮಾಡುತ್ತಿರುವುದು. ಆದರೆ ತಂಡ ಕಟ್ಟುವ ಪೂರ್ವದಲ್ಲಿ ನನ್ನ ಬಾಲ್ಯದ ದಿನಗಳಲ್ಲಿ ಸುಭದ್ರೆ, ಶುಕ್ರಾಚಾರ್ಯ, ಪ್ರಹ್ಲಾದ ಮುಂತಾದ ಪಾತ್ರ ನಿರ್ವಹಿಸಿದ್ದೇನೆ. ನಮ್ಮ ಹಿಮ್ಮೇಳದಲ್ಲಿ ಬ್ರಹ್ಮರಸಾಚಾರ್, ಸಿ.ಎನ್. ಪುನೀತ್ ಮುಂತಾದವರು ಸಹಕರಿಸುತ್ತಾರೆ. ಮುಮ್ಮೇಳದಲ್ಲಿ ಕೀರ್ತಿ ಕೃಷ್ಣನ ಪಾತ್ರದಲ್ಲಿ, ಲಕ್ಷ್ಮೀಕಾಂತ್ ಬಲರಾಮನ ಪಾತ್ರದಲ್ಲಿ, ಎಂ.ಆರ್. ಲವಕುಮಾರ್ ಸಾರಥಿ ಪಾತ್ರದಲ್ಲಿ, ದಿನೇಶ್ ಗಯನ ಪಾತ್ರದಲ್ಲಿ, ಸಿ.ಬಿ. ರಶಿತ್ ಸುಭದ್ರೆಯ ಪಾತ್ರದಲ್ಲಿ, ಎಂ.ಎಸ್. ಕಿರಣ ಅರ್ಜುನನ ಪಾತ್ರದಲ್ಲಿ ಭಾಗವಹಿಸಿ ತಮ್ಮ ಅದ್ಭುತ ಅಭಿನಯದ ಮೂಲಕ ನಮ್ಮ ತಂಡಕ್ಕೆ ಹೆಸರು ತಂದುಕೊಟ್ಟಿದ್ದಾರೆ. ನಾಗರಾಜಾಚಾರ್ ಅವರು ಕೂಡ ನಮ್ಮ ತಂಡದ ಇನ್ನೋರ್ವ ಉತ್ತಮ ಭಾಗವತರು. ಇವರೆಲ್ಲ ಕಲಾಕ್ಷೇತ್ರದ ಸಭಾಂಗಣದಲ್ಲಿ ತಮ್ಮ ಕಲಾಪ್ರದರ್ಶನ ಮಾಡಿದ್ದಾರೆ. ವೇಷಭೂಷಣಗಳನ್ನು ಬಸವರಾಜ ಆಚಾರ್ ಒದಗಿಸುತ್ತಾರೆ.

❖ ನಮ್ಮ ಮೂಡಲಪಾಯದ ಸಂಗೀತಶೈಲಿ ಪರಂಪರಾಗತವಾದದ್ದು. ಡಾ॥ ಜಿ.ಶಂ. ಪರಮಶಿವಯ್ಯನವರು ಕೊನೇಹಳ್ಳಿಯಲ್ಲಿ ಭಾಗವತರ ಶಿಬಿರ ನಡೆಸಿ 32 ರಾಗಗಳನ್ನು ಗುರುತಿಸಿದ್ದಾರೆ. ನನ್ನ ಭಾಗವತಿಕೆಯಲ್ಲಿ ಅನೇಕ ಮಟ್ಟುಗಳನ್ನು ಹಾಡಿಸಿ ಉಡುಪಿ ಕಲಾಕೇಂದ್ರದವರು ದಾಖಲೀಕರಿಸಿದ್ದಾರೆ. ಅದೇ ರೀತಿ ಹಂಪಿ ವಿಶ್ವವಿದ್ಯಾಲಯ ಡಾ॥ ಪುರುಷೋತ್ತಮ ಬಿಳಿಮಲೆಯವರು ಇದ್ದಾಗ

ನಮ್ಮ ತಂಡದ ಪ್ರದರ್ಶನವನ್ನು ಚಿತ್ರೀಕರಿಸಿ ದಾಖಲಿಸಿಕೊಂಡಿದ್ದಾರೆ. ಹಾವೇರಿಯಲ್ಲಿರುವ ಜಾನಪದ ವಿಶ್ವವಿದ್ಯಾಲಯದವರು ನನ್ನ ಭಾಗವತಿಕೆಯನ್ನು ಹಾಡಿಸಿ ದಾಖಲೀಕರಣ ಮಾಡಿಕೊಂಡಿದ್ದಾರೆ. ಹೀಗೆ ನಮ್ಮ ಮೂಡಲಪಾಯ ಸಂಪ್ರದಾಯದ ಮೂಲ ಪರಂಪರೆಯನ್ನು ಉಳಿಸಲು ಅದನ್ನು ಮುಂದಿನವರಿಗೆ ತೋರಿಸಲು ಸರಕಾರ ಅನುಕೂಲ ಮಾಡಿದೆ.

❖ ರವೀಂದ್ರ ಕಲಾಕ್ಷೇತ್ರದಲ್ಲಿ ಮಾತ್ರವಲ್ಲದೆ ರಾಷ್ಟ್ರದ ಬೇರೆ ಬೇರೆ ಕಡೆ ಶ್ರೀ ರಂಗನಾಥ ಮೂಡಲಪಾಯ ಯಕ್ಷಗಾನ ಮಂಡಳಿ ತನ್ನ ಪ್ರದರ್ಶನ ನೀಡಿದೆ. ಅವುಗಳಲ್ಲಿ ಮುಖ್ಯವಾದವೆಂದರೆ ಮಧುರೈ ಕಾಮರಾಜ ವಿಶ್ವವಿದ್ಯಾಲಯ (ಡಾ॥ ಪಾ.ಶ. ಶ್ರೀನಿವಾಸ ಅವರು ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದರು)ದ ಪ್ರದರ್ಶನ, ಕುಪ್ಪಂನಲ್ಲಿರುವ ದ್ರಾವಿಡ ವಿಶ್ವವಿದ್ಯಾಲಯದಲ್ಲಿನ ಪ್ರದರ್ಶನ, ಮೈಸೂರು ದಸರಾ ಮಹೋತ್ಸವ, ಪಟ್ಟದಕಲ್ಲಿನ ಉತ್ಸವ, ಮಂಗಳೂರು ವಿಶ್ವವಿದ್ಯಾಲಯದ ಕಾರ್ಯಕ್ರಮ, ತುಮಕೂರು ವಿಶ್ವವಿದ್ಯಾಲಯದಲ್ಲಿ ನಡೆದ ಕಾರ್ಯಕ್ರಮಗಳು, ಯಕ್ಷಗಾನ ಬಯಲಾಟ ಅಕಾಡೆಮಿ ಕೂಡ ನಮ್ಮ ತಂಡಕ್ಕೆ ಪ್ರೋತ್ಸಾಹ ನೀಡುತ್ತಿದೆ. ಅವರ ವತಿಯಿಂದ ವರ್ಷಕ್ಕೆ ಒಂದು ಕಾರ್ಯಕ್ರಮ ಪ್ರಾಯೋಜಿತವಾಗುತ್ತಿದೆ.

❖ ನಮ್ಮ ತಾಲ್ಲೂಕಿನಲ್ಲಿ ಹೊಸ ಯುವಕರು ಈ ಕಲೆಯ ಕಡೆಗೆ ಅಷ್ಟಾಗಿ ಬರುತ್ತಿಲ್ಲ. ಇಲ್ಲಿ ಸಿದ್ಧಪಡಿಸಿದ ಸಂಭಾಷಣೆಯನ್ನು ಕಂಠಪಾಠ ಮಾಡಿ ಪ್ರಾಸಬದ್ಧವಾಗಿ ಹೇಳಬೇಕಾಗುತ್ತದೆ. ಭಾಗವತರ ಹಾಡಿಗೆ ಕ್ರಮ ಪ್ರಕಾರವಾಗಿ ನರ್ತನ ಮಾಡಬೇಕು. ಘೋರ ಪಾತ್ರಗಳು ಕುಣಿದು ಕುಪ್ಪಳಿಸಬೇಕು. ಸಾರಥಿಯಾದವರು ಹಾಸ್ಯದ ಚಟಾಕಿ ಹಾರಿಸಬೇಕು. ಭಾಗವತ ಮತ್ತು ಪಾತ್ರದ ಮಧ್ಯೆ ಆತ ಸಂಬಂಧವನ್ನು ಕಲ್ಪಿಸಬೇಕು. ಅವನು ಎರಡನೆಯ ಭಾಗವತ ಇದ್ದಂತೆ. ಹೆಚ್ಚು ಕಠಿಣವಾದ ಪಾತ್ರ ನಿರೂಪಣೆ ಇರುತ್ತದೆ. ಈ ಕಾರಣ ಇದಕ್ಕೆ ಇವತ್ತು ಹುಡುಗರು ಬರುತ್ತಿಲ್ಲ. ನಾಟಕವಾದರೆ ಸುಲಭವಾಗಿ ಮಾಡಬಹುದು ಎಂದು ಅದಕ್ಕೆ ಹೋಗುತ್ತಾರೆ. ಹಿಂದೆಲ್ಲಾ ಹಿಲಾಲುಗಳನ್ನು ನೆಟ್ಟು ಅವುಗಳ ಬೆಳಕಿನಲ್ಲಿ ಪ್ರದರ್ಶನ ಮಾಡುತ್ತಿದ್ದರು. ಆಮೇಲೆ ಪೆಟ್ರೋಮ್ಯಾಕ್ಸ್ ಬಂತು. ಈಗ ವಿದ್ಯುತ್ ದೀಪದ ಬೆಳಕಿನಲ್ಲಿ ಆಡುತ್ತಾರೆ. ನಮ್ಮ ತಂಡ ಹೆಚ್ಚಾಗಿ ಪರಂಪರೆಯಂತೆ ಪ್ರದರ್ಶನ ನೀಡುತ್ತದೆ. ಹೊಸ ವೇಷಭೂಷಣ, ಬೆಳಕಿನ ವ್ಯವಸ್ಥೆ ನಮ್ಮಲ್ಲಿ ಇಲ್ಲ. ನಮ್ಮ ತಂಡದಲ್ಲಿನ ಕಿರೀಟಗಳನ್ನು ಹೊರುವುದು ಪ್ರಾಸದಾಯಕ. ಹೆಣ್ಣು ಪಾತ್ರಗಳಿಗೆ ಕೂಡ ಸಣ್ಣ ಕಿರೀಟವಿರುತ್ತದೆ. ರಾಕ್ಷಸ

ಪಾತ್ರ, ರಾಜ ಪಾತ್ರ ಧರಿಸಿ ರಂಗದಲ್ಲಿ ಬರುವಲ್ಲಿ ಹೆಚ್ಚು ಶ್ರಮ ಬೇಕು. ತಂಡದ ಕಲಾವಿದರು ಇದನ್ನು ಯಶಸ್ವಿಯಾಗಿ ಮಾಡುತ್ತಿದ್ದಾರೆ.

❖ ಭಾಗವತಿಕೆಯಲ್ಲಿ ಶುದ್ಧತೆ ಉಳಿಸಿಕೊಂಡದ್ದನ್ನು ಗುರುತಿಸಿ 2008ರಲ್ಲಿ ಯಕ್ಷಗಾನ ಅಕಾಡೆಮಿ ಪ್ರಶಸ್ತಿಯನ್ನು ನನಗೆ ನೀಡಿ ಗೌರವಿಸಿದೆ. ಅದೇ ರೀತಿ ಮಂಡ್ಯದಲ್ಲಿ 2012ರಲ್ಲಿ ನಡೆದ ಸಮಾರಂಭದಲ್ಲಿ 'ಜೀಶಂಪ' ಪ್ರಶಸ್ತಿ ಲಭಿಸಿದೆ. 2009ರಲ್ಲಿ ಜಾನಪದ ಲೋಕದವರು ಪ್ರಶಸ್ತಿ ಇತ್ತು ಗೌರವಿಸಿದ್ದಾರೆ. ಹೆಚ್.ಎಲ್. ನಾಗೇಗೌಡರೇ ನಮ್ಮ ತಂಡವನ್ನು ಅಲ್ಲಿಗೆ 8–10 ಬಾರಿ ಕರೆಸಿ ಪ್ರದರ್ಶನಕ್ಕೆ ಅವಕಾಶ ಕೊಟ್ಟಿದ್ದಾರೆ. ಇದು ಕೂಡ ದೊಡ್ಡ ಪ್ರಶಸ್ತಿಯೇ ಸರಿ. ಇವತ್ತು ಮೂಡಲಪಾಯ ಭಾಗವತಿಕೆಯಲ್ಲಿ ಕರ್ನಾಟಕೀ ಸಂಗೀತ ಇಲ್ಲವೇ ಜಾನಪದ ಸಂಗೀತ ಇಲ್ಲವೇ ಸಿನೆಮಾ ಸಂಗೀತದ ರಾಗಗಳನ್ನು ತುರುಕುತ್ತಿದ್ದಾರೆ. ಇದು ಸರಿಯಲ್ಲ. ಮೂಡಲಪಾಯದ ಭಾಗವತಿಕೆ ವಿಶೇಷವಾದದ್ದು. ಅದನ್ನು ಉಳಿಸಬೇಕಾಗಿದೆ. ಈ ಕಾರಣ ಕರ್ನಾಟಕ ಸಾಂಸ್ಕೃತಿಕ ಪ್ರತಿಷ್ಠಾನದ(ಎಸ್.ಎನ್. ಪಂಜಾಜೆ)ವರು ನಡೆಸುತ್ತಿರುವ ಅಖಿಲ ಭಾರತ ಯಕ್ಷಗಾನ ಬಯಲಾಟ ಸಾಹಿತ್ಯ ಸಮ್ಮೇಳನದಲ್ಲಿ ಸಾಕಷ್ಟು ಬಾರಿ ಭಾಗವಹಿಸಿ ಹಾಡಿನ ಪ್ರಾತ್ಯಕ್ಷಿಕೆ ನೀಡಿದ್ದೇನೆ. ಅವರ ಹನ್ನೆರಡು ಸಮ್ಮೇಳನಗಳಲ್ಲಿ ಕನಿಷ್ಠ ಆರರಲ್ಲಾದರೂ ನಮ್ಮ ತಂಡದ ಪ್ರದರ್ಶನ ಇಲ್ಲವೇ ಭಾಗವತಿಕೆಯ ಪ್ರಾತ್ಯಕ್ಷಿಕೆ ನಡೆದಿದೆ. ಪರಂಪರೆ ಉಳಿಯಬೇಕೆಂಬುದೇ ನನ್ನ ಮುಖ್ಯ ಕಳಕಳಿ.

ಹೀಗೆ ಮೂಡಲಪಾಯ ಯಕ್ಷಗಾನ ಭಾಗವತರಾದ ಕಾ.ನ. ದಾಸಾಚಾರ್ ಅವರಲ್ಲಿ ಮೂಡಲಪಾಯ ನಗರೀಕರಣದ ಈ ದಿನಗಳಲ್ಲಿ ಪರಂಪರೆಗೆ ಬದ್ಧವಾಗಿ ಉಳಿಯಬೇಕೆಂಬ ಹಂಬಲವಿದೆ. ಕಲಾಕ್ಷೇತ್ರದ ಸುವರ್ಣ ಸಂಭ್ರಮದ ಸಂದರ್ಭದಲ್ಲಿ ಮೂಡಲಪಾಯದ ಪರಂಪರೆಯ ಪ್ರತಿನಿಧಿಯಾಗಿ ಕಾಣಿಸಿಕೊಂಡು ತಮ್ಮ ಮನದಾಳವನ್ನು ಇಲ್ಲಿ ಹಂಚಿಕೊಂಡಿದ್ದಾರೆ.

ಸಂದರ್ಶನ :ಕಾ.ನ. ದಾಸಾಚಾರ್

ಮೂಡಲಪಾಯ ಯಕ್ಷಗಾನ ಭಾಗವತರು
ಸಂಸ್ಥಾಪಕರು ಹಾಗೂ ಮುಖ್ಯ ಭಾಗವತರು
ಶ್ರೀರಂಗನಾಥ ಮೂಡಲಪಾಯ ಯಕ್ಷಗಾನ ಮಂಡಳಿ
ಮುನಿಯೂರು, ತುರುವೇಕರೆ ತಾಲ್ಲೂಕು, ತುಮಕೂರು ಜಿಲ್ಲೆ
ಚ.ದೂ.: 94805 40637

ಬೆಂಗಳೂರಿನ ಸಾಂಸ್ಕೃತಿಕ ಮಹಾ ಮಂಟಪ

–ಕೆರೆಮನೆ ಶಿವಾನಂದ ಹೆಗಡೆ

ಬೆಂಗಳೂರಿನ ಹೃದಯ ಭಾಗದಂತಿರುವರವೀಂದ್ರ ಕಲಾಕ್ಷೇತ್ರ ಎಂಬ ಹೆಸರು ಬಂದ ತಕ್ಷಣ ನೆನಪುಗಳು ಸಾಲುಗಟ್ಟಿ ನಿಂತುಕೊಂಡು ಬಿಡುತ್ತದೆ!ರವೀಂದ್ರ ಕಲಾಕ್ಷೇತ್ರದ ಹೆಸರನ್ನ ಕೇಳದ ಕಲಾವಿದರು, ಸಾಹಿತಿಗಳು, ರಾಜಕಾರಣಿಗಳು ಕರ್ನಾಟಕದಲ್ಲಿ ಇಲ್ಲ ಎನ್ನುವಷ್ಟು ವಿರಳ. ಕಳೆದ ಐವತ್ತು ವರುಷಗಳಿಂದ ನಮ್ಮೆಲ್ಲರ ಮನದಲ್ಲಿ ಸದಾ ಸಾವಿರ ಸಾವಿರ ಭಾವನೆಗಳನ್ನು ಉದ್ದೀಪಿಸಿದ ಈ ಕಲಾಕ್ಷೇತ್ರಕ್ಕೆ ಸುವರ್ಣ ಸಂಭ್ರಮ! ನಾಡಿನ ಎಲ್ಲಾ ಸಾಂಸ್ಕೃತಿಕ ಸಂಘ, ಸಂಸ್ಥೆ, ವ್ಯಕ್ತಿಗಳಿಗೆ ಕೂಡಾ ಇದು ಸಂಭ್ರಮವಾಗಲೇ ಬೇಕು.

ಇದನ್ನ ಒಂದು ಕಟ್ಟಡ ಎಂದು ಕರೆಯಲು ಬಾರದು. ಇದನ್ನ ಕಟ್ಟಿದ ಮೇಲೆ ಇಲ್ಲಿ ನಲಿದಾಡಿದ ಕಲಾವಿದರಷ್ಟೆ ಅಳೆಯಲಸಾಧ್ಯ. ದೇಶ ವಿದೇಶದ ನಟ ಸಾಮ್ರಾಟರು ಗೆಜ್ಜೆ ಕಟ್ಟಿದ, ಮನ ತುಂಬಿ ಹಾಡಿದ, ಆಡಿದ ಈ ಕ್ಷೇತ್ರ ಕಲಾವಿದರಿಗಂತೂ ಕಾಶಿಯೇ ಆಗಿದೆ. ಘಟಾನುಘಟಿಗಳು ತಮ್ಮ ಕಲಾಶಕ್ತಿಯನ್ನ ಯಥೇಚ್ಛ ಶಕ್ತಿಯಿಂದ ದುಡಿಸಿಕೊಂಡ ಸ್ಥಳ. ಕಲಾವಿದರಿಗೆ ತಮ್ಮನ್ನ ಸಂಪೂರ್ಣ ಸಮರ್ಪಿಸಿಕೊಂಡು ಸಾಕ್ಷಾತ್ಕಾರ ಉಂಟಾದ, ರೋಮಾಂಚನಗೊಂಡ ಗಳಿಗೆಗಳೆಷ್ಟೋ. ರಂಗದಲ್ಲಿ ನಡೆವ ಇಂದ್ರ ಚಂದ್ರ ರಾಜಮಹಾರಾಜರೇ ಇರಬಹುದು, ಬೀದಿಯ ಅನಾಥರು, ಶೋಷಿತರು, ವಂಚಿತರು ಯಾರೇ ಇರಬಹುದು. ಇಲ್ಲಿ ಇಂತಹ ಎಲ್ಲ ವ್ಯ ಕ್ತಿಗಳ ಸಮಾವೇಶ ಒಂದಿಲ್ಲೊಂದು ನಾಟಕ, ನಾಟ್ಯ ರಂಗಭೂಮಿಯ ಮೂಲಕ ಸಾಕ್ಷಾತ್ಕಾರವಾಗಿರುತ್ತದೆ. ದೇವಾನು ದೇವತೆಗಳ ಒಡ್ಡೋಲಗ, ದೀನಾತಿದೀನರ ಆಕ್ರಂದನ, ಪ್ರಖರ ವೈಚಾರಿಕ ಗೋಷ್ಠಿಗಳು, ಪ್ರಬುದ್ಧ ಚಿಂತನೆಯ ಚರ್ಚೆಗಳು, ಸಾವಿರ ಸಾವಿರ ವಿಷಯ ವಸ್ತುಗಳ ಹೃದಯ ಭಾಗವಾಗಿ ಮೆರೆದ ಒಂದು ಜಾಗ ಇಡೀ ಬೆಂಗಳೂರಲ್ಲಿ ಇದ್ದರೆ, ಸಮಗ್ರತೆಯ ನೆಲೆಯಲ್ಲಿ ಹೇಳುವುದಾದರೆ ಅದಕ್ಕೆ ನಿದರ್ಶನ ಈ ರವೀಂದ್ರ ಕಲಾಕ್ಷೇತ್ರ ಎಂದರೆ ತಪ್ಪಲ್ಲ.

ಕಳೆದ ಐವತ್ತು ವರುಷಗಳುದ್ದಕ್ಕೂ ಬಹುತೇಕರ ತುಡಿತ ರವೀಂದ್ರ ಕಲಾಕ್ಷೇತ್ರದಲ್ಲಿ ಒಂದು ಕಾರ್ಯಕ್ರಮ ಮಾಡಬೇಕು ಎಂಬುದೇ ಪ್ರಧಾನವಾಗಿದೆ. ನಾನು ನೂರಾರು ಕಲಾವಿದರ ಬಾಯಲ್ಲಿ ಕಲಾಕ್ಷೇತ್ರದ ಕುರಿತ ಅವರ ಆಕಾಂಕ್ಷೆ, ತುಡಿತ ಕೇಳಿದ್ದೇನೆ. ಎಲ್ಲ ಕಲಾವಿದರಲ್ಲಿ ಬಹುಮುಖ್ಯ ಆಸೆಗಳಲ್ಲಿ ಕಲಾಕ್ಷೇತ್ರದಂತಹ ರಂಗಸ್ಥಳದಲ್ಲಿ ನರ್ತಿಸಬೇಕೆಂಬುದೂ ಒಂದಾಗಿದೆ. ಈ ಸುದೀರ್ಘ ಅವಧಿಯಲ್ಲಿ 'ರವೀಂದ್ರ ಕಲಾಕ್ಷೇತ್ರ' ಎಂಬುದು ಹೆಮ್ಮೆಯ ಹಾಗೂ ನಮ್ಮೆಲ್ಲರಲ್ಲಿ ಮಹಾತ್ವಾಕಾಂಕ್ಷೆಯ ಹುಟ್ಟುಹಾಕಿದ ಒಂದು ಕನಸಿನ ಲೋಕವೇ ಆಗಿ ಬೆಳೆದುಬಿಟ್ಟಿದೆ.

ಇಲ್ಲಿ ಗೆಜ್ಜೆಕಟ್ಟಿ ಕುಣಿದರೆ ಸಾರ್ಥಕ, ಇಲ್ಲಿ ಅವಕಾಶ ಸಿಕ್ಕರೆ ಅದೇ ಪುಣ್ಯ. ಇಲ್ಲಿ ದೊರೆತ ಮನ್ನಣೆಗೆ ವಿಶೇಷ ಮಹತ್ವ ಇಲ್ಲಿ ನಿಶ್ಚಿಂತೆಯಿಂದ ನಮ್ಮ ಕಲಾಭಿವ್ಯಕ್ತಿ ಸಾಧ್ಯ ಹೀಗೆಂದು ನೂರಾರೂ ಆಕಾಂಕ್ಷೆಯನ್ನ ಇಟ್ಟುಕೊಂಡು ಪ್ರತಿನಿತ್ಯ ನೂರಾರು ಕಲಾ ಯಾತ್ರಿಕರು ಇಲ್ಲಿ ತಮ್ಮ ಪಾದಾರ್ಪಣೆ ಮಾಡುವಂತೆ, ಇಲ್ಲಿ ನೋಡಿದರೇನೇ ಚಂದ, ಸಂತೃಪ್ತಿ, ಸಂತೋಷ ಎಂದು ಆನಂದ ಹೊಂದಲು ಬಂದು ಸೇರುವ ಕಲಾಪ್ರೇಮಿಗಳು, ಆರಾಧಕರು, ಸಹೃದಯರ ದಂಡು ಸದಾ ತುಂಬಿರುವ ದೃಶ್ಯ ಕಾಣಬಹುದು.

ಇಲ್ಲಿನ ಆವರಣದಲ್ಲೇ ಒಂದು ವಿಶೇಷತೆ ನಮಗೆ ಕಾಣುತ್ತದೆ. ಇಡೀ ಕಲಾಕ್ಷೇತ್ರ (Complex) ಸಂಕೀರ್ಣ ಕಲಾ ಸಂಬಂಧೀ ಚಟುವಟಿಕೆಯ ತಾಣವಾಗಿದೆ. ರವೀಂದ್ರ ಕಲಾಕ್ಷೇತ್ರದ (ಇಡೀ) ಒಟ್ಟೂ ಅದರ ವಿನ್ಯಾಸವೇ ಒಂದು ಅಪರೂಪವಾಗಿ ನನಗೆ ಕಾಣುತ್ತದೆ. ನಾನು ಮೊದಲು ಬೆಂಗಳೂರಿಗೆ ಬಂದಾಗ ಇಲ್ಲಿನ ಎಲ್ಲಾ ಕಲಾಸ್ನೇಹಿತರ ಬಾಯಲ್ಲಿ ಹಿರಿಯರ ಕಲಾವಿದರಅಭಿಪ್ರಾಯದಲ್ಲಿ ಕಲಾಕ್ಷೇತ್ರದಲ್ಲಿ ಒಂದು ಕಾರ್ಯಕ್ರಮ ಮಾಡುವುದನ್ನ ಸಂಭ್ರಮದಿಂದ ಹೇಳುವುದನ್ನ ಕಂಡಿದ್ದೇನೆ. ನಮ್ಮ ಮೇಳವಾದ ಶ್ರೀ ಇಡಗುಂಜಿ ಮೇಳ ಕೂಡಾ ಹತ್ತು ಹಲವು ಸಲ ಈ ರಂಗಸ್ಥಳದಲ್ಲಿ ಆಟ ಆಡಿದ್ದು ಇದೆ. 1971 ರಲ್ಲಿ ನಮ್ಮ ಮೇಳ ಇಲ್ಲಿ ಜರಾಸಂಧ ವಧೆ (02-09-1971) ಆಟ ಆಡಿದೆ. ಈಗಿನ ಮೈಸೂರು ರಾಜ್ಯ ಸಂಗೀತ ನಾಟಕ ಅಕಾಡೆಮಿಯ ವತಿಯಿಂದ ನನ್ನ ಅಜ್ಜ ಕೆರೆಮನೆ ಶಿವರಾಮ ಹೆಗಡೆಯವರ ನೇತೃತ್ವದಲ್ಲಿ ಆಟ ನಡೆದಿದೆ. ಅಂದಿನ ಪ್ರದರ್ಶನದಲ್ಲಿ ಭಾಗವತರಾದ ನೆಬ್ಬೂರು ನಾರಾಯಣ ಭಾಗವತ, ಮದ್ದಳೆಯಲ್ಲಿ ನಾರಾಯಣ ಹೆಗಡೆ ಕಿನ್ನೀರ, ಚಂಡೆಯಲ್ಲಿ ಕೃಷ್ಣ ಯಾಜಿ ಇದ್ದು, ಕಲಾವಿದರಾಗಿ ರಾಮಹೆಗಡೆ ಕೊಂಡದಕುಳಿ, ತಿಮ್ಮಣ್ಣ ಯಾಜಿ, ನರಸಿಂಹಭಟ್ಟ ಯಲ್ಲಾಪುರ, ಗಜಾನನ ಭಂಡಾರಿ, ಕೆರೆಮನೆ ಮಹಾಬಲಹೆಗಡೆ, ಕೆರೆಮನೆ ಶಂಭುಹೆಗಡೆ,

ಕೆರೆಮನೆ ಗಜಾನನಹೆಗಡೆ, ಗೋವಿಂದಗೌಡ, ವೆಂಕಟಾಚಾಲಭಟ್ಟ ಮುಂತಾದವರು ಇದ್ದರು. ಅದೊಂದು ಯಶಸ್ವೀ ಪದ್ರರ್ಶನವಾಗಿತ್ತು. ತದನಂತರ ನಮ್ಮ ಮಂಡಳಿಯು ಅನೇಕ ಬಾರಿ ಈ ಕಲಾಕ್ಷೇತ್ರದ ಆವರಣದ ಪವಿತ್ರ ಕಲಾ ಆರಾಧನಾ ಕ್ಷಣವನ್ನು ಉಂಡಿದೆ. ನಮ್ಮ ಮಂಡಳಿ ತನ್ನ 70ನೇ ವರ್ಷದ ಸಂಭ್ರಮವನ್ನು ಒಂದು ಇಡೀ ದಿನ ಆಟ, ವಿಚಾರಗೋಷ್ಠಿ ಮುಂತಾದ ಕಾರ್ಯಕ್ರಮ ಹಮ್ಮಿಕೊಂಡಿದ್ದು ಇಲ್ಲಿಯೇ (ಜನವರಿ 2, 2005) ಈ ಸಮಾರಂಭಕ್ಕೆ ಶ್ರೀ ಎಂ. ಎಸ್. ತಿಮ್ಮಪ್ಪ, ಶ್ರೀ ಮುದ್ದುಮೋಹನ್, ಶ್ರೀ ವಿಶ್ವೇಶ್ವರ ಭಟ್, ನ್ಯಾಯಮೂರ್ತಿ ಶ್ರೀ ಎ.ಜೆ. ಸದಾಶಿವ, ಸಭಾಪತಿಗಳಾದ ಶ್ರೀ ವಿ. ಆರ್.ಸುದರ್ಶನ, ಶ್ರೀ ಎಂ. ಪಿ. ಪ್ರಕಾಶ್, ಶ್ರೀ ಬಿ. ಎಲ್. ಶಂಕರ್, ಶ್ರೀ ಚಿರಂಜೀವಿ ಸಿಂಗ್, ಡಾ. ಡಿ.ಕೆ. ಚೌಟ, ಗುರು ಡಾ. ಮಾಯಾರಾವ್, ಶ್ರೀ ಮಹೇಶ ಜೋಶಿ ಮುಂತಾದವರ ಉಪಸ್ಥಿತಿ ಭಾಗವಹಿಸುವಿಕೆಯಲ್ಲಿ ಬಹುಸುಂದರವಾಗಿ ನಡೆಯಿತು. ಒಂದು ಕಲಾಸಂಸ್ಥೆಯ ತನ್ನ ಎಪ್ಪತ್ತು ದಶಕಗಳ ಸಾಧನೆಯನ್ನ ವೇದಿಕೆಯಲ್ಲಿ ಪ್ರಸ್ತುತಪಡಿಸುವುದಕ್ಕೆ ನಮಗೆ ಈ ಕಲಾಕ್ಷೇತ್ರ ದೊರಕಿದ್ದು ಬಹು ಸಂತೋಷದ ಕ್ಷಣ. ನಮ್ಮ ಮಂಡಳಿಯ ಸುಭದ್ರಾ ಕಲ್ಯಾಣ, ಕೃಷ್ಣ ಸಂಧಾನ, ದಮಯಂತಿ ಪುನಃಸ್ವಯಂವರ (2006), ವಾಲೀಮೋಕ್ಷ, ಗದಾಯುದ್ಧ, ಜರಾಸಂಧ ಹೀಗೆ ಹಲವಾರು ಬಾರಿ ನಮ್ಮ ಮಂಡಳಿ ಇಲ್ಲಿ ಪ್ರದರ್ಶನ ನೀಡಿದೆ. ಇಲ್ಲಿ ನನ್ನ ತಂದೆಯವರ 'ಮನೆಯಂಗಳದಲ್ಲಿ ಮಾತುಕತೆ' ಕನ್ನಡ ಸಂಸ್ಕೃತಿ ಇಲಾಖೆ ನಡೆಸಿದ್ದು ಕೂಡಾ ನೆನಪಿಸುವ ಸಂಗತಿ ನಮ್ಮ ಮಂಡಳಿಯ 2–3 ಆಟಕ್ಕೆ ಮಾನ್ಯ ಲಂಕೇಶರು ಹಾಗೂ ಮಾನ್ಯಅನಂತಮೂರ್ತಿಯವರು ಇಲ್ಲಿಗೆ ಬಂದಿದ್ದು ಕೂಡಾ ಬಹು ಅಮೂಲ್ಯ ಸಂಸಬಯಲು ರಂಗಮಂದಿರದಲ್ಲಿ ನಡೆದ ಕೀಚಕ ವಧೆ ಮತ್ತು ಸಂಧಾನಕ್ಕೆ ಲಂಕೇಶರು ಬಹು ಅಮೂಲ್ಯವಾದ ಒಳನೋಟದ ವಿಮರ್ಶೆಯನ್ನ ತಮ್ಮ ಪತ್ರಿಕೆಯಲ್ಲಿ ಬರೆದದ್ದು ಇತಿಹಾಸ. ತಂದೆಯವರಿಗೆ ಪರ್ವ ಸಿನಿಮಾದಲ್ಲಿ ಬಂದ 'ಪೋಷಕ ನಟ ಪ್ರಶಸ್ತಿ' ವಿತರಣೆಯು ಕೂಡಾ ಒಂದು. ಇವೆಲ್ಲ ಈ ರಂಗಮಂದಿರದೊಟ್ಟಿಗಿನ ನಮ್ಮ ಅಪೂರ್ವ ಸಂದರ್ಭವಾಗಿದೆ. ನಮ್ಮ ತಂದೆಯವರಿಗೆ 26–04–2007ರಂದು 'ಆರ್ಯಭಟ' ಪ್ರಶಸ್ತಿ ಲಭಿಸಿದ್ದು ಕೂಡ ಇದೇ 'ರವೀಂದ್ರ ಕಲಾಕ್ಷೇತ್ರ'ದಲ್ಲಿ.

ಗುರು ಡಾ. ಮಾಯಾರಾವ್ ಅವರ ಹಲವಾರು ಬ್ಯಾಲೆಗಳಲ್ಲಿ ನಾನು ಈ ರಂಗಸ್ಥಳದಲ್ಲಿ ಭಾಗವಹಿಸುವ ಸುವರ್ಣಾವಕಾಶ ನನಗೆ ದೊರಕಿದ್ದು ಅದನ್ನ ಇಲ್ಲಿ ಉಲ್ಲೇಖಿಸುವುದು ಹೆಚ್ಚು ಅಗತ್ಯವಾಗಿದೆ. 1986 ರಲ್ಲಿ ಆಗಿನ ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗಡೆ, (ಸಂಸ್ಕೃತಿ ಮಂತ್ರಿಯಾದ ಡಾ. ಜೀವರಾಜ ಆಳ್ವ, ಶ್ರೀ ಎಂ. ಪಿ. ಪ್ರಕಾಶ ಮುಂತಾದವರು ಕೂಡ ಇದ್ದರು) ಜನತಾ ದಳದ ಸರಕಾರದ ಒಂದು

ಉತ್ಸವ ಇಲ್ಲಿ ಆಗಿತ್ತು. ಆ ಸಂದರ್ಭದಲ್ಲಿ ಸನ್ಮಾನ್ಯ ಚಲನಚಿತ್ರ ನಟರಾದ ಶ್ರೀ ಅನಂತನಾಗ್, ಶ್ರೀ ಶಂಕರನಾಗ್ ಮುಂತಾದವರು ಕೂಡಾ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗಿಗಳಾಗಿದ್ದರು. ಡಾ. ಮಾಯಾರಾವ್ ಅವರ ವಿಜಯನಗರ ವೈಭವ ಬ್ಯಾಲೆಯಲ್ಲಿ (ಆಗಸ್ಟ್ 25, 1989) ನಾನು ಕೃಷ್ಣದೇವರಾಯನ ಪಾತ್ರ ಮಾಡಿದ್ದು ಶ್ರೀ ಶಂಕರನಾಗ್ ಅವರು ಪ್ರೋತ್ಸಾಹದ ಪ್ರಶಂಸೆಯ ಮಾತಾಡಿದ್ದು ನನಗೆ ಈಗಲೂ ನೆನಪಿದೆ. ತದನಂತರದಲ್ಲಿ ಗುರು ಡಾ. ಮಾಯಾರಾವ್ ಅವರ ಅನೇಕ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದೆ. ಶ್ರೀ ಜಿ.ವಿ. ಐಯ್ಯರ್ ಅವರ 'ವಾಲ್ ಪೋಸ್ಟರ್' ಎಂಬ ಕಿರುಚಿತ್ರದ ಚಿತ್ರೀಕರಣ ಕೂಡಾ ಇಲ್ಲಿ ನಡೆದದ್ದು, ಮಾಜಿ ಮುಖ್ಯ ಮಂತ್ರಿಗಳೂ, ಮಾಜಿ ಕೇಂದ್ರ ಸಚಿವರೂ, ಪ್ರಸಿದ್ಧ ಸಾಹಿತಿಗಳೂ ಆದ ಡಾ. ವೀರಪ್ಪ ಮೊಯಿಲಿಯವರ ಶ್ರೀ ರಾಮಾಯಣ ಮಹಾನ್ವೇಷಣಂ (25 ಫೆಬ್ರುವರಿ 2001) ಇಲ್ಲಿ ಜರುಗಿದಾಗ ಅದರಲ್ಲಿ ನಾನು ಯಕ್ಷಗಾನದ ಮಾಧ್ಯಮದಲ್ಲಿ ಅಹಲ್ಯೆಯ ಪಾತ್ರ ಮಾಡಿದ್ದು,ಇತ್ತೀಚೆಗೆ ನನಗೆ ಆರ್ಯಭಟ ಪ್ರಶಸ್ತಿ–2016 ದೊರಕಿದ್ದೂ, ನನ್ನ ಜೀವನದ ಅನೇಕ ವಿಸ್ಮರಣೀಯ ಅನುಭವ ಇಲ್ಲಿ ನನಗೆ ದೊರಕಿದೆ. ಹೀಗೆ ನಾನಾ ರೀತಿಯಲ್ಲಿ ಈ ಕಲಾಕ್ಷೇತ್ರದೊಟ್ಟಿಗೆ ನನ್ನ ನೆನಪಿನ ಬಹು ಅಮೂಲ್ಯವಾದ ಘಟನೆಗಳು ಇವೆ.

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲೇ ನಮಗೆ ಸಿಗುವ ಟೌನ್ ಹಾಲ್ ಮತ್ತು ಸಂಸ ಬಯಲು ರಂಗಮಂದಿರ ಮತ್ತೆ ಇತ್ತೀಚೆಗೆ ತಲೆ ಎತ್ತಿದ ಕನ್ನಡ ಸಂಸ್ಕೃತಿ ಇಲಾಖೆಯು 'ಕನ್ನಡ ಭವನ' ಇವೆಲ್ಲವನ್ನೂ ಒಟ್ಟುಗೂಡಿಸಿ ನೋಡಿದಾಗ ಬೆಂಗಳೂರಿನ ವಿಧಾನಸೌಧ ಬಿಟ್ಟರೆ ಬಹುಶಃ ಇಷ್ಟು ಚಟುವಟಿಕೆ ಹಾಗೂ ಪವಿತ್ರ ತಾಣ ಮತ್ತೊಂದಿಲ್ಲ ಎಂದು ಧೈರ್ಯವಾಗಿ ಸಾರಬಹುದು. ಇಲ್ಲಿನ ವೇದಿಕೆ ಯಾವುದೇ ಕಾರ್ಯಕ್ರಮಕ್ಕೂ ಸೂಕ್ತವಾಗಿ ನಿರ್ಮಿಸಲ್ಪಟ್ಟಿದ್ದು ಬಹು ಮುಖ್ಯವಾದ ಸಂಗತಿ. ರಂಗಮಂದಿರದ ಒಳಗೆ ವಿಶಾಲವಾದ ಪ್ರವೇಶ, ಏಕವ್ಯಕ್ತಿ ಇರಲಿ, ನಾಟಕ, ಯಕ್ಷಗಾನ, ಬ್ಯಾಲೆ ಕಲಾವಿದರಿಗೆ, ಅಗತ್ಯವಾದಸೂಕ್ತವಾದ ಅಳತೆಯ ಬಣ್ಣದ (Makeup Room) ಕೂಡಾ ಒಂದು ಕಲಾಮಂದಿರದ ಅತೀ ಅಗತ್ಯವಾದ ಅವಶ್ಯಕತೆಯಾಗಿದ್ದು ಅದು ಕೂಡಾ ಇಲ್ಲಿ ಚೆನ್ನಾಗಿಯೇ ಇದೆ. ವಿಶಾಲವಾದ ಪಾರ್ಕಿಂಗ್, ಪುಸ್ತಕ ಮಳಿಗೆ, ಶೌಚಾಲಯ, ಕ್ಯಾಂಟೀನ್, ಉದ್ಯಾನವನ, ಇವೆಲ್ಲ ಒಂದಕ್ಕೊಂದು ಅತ್ಯಂತ ಸಾಮರಸ್ಯ ಪೂರ್ಣವಾಗಿದೆ. ಇಲ್ಲಿನ ರಂಗಸ್ಥಳ ಯಕ್ಷಗಾನಕ್ಕೂ ಬಹಳ ಸೂಕ್ತವಾಗಿದೆ. ಬಯಲಿನಲ್ಲಿ ಬೆಳೆದುಬಂದ ಯಕ್ಷಗಾನದಂತ ಕಲೆಗೆ

proscenium ನಲ್ಲಿ ಅಷ್ಟು ಅನುಕೂಲ ಎನಿಸುವುದು ವಿರಳ. ಯಕ್ಷಗಾನದ ಅಬ್ಬರ, ಆಡುವ ಮಾತುಗಳು, ಇವೆಲ್ಲವೂ ಇಲ್ಲಿ ಯಾವುದೇ ಸಮಸ್ಯೆ ಆಗಿಲ್ಲ. ಧ್ವನಿ ವ್ಯವಸ್ಥೆ ಅತ್ಯುತ್ತಮವಾಗಿರುವುದು ಇದಕ್ಕೆ ಕಾರಣ. ಹೀಗೆ ಯಾವುದೇ ದೃಷ್ಟಿಯಲ್ಲಿ ನೋಡಿದರೂ ಇದೊಂದು ಆದರ್ಶವಾದ ಸ್ಥಳವಾಗಿದೆ.

ಕಲಾಕ್ಷೇತ್ರದ ಗೋಡೆಗೆ, ಮೆಟ್ಟಿಲಿಗೆ, ನೆಲಕ್ಕೆ, ರಂಗಕ್ಕೆ ಕಲೆ ಮತ್ತು ಸಂಸ್ಕೃತಿಯ ಸುಂದರ ಕುಸುರಿಯ ಆವರಣ ಮುಚ್ಚಲ್ಪಟ್ಟಿದೆ. ಸಾವಿರ ಸಾವಿರ ಸಾಧಕರ ಕಂಠದ ಧ್ವನಿ ಸದಾ ಮತ್ತೆ ಮತ್ತೆ ಮಾರ್ದನಿಸಲಿ. ಕಲಾವಿದರ ಗೆಜ್ಜೆಯ ನಾದ, ನಾಟ್ಯದ ಭಂಗಿ, ವಾದ್ಯಗಳ ನಿನಾದ, ಅಬ್ಬರದ ಅಭಿವ್ಯಕ್ತಿ , ನಾನಾ ರಸಭಾವಗಳ ಓಕುಳಿಯಾಟ ಸದಾ ಮುಂದುವರಿಯಲಿ ಎಂದು ಹಾರೈಸುತ್ತೇನೆ. ಕಲಾಕ್ಷೇತ್ರಕ್ಕೆ ಸುಮ್ಮನೆ ಬಂದು ನಿಂತ ಆಗಂತುಕನಿಗೂ ತನ್ನ ಸಂಸ್ಕೃತಿ, ಕಲೆಯ ಕಂಪನ್ನ ಮಾರ್ದನಿಸಿ ರೋಮಾಂಚನ ಸೃಷ್ಟಿಸಬಲ್ಲ. ತನ್ನ ಐವತ್ತು ವರುಷಗಳ ಧನಾತ್ಮಕ ಶಕ್ತಿಯಿಂದ ಹೊಸ ಉತ್ಸಾಹ ತುಂಬಬಲ್ಲ, ಸಾವಿರ ಸಾವಿರ ಕಲಾ ನೆನಪಿನ ತೋರಣದಿಂದ ಮಂತ್ರ ಮುಗ್ಧವಾಗಿಸಬಲ್ಲ ಈ ಕಲಾಕ್ಷೇತ್ರಕ್ಕೆ ನಮೋ ಎಂಬೆ.

ಬಹುಷಃ ಬೆಂಗಳೂರಿನವರಿಗಂತೂ ಈ ಜಾಗ ತಮ್ಮ ಅತ್ಯಂತ ಆಪ್ತವಾದ, ಪ್ರೀತಿಯ ಸ್ಥಳ ಎನ್ನುವುದರಲ್ಲಿ ಅನುಮಾನ ಇಲ್ಲ. ಬೆಂಗಳೂರಿಂದ ಬಹುದೂರ ಇರುವ ನನ್ನಂಥವನಿಗೆ ಕೂಡಾ ಕಾರ್ಯಕ್ರಮಕ್ಕೆ ಇಲ್ಲಿಯೇ ಅವಕಾಶ ಸಿಗಲಿ ಎಂಬ ಆಸೆ ಇದ್ದೇ ಇದೆ. ಯಕ್ಷಗಾನದ ಪರಿಪೇಕ್ಷದಲ್ಲಿ ನೋಡುವುದಾದರೆ ಇಲ್ಲಿ ಯಕ್ಷಗಾನಕ್ಕೆ ಬಹುದೊಡ್ಡ ಆಕರ್ಷಣೆಯ ಅನುಕೂಲದ ಸ್ಥಳವಾಗಿದೆ. ಅಸಂಖ್ಯ ಯಕ್ಷಗಾನ ಕಲಾವಿದರು ಈ ಕಲಾಕ್ಷೇತ್ರದ ಬಗ್ಗೆ ಹೆಮ್ಮೆಯ ಮಾತುಗಳನ್ನು ಆಡುತ್ತಾರೆ.

ಐವತ್ತರ ಸಂಭ್ರಮ ಹಮ್ಮಿಕೊಂಡು ನಡೆಸುತ್ತಿರುವ ಈ ಕಾರ್ಯಕ್ರಮಗಳು ಹಾಗಾಗಿಯೇ ಬಹು ಅರ್ಥಪೂರ್ಣ. ಹೀಗೆ ಐವತ್ತು ದಾಟಿದ ದೇಶದ ಉತ್ತಮ ರಂಗಮಂದಿರಗಳಲ್ಲೂ ಇದೇ ಮಾದರಿಯಲ್ಲಿ ನಮ್ಮ ನಾಡಿನ ಈ ಕಾರ್ಯಕ್ರಮ ಪ್ರೇರಣೆ ಆಗಲಿ, ರಂಗಮಂದಿರಗಳು ನಮ್ಮ ಕಲಾಪ್ರದರ್ಶನದಷ್ಟೆ ಮಹತ್ವದ್ದು ಎಂದು ಎಲ್ಲರೂ ಮನಗಾಣುವಂತಾಗಲಿ ಎಂದು ಹಾರೈಸುತ್ತೇನೆ. ಏನಾದರೂ ಕೊರತೆ ತೋರಿಸಲೇ ಬೇಕೆಂದು ಹುಡುಕಬೇಕಲ್ಲದೇ ಅನ್ಯಥಾ ದೊರೆಯದು. ಒಟ್ಟಾರೆಯಾಗಿ ಇದು ಒಂದು ಬಹು ರೀತಿಯಲ್ಲಿ ಉಪಯುಕ್ತ ಕಲಾವೇದಿಕೆ. ಕಲಾಮಂಟಪ. ಕಲಾದೇಗುಲ.

ಕನ್ನಡ ಸಂಸ್ಕೃತಿ ಇಲಾಖೆ, ಕರ್ನಾಟಕ ಸರಕಾರದ ಈ ರಂಗಕೇಂದ್ರ ನಮಗೆಲ್ಲ ಹೆಮ್ಮೆಯನ್ನ ತರುತ್ತ ಇಡೀ ದೇಶಕ್ಕೆ ಗೌರವ ತರುವಂತೆ ಬೆಳೆಸಿದ ಎಲ್ಲರಿಗೂ ನಮ್ಮ ಗೌರವಾದರ ನಮನಗಳು ಸಿಗಲೇ ಬೇಕು. ಈ ಸುಂದರ ಆವರಣದ ಕುರಿತು, ಕಲಾಕ್ಷೇತ್ರದ ಕುರಿತು ನನ್ನ ಎರಡು ಮಾತನ್ನು ಹಂಚಿಕೊಳ್ಳಲು ಅವಕಾಶ ನೀಡಿದ ಕನ್ನಡ ಸಂಸ್ಕೃತಿ ಇಲಾಖೆಗೂ, ಕರ್ನಾಟಕ ಸರಕಾರಕ್ಕೂ ಮತ್ತು ಮಾನ್ಯ ಡಾ. ಆನಂದರಾಮ ಉಪಾಧ್ಯಾಯರಿಗೂ ನಾನು ಪುನಃ ಪುನಃ ಆಭಾರಿಯಾಗಿದ್ದೇನೆ. ಪ್ರತೀ ರಾಜ್ಯದಲ್ಲಿ ಕವಿ, ಸಾಹಿತಿ, ನೋಬೆಲ್ ಪ್ರಶಸ್ತಿ ಪುರಸ್ಕೃತ ರವೀಂದ್ರರ ನೆನಪಲ್ಲಿ ಇಂತಹ ರಂಗಮಂದಿರಗಳು ಇವೆ. ಆದರೆ ಎಲ್ಲ ದೃಷ್ಟಿಯಲ್ಲಿ ಅಂದರೆ, ಕಲಾಪ್ರದರ್ಶನ ಅಥವಾ ಸಭೆ ಸಮಾರಂಭ, ಗೋಷ್ಠಿ ಚರ್ಚೆಗಳಿಗೆ ಬಹುಷಃ ಬೇಕಾಗುವ ಈ ರಂಗಮಂದಿರದಂತಹದ್ದು ಇಡೀ ದೇಶದಲ್ಲೇ ವಿರಳಾತೀ ವಿರಳ.

ಉತ್ತಮ ವ್ಯವಸ್ಥೆಯ ಪ್ರೇಕ್ಷಕರ ಮೆಚ್ಚಿನ ತಾಣವಾದ ಕಲಾಕ್ಷೇತ್ರ ನಮ್ಮ ನಡುವೆ ಸದಾ ಹೀಗೇ ಲವಲವಿಕೆಯನ್ನು ಕಾದುಕೊಂಡು ನೂರು ವಸಂತ ಮೀರಿ ಮುನ್ನಡೆಯಲಿ ಎಂದು ಹಾರೈಸುತ್ತೇನೆ

ಅನುಬಂಧ–I

ಮಂಡಳಿಯ ಪ್ರದರ್ಶನಗಳು

ಅ.ಸಂ.	ದಿನಾಂಕ	ಪ್ರಸಂಗದ ಹೆಸರು	ಸ್ಥಳ
1	25–03–2012	ಕೃಷ್ಣ ಸಂಧಾನ	ರವೀಂದ್ರ ಕಲಾಕ್ಷೇತ್ರ, ಬೆಂಗಳೂರು
2	04–04–09	ದಕ್ಷಯಜ್ಞ	ಬೆಂಗಳೂರು ಪುರಭವನ
3	14–1–06	ಶ್ರೀಕೃಷ್ಣ ಸಂಧಾನ	ರವೀಂದ್ರಕಲಾಕ್ಷೇತ್ರ, ಬೆಂಗಳೂರು
4	15–1–06	ದಮಯಂತಿ ಪುನಃ ಸ್ವಯಂವರ	ರವೀಂದ್ರಕಲಾಕ್ಷೇತ್ರ, ಬೆಂಗಳೂರು
5	11–10–97	ಕಾರ್ತ್ಯವೀರ್ಯ	ಬೆಂಗಳೂರು ರವೀಂದ್ರ ಕಲಾಕ್ಷೇತ್ರ
6	22–3–97	ಕೀಚಕವಧೆ	ಬೆಂಗಳೂರು
7	23–3–97	ಕೃಷ್ಣ ಸಂಧಾನ	ಬೆಂಗಳೂರು
8	26–11–93	ಜರಾಸಂಧವಧೆ	ಬೆಂಗಳೂರು
9	02/01/2005	70 ವರ್ಷಗಳ ಯಕ್ಷ ಸಂಭ್ರಮ	ಬೆಂಗಳೂರು

– **ಕೆರೆಮನೆ ಶಿವಾನಂದ ಹೆಗಡೆ**

ನಿರ್ದೇಶಕರು, ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ,
ಕೆರೆಮನೆ (ರಿ).
ಅಂಚೆ : ಗುಣವಂತೆ, ಹೊನ್ನಾವರ ತಾಲ್ಲೂಕು
ಚ.ದೂ. : 94805 16300

ಲೇಖಕರ ಕಿರುಪರಿಚಯ

ಯಕ್ಷಗಾನ ಪರಂಪರೆಯ ಹೆಸರಾಂತ ಕೆರೆಮನೆ ಮನೆತನದ ಮೂರನೆಯ ಪೀಳಿಗೆಯವರಾದ ಶಿವಾನಂದ ಹೆಗಡೆಯವರು 12ನೇ ವಯಸ್ಸಿನಲ್ಲಿ ಗೆಜ್ಜೆಕಟ್ಟಿ ಯಕ್ಷಗಾನ ರಂಗದಲ್ಲಿ ಹೆಜ್ಜೆ ಇಟ್ಟವರು. ಶ್ರೀಮತಿ ಮಾಯಾರಾವ್ ಅವರಲ್ಲಿ ಕೊರಿಯಾಗ್ರಫಿ ತರಬೇತಿ ಪಡೆದ ಇವರು ಕಥಕ್ ನೃತ್ಯದಲ್ಲೂ ಪರಿಣಿತರು. ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕೆರೆಮನೆ ಶಂಭು ಹೆಗಡೆಯವರೊಂದಿಗೆ ಯಕ್ಷಗಾನ ಕಲಾವಿದರಾಗಿ ದೇಶ–ವಿದೇಶ ಸುತ್ತಿರುವ ಹೆಗ್ಗಳಿಕೆ ಇವರದು. ಪಾರಂಪರಿಕ ಯಕ್ಷಗಾನವನ್ನು ಕಲಿಸುವ ಶ್ರೀ ಮಯ ಯಕ್ಷಗಾನ ಕೇಂದ್ರ ಇವರ ನಿರ್ದೇಶಕತ್ವದಲ್ಲಿ ಯಶಸ್ಸಿನ ದಾರಿಯಲ್ಲಿದೆ. ಶತಮಾನೋತ್ಸವದತ್ತ ಹೆಜ್ಜೆಯಿಡುತ್ತಿರುವ ಶ್ರೀ ಇಡಗುಂಜಿ ಮಹಾ ಗಣಪತಿ ಯಕ್ಷಗಾನ ಮಂಡಳಿ, ಕೆರೆಮನೆ (ರಿ)ಯನ್ನು ಶಿವಾನಂದ ಹೆಗಡೆಯವರು ಸಮರ್ಥವಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ. ಪುರಾಣ ಪ್ರಸಂಗಗಳನ್ನೇ ಆಧರಿಸಿ ಸುಮಾರು 8000ಕ್ಕೂ ಹೆಚ್ಚು ಪ್ರದರ್ಶನ ನೀಡಿರುವ ಈ ಮೇಳ ರವೀಂದ್ರ ಕಲಾಕ್ಷೇತ್ರದಲ್ಲಿ ಸಾಕಷ್ಟು ಪ್ರದರ್ಶನ ನೀಡಿ ಬೆಂಗಳೂರಿಗರನ್ನು ಆಕರ್ಷಿಸಿದೆ. ಹೆಗಡೆಯವರು ಮೇಳದ ಮುಖ್ಯ ಕಲಾವಿದರಾಗಿ ನೇಪಾಳ, ಇಂಗ್ಲೆಂಡ್, ಅಮೇರಿಕಾ, ಶ್ರೀಲಂಕಾ, ಫ್ರಾನ್ಸ್, ಸ್ಪೇನ್, ಚೀನಾ, ಸಿಂಗಾಪೂರ, ಮಲೇಷಿಯಾ, ಫಿಲಿಫೆನ್ಸ್, ಮಯನ್ಮಾರ್, ಲಾವೋಸ್ ಮುಂತಾದ ದೇಶಗಳಿಗೆ ತಮ್ಮ ತಂಡ ಕೊಂಡೊಯ್ದಿದ್ದಾರೆ. ಇವರ ಕಲಾಸಾಧನೆಗೆ ಆರ್ಯಭಟ ಪ್ರಶಸ್ತಿ, ಕುವೆಂಪು ದೀಪ ಪ್ರಶಸ್ತಿ, ಚಿಟ್ಟಾಣಿ ಯಕ್ಷೋತ್ಸವ ಪ್ರಶಸ್ತಿ, ಹೈದರಾಬಾದ್‌ನ ಯಕ್ಷಸಾರಥಿ ಮುಂತಾದ ಪ್ರಶಸ್ತಿಗಳು ಲಭಿಸಿವೆ.

ಸಂಸ್ಕೃತಿ ಸೌಧ-ರವೀಂದ್ರ ಕಲಾಕ್ಷೇತ್ರ

– ಕಡತೋಕಾ ಗೋಪಾಲಕೃಷ್ಣ ಭಾಗವತ

ಬೆಂಗಳೂರಿನ ಹೃದಯಭಾಗದಲ್ಲಿರುವ ರವೀಂದ್ರ ಕಲಾಕ್ಷೇತ್ರ ಕನ್ನಡದ ಶ್ರೀಮಂತ ರಂಗಕಲೆಗಳನ್ನು ಪ್ರೀತಿಸುವ ಕನ್ನಡಿಗರ ಹೃದಯದಲ್ಲಿಯೂ ಒಂದು ಮಹತ್ವದ ಸ್ಥಾನ ಪಡೆದಿದೆ. ಬೆಂಗಳೂರನ್ನೇ ನೋಡದ ಕರ್ನಾಟಕದ ಮೂಲೆಯ ಹಳ್ಳಿಯೊಂದರ ಬೋರೆಗೌಡನಿಗೂ ಬೆಂಗಳೂರಿನಲ್ಲಿ ರವೀಂದ್ರ ಕಲಾಕ್ಷೇತ್ರವೆಂಬ ಒಂದು ಸಭಾಭವನವೋ ಅಥವಾ ಅಂತಹದೇ ಏನೋ ಒಂದು ಇದೆ ಎಂಬ ಅರಿವಿದೆ.

ಕಲಾವಿದರ ಕುಟುಂಬದಲ್ಲಿ ಹುಟ್ಟಿದ ನನ್ನಲ್ಲಿ ಬಾಲ್ಯದಲ್ಲಿಯೇ ರವೀಂದ್ರ ಕಲಾಕ್ಷೇತ್ರದ ಕುರಿತು ಗೌರವದ ಭಾವನೆಗಳನ್ನು ಹುಟ್ಟಿಸಿದ್ದು ವೃತ್ತಪತ್ರಿಕೆಯ ವರದಿಗಳು. ಎಳೆವೆಯಲ್ಲಿ ಅಂದರೆ ಎಂಬತ್ತರ ದಶಕದಲ್ಲಿ ಅಂದಿನ ಸಂಯುಕ್ತ ಕರ್ನಾಟಕ ಮತ್ತು ಪ್ರಜಾವಾಣಿಗಳಲ್ಲಿ ಬರುವ ಬೆಂಗಳೂರಿನ ಸಾಂಸ್ಕೃತಿಕ ಕಾರ್ಯಕ್ರಮಗಳ ವರದಿಯಲ್ಲಿ ಕಂಡು ಬರುವ ರವೀಂದ್ರ ಕಲಾಕ್ಷೇತ್ರದ ಉಲ್ಲೇಖದ ಮೂಲಕ. ನಮ್ಮ ತಂದೆ ಯಕ್ಷಗಾನದ ನಾಮಾಂಕಿತ ಭಾಗವತರಾಗಿದ್ದ ದಿ.ಕಡತೋಕಾ ಮಂಜುನಾಥ ಭಾಗವತರು ಬಿಡುವಿಲ್ಲದೇ ಯಕ್ಷಗಾನ ಪ್ರದರ್ಶನಗಳಲ್ಲಿ ಭಾಗವಹಿಸುತ್ತಿದ್ದ ದಿನಗಳು ಅವು. ಮಳೆಗಾಲ ಬಂತೆಂದರೆ ಮುಂಬೈ ಮತ್ತು ಬೆಂಗಳೂರಿನ ಸಭಾಭವನಗಳಲ್ಲಿ ಯಕ್ಷಗಾನ ಪ್ರದರ್ಶನವನ್ನು ನೀಡಲು ತಿಂಗಳಾನುಗಟ್ಟಲೆ ಹೋಗುತ್ತಿದ್ದ ನಮ್ಮ ತಂದೆಯವರು ತಮ್ಮ ಒಡನಾಡಿಗಳೊಂದಿಗೆ ಮಾತನಾಡುವಾಗ ಉಲ್ಲೇಖಿಸುತ್ತಿದ್ದ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ ಮತ್ತು ಮುಂಬೈಯ ಷಣ್ಮುಖಾನಂದ ಸಭಾಗೃಹ, ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ ಮತ್ತದರ ಸುತ್ತ ಹೆಣೆಯಲ್ಪಟ್ಟ ವರ್ಣಮಯ ಕಲ್ಪನೆಗಳನ್ನು ನನ್ನ ಮನಸ್ಸಿನಲ್ಲಿ ಹುಟ್ಟುಹಾಕುತ್ತಿತ್ತು. ನಮ್ಮ ತಂದೆ ರವೀಂದ್ರ ಕಲಾಕ್ಷೇತ್ರದ ಹತ್ತಿರದ ಅಂದರೆ ಪುಟ್ಟಣಚೆಟ್ಟಿ ಪುರಭವನದ ಎದುರಿನ ಸರ್ಕಲ್‌ನ ಆಚೆಯಿರುವ ಎನ್.ಎಂ.ಎಚ್.ಎಂಬ ಖಾಸಗೀ ವಸತಿಗೃಹದಲ್ಲಿ ತಂಗಿರುವುದನ್ನು

ನೆನಪಿಸಿಕೊಳ್ಳುತ್ತಿದ್ದರು. ಅವರು ಹೇಳುವಂತೆ 1975ರಿಂದ 1990ರ ವರೆಗೆ ಸುಮಾರು ಹದಿನೈದು ವರ್ಷ ಪ್ರತಿವರ್ಷ ಅವರು ಬೆಂಗಳೂರು ಮತ್ತು ಮುಂಬೈಯ ಯಕ್ಷಗಾನ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಎನ್.ಎಂ.ಎಚ್.ನಲ್ಲಿಯೇ ತಂಗುತ್ತಿದ್ದ ಆ ಕಾಲದಲ್ಲಿ ಇಂದಿನಂತೆ ಕಲಾಭಿಮಾನಿಗಳ ಮನೆಗೆ ಹೋಗುವ ಪರಿಪಾಠವಿರಲಿಲ್ಲ. ಒಂದೇ ಕಡೆ ತಂಗುತ್ತಿದ್ದ ಶೇಣಿ, ಸಾಮಗ, ಚಿಟ್ಟಾಣಿ, ಮಹಾಬಲ ಹೆಗಡೆ, ಮೊದಲಾದ ಕಲಾವಿದರು ಪ್ರದರ್ಶನವಿಲ್ಲದ ಸಮಯದಲ್ಲಿ ಲೋಕಾಭಿರಾಮವಾಗಿ ಮಾತನಾಡುತ್ತಾ ಸಮಯ ಕಳೆಯುವುದು ಸಾಮಾನ್ಯವಾಗಿತ್ತು.

ಆ ಕಾಲದಲ್ಲಿ ಶ್ರೀಧರ್ಮಸ್ಥಳ ಮೇಳವು ದಿ.ಕಡತೋಕಾ ಮಂಜುನಾಥ ಭಾಗವತರ ಪ್ರಧಾನ ನಿರ್ದೇಶನದಲ್ಲಿ ಜನಪ್ರಿಯ ಪ್ರಸಂಗಗಳ ಪ್ರದರ್ಶನವನ್ನು ನಾಡಿನೆಲ್ಲೆಡೆ ಕೊಡುತ್ತಾ ಅವುಗಳನ್ನು ರವೀಂದ್ರ ಕಲಾಕ್ಷೇತ್ರದಲ್ಲಿಯೂ ಮಳೆಗಾಲದಲ್ಲಿ ನೀಡಿತ್ತು. ಪ್ರಸಿದ್ಧ ಯಕ್ಷಗಾನ ಪ್ರಸಂಗಕರ್ತರಾದ ಡಾ.ಅಮೃತ ಸೋಮೇಶ್ವರರ 'ಕಾಯಕಲ್ಪ', 'ಅಮರವಾಹಿನಿ,' 'ಮಹಾಕಲಿ ಮಗಧೇಂದ್ರ,' ಡಾ.ರಾಘವ ನಂಬಿಯಾರರ 'ಅಮರೇಂದ್ರಪದವಿಜಯಿ' ಮತ್ತು 'ಚಕ್ರೇಶ್ವರ ಪರೀಕ್ಷಿತ' ಪ್ರಸಂಗಗಳು ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶಿತವಾದುದನ್ನು ಅವರು ಆಪ್ತವಾಗಿ ನೆನಪಿಸಿಕೊಳ್ಳುತ್ತಿದ್ದರು. ಹಿರಿಯ ವೇಷಧಾರಿಗಳಾದ ಕೆ.ಗೋವಿಂದ ಭಟ್, ಕುಂಬಳೆ ಸುಂದರ ರಾಯರ ವೇಷಗಳನ್ನು ಅಂದಿನ ಕಾಲದ ಬೆಂಗಳೂರಿನ ಯಕ್ಷಗಾನ ಪ್ರಿಯರು ರವೀಂದ್ರ ಕಲಾಕ್ಷೇತ್ರದಲ್ಲಿ ಕಿಕ್ಕಿರಿದು ಸೇರಿ ಆಸ್ವಾದಿಸುತ್ತಿದ್ದರು. ಹಲವು ಪ್ರದರ್ಶನಗಳಲ್ಲಿ ಬಡಗುತಿಟ್ಟಿನಲ್ಲಿಯೂ ಭಾಗವತರಾಗಿರುತ್ತಿದ್ದ ದಿ.ಕಡತೋಕರು ಇದೇ ರವೀಂದ್ರ ಕಲಾಕ್ಷೇತ್ರದಲ್ಲಿ ಚಿಟ್ಟಾಣಿ ರಾಮಚಂದ್ರ ಹೆಗಡೆ, ಕೆರೆಮನೆ ಮಹಾಬಲ ಹೆಗಡೆ ಮೊದಲಾದ ಘಟಾನುಘಟಿ ಕಲಾವಿದರನ್ನು ಕುಣಿಸಿದ ನೆನಪು ಅಮರ. ದೇಶದ ಅನೇಕ ಪ್ರಮುಖ ನಗರಗಳ ಸಭಾಭವನಗಳಲ್ಲಿ ಪ್ರದರ್ಶನ ನೀಡಿದ ಅನುಭವವನ್ನು ಹೊಂದಿದ ದಿ.ಕಡತೋಕರು ಕಲಾವಿದರಿಗೆ ವಿಶ್ರಾಂತಿಗೆ ವಿಶಾಲವಾದ ಅವಕಾಶ, ಬಣ್ಣದ ಚೌಕಿಗೆ ಅಗತ್ಯ ಕೋಣೆಗಳು, ಮಾರ್ದನಿಯ ಸಮಸ್ಯೆಯಿಲ್ಲದ ವೇದಿಕೆ, ಬಸ್ ಸ್ಟಾಂಡ್, ರೇಲ್ವೇ ಸ್ಟೇಶನ್ ಮೊದಲಾದ ಸಂಪರ್ಕ ಕೇಂದ್ರದ ಹತ್ತಿರ ಇರುವಿಕೆ ಇವೆಲ್ಲದರಿಂದ ಕಲಾ ಪ್ರದರ್ಶನಕ್ಕೆ ಅತ್ಯಂತ ಪ್ರಶಸ್ತವಾಗಿದೆಯೆಂದು ರವೀಂದ್ರ ಕಲಾಕ್ಷೇತ್ರವನ್ನು ಗುರುತಿಸಿದ್ದರು.

ಇಂದು ಬೆಂಗಳೂರಿನಲ್ಲಿ ಯಕ್ಷಗಾನ ಪ್ರಾದೇಶಿಕವಾಗಿ ಬೇರು ಬಿಟ್ಟಿದ್ದರೂ ಅದು ಪ್ರಾರಂಭವಾದದ್ದು ಮಾತ್ರ ಪುರಭವನ ಹಾಗೂ ರವೀಂದ್ರ ಕಲಾಕ್ಷೇತ್ರದಲ್ಲಿ.

ಆ ದಿನಗಳಲ್ಲಿ ಮಳೆಗಾಲದಲ್ಲಿ ನಡೆಯುತ್ತಿದ್ದ ಜನಪ್ರಿಯ ಕಲಾವಿದರ ಒಗ್ಗೂಡುವಿಕೆಯ ಯಕ್ಷಗಾನ ಪ್ರದರ್ಶನಗಳಿಂದಲೇ ಸರಿ. ತೆಂಕು-ಬಡಗು ತಿಟ್ಟುಗಳ ಅನೇಕ ಚಾರಿತ್ರಿಕ ಆಟಗಳಿಗೆ ಹಿಮ್ಮೇಳದಲ್ಲಿ ಭಾಗವತರಾಗಿ ಮೆರೆದ ದಿ.ಕಡತೋಕರು ಮುಂದೆ ವೃದ್ಧಾಪ್ಯದಿಂದ ಮನೆಯಲ್ಲಿಯೇ ಬಂಧಿಯಾದ ದಿನಗಳಲ್ಲಿ ಬೆಂಗಳೂರಿನಲ್ಲಿ ಎರಡು ವರ್ಷ ನ್ಯಾಯವಾದಿಯಾಗಿ ಕೆಲಸ ಮಾಡುತ್ತಾ ಆಗಾಗ ಮನೆಗೆ ಹೋಗುತ್ತಿದ್ದ ನನ್ನಲ್ಲಿ ವಿಚಾರಿಸುತ್ತಿದ್ದುದು ಮಾತ್ರ ಎನ್.ಎಂ.ಎಚ್. ಎಂಬ ವಸತಿಗೃಹದ ಬಗೆಗೇ ಆಗಿತ್ತು.

ಮುಂದೆ ನಾನು ಉದ್ಯೋಗದ ನಿಮಿತ್ತ ಬೆಂಗಳೂರಿಗೆ ಬಂದಾಗ ಬಸ್ಸಿನಲ್ಲಿ ಜನಸಂದಣಿಯ ನಡುವೆ ನೇತಾಡುತ್ತಾ ಜೆ.ಸಿ.ರಸ್ತೆಯಲ್ಲಿ ಹಾದು ಹೋಗುವಾಗಲೆಲ್ಲ ವಿಶಾಲ ಪ್ರಾಂಗಣದ ಮಧ್ಯದಲ್ಲಿ ರಾರಾಜಿಸುವ ರವೀಂದ್ರ ಕಲಾಕ್ಷೇತ್ರವನ್ನು ನೋಡಿದಾಗ ನಮ್ಮ ತಂದೆ ನೆನಪಾಗುತ್ತಿದ್ದರು; ಎನ್.ಎಮ್.ಎಚ್. ಎಲ್ಲಿದೆಯೆಂದು ಇಣುಕಿ ನೋಡುತ್ತಿತ್ತು ಕಣ್ಣು; ಮಹಾನಗರದ ನಡುಮಧ್ಯಾಹ್ನದ ಗೌಜು ಗದ್ದಲದ ಮಧ್ಯದಲ್ಲಿಯೇ ಯಕ್ಷಗಾನದ ಚಂಡೆ ಮದ್ದಳೆಯ ನಾದಗಳು ನನ್ನ ಮನಸ್ಸನ್ನು ಆವರಿಸುತ್ತಿದ್ದವು.

1998ರಿಂದ 2000ದ ವರೆಗೆ ಎರಡು ವರ್ಷ ನಾನು ಬೆಂಗಳೂರಿನ ನಿವಾಸಿಯಾಗಿ ನ್ಯಾಯವಾದಿಯಾಗಿ ಸೇವೆ ಸಲ್ಲಿಸುತ್ತಿರುವಾಗ ರವಿವಾರ ಮತ್ತಿತರ ರಜಾ ದಿನಗಳಲ್ಲಿ ನಾನುಳಿದುಕೊಂಡಿದ್ದ ವಿಲ್ಸನ್ ಗಾರ್ಡನ್ನಿಗೆ ಸಮೀಪದಲ್ಲಿದ್ದ ಕಲಾಕ್ಷೇತ್ರಕ್ಕೆ ಸಂಜೆ ಹೊತ್ತು ಹೋಗಿ ಅಷ್ಟೋ ಇಷ್ಟೋ ಸಮಯ ಅಲ್ಲಿ ನಡೆಯುತ್ತಿರುವ ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಸ್ವಾದಿಸಿ ಬರುವುದು ನನ್ನ ಪರಿಪಾಠವಾಗಿತ್ತು. ಇದೇ ರವೀಂದ್ರ ಕಲಾಕ್ಷೇತ್ರದಲ್ಲಿ ನಾನು ನೋಡಿದ ಮೊದಲ ಕಲಾ ಪ್ರದರ್ಶನ ಯಾವುದೋ ಹವ್ಯಾಸೀ ತಂಡದವರು ಪ್ರದರ್ಶಿಸಿದ 'ಗೋಕುಲ ನಿರ್ಗಮನ' ನಾಟಕ. ನಾಟಕ ನೋಡಿ ಕತ್ತಲು ತುಂಬಿದ್ದ ಕಲಾಕ್ಷೇತ್ರದಿಂದ ಹೊರಬರುತ್ತಿದ್ದಂತೆ ಬಾಲ್ಯದಲ್ಲಿ ಓದಿದ ಸಂಯುಕ್ತ ಕರ್ನಾಟಕದ ವರದಿಗಳ ಪುಟದಿಂದ ಪ್ರಾರಂಭವಾದ ನನ್ನ ಮತ್ತು ರವೀಂದ್ರ ಕಲಾಕ್ಷೇತ್ರದ ಸಂಬಂಧದ ಒಂದು ಚಕ್ರ ಪೂರ್ತಿ ಒಂದು ಸುತ್ತು ತಿರುಗಿದ ಅನುಭವವಾಗಿತ್ತು.

ಅರ್ಧ ಶತಮಾನಗಳ ಪರ್ಯಂತ ನಾಡಿನ ರಾಜಧಾನಿಯನ್ನು ನಿಜ ಅರ್ಥದಲ್ಲಿ ಸಾಂಸ್ಕೃತಿಕ ರಾಜಧಾನಿಯನ್ನಾಗಿಯೂ ಪರಿವರ್ತಿಸುವಲ್ಲಿ ಚಾರಿತ್ರಿಕ ಪಾತ್ರ ನಿರ್ವಹಿಸಿದ ಹೆಮ್ಮೆಯ ರವೀಂದ್ರ ಕಲಾಕ್ಷೇತ್ರದ ಕುರಿತು ಮತ್ತೇನು ಹೇಳಬಹುದು. ಇದೊಂದು ಭವ್ಯವಾದ ಸಭಾಭವನ. ಮಹಾನಗರದ ಮಧ್ಯದಲ್ಲಿದ್ದರೂ ವಿಶಾಲವಾದ ಪ್ರಾಂಗಣವನ್ನು

ಹೊಂದಿ ಗಿಡಮರಗಳ ಮಧ್ಯದಲ್ಲಿ ಕೆಲ ಹೊತ್ತು ಗಲಾಟೆಯಿಂದ ದೂರವಿದ್ದು ಶಾಂತಿ ಹೊಂದಲು ಯೋಗ್ಯವಾದ ತಾಣವಾಗಿರುವುದು ವಿಶೇಷ. ರಾಜಕೀಯ ಪುಡಾರಿಗಳಿಗೆ ಆಚೆಯ ವಿಧಾನಸೌಧವಿದ್ದಂತೆ ಕಲಾವಿದರಿಗೆ ರವೀಂದ್ರ ಕಲಾಕ್ಷೇತ್ರ ಒಂದರ್ಥದಲ್ಲಿ ಕಲಾಕ್ಷೇತ್ರ, ಇಂತಹ ಕಲಾಕ್ಷೇತ್ರದಲ್ಲಿ ನಡೆದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ನಾನು ಭಾಗಿಯಾಗಿದ್ದೇನಾದರೂ ಜನರಿಂದ ತುಂಬಿ ಇದು ಗಿಜಿಗುಡುತ್ತಿದ್ದುದು ಮಾತ್ರ ಯಕ್ಷಗಾನ ಪ್ರದರ್ಶನಗಳಲ್ಲಿಯೇ ಆಗಿದೆ. ಅಂದರೆ ಹಲವು ರಂಗಕಲೆಗಳನ್ನು ಮೂಲವಾಗಿರುವ ಕನ್ನಡ ನಾಡಿನಲ್ಲಿ ಯಕ್ಷಗಾನವೇ ಇದರ ಪ್ರಾತಿನಿಧಿಕ ರಂಗಕಲೆ ಎಂಬುದನ್ನು ಆಗಾಗ ನಿರೂಪಿಸುವುದಕ್ಕೆ ಅವಕಾಶ ಕೊಟ್ಟಿದ್ದು ಮತ್ತು ಕೊಡುತ್ತಿರುವುದು ಕೂಡ ರವೀಂದ್ರ ಕಲಾಕ್ಷೇತ್ರವೇ ಆಗಿದೆ. ಈ ಕಲಾಕ್ಷೇತ್ರವನ್ನು ನಮ್ಮ ಮನೆಯ ಆಸ್ತಿಯಂತೆ ಕಾಪಾಡಿಕೊಂಡು ಹೋಗುವುದು ಕನ್ನಡ ನಾಡಿನ ಕಲಾವಿದರ ಹಾಗೂ ಕಲಾಪ್ರಿಯರೆಲ್ಲರ ಹೊಣೆಗಾರಿಕೆಯಾಗಿದೆ.

– ಲೇಖಕ: ಕಡತೋಕಾ ಗೋಪಾಲಕೃಷ್ಣ ಭಾಗವತ,

ವಿಳಾಸ: 'ಯಕ್ಷಾನುಗ್ರಹ', ಅಂಚೆ: ಹಳದೀಪುರ,

ಉತ್ತರ ಕನ್ನಡ:581327

ದೂರವಾಣಿ: 8762786856

ಲೇಖಕರ ಪರಿಚಯ:

ಕಡತೋಕಾ ಗೋಪಾಲಕೃಷ್ಣ ಭಾಗವತರು ಕಳೆದ ಹದಿನಾಲ್ಕು ವರ್ಷಗಳಿಂದ ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲೂಕಿನಿಂದ ಯಕ್ಷಗಾನಕ್ಕೆ ಮೀಸಲಾದ ಯಕ್ಷರಂಗ ಎಂಬ ಮಾಸಪತ್ರಿಕೆಯ ಸಂಪಾದಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಯಕ್ಷಗಾನದ ತೆಂಕು-ಬಡಗು ತಿಟ್ಟಿನ ಅಗ್ರಮಾನ್ಯ ಭಾಗವತರಾಗಿ ಪ್ರತಿಷ್ಠಿತ ಪಾರ್ತಿಸುಬ್ಬ ಪ್ರಶಸ್ತಿ ಪುರಸ್ಕೃತರೂ ಆದ ದಿ.ಕಡತೋಕಾ ಮಂಜುನಾಥ ಭಾಗವತರ ಪುತ್ರರಾದ ಇವರು ತಮ್ಮ ತಂದೆ 1957 ರಲ್ಲಿ ಪ್ರಕಟಿಸಿ ನಂತರ ನಿಲ್ಲಿಸಿದ್ದ ಯಕ್ಷಗಾನಕ್ಕೆ ಮೀಸಲಾದ ಪತ್ರಿಕೆಯನ್ನು 2005ರಲ್ಲಿ ಪುನಃ 'ಯಕ್ಷರಂಗ' ಎಂಬ ಹೆಸರಿನಲ್ಲಿ ಪ್ರಾರಂಭಿಸಿ ನಿರಂತರವಾಗಿ ಸಂಪಾದಕರಾಗಿ ಪ್ರಕಟಿಸುತ್ತಿದ್ದಾರೆ. ಯಕ್ಷಗಾನ ಪತ್ರಿಕೊದ್ಯಮಕ್ಕೆ ಹೊಸ ರೂಪವನ್ನು ಕೊಟ್ಟಿರುವ ಇವರು ತಮ್ಮ ಯಕ್ಷಗಾನ ಸಂಬಂಧಿಸಿದ ವೈಚಾರಿಕ ಬರಹಗಳಿಂದ ಯಕ್ಷಗಾನದ ಚಿಂತಕರಾಗಿ ಗುರುತಿಸಲ್ಪಟ್ಟಿದ್ದಾರಲ್ಲದೇ ತಮ್ಮ ಪತ್ರಿಕೆಯನ್ನು ಯಕ್ಷಗಾನ ಸಂಬಂಧಿತ ವಿಚಾರ ವಿನಿಮಯಕ್ಕೆ ಅಗತ್ಯವಿರುವ ಗಂಭೀರ ವೇದಿಕೆಯನ್ನಾಗಿ ರೂಪಿಸಿದ್ದಾರೆ.

ಈ ಲೇಖಕರ ತಂದೆ ದಿ.ಕಡತೋಕಾ ಮಂಜುನಾಥ ಭಾಗವತರು 70 ಮತ್ತು 80ರ ದಶಕದಲ್ಲಿ ಜನಪ್ರಿಯ ಭಾಗವತರಾಗಿ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಅನೇಕ ಚಾರಿತ್ರಿಕ ಯಕ್ಷಗಾನ ಪ್ರದರ್ಶನಗಳಲ್ಲಿ ಭಾಗವತರಾಗಿ ಭಾಗವಹಿಸಿದ ಅನುಭವಿಯಾಗಿದ್ದರು. ತಮ್ಮ ತಂದೆ ದಿ.ಕಡತೋಕಾ ಮಂಜುನಾಥ ಭಾಗವತರ ಆತ್ಮಕಥನ 'ಯಕ್ಷವನವಿಹಾರ'ವನ್ನು ನಿರೂಪಿಸಿರುವ ಇವರು ಯಕ್ಷಗಾನದ ಒಳಹೊರಗುಗಳನ್ನು ಚಿಕಿತ್ಸಕ ಬುದ್ಧಿಯಿಂದ ನೋಡಬಲ್ಲವರಾಗಿದ್ದು ಈ ಬರಹದಲ್ಲಿ ದಿ.ಕಡತೋಕಾ ಮಂಜುನಾಥ ಭಾಗವತರ ರವೀಂದ್ರ ಕಲಾಕ್ಷೇತ್ರದ ಅನುಭವಗಳನ್ನು ತಮ್ಮದೇ ಆದ ನುಡಿಗಳಲ್ಲಿ ಬಣ್ಣಿಸಿದ್ದಾರೆ.

ರವೀಂದ್ರ ಕಲಾಕ್ಷೇತ್ರ - ಸವಿನೆನಪುಗಳು

– ಪ್ರೊ|| ಎಂ.ಎಲ್. ಸಾಮಗ

ವ್ಯಷ್ಟಿನೆಲೆಯಲ್ಲಿ ಅಭಿವ್ಯಕ್ತಿಗೆ ತುಡಿಯುವ ಕಲಾಪ್ರತಿಭೆ, ಸಮಷ್ಟಿ ನೆಲೆಯಲ್ಲಿ ಪ್ರದರ್ಶನ ರೂಪ ತಾಳುವಾಗ ಕಲಾಭಿವ್ಯಕ್ತಿ ಇತರ ಮೌಲ್ಯಗಳನ್ನು ಪಡೆಯುತ್ತದೆ. ಯಾರ ಮುಂದೆ, ಎಲ್ಲಿ ತಾನು ಪ್ರದರ್ಶನ ಮಾಡುತ್ತಿದ್ದೇನೆ ಎನ್ನುವ ಸಂಗತಿ ಕಲಾವಿದನ ಆತ್ಮ ಸಂತೋಷವನ್ನು ಹಿಗ್ಗಿಸುತ್ತದೆ ಅಥವಾ ಕೆಲವೊಮ್ಮೆ ಕುಗ್ಗಿಸುತ್ತದೆ. ಪ್ರದರ್ಶನದ ಆವರಣಕ್ಕಿರುವ ಮಹತ್ವ, ಪ್ರತಿಷ್ಠೆ ಅಥವಾ ಸಾಮಾಜಿಕ ಮನ್ನಣೆ ಕಲಾ ಪ್ರದರ್ಶನದ ಯಶಸ್ಸನ್ನು ಪ್ರಭಾವಿಸುತ್ತದೆ, ಪ್ರದರ್ಶನದ ಮೌಲ್ಯವನ್ನು ನಿರ್ಧರಿಸುತ್ತದೆ. ಬದುಕಿನ ಎಲ್ಲ ಅಂಗಗಳಲ್ಲಿ ಅಂತರ್ಮುಖತೆಗಿಂತಲೂ ಬಹಿರ್ಮುಖತೆ ಪ್ರಧಾನವಾಗುತ್ತಿರುವ ಆಧುನಿಕ ಯುಗದಲ್ಲಿ ಈ ಮೇಲಿನ ಮಾತುಗಳು ಸತ್ಯವೆಂದು ನನ್ನ ಭಾವನೆ.

ಸಂಗೀತ ಅಥವಾ ಭರತನಾಟ್ಯಕ್ಕೆ ಚೆನ್ನೈನ 'ಮ್ಯೂಸಿಕ್ ಅಕಾಡೆಮಿ'ಯಲ್ಲಿ ಪ್ರದರ್ಶನಾವಕಾಶ ಸಿಕ್ಕರೆ ಕಲಾವಿದನ ಮನ್ನಣೆ ಹೆಚ್ಚುತ್ತದೆ. ಅಂತೆಯೆ, ಕರ್ನಾಟಕದ ರಾಜಧಾನಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಕಾರ್ಯಕ್ರಮ ಕೊಡುವುದು ಕಲಾವಿದರಿಗೆ ಹೆಮ್ಮೆಯ ವಿಷಯ. ಕಳೆದ 50 ವರ್ಷಗಳಲ್ಲಿ ಸರಕಾರಿ ಸ್ವಾಮ್ಯದ ಈ ಭವನ/ರಂಗಮಂಚ ಕಲಾ ಪ್ರಪಂಚಕ್ಕೆ ಕೇವಲ ಒಂದು ಕಟ್ಟೋಣವಲ್ಲ, ಪ್ರದರ್ಶನ ವೇದಿಕೆಯಲ್ಲ. ಅದು ಒಂದು ಸಂಕೇತ. ಸಮಾಜದ ಆಢ್ಯರು, ರಸಿಕರು, ಸರಕಾರದ ಹಿರಿಯ ಅಧಿಕಾರಿಗಳು ಮುಂದಿನ ಸಾಲುಗಳಲ್ಲಿ ; ಹಿಂದಿನ ಸಾಲು ಮತ್ತು ಬಾಲ್ಕನಿಯಲ್ಲಿ ಮಧ್ಯಮ ವರ್ಗದ ರಸಿಕರು ಹಾಗೂ ಜನಸಾಮಾನ್ಯರು. ಹೀಗಿರುವ ಸಮ್ಮಿಶ್ರ ಪ್ರೇಕ್ಷಕವರ್ಗ ಕಲಾಸ್ವಾದನೆಯ ಸಂಕೀರ್ಣ ಪ್ರತಿನಿಧಿ. ತಾನು ರವೀಂದ್ರ ಕಲಾಕ್ಷೇತ್ರದ ವೇದಿಕೆಯಲ್ಲಿ ಕಾಣಿಸಿಕೊಂಡಿದ್ದೇನೆ, ಪ್ರದರ್ಶನ ನೀಡಿದ್ದೇನೆ ಎನ್ನುವುದು ಕಲಾವಿದನಿಗೆ ಹಿಗ್ಗಿನ, ಧನ್ಯತೆಯ ಕ್ಷಣ.

ಕರಾವಳಿ ಕರ್ನಾಟಕದ ಹಳ್ಳಿಯಲ್ಲಿ ಬೆಳೆದ ನಾನು 1970ರ ದಶಕದಲ್ಲಿ ಪಿ.ಯು.ಸಿ. ಪರೀಕ್ಷೆಯಲ್ಲಿ ಉತ್ತರ ಪತ್ರಿಕೆಗಳ ಮೌಲ್ಯಮಾಪನಕ್ಕಾಗಿ ಬೆಂಗಳೂರಿಗೆ ಬಂದಾಗ ಒಂದು ದಿನ ಸಂಜೆ ಡಾ|| ಪದ್ಮಾ ಸುಬ್ರಹ್ಮಣ್ಯಂ ಅವರ ನೃತ್ಯ ನೋಡಲು ರವೀಂದ್ರ ಕಲಾಕ್ಷೇತ್ರಕ್ಕೆ ಹೋಗಿದ್ದೆ. ಆ ಸ್ಥಳಕ್ಕೆ ಹೊಸಬನಾದ್ದರಿಂದ ಹಿಂಜರಿಕೆಯ ಅಂಜಿಕೆಯಿಂದಲೇ ಒಳ ಪ್ರವೇಶ ಮಾಡಿದ್ದೆ. ನಾಡಿನ ಉತ್ತಮ ಕಾರ್ಯಕ್ರಮಗಳೆಲ್ಲ ಇಲ್ಲೇ ನಡೆಯುವುದು ಎನ್ನುವುದು ಮುಂದಿನ ವರ್ಷಗಳಲ್ಲಿ ನನಗೆ ಮನದಟ್ಟಾಯಿತು. ನನ್ನ ತಂದೆಯವರಿಗೆ (ಮಲ್ಪೆ ಶಂಕರನಾರಾಯಣ ಸಾಮಗ) ರಾಜ್ಯೋತ್ಸವ ಪ್ರಶಸ್ತಿ ಪ್ರದಾನವೂ ಇಲ್ಲೇ ನಡೆದುದು. ಆ ದಿನ ವೇದಿಕೆಯ ಮೇಲೆ ಸಾಲಾಗಿ ಛಾಯಾ ಚಿತ್ರ ಗ್ರಾಹಕರು ಪ್ರಶಸ್ತಿ ಪ್ರದಾನದ ದೃಶ್ಯಗಳನ್ನು ಸೆರೆಹಿಡಿಯುತ್ತಿರುವಾಗ ಪ್ರೇಕ್ಷಕರ ಕಣ್ಣಿಗೆ ತಡೆಗೋಡೆಯಂತೆ ನಿಂತಿದ್ದರು. ಆಗ ನಾನು ಬಾಲ್ಕನಿಯಲ್ಲಿ ಕುಳಿತಿರಬೇಕಾಗಿತ್ತು ಎಂದು ಭಾವಿಸಿದ್ದೆ. ಆದರೆ ಬಾಲ್ಕನಿಯಲ್ಲಿ ಕುಳಿತು ಯಕ್ಷಗಾನ ನೋಡಿದಾಗ ಯಕ್ಷಗಾನ ವೇಷಧಾರಿಗಳ ಕಿರೀಟದ ಮೇಲ್ಭಾಗವೇ ಕಾಣುತ್ತಿತ್ತು! ಭವನದೊಳಗೆ ಬಾಲ್ಕನಿ ಇದ್ದಾಗ ಈ ಅನುಭವ ಸಾಮಾನ್ಯವಾದರೂ ರವೀಂದ್ರ ಕಲಾಕ್ಷೇತ್ರದ ಬಾಲ್ಕನಿಯ ಆಸನಗಳು ಸಂಗೀತ, ಭಾಷಣ ಕೇಳುವುದಕ್ಕೆ ಅನುಕೂಲಕರ ಹೊರತು ನಾಟಕ, ಆಟ ನೋಡಲು ಯೋಗ್ಯವಲ್ಲ ಎಂದು ಈಗಲೂ ನನಗನಿಸುತ್ತದೆ, ಇರಲಿ.

ಉಡುಪಿಯ ಉದ್ಯಾವರ ಮಾಧವಾಚಾರ್ಯರು ಸಮೂಹ ತಂಡದಿಂದ ಬಿ.ಎಂ.ಶ್ರೀ ಅವರ 'ಅಶ್ವತ್ಥಾಮನ್' (ಹಳೆಗನ್ನಡ) ನಾಟಕವನ್ನು ಅಲ್ಲಿ ಮಾಡಿಸಿದಾಗ (ಅದರಲ್ಲಿ ನಾನು 'ದ್ರೋಣ') 'ಭೀಷ್ಮ' ಏಕವ್ಯಕ್ತಿ ಪ್ರದರ್ಶನ ಮಾಡಿದಾಗ (ಅದರಲ್ಲಿ ನಾನು ಭೀಷ್ಮ) ರವೀಂದ್ರ ಕಲಾಕ್ಷೇತ್ರದ ವೇದಿಕೆಯ ವೈಶಾಲ್ಯ, ನೇಪಥ್ಯಗಳ ಅನುಕೂಲತೆ ಇತ್ಯಾದಿಗಳನ್ನು ಅನುಭವಿಸಿ ಸಂತೋಷಪಟ್ಟಿದ್ದೆ. ಬೆಂಗಳೂರಿನ ಕಲಾಸಂಘಟಕರು ಅಲ್ಲಿ ಇಡೀ ರಾತ್ರಿ ಯಕ್ಷಗಾನ ಏರ್ಪಡಿಸಿದಾಗ ಮಹಾಬಲ ಹೆಗಡೆಯವರ ದಶರಥ, ಜಮದಗ್ನಿಗೆ ನನ್ನ ರಾಮ, ಪರಶುರಾಮ, ಇದು ಒಂದು ಸುಂದರ ನೆನಪು. ಇಡಗುಂಜಿ ಯಕ್ಷಗಾನ ಮಂಡಳಿಯವರು ಕೆರೆಮನೆ ಶಿವಾನಂದರ ನೇತೃತ್ವದಲ್ಲಿ ಕೃಷ್ಣಸಂಧಾನ, ದಕ್ಷಯಜ್ಞ ಆಟ ಆಡಿಸಿದಾಗ ಕಲಾಕ್ಷೇತ್ರದ ವೇದಿಕೆಯಲ್ಲಿ ಕೌರವ, ದಕ್ಷ ಪಾತ್ರ ನಿರ್ವಹಿಸಿದ ಆತ್ಮಸಂತೋಷ ನನ್ನ ಬದುಕಿನ ಮುಖ್ಯ ಸಂದರ್ಭ. ನಮ್ಮ ಕುಟುಂಬದ ಎಲ್ಲ ಕಲಾವಿದರು – ಮಲ್ಪೆ ಶಂಕರನಾರಾಯಣ ಸಾಮಗ, ರಾಮದಾಸ ಸಾಮಗ ವಾಸುದೇವ ಸಾಮಗ, ಹರ್ಷ ಸಾಮಗ, ಡಾ। ಪ್ರದೀಪ ಸಾಮಗ – ಒಂದಿಲ್ಲೊಂದು ಸಂದರ್ಭದಲ್ಲಿ ರವೀಂದ್ರ ಕಲಾಕ್ಷೇತ್ರದ ಕಾರ್ಯಕ್ರಮಗಳಲ್ಲಿ

ಭಾಗವಹಿಸಿದವರೆ. ಯಕ್ಷಗಾನದ ರಂಗಸ್ಥಳ ಚಿಕ್ಕದು. ಆದರೆ ಕಲಾಕ್ಷೇತ್ರದ ವೇದಿಕೆ ತುಂಬ ಅಗಲವಾದುದು. ವೇದಿಕೆಯ ಸ್ಥಳದ ನಿರ್ವಹಣೆಯೂ (Space management) ಕಲಾವಿದನಿಗೆ ಒಂದು ಸವಾಲು.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯನಾಗಿದ್ದಾಗ ಪ್ರಶಸ್ತಿ ಪ್ರದಾನ ಸಮಾರಂಭ ರವೀಂದ್ರ ಕಲಾಕ್ಷೇತ್ರದಲ್ಲೇ ನಡೆದಿತ್ತು. ಈ ಸಮಾರಂಭದಲ್ಲಿ ನಾನು ಸ್ವಯಂಸೇವಕ (ಮುಖ್ಯಮಂತ್ರಿ ಶ್ರೀ ಎಸ್.ಎಂ. ಕೃಷ್ಣ ಅವರೇ ಪ್ರಶಸ್ತಿ ಪ್ರದಾನ ಮಾಡಿದವರು). ಅಂದಿನಿಂದ ಕಲಾಕ್ಷೇತ್ರದೊಂದಿಗೆ ನನ್ನ ಸಲುಗೆ ಹೆಚ್ಚಾಯಿತು.

ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿಯ ಅಧ್ಯಕ್ಷನಾಗಿದ್ದ ಅವಧಿಯಲ್ಲಿ ರವೀಂದ್ರ ಕಲಾಕ್ಷೇತ್ರವು ನನ್ನ ನೆರೆಮನೆಯಂತಾಯಿತು. ಚಿಟ್ಟಾಣಿ ರಾಮಚಂದ್ರ ಹೆಗಡೆಯವರಿಗೆ ಪದ್ಮಶ್ರೀ ಪುರಸ್ಕಾರ ದೊರೆತಾಗ ಅಕಾಡೆಮಿಯ ವತಿಯಿಂದ ಅಭಿನಂದನಾ ಕಾರ್ಯಕ್ರಮವನ್ನು ರವೀಂಧ್ರ ಕಲಾಕ್ಷೇತ್ರದಲ್ಲಿ 4–5–2012ರ ಶುಕ್ರವಾರ ಹಮ್ಮಿಕೊಳ್ಳಲಾಗಿತ್ತು. ಅಕಾಡೆಮಿಯಲ್ಲಿ ಆ ಸಮಯ ಸದಸ್ಯರ ನೇಮಕ ಇನ್ನೂ ಆಗಿರಲಿಲ್ಲವಾದ್ದರಿಂದ ಸರಕಾರದ ಅಧಿಕಾರಿಗಳ ಸಹಕಾರದಿಂದ ಈ ಕಾರ್ಯಕ್ರಮ ಸಂಯೋಜಿಸಿದ್ದೆ. ವೇದಿಕೆಯ ಗೌರವದ ಬಗ್ಗೆ ಕಾಳಜಿ ಇದ್ದ ಕನ್ನಡ ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಯವರಾದ ಶ್ರೀ ಬಸವರಾಜರು "ಸಾಮಗರೆ, ಕಾರ್ಯಕ್ರಮಕ್ಕೆ ಪ್ರೇಕ್ಷಕರ ಕೊರತೆಯಾಗಲಿಕ್ಕಿಲ್ಲವಲ್ಲ?" ಎಂದು ವಿಚಾರಿಸಿದ್ದರು (ಕೆಲವೊಮ್ಮೆ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯುವ ಸಾಹಿತ್ಯಕ ಕಾರ್ಯಕ್ರಮಗಳಲ್ಲಿ ಪ್ರೇಕ್ಷಕರಿಗಿಂತ ವೇದಿಕೆಯಲ್ಲೇ ಜನ ಹೆಚ್ಚಿರುತ್ತಾರೆ ಎಂಬ ವ್ಯಂಗ್ಯೋಕ್ತಿಯನ್ನು ನಾನು ಕೇಳಿದ್ದೇನೆ). ಆದರೆ ಯಕ್ಷಗಾನಾಭಿಮಾನಿಗಳು ಎಂದೂ ರವೀಂದ್ರ ಕಲಾಕ್ಷೇತ್ರದ ಘನತೆಗೆ ಕುಂದು ತಂದಿಲ್ಲ. ಅಂದಿನ ಜನದಟ್ಟಣೆಯನ್ನು ಕಂಡು ಶ್ರೀ ಬಸವರಾಜರಿಗೂ, ಮಂತ್ರಿಗಳಾದ ಶ್ರೀ ಗೋವಿಂದ ಕಾರಜೋಳರಿಗೂ ಆಶ್ಚರ್ಯ (ಈ ಕಾರ್ಯಕ್ರಮದ ಯಶಸ್ಸಿಗೆ ಆತ್ಮೀಯ ಮಿತ್ರ ಶ್ರೀನಿವಾಸ ಸಾಸ್ತಾನರ ರವೀಂದ್ರ ಕಲಾಕ್ಷೇತ್ರದಲ್ಲಿ ಕಾರ್ಯಕ್ರಮ ಸಂಘಟಿಸುವ ಜಾಣ್ಮೆಯೂ ಒಂದು ಕಾರಣ). ಅಂದು ಚಿಟ್ಟಾಣಿಯವರೊಂದಿಗೆ ಅವರ ಮಗ ಹಾಗೂ ಮೊಮ್ಮಗ, ಹೀಗೆ ಮೂರು ತಲೆಮಾರಿನವರು ಒಂದೇ ಪ್ರದರ್ಶನದಲ್ಲಿ ಭಾಗಿಯಾದದ್ದು ವಿಶೇಷ. ಅಂದು ಮುಖ್ಯ ಅತಿಥಿಗಳಾಗಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ॥ ಚಂದ್ರಶೇಖರ ಕಂಬಾರ ಭಾಗವಹಿಸಿದ್ದರು. 'ಸುಧನ್ವಾರ್ಜುನ' ಎಂಬ ಪ್ರಸಂಗ ಬಹಳ ಉತ್ತಮವಾಗಿ ಪ್ರದರ್ಶನಗೊಂಡಿತು. ಅಂತೆಯೆ, ಅಕಾಡೆಮಿಯ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಸ್ಥಳ ಆಯ್ಕೆ ಮಾಡುವಾಗ ಸಂಸ್ಕೃತಿ ಇಲಾಖೆಯ

ಅಧಿಕಾರಿಗಳು ಸೂಚಿಸುವುದು ಇದೇ ಸ್ಥಳವನ್ನು. ರವೀಂದ್ರ ಕಲಾಕ್ಷೇತ್ರಕ್ಕೆ ಒಂದು 'ಸ್ಥಳ ಮಹಾತ್ಮೆ' ಇದೆ ಎಂದರೂ ತಪ್ಪಿಲ್ಲ. (ರವೀಂದ್ರ ಕಲಾಕ್ಷೇತ್ರದ 'ಸ್ಥಳ ಪುರಾಣ' ನಾನು ತಿಳಿದವನಲ್ಲ). ರವೀಂದ್ರ ಕಲಾಕ್ಷೇತ್ರದ ಆವರಣ ಸಾಂಸ್ಕೃತಿಕ ಕಾರ್ಯಕ್ರಮಗಳ ತವರು ಇದ್ದಂತೆ. ನಮ್ಮ ಯಕ್ಷಗಾನ ಬಯಲಾಟ ಅಕಾಡೆಮಿ ಕಲಾಕ್ಷೇತ್ರದ ಮಹಿಳೆಯರ ವಿಶ್ರಾಂತಿ ಕೊಠಡಿಯಲ್ಲಿ 27-08-2012ರಂದು ಒಂದು ದಿನ ಸಂಪೂರ್ಣವಾಗಿ ಯಕ್ಷಗಾನ ಮೂಡಲಪಾಯದ ಭಾಗವತಿಕೆಯ ಅಧ್ಯಯನ ಶಿಬಿರವನ್ನು ಏರ್ಪಡಿಸಿತ್ತು. ಹಿರಿಯ ಜಾನಪದ ತಜ್ಞರಾದ ಶ್ರೀ ಚಿಕ್ಕೆರೆ ಶಿವಶಂಕರ್ ಅವರು ಆಶಯ ಭಾಷಣವನ್ನು ನೀಡಿದ್ದರು. ಅಂದಿನ ರವೀಂದ್ರ ಕಲಾಕ್ಷೇತ್ರದ ವ್ಯವಸ್ಥಾಪಕರಾದ ಶ್ರೀ ಹಿರಿಯಣ್ಣ ಉದ್ಘಾಟಿಸಿದ್ದರು. ಶ್ರೀ ಕಲ್ಮನೆ ಎ.ಎಸ್. ನಂಜಪ್ಪ, ಶ್ರೀ ಕಾ.ನ. ದಾಸಾಚಾರ್, ಶ್ರೀ ರಮೇಶ್ ಬೇಗಾರ್ ಮುಂತಾದವರು ಭಾಗವಹಿಸಿದ್ದರು. ಅದೇ ರೀತಿ 20-12-2012ರಂದು ಇದೇ ಕಲಾಕ್ಷೇತ್ರದಲ್ಲಿ 'ಯಕ್ಷ ಬಯಲಾಟ ಪರಂಪರಾ – ನಾದ ನೃತ್ಯ ಸಂಗಮ' ಎಂಬ ಅಪೂರ್ವ ಕಾರ್ಯಕ್ರಮ ಆಯೋಜಿಸಿತ್ತು. ಇದರಲ್ಲಿ ಸರ್ವಶ್ರೀ ಗುರು ಸಂಜೀವಸುವರ್ಣ, ಸತೀಶ ಕೆದ್ಲಾಯ, ಐನ್‌ಬೈಲು ಪರಮೇಶ್ವರ ಹೆಗಡೆ, ಕೆ. ದೇವದಾಸ್, ಕೃಷ್ಣಮೂರ್ತಿ ಮುಂತಾದವರು ಭಾಗವಹಿಸಿದ್ದರು. ಅಂದು ಲೋಕಾಪುರದ ಶ್ರೀ ಕೃಷ್ಣ ದೇಶಪಾಂಡೆಯವರ ಕೃಷ್ಣ ಪಾರಿಜಾತ ತಂಡ ಹಾಗೂ ಹಾವೇರಿ ಜಿಲ್ಲೆಯ ಮಾಸನಕಟ್ಟೆಯ ಬಸವೇಶ್ವರ ದೊಡ್ಡಾಟ ಮಂಡಳಿಯೂ ಕೂಡ ಕಾರ್ಯಕ್ರಮ ನೀಡಿದ್ದರು.

ಕಲಾಕ್ಷೇತ್ರದ ಪಕ್ಕದಲ್ಲಿರುವ ನಯನ ಸಭಾಂಗಣವೂ ಕೂಡ ಕಾಲಮಿತಿ ಯಕ್ಷಗಾನ ಪ್ರದರ್ಶನಕ್ಕೆ ಹಾಗೂ ವಿಚಾರಸಂಕಿರಣಗಳಿಗೆ ಹೇಳಿಮಾಡಿಸಿದಂತಿದೆ. ದಿನಾಂಕ 05.08.2012ರಂದು ಯಕ್ಷಗಾನದಲ್ಲಿ 'ಔಚಿತ್ಯ ವಿವೇಚನೆ' – ಪ್ರಾತ್ಯಕ್ಷಿಕೆ-ಪ್ರದರ್ಶನ-ಸಂವಾದ ಎಂಬ ಒಂದು ದಿನದ ಕಾರ್ಯಕ್ರಮವನ್ನು ಯಕ್ಷಗಾನ ಬಯಲಾಟ ಅಕಾಡೆಮಿ ಆಯೋಜಿಸಿತ್ತು. ಅಂದಿನ ಕಾರ್ಯಕ್ರಮದಲ್ಲಿ ಪದ್ಮಶ್ರೀ ಚಿಟ್ಟಾಣಿ ರಾಮಚಂದ್ರ ಹೆಗಡೆ, ಡಾ॥ ಕೊಳ್ಯೂರು ರಾಮಚಂದ್ರರಾವ್, ದಿವಾಕರ ಹೆಗಡೆ, ಶ್ರೀಧರ ಹಂದೆ, ಡಾ॥ ಕಬ್ಬಿನಾಲೆ ವಸಂತ ಭಾರದ್ವಾಜ, ನೆಬ್ಬೂರು ನಾರಾಯಣ ಭಾಗವತ, ತೆಂಕಬೈಲು ತಿರುಮಲೇಶ್ವರ ಶಾಸ್ತ್ರಿ, ಹೆರಂಜಾಲು ಗೋಪಾಲ ಗಾಣಿಗ, ಕೆ. ಗೋವಿಂದ ಭಟ್, ತೀರ್ಥಹಳ್ಳಿ ಗೋಪಾಲಾಚಾರ್, ನೀಲ್ಕೋಡು ಶಂಕರಹೆಗಡೆ, ಉಜಿರೆ ಅಶೋಕ್‌ಭಟ್, ಗೌರಿಸಾಸ್ತಾನ ಅವರು ಭಾಗವಹಿಸಿದ್ದರು. ಇದು ಕೂಡ ಬಹಳ ಅರ್ಥಪೂರ್ಣವಾದ, ಯಶಸ್ವಿಯಾದ ಕಾರ್ಯಕ್ರಮವಾಗಿತ್ತು.

ರವೀಂದ್ರ ಕಲಾಕ್ಷೇತ್ರದ ವೇದಿಕೆಯಲ್ಲಿ, ಮಂತ್ರಿ ಮಹೋದಯರಿಂದ ನೀಡಲ್ಪಡುವ ಪ್ರಶಸ್ತಿ ಪುರಸ್ಕಾರಗಳಿಂದ ಕಲಾವಿದರು ಮಹೋನ್ನತಿಯ ಭಾವ ಹೊಂದುವುದನ್ನು ನಾನು ಕಂಡಿದ್ದೇನೆ. ಇಲ್ಲಿಯ ಸಿಬ್ಬಂದಿ ವರ್ಗದವರೂ ಇಂಥ ಕಾರ್ಯಕ್ರಮ ನಿರ್ವಹಿಸುವುದರಲ್ಲಿ ಪರಿಣಿತರು, ಚಾಣಾಕ್ಷರು. ರವೀಂದ್ರ ಕಲಾಕ್ಷೇತ್ರದೊಂದಿಗಿನ ನನ್ನ ಒಡನಾಟ ನನಗೆ ಸದಾ ಸಂತೃಪ್ತಿ ಕೊಡುವ ಹಸಿರು ನೆನಪು.

– ಪ್ರೊ॥ ಎಂ.ಎಲ್. ಸಾಮಗ
ನಿವೃತ್ತ ಪ್ರಾಂಶುಪಾಲ, ಯಕ್ಷಗಾನ ಕಲಾವಿದ
ಮಾಜಿ ಅಧ್ಯಕ್ಷ, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ
ಅಂಚೆ : ಮಲ್ಪೆ, ಉಡುಪಿ – 576 108
ಚ.ದೂ. : 98442 66398

ಲೇಖಕರ ಪರಿಚಯ:

ಪ್ರೊ.ಎಂ.ಎಲ್. ಸಾಮಗರು ಖ್ಯಾತ ಅರ್ಥಧಾರಿಗಳು, ಹಿರಿಯ ಗಾಂಧಿವಾದಿಗಳು, ನುರಿತ ಯಕ್ಷಗಾನ ಕಲಾವಿದರಾಗಿರುವ ಶ್ರೀ ಮಲ್ಪೆ ಶಂಕರನಾರಾಯಣ ಸಾಮಗರ ಸುಪುತ್ರರು. ವೃತ್ತಿಯಲ್ಲಿ ಆಂಗ್ಲ ಪ್ರಾಧ್ಯಾಪಕರಾಗಿ ಕಾಲೇಜಿನ ಪ್ರಾಂಶುಪಾಲರಾಗಿ ನಿವೃತ್ತಿ ಹೊಂದಿದವರು. ಶ್ರೀ ಎಂ.ಎಲ್. ಸಾಮಗರು ಕೂಡ ಯಕ್ಷಗಾನ ಕಲಾವಿದರಾಗಿ, ಅರ್ಥಧಾರಿಗಳಾಗಿ ಖ್ಯಾತಿ ಪಡೆದವರು. ಇಂಗ್ಲೀಷ್ ಭಾಷೆಯ ಯಕ್ಷಗಾನದಲ್ಲೂ ಭಾಗವಹಿಸಿ ಅಲ್ಲೂ ಹಿರಿಮೆ ಗಳಿಸಿದವರು. ಯಕ್ಷಗಾನದ ಕುರಿತಾದ ಆಳವಾದ ಜ್ಞಾನ, ಅನುಭವಗಳಿಂದಾಗಿ ಕರ್ನಾಟಕ ಸರಕಾರವು ಇವರನ್ನು ಯಕ್ಷಗಾನ ಬಯಲಾಟ ಅಕಾಡೆಮಿ ಅಧ್ಯಕ್ಷರನ್ನಾಗಿ ನಿಯೋಜಿಸಿತ್ತು. ಇವರ ಕಾಲಾವಧಿಯಲ್ಲಿ ಅಕಾಡೆಮಿಯು ಅನೇಕ ಕಾರ್ಯಕ್ರಮಗಳನ್ನು ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿತ್ತು. ಯಕ್ಷಗಾನದ ಇತಿಹಾಸದಲ್ಲಿ ಅಸಂಖ್ಯ ಕಲಾವಿದರನ್ನು ಕೊಡುಗೆಯಾಗಿ ನೀಡಿರುವ ಮಲ್ಪೆಯ ಸಾಮಗ ಮನೆತನಕ್ಕೆ ಹಿರಿಯ ಸ್ಥಾನವಿದೆ.

ವೃತ್ತಿ ಮೇಳಗಳ ಕಲಾಕ್ಷೇತ್ರದ ನಂಟು

– ವೈ. ಕರುಣಾಕರಶೆಟ್ಟಿ
(ಸಂದರ್ಶನ)

80–90ರ ದಶಕಗಳಲ್ಲಿ ಬೆಂಗಳೂರಿನ ಯಕ್ಷಗಾನ ಪ್ರದರ್ಶನಕ್ಕೆ ಬಡಗುತಿಟ್ಟಿನ ಮೇಳಗಳನ್ನು ಹೆಚ್ಚಾಗಿ ಕರೆತರುತ್ತಿದ್ದವರು. ಆ ಕಾಲದ ಪ್ರಸಿದ್ಧ ಸ್ತ್ರೀವೇಷಧಾರಿ ಗಳಾಗಿರುವ ಶ್ರೀ ಕೋಟ ವೈಕುಂಠ ಮತ್ತು ಶ್ರೀ ಅರಾಟೆ ಮಂಜುನಾಥ್ ಅವರು. ಬಡಗುತಿಟ್ಟಿನಲ್ಲಿ ಡೇರೆ ಮೇಳಗಳಾಗಿ ಖ್ಯಾತಿಗಳಿಸಿದ ಶ್ರೀ ಗುರುಪ್ರಸಾದಿತ ಯಕ್ಷಗಾನ ಮಂಡಳಿ ಸಾಲಿಗ್ರಾಮ ಹಾಗೂ ಶ್ರೀ ಅನಂತ ಪದ್ಮನಾಭ ದಶಾವತಾರ ಯಕ್ಷಗಾನ ಮಂಡಳಿ ಪೆರ್ಡೂರು ಇವರು ತಮ್ಮ ಮೇಳದ ಆಟಗಳನ್ನು ಬೆಂಗಳೂರಿನಲ್ಲಿ ಕಳೆದ 25 ವರ್ಷಗಳಿಂದ ಪ್ರದರ್ಶಿಸುತ್ತಿದ್ದಾರೆ. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರವು ಈ ಮೇಳಗಳಿಗೆ ಅಚ್ಚುಮೆಚ್ಚಿನ ತಾಣವಾಗಿದೆ. ಕಲಾಕ್ಷೇತ್ರದ ಸುವರ್ಣ ಮಹೋತ್ಸವದ ವರ್ಷ ಅಂದರೆ 2015–16ರ ತಿರುಗಾಟದಲ್ಲಿ ಪೆರ್ಡೂರು ಮೇಳದವರೊಬ್ಬರೇ 32 ಆಟಗಳನ್ನು ಕಲಾಕ್ಷೇತ್ರದಲ್ಲಿ ಆಡಿದ್ದಾರೆ. ಇನ್ನುಳಿದ ಬಡಗಿನ ಮೇಳಗಳ ಆಟಗಳು, ತೆಂಕುತಿಟ್ಟಿನ ಆಟಗಳು, ಅತಿಥಿ ಕಲಾವಿದರ ಕೂಡುವಿಕೆಯಿಂದಾಗಿ ನಡೆಯುವ ಆಟಗಳು ಎಲ್ಲಾ ಒಟ್ಟಿಗೆ ಕನಿಷ್ಠ 90 ಪ್ರದರ್ಶನಗಳಾದರೂ ಮಳೆಗಾಲದ ಆರು ತಿಂಗಳಲ್ಲಿ ಇಲ್ಲಿ ನಡೆದಿರಬಹುದು. ಅಂದರೆ ಪ್ರತಿಶತ 50ರಷ್ಟು ಕಲಾಕ್ಷೇತ್ರದ ವೇದಿಕೆ ಯಕ್ಷಗಾನಕ್ಕೆ ಲಭಿಸಿದೆ. ಈ ಬಾಹುಳ್ಯ ಯಕ್ಷಗಾನ ಹಾಗೂ ಕಲಾಕ್ಷೇತ್ರದ ನಂಟನ್ನು ಬಿತ್ತರಿಸುತ್ತದೆ. ಕಳೆದ 34 ವರ್ಷಗಳಿಂದ ಪೆರ್ಡೂರು ಮೇಳವನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದಿರುವ ವೈ. ಕರುಣಾಕರ ಶೆಟ್ಟಿಯರು ಕಳೆದ 25 ವರ್ಷಗಳಿಂದ ಸತತವಾಗಿ ಬೆಂಗಳೂರಿಗೆ 'ತಿರುಗಾಟ' ಮಾಡುತ್ತಿರುವವರು. ಸರಾಸರಿ ವರ್ಷಕ್ಕೆ 20 ಪ್ರದರ್ಶನಗಳಾದರೂ ಈ ಮೇಳದ ಆಟ ಕಲಾಕ್ಷೇತ್ರದಲ್ಲಿ ನಡೆಯುತ್ತದೆ. ಈ ಮೂಲಕ ಇವರ ಪೆರ್ಡೂರು ಮೇಳದ 500 ಪ್ರದರ್ಶನಗಳಾದರೂ ಬೆಂಗಳೂರಿನಲ್ಲಿ ನಡೆದಿವೆ.

ಈ ಹಿನ್ನೆಲೆಯಲ್ಲಿ ಪೆರ್ಡೂರು ಮೇಳದ ಯಜಮಾನರಾದ ಶ್ರೀ ವೈ. ಕರುಣಾಕರ ಶೆಟ್ಟಿಯವರ ವಿಚಾರಗಳು ವೃತ್ತಿಯ ಯಕ್ಷಗಾನ ರಂಗಭೂಮಿ ಹಾಗೂ ರವೀಂದ್ರ ಕಲಾಕ್ಷೇತ್ರದ ನಂಟನ್ನು ಬಿಡಿಸಿ ತೋರಿಸುವಲ್ಲಿ ಮುಖ್ಯವಾಗುತ್ತದೆ.

ಇವರ ವೃತ್ತಿಪರ ನಿಲುವು ಯಕ್ಷಗಾನದ ನಿಜವಾದ ಮುಖವನ್ನು ಪರಿಚಯಿಸುತ್ತದೆ.

❖ ಪೆರ್ಡೂರು ಮೇಳ ಹೆಚ್ಚಾಗಿ ಪ್ರತಿವರ್ಷ ಒಂದಲ್ಲಾ ಒಂದು ಹೊಸ ಪ್ರಸಂಗವನ್ನು ಪ್ರದರ್ಶಿಸುತ್ತಾ ಬಂದಿದೆ. ಹೊಸ ಪ್ರಸಂಗಕಾರರಾದ ಶ್ರೀ ಪವನ್ ಕಿರಣಕೆರೆ, ಶ್ರೀ ದೇವದಾಸ್, ಶ್ರೀ ಚಂದ್ರಶೇಖರ ಶೆಟ್ಟಿ ಮುಂತಾದವರು ನಮ್ಮ ಮೇಳಕ್ಕೆ ಯೋಗ್ಯವಾಗುವ ಪ್ರಸಂಗಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಊರಿನಲ್ಲಿ ಪ್ರದರ್ಶಿಸಿ ಜಯಭೇರಿ ಗಳಿಸಿದ ಪ್ರಸಂಗಗಳ ಮರುಪ್ರದರ್ಶನಗಳನ್ನು ಬೆಂಗಳೂರಿನಲ್ಲಿ ನಮ್ಮ ಮೇಳದಿಂದ ಪ್ರದರ್ಶಿತಗೊಳ್ಳುತ್ತವೆ. ಸಂಘಟಕರು ಕೂಡ ಆ ಪ್ರಸಂಗಗಳ ಪ್ರದರ್ಶನಕ್ಕೆ ಒತ್ತಾಯ ಮಾಡುತ್ತಾರೆ. ಮೂರು ದಶಕಗಳ ಕೆಳಗೆ ದಿ. ಕಾಳಿಂಗ ನಾವಡರ 'ನಾಗಶ್ರೀ'ಗೆ ಹೆಗಲೆಣೆಯಾಗಿ ನಮ್ಮ ಮೇಳದ 'ಶೂದ್ರತಪಸ್ವಿನಿ' ಜಯಭೇರಿ ಬಾರಿಸಿತ್ತು. ಅದೇ ರೀತಿ ಸಿರಿಸಂಪಿಗೆ, ಗಿರಿಮಲ್ಲಿಗೆ, ಗಗನತಾರೆ, ಶಂಕರಾಭರಣ, ಕ್ಷಮಯಾಧರಿತ್ರಿ, ಯುಗ್ಮಯಾಮಿ, ಪದ್ಮಪಲ್ಲವಿ, ನಾಗವಲ್ಲಿ ಮುಂತಾದ ಪ್ರದರ್ಶನಗಳು ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶನಗೊಂಡು ಅಭಿಮಾನಿಗಳ ಮನಸೂರೆಗೊಂಡಿವೆ. ಇವುಗಳಲ್ಲದೆ ಪೌರಾಣೀಕ ಪ್ರಸಂಗಗಳಾದ ಭೀಷ್ಮವಿಜಯ, ಕುಶಲವರ ಕಾಳಗ, ಸುಧನ್ವ ಕಾಳಗ, ಬಬ್ರುವಾಹನ ಕಾಳಗ ಮುಂತಾದವುಗಳು ಕೂಡ ಹೆಸರು ಮಾಡಿವೆ. 2006ರಲ್ಲಿ ಇದೇ ಕಲಾಕ್ಷೇತ್ರದ ವೇದಿಕೆಯ ಮೇಲೆ ನಮ್ಮ ಕಲಾವಿದರ ಮಧ್ಯೆ 'ಅಭಿಮನ್ಯು ಕಾಳಗ'ದ ಜೋಡಾಟವನ್ನು ಏರ್ಪಡಿಸಿದ್ದು ಕೂಡ ಉಲ್ಲೇಖನಾರ್ಹ. ಕಲಾಕ್ಷೇತ್ರದ ವೇದಿಕೆ ಜೋಡಾಟದ ತಾಣವಾಗಿ ಬೆಂಗಳೂರಿನ ಪ್ರೇಕ್ಷಕರನ್ನು ಆಗ ರಂಜಿಸಿದ್ದು ವಿಶೇಷ.

❖ ನಮ್ಮ ಮೇಳದ 34 ವರ್ಷಗಳ ಇತಿಹಾಸದಲ್ಲಿ ಖ್ಯಾತ ಭಾಗವತರುಗಳಾದ ಶ್ರೀ ಸುಬ್ರಹ್ಮಣ್ಯ ಧಾರೇಶ್ವರ ಅವರು 25 ವರ್ಷಗಳ ತಿರುಗಾಟ ಮಾಡಿದ್ದು, ಮೇಳದ ಹೆಮ್ಮೆಯ ಸಂಗತಿ. ಈಗ ಜನ್ಸಾಲೆ ರಾಘವೇಂದ್ರ ಆಚಾರ್ಯರು ಭಾಗವತರಾಗಿ ಅಭಿಮಾನಿ ಪಡೆಯನ್ನು ಹೊಂದಿದ್ದಾರೆ. ನಮ್ಮ ಹಿಮ್ಮೇಳದಲ್ಲಿ ಹಿಂದೆ ನುರಿತ ಮದ್ದಲೆಗಾರರಾದ ದುರ್ಗಪ್ಪ ಗುಡಿಗಾರ್, ಶಂಕರ ಭಾಗವತ

ಚಂಡೆ ವಾದಕರಾಗಿ ಗಜಾನನ ಗುಣವಂತೆಯವರಿದ್ದರು. ಈಗ ಶಂಕರಭಟ್ಟ ಬ್ರಹ್ಮೂರು, ಸುರೇಶ ಕಾರವಾರ, ಸುನೀಲ್ ಕಡತೋಕ, ಭಾಸ್ಕರ ಭಂಡಾರಿ ಜನಾರ್ಧನ ಹಳ್ಳಾಡಿ ಮುಂತಾದವರಿದ್ದಾರೆ. ಮುಮ್ಮೇಳದ ಕಲಾವಿದರಾಗಿ ನಮ್ಮ ಪೆರ್ಡೂರು ಮೇಳದಲ್ಲಿದ್ದು, ಖ್ಯಾತಿಯ ಉತ್ತುಂಗಕ್ಕೇರಿದ ಹಲವರಿದ್ದಾರೆ. ಅವರಲ್ಲಿ ಮುಖ್ಯರಾದವರೆಂದರೆ ರಾಮನಾಯರಿ, ತೀರ್ಥಹಳ್ಳಿ ಗೋಪಾಲಾಚಾರಿ, ನಗರ ಜಗನ್ನಾಥ ಶೆಟ್ಟಿ, ಕುಮುಟಾ ಗೋವಿಂದನಾಯ್ಕ, ಚಿಟ್ಟಾಣಿ ರಾಮಚಂದ್ರ ಹೆಗಡೆ, ಮುಖ್ಯ ಪ್ರಾಣ ಕಿನ್ನಿಗೋಳಿ, ಜಲವಳ್ಳಿ ವೆಂಕಟೇಶರಾವ್, ಗೋಡೆ ನಾರಾಯಣ ಹೆಗಡೆ, ಹಡಿನಬಾಳ ಶ್ರೀಪಾದ ಹೆಗಡೆ, ಭಾಸ್ಕರ ಜೋಷಿ, ಮೂರೂರು ವಿಷ್ಣುಭಟ್, ಸಿದ್ದನಕಟ್ಟೆ ಚಿನ್ನಪ್ಪಶೆಟ್ಟಿ, ವಾಸುದೇವ ಸಾಮಗ ಮುಂತಾದವರು. ಇವರೆಲ್ಲರೂ ಬೆಂಗಳೂರಿನ ಕಲಾಕ್ಷೇತ್ರದಲ್ಲಿ ನಡೆದ ನಮ್ಮ ಮೇಳದ ಪ್ರದರ್ಶನಗಳಲ್ಲಿ ಭಾಗಿಯಾಗಿದ್ದಾರೆ. ಈಗ ನಮ್ಮ ಮೇಳದ ಮುಖ್ಯ ಕಲಾವಿದರಾದ ಥಂಡಿಮನೆ ಶ್ರೀಪಾದ ಭಟ್, ರಮೇಶ್ ಭಂಡಾರಿ, ಕಡಬಾಳು, ವಿದ್ಯಾಧರ ಜಲವಳ್ಳಿ, ಯಲಗುಪ್ಪ, ರವೀಂದ್ರ ದೇವಾಡಿಗ ಮುಂತಾದವರು ಕೂಡ ಬೆಂಗಳೂರಿನ ಯಕ್ಷಗಾನ ಅಭಿಮಾನಿಗಳ ಪ್ರೀತಿ ಗಳಿಸಿದ್ದಾರೆ. ನಮ್ಮ ಮೇಳಕ್ಕೆ ಅತಿಥಿ ಕಲಾವಿದರಾಗಿ ಪ್ರಸಿದ್ಧ ಅರ್ಥಧಾರಿಗಳಾಗಿದ್ದ ಶೇಣಿ ಗೋಪಾಲಕೃಷ್ಣ ಭಟ್‌ರು ಬಂದಿದ್ದಾರೆ. ಅದೇ ರೀತಿ ಇತ್ತೀಚಿನ ಖ್ಯಾತ ಅರ್ಥಧಾರಿ ಜಬ್ಬರ್ ಸುಮೋ ಕೂಡ ಭಾಗವಹಿಸುತ್ತಿದ್ದಾರೆ. ಮಂಟಪ ಪ್ರಭಾಕರ ಉಪಾಧ್ಯರು ಕೂಡ ಸ್ತ್ರೀ ಪಾತ್ರದಲ್ಲಿ ಮೆರೆದಿದ್ದಾರೆ.

- ಈಚಿನ ವರ್ಷಗಳಲ್ಲಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರಕ್ಕೆ ಬರುವ ಪ್ರೇಕ್ಷಕರ ಗುಣಮಟ್ಟ ಬಹಳ ಉತ್ತಮವಾಗಿದೆ. 15-20 ವರ್ಷಗಳ ಕೆಳಗೆ ಹೀಗೆ ಇದ್ದಿರಲಿಲ್ಲ. ತಮ್ಮ ಆಯ್ಕೆಯ ಕಲಾವಿದರನು ರಂಗಕ್ಕೆ ಬಂದಾಗ ವಿಪರೀತ ಸಿಳ್ಳೆ ಹಾಕುವುದು, ವಿಳಂಬವಾದರೆ ಅಸಮಾಧಾನ ತೋರ್ಪಡಿಸುವುದು ಮುಂತಾದವೆಲ್ಲ ಪ್ರದರ್ಶನ ಸರಾಗವಾಗಿ ನಡೆಯಲು ಭಂಗ ತರುತ್ತಿದ್ದರು. ಇಲ್ಲಿನ ಪ್ರೇಕ್ಷಕರು ಹೊಸ ಪ್ರಸಂಗಗಳನ್ನು ಇಷ್ಟಪಟ್ಟಷ್ಟು, ಹಳೆಯ ಪ್ರಸಂಗಗಳನ್ನು ಗೌರವಿಸುತ್ತಾರೆ. ಯೋಗ್ಯ ಕಲಾವಿದರನ್ನು ಅವರು ಸಾಕಷ್ಟು ಪುರಸ್ಕರಿಸುತ್ತಾರೆ.
- ಬೆಂಗಳೂರಿನ ಎಲ್ಲಾ ಪ್ರದರ್ಶನಗಳು ಮೊದಲೇ ಸಂಘಟಕರಿಂದ ಖಚಿತವಾಗಿರುತ್ತದೆ. ಮೇಳದ ಜವಾಬ್ದಾರಿಯೇನೂ ಇರುವುದಿಲ್ಲ. ಲಾಭ-

ನಷ್ಟಗಳೇನಿದ್ದರೂ ಸಂಘಟಕರದ್ದು. ಇಲ್ಲಿ ಉತ್ತಮ ಯಕ್ಷಗಾನ ಸಂಘಟಕರಿದ್ದಾರೆ. ಆಡಿದ ಮಾತಿಗೆ ತಪ್ಪುವುದಿಲ್ಲ. ಈ ಕಾರಣ ಬೆಂಗಳೂರಿನ ಆಟಗಳಿಂದ ಮೇಳಕ್ಕೆ ತೊಂದರೆಯಾಗಿಲ್ಲ. ಸಂಘಟಕರು ಕೂಡ ಬಹಳಷ್ಟು ಶ್ರಮವಹಿಸಿ ಪ್ರದರ್ಶನ ತುಂಬಿತುಳುಕುವಂತೆ ನೋಡಿಕೊಳ್ಳುತ್ತಾರೆ. ಅವರ ಶ್ರಮ ಹಾಗೂ ಮುತುವರ್ಜಿಯೇ ಬಹಳ ಮುಖ್ಯವಾಗುತ್ತದೆ. ಹಿಂದೆಲ್ಲಾ ಶ್ರೀ ಎ.ಪಿ. ಕಾರಂತ್, ಶ್ರೀ ಎಚ್.ಬಿ. ರಾಜೀವ ಶೆಟ್ಟಿ, ದಿ. ವೈಕುಂಠ ಕಾರಂತರ ಎ.ವಿ.ಎಸ್. ಗ್ರೂಪ್‌ನ ನಾಗರಾಜರು, ಶಾಂತಿ ಸಾಗರ ಸಮೂಹದ ಕಾರ್ಮಿಕರ ತಂಡ, ಗಂಗಾಧರ ಉಪಾಧ್ಯ, ಕಾರ್ಮಿಕ ನಾಯಕ ಶ್ರೀ ಬಿ. ಶ್ರೀಪತಿರಾವ್ ಇವರೆಲ್ಲ ಸಂಘಟಕರಾಗಿದ್ದವರು. ಈಗಿನ ಸಂಘಟಕರಲ್ಲಿ ನೈಲಾಡಿ ಪ್ರಕಾಶ ಶೆಟ್ಟಿ, ಅಂಪಾರು ರತ್ನಾಕರ ಶೆಟ್ಟಿ, ದುಗ್ಗನಮಕ್ಕಿ ಸುಧಾಕರ ಶೆಟ್ಟಿ, ನೈಕಂಬೆ ನಾಗರಾಜಶೆಟ್ಟಿ, ಮಣೂರು ವಾಸುದೇವ ಮಯ್ಯಾ, ಕುತ್ಯಾರು ರಾಜೇಶ ಶೆಟ್ಟಿ, ಕರ್ನೂರು ಸುಭಾಷ್ ರೈ ಮುಂತಾದವರು ಮುಖ್ಯರು. ಯಕ್ಷಗಾನ ಯೋಗಕ್ಷೇಮ ಅಭಿಯಾನದ ದಿ. ವಿ.ಆರ್. ಹೆಗಡೆಯವರನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕು. ಮಣೂರು ಮಯ್ಯ ಯಕ್ಷಗಾನ ಪ್ರತಿಷ್ಠಾನವು ಕೂಡ ಕಳೆದ ನಾಲ್ಕೈದು ವರ್ಷಗಳಿಂದ ಅನೇಕ ಪ್ರದರ್ಶನಗಳನ್ನು ಪ್ರಾಯೋಜಿಸುತ್ತಿದೆ.

❖ ನಮ್ಮಂತಹ ವೃತ್ತಿಮೇಳಗಳಿಗೆ ಕಾಲಮಿತಿ ಪ್ರದರ್ಶನ ರಾತ್ರಿಯ ಹೊತ್ತು ಸರಿಹೊಂದುವುದಿಲ್ಲ. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರಕ್ಕೆ ಹಗಲು ಪ್ರದರ್ಶನಕ್ಕೆ ಬರುವ ಪ್ರೇಕ್ಷಕ ವರ್ಗವೇ ಬೇರೆ, ರಾತ್ರಿ ಪ್ರದರ್ಶನಕ್ಕೆ ಬರುವ ಪ್ರೇಕ್ಷಕರೇ ಬೇರೆ. ರಾತ್ರಿ ಬರುವ ಪ್ರೇಕ್ಷಕರು ಸಭಾಂಗಣಕ್ಕೆ ಬರುವುದೇ 10 ಗಂಟೆಯ ನಂತರ. ಕಾಲಮಿತಿ ಪ್ರದರ್ಶನ 6 ಗಂಟೆಗೆ ಪ್ರಾರಂಭಿಸಿದರೆ ಅವರಿಗೆ ಸಿಗುವುದೇ ಇಲ್ಲ. ಅವರು ರಾತ್ರಿಯಿಡೀ ನಿದ್ರೆ ಬಿಡಲು ಸಿದ್ಧರಿದ್ದೇ ಬರುವವರು. ಮಾರನೆಯ ಬೆಳಿಗ್ಗೆ 6 ಗಂಟೆಯ ನಂತರವೇ ರವೀಂದ್ರ ಕಲಾಕ್ಷೇತ್ರದ ಹೊರಗೆ ಹೋಗುವವರು. ಈ ಕಾರಣ ಯಕ್ಷಗಾನ ವೃತ್ತಿಮೇಳದ ಪ್ರದರ್ಶನ ಕಲಾಕ್ಷೇತ್ರದಲ್ಲಿ ಈಗ ಇರುವಂತೆ ರಾತ್ರಿಯಿಡೀ ನಡೆಯುವುದೇ ಸೂಕ್ತ. ಅಲ್ಲದೆ ಕಲಾವಿದರಿಗೆ ಕೂಡ 'ಕಾಲಮಿತಿ' ತೊಡಕಿನದ್ದು. ಪ್ರದರ್ಶನ 11–12 ಗಂಟೆಗೆ ಮುಗಿದರೆ ಮಲಗಲು ಅವರು ಎಲ್ಲಿಗೆ ಹೋಗಬೇಕು? ಇದಾದರೆ ಹಗಲು ಚೆನ್ನಾಗಿ ನಿದ್ದೆ ಮಾಡಿ ರಾತ್ರಿಯೆಲ್ಲಾ ಎಚ್ಚರಿರಲು ಸನ್ನದ್ಧರಾಗಿಯೇ ಬಂದಿರುತ್ತಾರೆ. ಈ ಕಾರಣ ರವೀಂದ್ರ ಕಲಾಕ್ಷೇತ್ರದವರು ಈಗ ಇರುವ ಸಂಪೂರ್ಣ ರಾತ್ರಿ ಪ್ರದರ್ಶನವನ್ನು ಮುಂದುವರಿಸಬೇಕು ಹಾಗೂ ಪ್ರೋತ್ಸಾಹಿಸಬೇಕೆಂಬುದೇ

ನಮ್ಮ ವೃತ್ತಿಮೇಳದ ಪರವಾಗಿ ನನ್ನ ವಿನಂತಿ. ನನ್ನ ಒಡೆತನದಲ್ಲಿ ಹಾಲಾಡಿಯ ಬಯಲಾಟ ಮೇಳ ನಡೆಯುತ್ತಿದೆ. ಅಲ್ಲಿ ಶೇಕಡಾ 50ರಷ್ಟು ಪ್ರದರ್ಶನ ಕಾಲಮಿತಿಗೆ ಒಳಪಟ್ಟು ರಾತ್ರಿ 12 ಗಂಟೆಗೆ ಮುಕ್ತಾಯವಾಗುತ್ತದೆ. ಹರಕೆ ಆಡಿಸುವವರ ಇಚ್ಛೆಯಂತೆ ಅಲ್ಲಿ ನಾವು ನಡೆದುಕೊಳ್ಳುತ್ತೇವೆ. ಆದರೆ ಪೆರ್ಡೂರು ಮೇಳ ಮಾತ್ರ ಸಂಪೂರ್ಣ ರಾತ್ರಿ ಪ್ರದರ್ಶನವನ್ನೇ ನಡೆಸಿಕೊಂಡು ಬರುತ್ತದೆ. ಮುಂದೆಯೂ ನಡೆಸಲಿದೆ. ನಮ್ಮ ಬೇಸಿಗೆಯ 180 ಆಟಗಳಲ್ಲಿ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ 80 ಆಟಗಳು ನಡೆದರೆ ಉಳಿದ ನೂರು ಆಟಗಳಲ್ಲಿ 50ರಷ್ಟು ಆಟ ಉತ್ತರಕನ್ನಡ, 25ರಷ್ಟು ಆಟ ಸಾಗರ ಹಾಗೂ ಉಳಿದ 25ರಷ್ಟು ಆಟಗಳು ಮಲೆನಾಡಿನ ಉಳಿದ ಪ್ರದೇಶದಲ್ಲಿ ನಡೆಯುತ್ತವೆ. ಮಳೆಗಾಲದಲ್ಲಂತು ಬೆಂಗಳೂರು, ಮದ್ರಾಸು, ಹೈದರಾಬಾದ್, ಮುಂಬಯಿ ನಗರಗಳಲ್ಲಿ ಪ್ರದರ್ಶನ ನೀಡುತ್ತಿದೆ. ಹೀಗೆ ಪೆರ್ಡೂರು ಮೇಳ ರಾಜ್ಯದಾದ್ಯಂತ ಯಕ್ಷಗಾನವನ್ನು ಪಸರಿಸುತ್ತಿದೆ.

ಕಾರ್ಕಳ ಭುವನೇಂದ್ರ ಕಾಲೇಜಿನಲ್ಲಿ ಓದಿ ವಾಣಿಜ್ಯ ಪದವೀಧರರಾಗಿರುವ ಕರುಣಾಕರ ಶೆಟ್ಟಿಯವರು ಯಕ್ಷಗಾನ ರಂಗಕ್ಕೆ ಬಂದದ್ದು ಆಕಸ್ಮಿಕವಾಗಿ. ಬಹಳ ಹಳೆಯ ಮೇಳವಾದ ಪೆರ್ಡೂರು ಮೇಳವು ಬಯಲಾಟದಿಂದ ಡೇರೆ ಮೇಳವಾಗಿ ಪರಿವರ್ತಿಸಿ ಉತ್ತಮ ಕಲಾವಿದರನ್ನು ಕರೆಸಿ, ಒಳ್ಳೆಯ ಶಿಸ್ತುಬದ್ಧ ಪ್ರದರ್ಶನ ನೀಡಿ ಖ್ಯಾತಗೊಂಡದ್ದು ಕರುಣಾಕರ ಶೆಟ್ಟಿಯವರ ಒಡೆತನದಲ್ಲಿ. ಅವರ ಆಡಳಿತಾವಧಿಯ 34 ವರ್ಷಗಳ ತಿರುಗಾಟದಲ್ಲಿ ಮೇಳ ತನ್ನದೇ ಆದ ವರ್ಚಸ್ಸನ್ನು ಗಳಿಸಿದೆ. ಎಲ್ಲೆಡೆ ಯಕ್ಷಗಾನದ ಕಂಪನ್ನು ಪಸರಿಸಿದೆ.

ಸಂದರ್ಶನ : ವೈ. ಕರುಣಾಕರಶೆಟ್ಟಿ

"ಶ್ರೀಯಾ" ನಂದಿಗುಡ್ಡೆ

ಚ್ಯಾಂತ್ಯಾರು – ಬ್ರಹ್ಮಾವರ – 576 216

ಉಡುಪಿ ತಾಲ್ಲೂಕು–ಜಿಲ್ಲೆ

ಚ.ದೂ. : 94487 24148

ಎಪ್ಪತ್ತರ ದಶಕದ ಬೆಂಗಳೂರಿನ ಯಕ್ಷಗಾನ

– ಡಾ॥ ಶ್ರೀಧರ ಉಪ್ಪೂರ

60–70ರ ದಶಕಗಳಲ್ಲಿ ಬಡಗುತಿಟ್ಟಿನ ಯಕ್ಷಗಾನಕ್ಕೆ ಡೇರೆ ಮೇಳಗಳ ಪ್ರವೇಶ ಆಗಿರಲಿಲ್ಲ. ಆಗ ಇದ್ದ ಬಯಲಾಟದ ಮೇಳಗಳಲ್ಲಿ ಅಮೃತೇಶ್ವರಿ ಹಾಗೂ ಮಂದಾರ್ತಿ ದಶಾವತಾರ ಮೇಳಗಳು ಮುಂಚೂಣಿಯಲ್ಲಿದ್ದವು. ಬೇಸಿಗೆಯ ಆರು ತಿಂಗಳು ಮಾತ್ರ ಊರಿನಲ್ಲಿ ತಿರುಗಾಟವಿದ್ದ ದಿನಗಳವು. ಮದ್ರಾಸ್, ಮುಂಬಯಿ ಹಾಗೂ ಬೆಂಗಳೂರಿನಂತಹ ನಗರಗಳಲ್ಲಿ ಯಕ್ಷಗಾನ ಇಣುಕುತ್ತಿದ್ದ ಕಾಲ. ಕೆಲವು ಭಾಗವತರು, ಮದ್ದಲೆಯವರು, ವೇಷಧಾರಿಗಳು, ಮಳೆಗಾಲದಲ್ಲಿ ಬೇಸಾಯ ಮಾಡುತ್ತಾ ನವರಾತ್ರಿ ಬಂದರೆ ಶಾಲಾಮಕ್ಕಳಿಗೆ 'ಹೂವಿನ ಕೋಲಿ'ನ ತರಬೇತಿ ನೀಡಿ ಆಢ್ಯರ ಮನೆಗಳಲ್ಲಿ 'ಹೂವಿನ ಕೋಲು' ಪ್ರದರ್ಶಿಸುವ ಕಾಲವದು. ಒಮ್ಮೊಮ್ಮೆ ಊರಿನಲ್ಲಿ ನಡೆಯುವ ತಾಳಮದ್ದಲೆಗೆ ಭಾಗವತರಾಗಿ ಇಲ್ಲವೇ ಅರ್ಥಧಾರಿಗಳಾಗಿ ಭಾಗವಹಿಸಿ ಜನರಿಗೆ ಯಕ್ಷಗಾನದ ಸವಿಯನ್ನು ಜಿಟಿ ಜಿಟಿ ಮಳೆಯ ಮಧ್ಯೆಯಲ್ಲೂ 'ಮಾತಿನ ಮಳೆ'ಯ ಮೂಲಕ ಉಣಬಡಿಸುತ್ತಿದ್ದರು. ಇಂತಹ ಸಂದರ್ಭದಲ್ಲಿ ಬೆಂಗಳೂರಿಗೆ ಹೋಟೆಲ್ ಉದ್ಯಮಕ್ಕೆ ತೆರಳಿದ್ದ ಕೆಲವರು ತಮ್ಮ ಯಕ್ಷಗಾನದ ಮೇಲಿನ ಅಭಿಮಾನವನ್ನು, ಪ್ರೀತಿಯನ್ನು ತಡೆಯಲಾರದೇ ಅಲ್ಲೂ ಯಕ್ಷಗಾನಕ್ಕೆ ವ್ಯವಸ್ಥೆ ಮಾಡುವ ಮೂಲಕ ತಾವು ನೋಡಿ, ಊರಿನವರಿಗೂ ತೋರಿಸಿ ತಮ್ಮ ಆಸೆಯನ್ನು ತೀರಿಸಿಕೊಳ್ಳುತ್ತಿದ್ದರು. ಆಗ ಅವರ ನೆರವಿಗೆ ಮೊದಲಿಗೆ ಬರುತ್ತಿದ್ದದ್ದು ಬೆಂಗಳೂರಿನ ನಗರ ಮಧ್ಯದಲ್ಲಿದ್ದ ಪುರಭವನ ಮುಂದೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ. ಇವೆರಡೂ ತಾಣಗಳು ಬೆಂಗಳೂರಿನ ಯಕ್ಷಗಾನ ಪ್ರಸಾರದ ಮೊದಲ ಮೈಲಿಗಲ್ಲು.

ಬೆಂಗಳೂರು ಆಗ ತಾನೆ ದೊಡ್ಡ ನಗರವಾಗಿ ಹೊಮ್ಮುತ್ತಿರುವ ದಿನಗಳವು. ಕರ್ನಾಟಕ ಏಕೀಕರಣದಿಂದಾಗಿ ಕರಾವಳಿಗೂ ಕೂಡ ಬೆಂಗಳೂರು ರಾಜಧಾನಿಯಾಯಿತು. ಇದರಿಂದ ಕರಾವಳಿ ಮತ್ತು ಮಲೆನಾಡಿನವರ ವಲಸೆ

ಬೆಂಗಳೂರು ಕಡೆ ಹೆಚ್ಚಲು ಪ್ರಾರಂಭವಾಯಿತು. ಈಗಾಗಲೇ ಅಲ್ಲಿ ನೆಲೆಸಿ, ಹೋಟೆಲ್ ಉದ್ಯಮದಲ್ಲಿ ಹೆಸರು ಮಾಡಿದ್ದ ನೀಲಕಂಠ ಐತಾಳ, ಕೊಡೇರಿ ಮಹಾದೇವ ಕಾರಂತ, ಶ್ರೀ ಕೆ.ಎಲ್. ಐತಾಳ್, ಶ್ರೀ ಪಿ. ಶ್ರೀಧರ ಹಂದೆ, ಕೃಷ್ಣ ಮಧ್ಯಸ್ಥ, ನರಸಿಂಹ ಹೊಳ್ಳ, ವೈದ್ಯರಾಗಿದ್ದ ಚಂದ್ರಶೇಖರ ಹಂದೆ ಮುಂತಾದವರು ಬೆಂಗಳೂರಿನಲ್ಲೂ ಯಕ್ಷಗಾನವನ್ನು ಪ್ರಚುರಪಡಿಸುವಲ್ಲಿ ನೆರವಾದವರು. ಊರಿನ ಕಲಾವಿದರನ್ನು ಮಳೆಗಾಲದಲ್ಲಿ ಬೆಂಗಳೂರಿಗೆ ಕರೆಸಿ ಮೊದಲಿಗೆ ಪುರಭವನದಲ್ಲಿ, ಮುಂದೆ ಕಲಾಕ್ಷೇತ್ರದಲ್ಲಿ ರಾತ್ರಿಯಿಡೀ ಆಟದ ವ್ಯವಸ್ಥೆ ಮಾಡುತ್ತಿದ್ದರು. ಹೋಟೆಲ್ ನೌಕರರೇ ಆಗ ಹೆಚ್ಚಿನ ಸಂಖ್ಯೆಯ ಪ್ರೇಕ್ಷಕರಾಗಿರುತ್ತಿದ್ದರು. ಆ ಕಾಲದಲ್ಲಿ ಬಡಗುತಿಟ್ಟಿನ ಹೆಚ್ಚಿನ ಯಕ್ಷಗಾನ ಪ್ರದರ್ಶನಕ್ಕೆ ಭಾಗವತರಾಗಿ ಇರುತ್ತಿದ್ದವರು ನಮ್ಮ ತೀರ್ಥರೂಪರಾದ ಶ್ರೀಯುತ ನಾರ್ಣಪ್ಪ ಉಪ್ಪೂರರು. ಅವರಿಗೆ ಮದ್ದಲೆ ವಾದಕರಾಗಿ ಮೊದಲಿಗೆ ತಿಮ್ಮಪ್ಪನಾಯಕ್ ಅವರು ಮುಂದೆ ದುರ್ಗಪ್ಪ ಗುಡಿಗಾರರು ಇರುತ್ತಿದ್ದರು. ಯಕ್ಷಗಾನದಲ್ಲಿ ಖ್ಯಾತಿಯ ಉತ್ತುಂಗಕ್ಕೆ ಏರಿರುವ ಮೊದಲ ಬಾರಿಗೆ ತಾರಾ ಮೌಲ್ಯ ಗಳಿಸಿಕೊಟ್ಟ ಕಾಳಿಂಗ ನಾವಡರು ಸಹಭಾಗವತರಾಗಿ ಭಾಗವಹಿಸುತ್ತಿದ್ದರು. 62 ರಿಂದ 65ರ ವರೆಗಿನ ಪ್ರದರ್ಶನಗಳಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಹಾರಾಡಿ ರಾಮಗಾಣಿಗರು ಭಾಗವಹಿಸುತ್ತಿದ್ದರು. ಆ ದಶಕದಲ್ಲಿ ಬೆಂಗಳೂರಿನ ಪುರಭವನ ಹಾಗೂ ಕಲಾಕ್ಷೇತ್ರದಲ್ಲಿ ಪೌರಾಣಿಕ ಪ್ರಸಂಗಗಳೇ ಪ್ರದರ್ಶನಗೊಳ್ಳುತ್ತಿದ್ದವು. ಕರ್ಣಪರ್ವ, ಭೀಷ್ಮಪರ್ವ, ಲಂಕಾದಹನ, ಕೃಷ್ಣಸಂಧಾನ, ಬಬ್ರುವಾಹನ ಕಾಳಗ, ಸುಧನ್ವ ಕಾಳಗ, ರತಿಕಲ್ಯಾಣ, ಮೀನಾಕ್ಷಿ ಕಲ್ಯಾಣ, ವಿದ್ಯುನ್ಮತಿ ಕಲ್ಯಾಣ, ವೀರಮಣಿ ಕಾಳಗ ಮುಂತಾದವು ಬೆಂಗಳೂರಿಗರಿಗೆ ಮುದಕೊಟ್ಟ ಪ್ರಸಂಗಗಳು, ಹಾರಾಡಿರಾಮ ಅವರಲ್ಲದೆ ಗುರುವೀರಭದ್ರ ನಾಯಕ, ಕೋಟ ವೈಕುಂಠ, ಉಡುಪಿ ಬಸವ, ಕುಮಟಾ ಗೋವಿಂದನಾಯ್ಕ ವಂಡಾರು ಬಸವ, ಹಾರಾಡಿ ಕೃಷ್ಣಗಾಣಿಗ, ಗಜಾನನ ಭಂಡಾರಿ, ಶಿರಿಯಾರ ಮಂಜುನಾಯಕ್ ಮುಂತಾದ ಕಲಾವಿದರು ಬೆಂಗಳೂರಿಗೆ ಪ್ರಯಾಣ ಬೆಳೆಸುತ್ತಿದ್ದರು. ಒಂದೆರಡು ವರ್ಷ ಕಲಾವಿದರು ಬಸವನಗುಡಿ ರಸ್ತೆಯ ಶ್ರೀ ಗುರುನರಸಿಂಹ ಕಲ್ಯಾಣಮಂಟಪದಲ್ಲಿ ಬಿಡಾರ ಮಾಡುತ್ತಿದ್ದರು. ಇಲ್ಲವೇ ಅಭಿಮಾನಿಗಳ, ನೆಂಟರಿಷ್ಟರ ಮನೆಯಲ್ಲಿ ವಾಸ ಮಾಡುತ್ತಿದ್ದರು.

ಊರಿನಲ್ಲಿ ಬೆಂಗಳೂರಿಗೆ ಹೋಗಿಬಂದ ಕಲಾವಿದರಿಗೆ ಒಳ್ಳೆಯ ಗೌರವ ಇತ್ತು. ಜನರು ಅವರನ್ನು ಮರ್ಯಾದೆಯಿಂದ ನೋಡುತ್ತಿದ್ದರು. ಆ ದಿನಗಳಲ್ಲಿ ಕಲಾವಿದರ ಕುರಿತಾದ ಅನೇಕ ಸಂಗತಿಗಳು ಆಸಕ್ತಿದಾಯಕವಾಗಿದ್ದವು. ನಾನು ಯೌವನಕ್ಕೆ ಕಾಲಿಟ್ಟ ದಿನಗಳಲ್ಲಿ ಬೆಂಗಳೂರಿಗೆ ಬಂದು ಮೊದಲ ಬಾರಿಗೆ ರವೀಂದ್ರ ಕಲಾಕ್ಷೇತ್ರದಲ್ಲಿ

'ತಾಯಿ' ಎಂಬ ನಾಟಕ ನೋಡಿ, ಇಂತಹ ಸಭಾಂಗಣದಲ್ಲಿ ನಮ್ಮ ಯಕ್ಷಗಾನ ಕಲಾವಿದರು ಪ್ರದರ್ಶಿಸುತ್ತಾರೆ ಎಂದು ತಿಳಿದಾಗ ಅವರ ಬಗ್ಗೆ ಬಹಳ ಹೆಮ್ಮೆಪಟ್ಟಿದ್ದೆ. ಕಲಾವಿದರು ಕೂಡ ಬೆಂಗಳೂರಿನ ಕಲಾಕ್ಷೇತ್ರದ ಆಟದ ಬಗ್ಗೆ ಮುತುವರ್ಜಿ ವಹಿಸುತ್ತಿದ್ದರು. 'ಊರಲ್ಲಿ ರಂಗ ಪರವೂರಲ್ಲಿ ಮಂಗ' ಆಗಬಾರದು ಎಂಬುದು ಅವರ ನಿಲುವಾಗಿತ್ತು. ಅವರಿಗೆ ಬೆಂಗಳೂರು, ಬೊಂಬಾಯಿಯಂತಹ ದೂರದ ನಗರಗಳಿಂದ ಕರೆಬಂದರೆ ಸಂಭ್ರಮವೋ ಸಂಭ್ರಮ. ಊರಿನ ಆರುತಿಂಗಳ ಬೇಸಿಗೆ ಕಾಲದ ಪ್ರದರ್ಶನದಲ್ಲಿ ಹೆಸರು ಗಳಿಸಿದ್ದರೂ ಮಹಾನಗರಗಳಿಗೆ ಹೋಗಿಲ್ಲವೆಂದರೆ ಉತ್ತಮ ಕಲಾವಿದನಲ್ಲ ಎಂಬ ವಾತಾವರಣವಿತ್ತು. ಬೆಂಗಳೂರಿನ 'ಆಟ'ವೆಂದರೆ ಅವನ ಪಾಲಿಗೆ 'ಪ್ರಮೋಷನ್' ಇದ್ದಂತೆ. ಬೆಂಗಳೂರಿನ ಪ್ರದರ್ಶನಗಳಿಗೆ ಸಿನೆಮಾ ನಟರಾದ ಉದಯಕುಮಾರ್, ಎಂ.ಎಸ್. ಕಾರಂತ, ಶ್ರೀನಾಥ್ ಅರವಿಂದ್, ಶಿವರಾಂ ಹಾಗೂ ಖ್ಯಾತ ನಾಟಕಕಾರರಾದ ಶ್ರೀ ಹಿರಣ್ಣಯ್ಯ, ಸಾಹಿತಿಗಳಾದ ವಿ.ಸೀ., ರಾಜರತ್ನಂ ಮುಂತಾದವರೆಲ್ಲ ಬಂದು ನೋಡುತ್ತಾರೆಂಬುದು ಊರಿನಲ್ಲಿ ದೊಡ್ಡ ಸುದ್ದಿಯಾಗುತ್ತಿತ್ತು. "ಚಲನಚಿತ್ರ ನಟ ಉದಯಕುಮಾರ್ ಕುಮಟಾ ಗೋವಿಂದ ನಾಯ್ಕರ ಹನುಮಂತನ ವೇಷಕ್ಕೆ ಕೈ ಮುಗಿದು ಭಕ್ತಿಭಾವದಿಂದ ಪುಳಕಿತರಾದರಂತೆ". ತಿಮ್ಮಪ್ಪನಾಯಕರು ಸಹ ಕಲಾವಿದರೊಂದಿಗೆ ಹೋಟೆಲ್ ಒಂದರ ಫುಲ್ ಮೀಲ್ಸ್‌ಗೆ ಹೋಗಿದ್ದರು. ಮಾರನೇ ದಿನ ಅವರೆಲ್ಲ ಅದೇ ಹೋಟೆಲ್‌ಗೆ ಊಟಕ್ಕೆ ಹೋದಾಗ 'ಫುಲ್‌ಮೀಲ್ಸ್' ಕೊಡುವುದನ್ನೇ ನಿಲ್ಲಿಸಿದರಂತೆ. ಇವರ ಬೊಂಬಾಟ್ ಭೋಜನಕ್ಕೆ ಹೋಟೆಲ್‌ನವರು ಹೆದರಿಕೊಂಡರಂತೆ."

"ಹೋಟೆಲ್ ಉದ್ಯಮಿ ಕೊಡೇರಿ ಮಹಾದೇವ ಕಾರಂತರು (ಕನ್ನಡ ಸಾಹಿತ್ಯ ಪರಿಷತ್‌ನ ಮಾಜಿ ಅಧ್ಯಕ್ಷರಾದ ಶ್ರೀ ಪುಂಡಲೀಕ ಹಾಲಂಬಿಯವರ ಸೋದರ ಮಾವ) ಭರ್ಜರಿ ಕರ್ಣನ ಮುಂಡಾಸು ವೇಷ ಧರಿಸಿ ಮೇಳದ ಕಲಾವಿದರಿಗೆ ಸರಿಸಾಟಿಯಾಗಿ ಪಾತ್ರ ಮಾಡಿದರಂತೆ". ಈ ಬಗೆಯ ಸುದ್ದಿಗಳು ಒಂದೇ ? ಎರಡೇ? ಇಂಥಹ ಸುದ್ದಿಗಳು ನಮಗೆಲ್ಲ ರಂಜನೆಗೆ ಹಾಗೂ ಗಾಸಿಪ್‌ಗೆ ಕಾರಣವಾಗುತ್ತಿದ್ದವು.

ಈ ಮಧ್ಯೆ 'ಅಕ್ಕಾಣಿಯಮ್ಮ' ಎಂಬ ಜೋರಿನ ಮಹಿಳೆ, ತಮ್ಮ ಅರವತ್ತರ ಇಳಿವಯಸ್ಸಿನಲ್ಲಿ ಯಕ್ಷಗಾನದಲ್ಲಿ ಭಾಗವಹಿಸಿದ್ದೇ ಅಲ್ಲದೆ ಇಬ್ಬರು ಹೆಣ್ಣುಮಕ್ಕಳನ್ನು ಕರೆತಂದು ಯಕ್ಷಗಾನ ಕಲಿಸಿ ಮೇಳದಲ್ಲಿ ಕೂಡ ವೇಷ ಮಾಡಿಸಿ ಹೆಸರು ಪಡೆದರು. 'ಅಕ್ಕಾಣಿಯಮ್ಮನವರ ಮೇಳ' ಎಂದು ಜನರು ಹೊಗಳಿದ್ದೆ ಹೊಗಳಿದ್ದು. ಅವರು

ಬೆಂಗಳೂರಿನಿಂದ ಬಂದವರು ಎಂಬ ಕಾರಣಕ್ಕೆ ಆಗಿರುತ್ತೋ ಏನೋ. ಹಠಮಾರಿಯಾದ ಅವರು ರವೀಂದ್ರ ಕಲಾಕ್ಷೇತ್ರದಲ್ಲಿ ತಮ್ಮ ಮಹಿಳಾ ಯಕ್ಷಗಾನವನ್ನು ಮಾಡಿದ ಮೇಲೆ ಬೇರೆ ಬೇರೆ ಕಡೆಯ ಮಹಿಳೆಯರನ್ನು ಒಂದುಗೂಡಿಸಿ, ತರಬೇತಿಗೊಳಿಸಿ (ಶ್ರೀ ಗುಂಡ್ಮಿ ಸದಾನಂದ ಐತಾಳರು ತರಬೇತಿ ನೀಡಿದ್ದಾರೆ) ಪ್ರದರ್ಶನ ನೀಡಿರುವುದು ಯಕ್ಷಗಾನ ರಂಗದ ಅವಿಸ್ಮರಣೀಯ ಅಂಶವಾಗಿದೆ. ಶ್ರೀಧರ ಹಂದೆ, ಅಕ್ಕಾಣಿಯಮ್ಮ ಮುಂತಾದವರು ಬೆಂಗಳೂರಿನಲ್ಲಿ ಯಕ್ಷಗಾನ ರಂಗಕ್ಕೆ ನೀಡಿದ ಕೊಡುಗೆ ಅಸದೃಶವಾದುದು. ಬೆಂಗಳೂರಿನ 70ರ ದಶಕಕ್ಕೆ ಸಂಬಂಧಿಸಿದ ಯಕ್ಷಗಾನದ ಬಗ್ಗೆ ಕೃತಿಗಳಲ್ಲಿ ಮೂಡಿದ ಮೂರು ವಿಚಾರಗಳನ್ನು ನಿಮ್ಮ ಮುಂದಿರಿಸಿದರೆ ಅಂದಿನ 'ಬೆಂಗಳೂರು ಯಕ್ಷಗಾನ'ದ ಸರಿಯಾದ ಪರಿಚಯವಾಗುತ್ತದೆ.

1. **ಕರ್ನಾಟಕ ಯಕ್ಷಗಾನ ಮಂಡಳಿ (ಶ್ರೀ ಪಿ. ಶ್ರೀಧರ ಹಂದೆಯವರ 'ಯಜಮಾನ್ರು' ಗ್ರಂಥದಿಂದ ಆಯ್ದ ಭಾಗ)**

1962ರಿಂದ 1967ರ ವರೆಗೆ ಬೆಂಗಳೂರಿನಲ್ಲಿ ಹೋಟೆಲ್ ಉದ್ಯಮ ನಡೆಸಿದೆ. ವೃತ್ತಿ ಹೋಟೆಲ್‌ನದ್ದಾದರೂ ಪ್ರವೃತ್ತಿ ಯಕ್ಷಗಾನದ್ದು. ಯಕ್ಷಗಾನ ಕಲಾಸಕ್ತಿ ಇಂಗಿರಲಿಲ್ಲ. ಅನೇಕ ಯಕ್ಷಗಾನದ ಅಭಿಮಾನಿಗಳ ನೆರವಿನಿಂದ 'ಕರ್ನಾಟಕ ಯಕ್ಷಗಾನ ಮಂಡಳಿಯೆಂಬ ಸಂಸ್ಥೆಯನ್ನು ಹುಟ್ಟುಹಾಕಿ ಅದರ ಮೂಲಕ ಮಳೆಗಾಲದಲ್ಲಿ ಊರಿನ ಯಕ್ಷಗಾನ ಕಲಾವಿದರನ್ನು ಬರಮಾಡಿಕೊಂಡು ತಿಂಗಳುಗಳ ಕಾಲ ಪುರಭವನ, ಕಲಾಕ್ಷೇತ್ರ ಮುಂತಾದ ಕಡೆ ಯಕ್ಷಗಾನ ಏರ್ಪಡಿಸಿದ್ದೆ. ಹಾರಾಡಿ ರಾಮಗಾಣಿಗ, ಗುರು ವೀರಭದ್ರ ನಾಯಕ ಮೊದಲಾದ ಘಟಾನುಘಟಿಗಳು ನಮ್ಮ ಮನೆಯಲ್ಲಿ ಬಂದು ಇರುತ್ತಿದ್ದರು. ಬೆಂಗಳೂರು ಆಕಾಶವಾಣಿಯಲ್ಲಿ ಕಾರ್ಯಕ್ರಮ ಕೊಟ್ಟೆವು. ಪ್ರದರ್ಶನ, ಆತಿಥ್ಯಗಳಿಗೆ ನನ್ನ ಹಣವೇ ಖರ್ಚಾಗುತ್ತಿತ್ತು. ಆದರೆ ನನಗದು ಗೌಣ. ಕಲಾವಿದರ ಸಹವಾಸ, ಆತಿಥ್ಯ, ಪ್ರದರ್ಶನ ಇವೆಲ್ಲ ಎಂದೂ ಮರೆಯಲಾರದ ಸುಖ ಕೊಟ್ಟದ್ದಂತೂ ಸತ್ಯ. ಬೆಂಗಳೂರು ಮಾತ್ರವಲ್ಲದೆ ಮದ್ರಾಸಿಗೆ, ಬೇರೆ ಬೇರೆ ಕಡೆಗೆ ಕೂಡ ಕಲಾವಿದರನ್ನು ಕರೆದೊಯ್ಯುತ್ತಿದ್ದೆ.

ಒಂದು ಮರೆಯಲಾರದ ಘಟನೆಯೆಂದರೆ ಒಮ್ಮೆ ಪ್ರಮೀಳಾರ್ಜುನ, ಬಳಿಕ ಬಭ್ರುವಾಹನ ಕಾಳಗ ನಡೆಯಬೇಕಿತ್ತು. ಎರಡೂ ಪ್ರಸಂಗಗಳ ಅರ್ಜುನ ಪಾತ್ರವನ್ನು ಹಾರಾಡಿ ರಾಮಗಾಣಿಗರು ಮಾಡಬೇಕಿತ್ತು. ಆದರೆ ತೀವ್ರ ಜ್ವರಪೀಡಿತರಾಗಿದ್ದ ಅವರಿಗೆ ವಿಶ್ರಾಂತಿ ಬೇಕಿತ್ತು. ಅದಕ್ಕಾಗಿ ವೀರಭದ್ರ ನಾಯಕರಿಗೆ ಮೊದಲು ಘೋರ

ಭೀಷಣ ಪಾತ್ರ ಮಾಡಿ ಮುಂದಿನ 'ಬಬ್ರುವಾಹನ ಕಾಳಗ'ದ ಅರ್ಜುನನ ಪಾತ್ರವು ಮಾಡಬೇಕಾಗುತ್ತದೆ ಎಂದೆ. ಅದೇಕೋ ಅಂದು ವೀರಭದ್ರನಾಯಕರು ಒಳ್ಳೆಯ ಮನೋಭಾವದಲ್ಲಿರಲಿಲ್ಲವೆಂದು ಕಾಣುತ್ತದೆ. 'ಅರ್ಜುನ ವೇಷ ಮಾಡಲಾರೆ' ಎಂದು ಮರುಮಾತಿಗೆ ಅವಕಾಶವಿಲ್ಲದಂತೆ ಖಡಕ್ಕಾಗಿ ನುಡಿದರು. ವಿಷಯ ಗಾಣಿಗರಿಗೆ ತಿಳಿಯಿತು. ನನ್ನೊಡನೆ 'ಹಂದೆಯವರೇ ಬಬ್ರುವಾಹನ ಕಾಳಗದ ಅರ್ಜುನನ್ನು ನಾನು ಮಾಡುತ್ತೇನೆ. ಹೇಗೂ ನಾಲ್ಕೈದು ತಾಸು ಸಮಯವಿದೆ. ಅಷ್ಟರಲ್ಲಿ ಸುಧಾರಿಸಿಯೇನು. ಮೊದಲ 'ಪ್ರಮೀಳಾರ್ಜುನ'ದ ಅರ್ಜುನ ನಿಮ್ಮದೇ ಆಗಲಿ' ಎಂದರು. ಒಮ್ಮೆಲೆ ನಡುಗಿಬಿಟ್ಟೆ. 'ತಮಾಷೆ ಮಾಡಬೇಡಿ' ಎಂದೆ. ತಮಾಷೆ ಅಲ್ಲ ಗಂಭೀರವಾಗಿಯೇ ಹೇಳ್ತಾ ಇದ್ದೇನೆ. ನಿಮಗೂ ಯೋಗ್ಯತೆ ಇದೆ. ಅದ್ಭುತವಾಗಿಯೇ ಆಗುತ್ತೆ ಎಂದು ಹುರಿದುಂಬಿಸಿದರು. ಅವರ ನಿರೀಕ್ಷೆ ಹುಸಿಗೊಳಿಸದ ಹಾಗೆ ನನ್ನ ಅರ್ಜುನ ಯಶಸ್ವಿಯಾಯಿತು. ಜ್ವರದಿಂದ ಸ್ವಲ್ಪ ಚೇತರಿಸಿಕೊಂಡ ಅವರೂ ಎರಡನೆಯ ಪ್ರಸಂಗದಲ್ಲಿ ಅರ್ಜುನನಾಗಿ ಅಭಿನಯಿಸಿ ಜನಮೆಚ್ಚುಗೆ ಪಡೆದರು.

2. ಹೆಂಚಿನ ಮನೆಯ ಆಸೆ : (ಭಾಗವತ ಎಂ. ನಾರ್ಣಪ್ಪ ಉಪ್ಪೂರ 'ಪ್ರಾಚಾರ್ಯ ಪಥ'ದ ಪುಟ 38–39ರಿಂದ ಆಯ್ದ ಭಾಗ)

ನಮ್ಮ ಹುಲ್ಲಿನ ಮನೆಗೊಂದು ಹೆಂಚು ಹೊದಿಸಿ ವಿಶ್ರಾಂತಿ ತೆಗೆದುಕೊಂಡಿದ್ದರೆ ಆಗುತ್ತಿತ್ತು ಅನ್ನಿಸಿ ಒಮ್ಮೆ ಬೆಂಗಳೂರಿನಲ್ಲಿ ಸ್ನೇಹಿತರಾದ ಕೆ.ಎಲ್. ಐತಾಳ್, ನೀಲಕಂಠ ಐತಾಳ್, ಡಾ॥ ಚಂದ್ರಶೇಖರ ಹಂದೆ, ವೈಕುಂಠ ಐತಾಳ್‌ರೊಂದಿಗೆ ಒಮ್ಮೆ ಮಾತನಾಡುತ್ತಾ ಕುಳಿತಾಗ ವಿಚಾರ ಎತ್ತಿದೆ. ಹಳೆಯ ಹುಲ್ಲಿನ ಮನೆ, ಒಳಗೆ ಕತ್ತಲು, ಮಣ್ಣಿನ ಗೋಡೆ ಅಲ್ಲಲ್ಲಿ ಶಿಥಿಲವಾಗಿದೆ ಎಂದೆ. ಅವರೆಲ್ಲ ಖಂಡಿತಾ ಹೊಸಮನೆ ಮಾಡಿ ನಮ್ಮಿಂದಾದ ಸಹಾಯ ಮಾಡುತ್ತೇವೆ. ಬೆಂಗಳೂರಿನಲ್ಲಿ ಒಂದು 'ಆಟ'ಮಾಡಿ ಹಣ ಹೊಂದಿಸುವ, ಏರ್ಪಾಡು ಮಾಡುವ ಎಂದರು. ಡಾ॥ ಚಂದ್ರಶೇಖರ ಹಂದೆಯವರು ನಾವೆಲ್ಲ ನೆರವಾಗುತ್ತೇವೆ. ದೊಡ್ಡದಾಗಿಯೇ ಮಾಡುವ ಎಂದರು.

1975ನೇ ಇಸವಿ ಸೆಪ್ಟೆಂಬರ್‌ನಲ್ಲಿ 'ಕೃಷ್ಣ ವಿವಾಹ' ಆಟ ನಿಶ್ಚಯವಾಯಿತು. ಒಂದು ಹದಿನೈದು ದಿನ ಊರಿನ ಯಕ್ಷಗಾನ ಕೇಂದ್ರದ ಗುರುಸ್ಥಾನಕ್ಕೆ ರಜೆ ಬರೆದು ಅದರ ಜವಾಬ್ದಾರಿಯನ್ನು ತಿಮ್ಮಪ್ಪನಾಯ್ಕರಿಗೆ ವಹಿಸಿ ಬೆಂಗಳೂರಿಗೆ ಬಸ್ಸು ಹತ್ತಿದೆ.

'ಆಟ'ದ ಕಲೆಕ್ಷನ್‌ಗೆ ತಿರುಗಾಡಲು ಪಿ.ವಿ. ಐತಾಳರು ತಮ್ಮ ಕಾರನ್ನು ಕೊಟ್ಟು 'ಧಾರಾಳ ಉಪಯೋಗ ಮಾಡಿಕೊಳ್ಳಿ' ಎಂದರು. ಹೆಚ್ಚಿನ ಉತ್ಸಾಹದಿಂದ ಕೆ.ಎಲ್. ಐತಾಳರು, ಡಾ॥ ಹಂದೆ ನೀಲಕಂಠ ಐತಾಳ, ವೈಕುಂಠ ಐತಾಳರು ನನ್ನ ಜೊತೆ ಬೆಂಗಳೂರಿನ ಎಲ್ಲಾ ಕಡೆ ಬಂದಿದ್ದರು. ಯಕ್ಷಗಾನದ ಅಭಿಮಾನಿಗಳಲ್ಲಿ ಹೋಗಿ ಸಹಾಯಕ್ಕಾಗಿ ಕೇಳಿದಾಗ ಎಲ್ಲರೂ ಶಕ್ತಿಮೀರಿ ಹಣ ನೀಡಿದರು. ಬೆಂಗಳೂರಿನಲ್ಲಿ 'ಶ್ರೀ ಕೃಷ್ಣ ವಿವಾಹ' ಪ್ರಸಂಗದ ಎರಡು ಪ್ರದರ್ಶನಗಳ ಮೂಲಕ ಸುಮಾರು ಆ ಕಾಲದ 18000 ರೂಪಾಯಿಗಳವರೆಗೂ ಒಟ್ಟಾಗಿ 1976ರಲ್ಲಿ ನನ್ನ ಕಿರಿಯ ಮಗ ದಿನೇಶನ ಉಪನಯನ ಹಾಗೂ ಮನೆಯ ಗೃಹಪ್ರವೇಶ ಎರಡನ್ನೂ ಬೆಂಗಳೂರಿನ ಅಭಿಮಾನಿಗಳ ನೆರವಿನಿಂದ ಮಾಡಿಸಲು ಸಾಧ್ಯವಾಯಿತು.

3. ಸಾಧಕಿ ಯಜಮಾನಿ ದಿ. ಅಕ್ಕಾಣಿಯಮ್ಮ ('ಯಜಮಾನ್ರು' ಗ್ರಂಥದಲ್ಲಿ ಬಂದಿರುವ ಶ್ರೀಮತಿ ಅನುಸೂಯ ಶಂಕರ ನಾರಾಯಣ ಹೊಳ್ಳರ ಲೇಖನದಿಂದ ಪುಟ 108)

ಅಕ್ಕಾಣಿಯಮ್ಮ ಮಹಿಳಾ ಮೇಳ ಕಟ್ಟಬೇಕು, ಎಲ್ಲಾ ಕಡೆ ಪ್ರದರ್ಶನ ನೀಡಬೇಕು ಎಂದು ಕನಸು ಕಾಣುತ್ತಿದ್ದರು. ಇದಕ್ಕಾಗಿ ಆಸಕ್ತಿ ಇರುವ ಹೆಣ್ಮಕ್ಕಳ ಹುಡುಕಾಟ ಶುರು ಮಾಡಿದರು. ಭರತನಾಟ್ಯ, ನೃತ್ಯ ಮುಂತಾದ್ದನ್ನು ಕಲಿತವರನ್ನು ಆಯ್ಕೆ ಮಾಡಿಕೊಂಡರು. ಅದರಲ್ಲಿ ಮಾಜಿ ಭಾರತ ಸುಂದರಿ ರೇಖಾ ಹಂದೆ, ಚಲನಚಿತ್ರ ನಟಿ ಬೊಳ್ಳಮ್ಮ, ಶ್ರೀಮತಿ ಸುಜಾತ, ಶ್ರೀಮತಿ ನೃಪಾಂಗಿಮುಂತಾದರು ಸೇರಿದ್ದರು. ವಿದ್ಯಾರ್ಥಿಗಳೇನೋ ಒಟ್ಟಾದರು. ಹೇಳಿಕೊಡುವ ಗುರುಗಳು ಸಮರ್ಥರಾಗಿರಬೇಕಲ್ಲವೇ? ಕಾಲವೋ ಯೋಗವೋ ಶ್ರೀಯುತ ಭಾಗವತ ಗುಂಡ್ಮಿ ಸದಾನಂದ ಐತಾಳರು ಬೆಂಗಳೂರಿನಲ್ಲಿ ಆಗ ಇದ್ದರು. ಕಲಿಸಲು ಸಿದ್ಧರಾದರು. ಯಾವುದೇ ಕಲೆಯನ್ನು ಒಬ್ಬ ತಾನೇ ಮಾಡಿತೋರಿಸುವುದಕ್ಕೂ, ಇನ್ನೊಬ್ಬರಿಗೆ ಕಲಿಸಿ ಅವರಿಂದ ಅದನ್ನು ಅಭಿವ್ಯಕ್ತಿಗೊಳಿಸುವುದಕ್ಕೂ ಬಹಳ ವ್ಯತ್ಯಾಸವಿದೆ. ಎಲ್ಲಕ್ಕಿಂತ ಹೆಚ್ಚಾಗಿ ಆ ಗುರುವಿನಲ್ಲಿ ಮತ್ತು ನಿರ್ದೇಶಕರಲ್ಲಿ ತಾಳ್ಮೆ ಮತ್ತು ಶ್ರದ್ಧೆ ಇದ್ದರೆ ಮಾತ್ರ ಅದು ಸಾಧ್ಯ. ಶ್ರೀ ಐತಾಳರು ಹಾಗೂ ಅಕ್ಕಾಣಿಯಮ್ಮ ಅಂತಹ ಸಾಹಸಕ್ಕೆ ಕೈಹಾಕಿ ಶಿಷ್ಯರಲ್ಲಿ ಅದನ್ನು ಮಾಡಿ ತೋರಿಸಿಕೊಟ್ಟರು.

ಅಕ್ಕಾಣಿಯಮ್ಮನವರ ಪರಿಶ್ರಮ ಹಾಗೂ ಗುರುಶಿಷ್ಯರ ತಾಳಮೇಳ ಒಂದಕ್ಕೊಂದು ಪೂರಕವಾಗಿ ಎರಡೇ ತಿಂಗಳಲ್ಲಿ ಪ್ರದರ್ಶನ ನೀಡುವಷ್ಟು

ಬಲ್ಲಿದರಾದರು. 'ರಾಣಿ ಶಶಿಪ್ರಭೆ' ಎಂಬ ಪ್ರಸಂಗವನ್ನು ಕಲಿತು ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶಿಸಿ ಯಶಸ್ವಿಯಾದರು. ಅಲ್ಲಿಂದ ಮುಂದೆ 79–80ರಲ್ಲಿ 'ಮಹಿಳಾ ಯಕ್ಷಗಾನ ಕಲಾಮಿತ್ರ ಮಂಡಳಿ' ಎಂಬ ಹೆಸರಿನಲ್ಲಿ ರಾಜ್ಯದ ವಿವಿಧೆಡೆ ಸುಮಾರು 20ಕ್ಕೂ ಹೆಚ್ಚಿನ ಪ್ರದರ್ಶನ ನೀಡಿ ಯಶಸ್ವಿ ಸಾಧಕಿಯಾದರು. ಅವರ ಕನಸು ನನಸಾಯಿತು.

ಹೀಗೆ ಎಪ್ಪತ್ತರ ದಶಕದಲ್ಲಿ ಬೆಂಗಳೂರಿನಲ್ಲಿ ಯಕ್ಷಗಾನವು ದಾಂಗುಡಿಯಿಡುವಲ್ಲಿ ಪುರಭವನ ಹಾಗೂ ರವೀಂದ್ರ ಕಲಾಕ್ಷೇತ್ರಗಳು ಕಾರಣವಾದವು. ಆಗ ಬೆಂಗಳೂರಿನಲ್ಲಿ ಕೋಡೇರಿ ಮಹಾದೇವ ಕಾರಂತರ ನೇತೃತ್ವದಲ್ಲಿ ಪ್ರಾರಂಭವಾದ 'ಗಜಾನನ ಯಕ್ಷಗಾನ ಕಲಾಸಂಘ'ವು ಅನೇಕ ರೇಡಿಯೋ ಕಾರ್ಯಕ್ರಮಗಳನ್ನು ಬೆಂಗಳೂರಿನ ಆಕಾಶವಾಣಿಯ ಮೂಲಕ ನಡೆಸಿಕೊಟ್ಟಿತ್ತು. ಈ ಸಂಸ್ಥೆಯವರು ಕೂಡ ಆಗ ಬೆಂಗಳೂರಿನಲ್ಲಿ ಉತ್ತಮ ಯಕ್ಷಗಾನ ಕಾರ್ಯಕ್ರಮಗಳನ್ನು ಏರ್ಪಡಿಸಲು ಸಹಕರಿಸುತ್ತಿದ್ದರು. ರವೀಂದ್ರ ಕಲಾಕ್ಷೇತ್ರ ನಮ್ಮ ರಾಜಧಾನಿಯ ಒಂದು ಆಶಾಕಿರಣ. ಯಕ್ಷಗಾನಕ್ಕೆ ಇಂದು ಬಹಳ ಪ್ರಚಾರ ಸಿಗುತ್ತಿದೆ. ಆದರೆ ಅಂದು ಯಕ್ಷಗಾನಕ್ಕೆ ಪ್ರಚಾರ ಸಿಗಬೇಕು ಎಂದು ಹಂಬಲಿಸುವ ಯಕ್ಷಗಾನ ಕಲಾವಿದರ ಪಾಲಿಗೆ 'ಕಲಾಕ್ಷೇತ್ರ' ಒಂದು ಕೈಮರವಾಗಿತ್ತು.

–ಲೇಖಕರು : ಡಾ॥ ಶ್ರೀಧರ ಉಪ್ಪೂರ

'ಗಾನಶ್ರೀ' ಕೋಟೇಶ್ವರ – 576 222

ಚ.ದೂ. : 94499 02794

ಲೇಖಕರ ಪರಿಚಯ:

ಡಾ॥ ಶ್ರೀಧರ ಉಪ್ಪೂರರು ಯಕ್ಷಗಾನ ಸಾಹಿತ್ಯದ ಬಗ್ಗೆ ಹಾಗೂ ಕಲೆಯ ಬಗ್ಗೆ ಆಳವಾದ ಜ್ಞಾನ ಇರುವವರು. ಭಾಗವತ ಎಂ. ನಾರ್ಣಪ್ಪ ಉಪ್ಪೂರರು ಸುಪುತ್ರರು. ಕುಂದಾಪುರ ತಾಲ್ಲೂಕಿನ ಬಸ್ರೂರಿನ ಶಾರದಾ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದು ಈಗ ನಿವೃತ್ತಿ ಹೊಂದಿದ್ದಾರೆ. 'ಬುಡಗುತಿಟ್ಟಿನ ಯಕ್ಷಗಾನದ ಪರಂಪರೆ ಮತ್ತು ಪ್ರಯೋಗ' ಎಂಬ ಇವರ ಪ್ರೌಢ ಪ್ರಬಂಧಕ್ಕೆ ಮಂಗಳೂರು ವಿಶ್ವವಿದ್ಯಾಲಯದ ಪಿಹೆಚ್.ಡಿ. ಪದವಿ ಬಂದಿದೆ. ಇವರ ಯಕ್ಷಗಾನ ಸಂಬಂಧಿ ಲೇಖನಗಳು ಸಾಕಷ್ಟು ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಭಾಗವತರಾಗಿದ್ದ ಉಪ್ಪೂರರ ಬದುಕು ಸಾಧನೆಯ ಬಗ್ಗೆ ಕೃತಿ ರಚನೆ ಮಾಡಿದ್ದಾರೆ. 'ಶತಸ್ಮೃತಿ' ಗ್ರಂಥದ ಪ್ರದಾನ ಸಂಪಾದಕರಾಗಿದ್ದಾರೆ.

1970 - 80ರ ದಶಕದ ತೆಂಕಣ ಯಕ್ಷಗಾನ

– ಸೇರಾಜೆ ಸೀತಾರಾಮ ಭಟ್

ಉದ್ಯಾನಗಳ ನಗರ ಬೆಂಗಳೂರನ್ನು ಸಾಂಸ್ಕೃತಿಕ ನಗರ ಮೈಸೂರನ್ನು ಒಳಗೊಂಡ ಭಾರತ ಜನನಿಯ ತನುಜಾತೆಯಾದ ನಮ್ಮ ಕರ್ನಾಟಕ ರಾಜ್ಯ ಹಿಂದೆ ಮೈಸೂರು ರಾಜ್ಯವೆಂಬ ಅಂಕಿತನಾಮವನ್ನು ಹೊಂದಿತ್ತೆಂಬ ಸತ್ಯ ಈಗ ಇತಿಹಾಸ. ಅಂದಿನ ಜನಾನುರಾಗಿ ಮಹಾರಾಜರುಗಳ ಜನಪ್ರಿಯತೆ ಹಾಗೂ ವರ್ಚಸ್ಸುಗಳು ಇದಕ್ಕೆ ಕಾರಣ. ಅವರು ಎಲ್ಲಾ ಕಲೆಗಳಿಗೂ ಆಶ್ರಯವನ್ನು ನೀಡಿದ್ದರು. ಹಬ್ಬ ಹಾಗೂ ವಿಶೇಷ ಸಂದರ್ಭಗಳಲ್ಲಿ ಕಲೆಗಳ ಪ್ರದರ್ಶನಕ್ಕೆ ಮೈಸೂರಿನಲ್ಲಿ ಅವಕಾಶ ಕಲ್ಪಿಸುತ್ತಿದ್ದರು. ಮೈಸೂರು ರಾಜ್ಯದ ಪ್ರಜೆಗಳಾಗಿದ್ದ ಈಗಿನ ಹಿರಿಯ ನಾಗರೀಕರೂ, ಅವರಿಂದ ಕೇಳಿ ತಿಳಿದ ಇಂದಿನ ನಡುವಯಸ್ಕರು ಈ ವಿಷಯವನ್ನು ಮುಂದಿನ ಪೀಳಿಗೆಗೆ ತಿಳಿಸದಿದ್ದರೆ ಈ ಸತ್ಯ ಗುಪ್ತವಾಗಿಯೇ ಉಳಿದುಹೋದೀತು. ಅದೇನೇ ಇರಲಿ ಕೊನೆಗೆ ರಾಜ್ಯದ ರಾಜಧಾನಿಯಾಗಿ ಸ್ವೀಕೃತವಾದದ್ದು ಬೆಂಗಳೂರು, ಕೈಗಾರಿಕಾ ಕ್ಷೇತ್ರದ ವಿಸ್ತಾರವೂ, ವ್ಯಾವಹಾರಿಕ ವಹಿವಾಟುಗಳ ಎತ್ತರವೂ ಇದನ್ನು ಬೆಂಗಳೂರಿಗೆ ಸಾಧ್ಯ ಮಾಡಿಸಿಕೊಟ್ಟಿತು. ಈ ನಿಟ್ಟಿನಲ್ಲಿ 'ಬೆಳೆದಿದೆ ನೋಡಾ ಬೆಂಗಳೂರು ನಗರ' ಎಂಬ ಚಲನಚಿತ್ರದ ಹಾಡು ಅರ್ಥಪೂರ್ಣವೇ ಸರಿ.

ಸಾಂಸ್ಕೃತಿಕ ನಗರವೆಂಬ ಶಿರೋನಾಮೆ ಮೈಸೂರಿಗೆ ಉಳಿದರೂ, ವಿತ್ತೀಯ ಕಾರಣದಿಂದಾಗಿ ಬೆಂಗಳೂರು ರಾಜಧಾನಿಯಾಗಿ ಅಂಗೀಕೃತವಾದ ನಂತರ ನಮಗರಿಯದಂತೆ ಸಂಸ್ಕೃತಿ ಸಂಬಂಧಿಯಾದ ಚಟುವಟಿಕೆಗಳು ಬಲವಾಗಿ ಬೇರೂರಲು ಪ್ರಾರಂಭವಾಯಿತು. ಸಾಂಸ್ಕೃತಿಕ ಚಟುವಟಿಕೆಗಳ ರೆಂಬೆಕೊಂಬೆಗಳ ಹರಹು ವಿಸ್ತಾರವಾಗುತ್ತಾ ಹೋಯಿತು. ಇದರ ಫಲವಾಗಿಯೇ ರವೀಂದ್ರ ಕಲಾಕ್ಷೇತ್ರದಂತಹ ಅದ್ವಿತೀಯ ಸಭಾಭವನ ಜನ್ಮ ತಾಳಿ ನಗರಕ್ಕೊಂದು ಶೋಭೆಯನ್ನು, ಕಲೆಗಳಿದೊಂದು ಆಶ್ರಯತಾಣವನ್ನು ನೀಡುವಂತಾಯಿತು. ಗುಬ್ಬಿವೀರಣ್ಣನವರ ಪಾರಂಪರಿಕ ನಾಟಕ ಕಂಪೆನಿ, ಹಿರಣ್ಣಯ್ಯ ಮಿತ್ರ ಮಂಡಳಿಯ ನಾಟಕ ಕಂಪೆನಿ

ಮುಂತಾದವು ಪ್ರಾದುರ್ಭಾವಕ್ಕೆ ಬಂದವು. ಇವುಗಳ ಜತೆಜತೆಯಲ್ಲೇ ದಕ್ಷಿಣೋತ್ತರ ಕನ್ನಡ ಜಿಲ್ಲೆ (ಕಾಸರಗೋಡು ಸೇರಿದಂತೆ)ಗಳ ಗಂಡು ಕಲೆಯಂದೇ ಖ್ಯಾತವಾಗಿರುವ ಯಕ್ಷಗಾನವೂ ಬೆಂಗಳೂರಿನ ಬಾಗಿಲನ್ನು ತಟ್ಟಿತು. ಯಕ್ಷಗಾನವೆಂಬ ಪುರಾತನವಾದ, ಸದಾ ನವನವೀನವಾದ ನದಿಯನ್ನು ಸಾಗರದಂತಿರುವ ಬೆಂಗಳೂರು ನಗರ ತನ್ನೊಳಗೆ ಸೇರಿಸಿಕೊಂಡಿತು. ಬೆಂಗಳೂರಿನ ಸಾಂಸ್ಕೃತಿಕ ಲೋಕ ಸೂರ್ಯ ಚಂದ್ರರೆಂದು ಸರ್ ಪುಟ್ಟಣ್ಣಚೆಟ್ಟಿ ಪುರಭವನ ಹಾಗೂ ರವೀಂದ್ರ ಕಲಾಕ್ಷೇತ್ರವನ್ನು ಗುರುತಿಸಿದಂತೆಯೇ ಕರಾವಳಿ ಯಕ್ಷಗಾನವನ್ನು ಕಲಾಮಾತೆಯ ನಯನದ್ವಯಗಳೆಂದು ಹೆಮ್ಮೆಯಿಂದ ಹೇಳಬಹುದು. ಯಕ್ಷಗಾನ ಪ್ರದರ್ಶನಗಳಿಗೆ ಅನುವು ಮಾಡಿಕೊಟ್ಟಿರುವುದರಿಂದ ಈ ಎರಡೂ ಸಭಾಭವನಗಳು ಎತ್ತರಕ್ಕೇರಿದಂತೆ, ಈ ಪ್ರತಿಷ್ಠಿತ ಸಭಾಭವನಗಳಲ್ಲಿ ಪ್ರದರ್ಶನಗೊಂಡದ್ದರಿಂದ ಯಕ್ಷಗಾನದ ಘನತೆಯು ಹೆಚ್ಚಿತು. ಖ್ಯಾತಿವೆತ್ತ ಪಿಟೀಲು ವಾದಕರಾದ ಚೌಡಯ್ಯನವರು, ಜೀವನಧರ್ಮ ಯೋಗವನ್ನು ಬರೆದ ಡಿ.ವಿ.ಜಿ.ಯವರು, ಬಹುಶ್ರುತ ಕಾದಂಬರಿಕಾರ ಅ.ನ. ಕೃಷ್ಣರಾಯರು, ನವ್ಯ ಸಾಹಿತ್ಯದ ಹರಿಕಾರರಾದ ಶ್ರೀ ಗೋಪಾಲಕೃಷ್ಣ ಅಡಿಗರು, ಖ್ಯಾತ ಸಾಹಿತಿಗಳಾದ ವಿ. ಸೀತಾರಾಮಯ್ಯನವರು, ಪ್ರಸಿದ್ಧ ನಾಟಕಕಾರರಾದ ಶ್ರೀ ಆದ್ಯ ರಂಗಾಚಾರ್ಯರು, ಇಂತಹವರೆಲ್ಲ ಮೆರೆದ ಬೆಂಗಳೂರಿನಲ್ಲಿ ಯಕ್ಷಗಾನದ ಮೇರು ಕಲಾವಿದರಾದ ಕುರಿಯ ವಿಠಲಶಾಸ್ತ್ರಿಗಳು, ಕೆರೆಮನೆ ಮಹಾಬಲ ಹೆಗಡೆ, ಕೆರೆಮನೆ ಶಂಭುಹೆಗಡೆ, ಶೇಣಿ ಗೋಪಾಲಕೃಷ್ಣ ಭಟ್, ಚಿಟ್ಟಾಣಿ ರಾಮಚಂದ್ರ ಹೆಗಡೆ, ಕೆ. ಗೋವಿಂದ ಭಟ್, ಡಾ॥ ಕೊಳ್ಳೂರು ರಾಮಚಂದ್ರರಾವ್ ಮುಂತಾದ ಯಕ್ಷಗಾನ ದಿಗ್ಗಜರೂ ಬೆಂಗಳೂರಿನ ಜನಮಾನಸದಲ್ಲಿ ಸ್ಥಾಪಿತರಾಗಲು ಅನುವು ಮಾಡಿಕೊಟ್ಟದ್ದೇ ಈ ಪುರಭವನ ಹಾಗೂ ರವೀಂದ್ರ ಕಲಾಕ್ಷೇತ್ರ.

ತೆಂಕಣ ಯಕ್ಷಗಾನದ ಹಾಗೂ ಬೆಂಗಳೂರಿನ ಸಂಬಂಧವನ್ನು ಹೇಳುವಾಗ 1955ಲ್ಲಿ ನಡೆದ ಉಲ್ಲೇಖಾರ್ಹ ಘಟನೆಯೊಂದನ್ನು ತಿಳಿಸಲೇಬೇಕು. ಪದ್ಯಾಣ ಮೂಲದ ಪ. ಗೋಪಾಲಕೃಷ್ಣರು ಬೆಂಗಳೂರಿನಲ್ಲಿ ಪತ್ರಕರ್ತರಾಗಿದ್ದರು. ಅವರ ಪರಿಶ್ರಮದಿಂದ ಮೈಸೂರಿನ ಪ್ರಸಿದ್ಧ ದಸರಾ ಹಬ್ಬದ ವಸ್ತುಪ್ರದರ್ಶನದಲ್ಲಿ ಯಕ್ಷಗಾನ ಪ್ರದರ್ಶನಕ್ಕೆ ಅವಕಾಶ ಸಿಕ್ಕಿತು. ಶ್ರೀ ಧರ್ಮಸ್ಥಳ ಮೇಳದ ಯಶಸ್ವಿ ಸಂಚಾಲಕರಾಗಿದ್ದ ನಾಟ್ಯಾಚಾರ್ಯ ಕುರಿಯ ವಿಠಲ ಶಾಸ್ತ್ರಿಗಳ ತಂಡದ ಆ ಪ್ರದರ್ಶನ ಸಕಲ ಪ್ರೇಕ್ಷಕರ ಮನಸ್ಸನ್ನು ಸೂರೆಗೊಂಡಿತು. ಮರುದಿನವೇ ಯಕ್ಷಗಾನದ ಇನ್ನೊಂದು ಪ್ರಭೇದವಾದ 'ತಾಳಮದ್ದಳೆ' ಕಾರ್ಯಕ್ರಮ ದಿ॥ ಪಿಟೀಲು ಚೌಡಯ್ಯನವರ ಅಯ್ಯನಾರ್ ಕಲಾ ಶಾಲೆಯಲ್ಲಿ ಹಿರಿಯ ಸಾಹಿತಿ ಶ್ರೀ ಗೋಪಾಲಕೃಷ್ಣ ಅಡಿಗರ ಅಧ್ಯಕ್ಷತೆಯಲ್ಲಿ ಜರುಗಿತು.

ಈ ಪ್ರದರ್ಶನಗಳ ಯಶಸ್ಸಿನ ಸೌರಭವು ಬೆಂಗಳೂರಿನೆಲ್ಲೆಡೆಗೆ ಪಸರಿಸಿತು. ಇದೇ ಸಂದರ್ಭದಲ್ಲಿ ಯು.ಎಸ್.ಎಸ್.ಆರ್. (ರಷ್ಯಾ)ನ ಪ್ರಧಾನಿ ಮಾರ್ಷಲ್ ಬುಲ್ಗಾನಿನ್ ಮತ್ತು ಕಮ್ಯುನಿಸ್ಟ್ ರಷ್ಯಾದ ಮುಖಂಡ ಕಾಮ್ರೆಡ್ ಕ್ರುಶ್ಚೇವ್ ಬೆಂಗಳೂರಿಗೆ ಭೇಟಿ ನೀಡಿದ್ದರು. ಗೋಪಾಲಕೃಷ್ಣರ ಪ್ರಯತ್ನದಿಂದಾಗಿ ಈ ವಿದೇಶೀ ಗಣ್ಯರ ಮುಂದೆ ಕುರಿಯ ವಿಠಲಶಾಸ್ತ್ರಿಗಳ ತಂಡದ 'ದಕ್ಷಾಧ್ವರ' ಪ್ರಸಂಗದ ಪ್ರದರ್ಶನ 1955ನೇ ನವೆಂಬರ್ 26ರಂದು ನಡೆಯಿತು. ಯಕ್ಷಗಾನದ ರಮ್ಯಾದ್ಭುತತೆಯಿಂದ ಪ್ರಭಾವಿತರಾದ ಈ ಗಣ್ಯರು ಕುರಿಯ ವಿಠಲ ಶಾಸ್ತ್ರಿಗಳ ತಂಡದ ಕಲಾವಿದರೊಂದಿಗೆ ಭಾವಚಿತ್ರ ತೆಗೆಸಿಕೊಂಡಿದ್ದಲ್ಲದೆ ರಷ್ಯಾಕ್ಕೆ ಬಂದು ಪ್ರದರ್ಶನವೀಯುವಂತೆ ಆಹ್ವಾನಿಸಿದರು.

ಕರಾವಳಿ ಕರ್ನಾಟಕಕ್ಕೆ ಹಾಗೂ ಮಲೆನಾಡಿಗೆ ಸೀಮಿತವಾಗಿದ್ದ 'ತಾಳಮದ್ದಳೆ'ಯೆಂಬ ಯಕ್ಷಗಾನ ಪ್ರಕಾರವನ್ನು ಸೀಮೋಲ್ಲಂಘನೆ ಮಾಡಿಸಿದವರು ದಿ॥ ಅಡ್ವೊಕೇಟ್ ಕುಬಣೂರು ಬಾಲಕೃಷ್ಣರಾಯರು. ಯಶಸ್ವಿ ವಕೀಲರಾಗಿರುವ ಇವರು 1958–62ರ ಅವಧಿಯಲ್ಲಿ ಮೈಸೂರು ವಿಧಾನ ಪರಿಷತ್ತಿನ (ಈಗಿನ ಕರ್ನಾಟಕ) ಸದಸ್ಯರಾಗಿದ್ದರು. ಇವರ ಹೋರಾಟದ ಫಲವಾಗಿ ಯಕ್ಷಗಾನದ ಮೇಳಗಳಿಗೆ ವಿಧಿಸಲಾಗಿದ್ದ ಮನೋರಂಜನಾ ತೆರಿಗೆಯಲ್ಲಿ ವಿನಾಯಿತಿ ಸಿಕ್ಕಿತು. ಶ್ರೇಷ್ಠ ತಾಳಮದ್ದಳೆ ಅರ್ಥಧಾರಿಯಾಗಿದ್ದ ಇವರು ಮಂಗಳೂರಿನ ಶರವು ದೇವಸ್ಥಾನದ ಆವರಣದಲ್ಲಿ 1930ರಲ್ಲಿಯೇ 'ಶರಭೇಶ್ವರ ಯಕ್ಷಗಾನ ಸಂಘ'ವನ್ನು ಸ್ಥಾಪಿಸಿದ್ದರು. ಅಲ್ಲಿನ ಕಲಾವಿದರೊಂದಿಗೆ ಪೊಳಲಿ ಶಂಕರನಾರಾಯಣ ಶಾಸ್ತ್ರಿ, ಶೆಡ್ಯೆ ಕೃಷ್ಣಮಲ್ಲ, ಶೇಣಿ ಗೋಪಾಲಕೃಷ್ಣ ಭಟ್, ದೇರಾಜೆ ಸೀತಾರಾಮಯ್ಯ, ಮುಳಿಯ ಮಹಾಬಲ ಭಟ್ಟ, ಪೆರ್ಲ ಕೃಷ್ಣಭಟ್, ಭಾಗವತರಾಗಿ ಗೋಂಡರು, ಮಂಡೆಚ್ಚರು, ಮೃದಂಗಕ್ಕೆ ಈಶ್ವರಪ್ಪ, ಮೈಂದಪ್ಪ ರೈ ಮುಂತಾದವರು ಬೆಂಗಳೂರಿಗೆ ಬಂದು 'ತಾಳಮದ್ದಲೆ'ಯ ಸದ್ದನ್ನು ಎಲ್ಲೆಡೆ ಅನುರಣಿಸಿದ್ದರು. ಯಕ್ಷಗಾನ ಕಲಾವಿದನೊಬ್ಬ ವಿಧಾನ ಪರಿಷತ್ತಿನ ಸದಸ್ಯರಾದ ಪ್ರಥಮ ದಾಖಲೆ ಇವರದ್ದು. ಈ ಘಟನೆಗಳಲ್ಲಿ ಮರುಭೂಮಿಯ 'ಒಯಸಿಸ್'ನಂತೆ ಆಗೊಮ್ಮೆ ಈಗೊಮ್ಮೆ ಮಿಂಚಿರುವುದನ್ನು ಬಿಟ್ಟರೆ, ಪ್ರಸ್ತುತ ಈಗ ಯಕ್ಷಗಾನಕ್ಕೆ ಇರುವ ಮಹತ್ವಿಕೆ, ಪ್ರೋತ್ಸಾಹ, ತಾರಾಮೌಲ್ಯಗಳಾವುವೂ ಆ ಕಾಲಘಟ್ಟದಲ್ಲಿ ಬೆಂಗಳೂರಿನಲ್ಲಿ ಇರಲಿಲ್ಲವೆಂದೇ ಹೇಳಬಹುದು.

ಆ ಕಾಲಘಟ್ಟವೆಂದರೆ ಕಳೆದ ಶತಮಾನದ 70 ಹಾಗೂ 80ರ ದಶಕ. ನಾನು ಉದ್ಯೋಗನಿಮಿತ್ತ ಬೆಂಗಳೂರಿನಲ್ಲಿ ನೆಲಸಬೇಕಾಯಿತು. ಕುರಿಯ ವಿಠಲ ಶಾಸ್ತ್ರಿಗಳ ಶಿಷ್ಯನಾಗಿ ರಂಗಸ್ಥಳದಲ್ಲಿ ವೇಷಧಾರಿಯಾಗಿಯೂ ತಾಳಮದ್ದಳೆ ಕೂಟಗಳಲ್ಲಿ ಗುರುತಿಸಲ್ಪಟ್ಟ ಅರ್ಥಧಾರಿಯಾಗಿಯೂ ಆಗಿದ್ದ ನನಗೆ ಬೆಂಗಳೂರಿನಲ್ಲಿ ನಿರಾಶೆ

ಕಾದಿತ್ತು. ಆಗ ಬೆಂಗಳೂರಿನಲ್ಲಿ ಬಡಗುತಿಟ್ಟಿನ ಬಯಲಾಟಗಳಿಗಷ್ಟೇ ಬೇಡಿಕೆ ಇದ್ದದ್ದು. ತೆಂಕುತಿಟ್ಟಿನ ಪ್ರದರ್ಶನಗಳ ಇಡೀ ವರ್ಷದ ಸಂಖ್ಯೆಯನ್ನೆಣಿಸಲು ಒಂದು ಕೈಯ ಬೆರಳುಗಳೇ ಸಾಕಾಗುತ್ತಿತ್ತು. ತಾಳಮದ್ದಳೆಯ ಕೂಟಗಳ ಹೆಸರೇ ಇರಲಿಲ್ಲ. ಸಮಯ ಸರಿದಂತೆ ಯಕ್ಷಗಾನದ ಉತ್ತಮ ಹವ್ಯಾಸಿ ವೇಷಧಾರಿ ಪಾವಂಜೆ ಶಿವರಾಂ ಭಟ್, ವಿದ್ವಾನ್ ಬಾಲಕೃಷ್ಣ ಭಟ್, ಕೃಷ್ಣಮೂರ್ತಿ ಪಾಂಗಣ್ಣಾಯ (ಹಿಮ್ಮೇಳ ವಾದಕರು) ತಿಮ್ಮಪ್ಪ ಶೆಟ್ಟಿ ಮುಂತಾದವರ ಪರಿಚಯವಾಯಿತು. ಇವರೆಲ್ಲಾ ತಕ್ಕಮಟ್ಟಿಗೆ ವೇಷಗಾರಿಕೆಯ ಪರಿಣತಿಯನ್ನು ಹೊಂದಿದ್ದವರು. ಆಗೊಮ್ಮೆ ಈಗೊಮ್ಮೆ ಯಕ್ಷಗಾನ ಪ್ರದರ್ಶನದ ಅವಕಾಶ ಸಿಕ್ಕಾಗ ನಾವೆಲ್ಲಾ ಒಟ್ಟಾಗುತ್ತಿದ್ದೆವು. ತೆಂಕುತಿಟ್ಟಿನ ವೇಷಭೂಷಣಗಳನ್ನು ಸಿದ್ಧಗೊಳಿಸಿದವರು ಎಚ್.ಎಲ್. ಭಟ್ ಎಂಬವರು. ತೆಂಕುತಿಟ್ಟಿನ ಯಕ್ಷಗಾನವನ್ನು ಬೆಂಗಳೂರಲ್ಲಿ ಬೆಳೆಸಬೇಕೆಂಬ ಸದುದ್ದೇಶದಿಂದ "ಕರಾವಳಿ ಯಕ್ಷಗಾನ ಕಲಾವಿದರು, ಬೆಂಗಳೂರು" ಎಂಬ ಸಂಸ್ಥೆಯನ್ನು ಸ್ಥಾಪಿಸಿದೆವು. ಸಂಭಾವನೆಯ ಆಸೆಯಿಲ್ಲದೆ, ನಾವೆಲ್ಲ ಪ್ರದರ್ಶನದ ಗುಣಮಟ್ಟವನ್ನೇ ಲಕ್ಷ್ಯವಾಗಿರಿಸಿಕೊಂಡು ದುಡಿದುದರಿಂದ ಸಂಘ ಬೆಳೆಯಿತು. ಬೆಂಗಳೂರಿನ ಉದ್ದಗಲಕ್ಕೂ ಪ್ರದರ್ಶನಗಳನ್ನಿತ್ತೆವು. ಆ ಕಾಲದಲ್ಲಿ ನಮಗೆ ಎಲ್ಲಾ ವಿಧದ ಆಸರೆಯಾಗಿ ನಿಂತು ಪ್ರೋತ್ಸಾಹಿಸಿದವರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷರಾಗಿದ್ದ ಎಸ್.ಎನ್.ಎಸ್.ರಾವ್ (ಹೋಟೆಲ್ ಕಾವೇರಿ ಕಾಂಟಿನೆಂಟಲ್‌ನ ಮಾಲೀಕರು), ಶ್ರೀ ವಾದಿರಾಜ ರಾವ್ (ಸಂಘದ ಗೌರವಾಧ್ಯಕ್ಷರು), ಸ್ವರಸ್ವತಿ ಲಾಡ್ಜ್‌ನ ಶ್ರೀ ರಾಮಕೃಷ್ಣ ಐತಾಳರು, ಶ್ರೀ ಅನಂತ ಪದ್ಮನಾಭ್ ಬಲ್ಲಾಳರು, ಚಿನ್ಮಯ ಮಿಷನ್‌ನ ಅಧ್ಯಕ್ಷರಾದ ಶ್ರೀ ಬ್ರಹ್ಮಾನಂದ ಸ್ವಾಮೀಜಿ ಮುಂತಾದವರು.

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಮೂರು ದಶಕಗಳ ಕೆಳಗೆ ನಡೆದ ಕೆಲವು ಕಾರ್ಯಕ್ರಮಗಳನ್ನು ಉಲ್ಲೇಖಿಸಲೇಬೇಕು. ಯಕ್ಷಗಾನ ರಂಗದ ಶ್ರೇಷ್ಠರಾದ ಶ್ರೀ ಶೇಣಿ ಗೋಪಾಲಕೃಷ್ಣ ಭಟ್‌ರನ್ನು ಕರೆಸಿ ಇಡೀ ರಾತ್ರಿ ತಾಳಮದ್ದಳೆ (ಪಂಚವಟಿ – ವಾಲಿಸಂಹಾರ)ಯನ್ನು ನಮ್ಮ ಬಳಗದ ಮೂಲಕ ಆಯೋಜಿಸಿದ್ದೆವು. ಡಾ॥ ಎಂ. ಪ್ರಭಾಕರ ಜೋಷಿ, ಮೂರೂರು ಮಂಜುನಾಥ ಭಂಡಾರಿ, ಹಿಮ್ಮೇಳಕ್ಕೆ ಭಾಗವತರಾಗಿ ಜಯರಾಮ ಕುದ್ರೆತ್ತಾಯ, ಚಂಡೆಗೆ ಚಿಪ್ಪಾರು ಕೃಷ್ಣಯ್ಯ ಬಲ್ಲಾಳರನ್ನು ಕರೆಸಿದ್ದೆವು. ಮಾರನೆಯ ದಿನ ಶೇಣಿ ಗೋಪಾಲಕೃಷ್ಣ ಭಟ್‌ರಿಗೆ ಅದ್ದೂರಿಯ ಸನ್ಮಾನ ಮತ್ತು ಯಕ್ಷಗಾನ ಪ್ರದರ್ಶನ (ಜರಾಸಂಧ ವಧೆ – ಕೃಷ್ಣಾರ್ಜುನ ಕಾಳಗ) ಆ ಸನ್ಮಾನ ಸಭೆಗೆ ಆಗಿನ ಸಂಸ್ಕೃತಿ ಸಚಿವರಾಗಿದ್ದ ದಿ॥ ಜೀವರಾಜ ಆಳ್ವರನ್ನು ಆಮಂತ್ರಿಸಿದ್ದೆವು. ಆದರೆ ಕಾರ್ಯನಿಮಿತ್ತ ಅಂದು ಭಾಗವಹಿಸಲು ಅಸಾಧ್ಯವಾದ್ದರಿಂದ

ಅವರೇ ಸೂಚಿಸಿ, ಒಪ್ಪಿಸಿದ ಅಂದಿನ ವಿರೋಧ ಪಕ್ಷದ ನಾಯಕರಾದ, ಸಾಹಿತಿಗಳೂ ಆಗಿರುವ ಶ್ರೀ ಎಂ. ವೀರಪ್ಪ ಮೊಯಿಲಿಯವರು ಅಧ್ಯಕ್ಷತೆಯನ್ನು ವಹಿಸಿದ್ದರು.

ಆ ಕಾಲದಲ್ಲಿ ಬೆಂಗಳೂರಿಗರಿಗೆ ತಾಳಮದ್ದಳೆಯ ಸರಿಯಾದ ಪರಿಚಯವಿರಲಿಲ್ಲ. ಹಿರಿಯ ಬಲಿಪ ನಾರಾಯಣ ಭಾಗವತರ ಶಿಷ್ಯರಾಗಿ ಪ್ರಸಿದ್ಧಿ ಹೊಂದಿದ್ದ ಭಾಗವತ ಸರವು ಕೃಷ್ಣಭಟ್ಟರನ್ನು ಕರೆಸಿ ತಾಳಮದ್ದಳೆ ಸಪ್ತಾಹವನ್ನು ನಡೆಸಿದೆವು. ತಾಳಮದ್ದಳೆ ಸಪ್ತಾಹ ಅದಕ್ಕಿಂತ ಮೊದಲು ಬೆಂಗಳೂರಿನಲ್ಲಿ ಆಗಿರಲಿಲ್ಲ. ಆಮೇಲೆ ಕೂಡ ಆಗಿದೆಯೋ ಇಲ್ಲವೋ ತಿಳಿದಿಲ್ಲ. ಕೊನೆಯ ದಿನ ಭಾಗವತರನ್ನು ಸನ್ಮಾನಿಸಿದೆವು.

ಸರ್ದಾರ್ ವಲ್ಲಭಬಾಯ್ ಪಟೇಲರ ಜನ್ಮದಿನದಂದು "ಹೈದರಾಬಾದ್ ವಿಮೋಚನೆ" ಎಂಬ ನೂತನ ಪ್ರಸಂಗವನ್ನು ತಾಳಮದ್ದಳೆಯ ರೂಪದಲ್ಲಿ ಇಲ್ಲಿ ನಡೆಸಿದೆವು. ಅದರಲ್ಲಿ ಖ್ಯಾತ ವಕೀಲ ಶ್ರೀ ಉಜಿರೆ ಈಶ್ವರಭಟ್ ಅರ್ಥಧಾರಿಯಾಗಿ ಪಾಲ್ಗೊಂಡಿದ್ದರು. ಹೀಗೆ ನಮ್ಮ ಹೆಚ್ಚಿನ ಕಾರ್ಯಕ್ರಮಗಳೂ ಆಗ ನಡೆಯುತ್ತಿದ್ದದ್ದು ಒಂದು ಪುರಭವನದಲ್ಲಿ ಇಲ್ಲವೇ ರವೀಂದ್ರ ಕಲಾಕ್ಷೇತ್ರದಲ್ಲಿ.

ಈಗ ಕಾಲ ಬದಲಾಗಿದೆ. ತೆಂಕುತಿಟ್ಟಿನ ಯಕ್ಷಗಾನ ಪ್ರದರ್ಶನಗಳು ಬೆಂಗಳೂರಿನವರನ್ನು ಆಕರ್ಷಿಸಿವೆ. ಹಲವು ಸಂಘ–ಸಂಸ್ಥೆಗಳು ತಲೆಎತ್ತಿವೆ. ಎನ್.ಎನ್. ಪಂಜಾಜೆ, ರಾಜಗೋಪಾಲ ಕನ್ಯಾನ, ಮಿತ್ತೂರು ಈಶ್ವರಭಟ್, ಆರ್.ಕೆ.ಭಟ್, ಗಣೇಶಭಟ್ ಬಾಯಾರು, ಶ್ರೀ ಲಕ್ಷ್ಮೀನಾರಾಯಣ ಕಲ್ಯಾರು, ಕೃಷ್ಣಜೋಯಿಸ್ ಮುಂತಾದವರು ತೆಂಕುತಿಟ್ಟು ಯಕ್ಷಗಾನದ ಪ್ರಸಾರ ಕಾರ್ಯದಲ್ಲಿ ತೊಡಗಿದ್ದಾರೆ. 1974ರಲ್ಲಿ ಸ್ಥಾಪಿತಗೊಂಡ 'ಕರಾವಳಿ ಯಕ್ಷಗಾನ ಕಲಾವಿದರು, ಬೆಂಗಳೂರು' ತಂಡವು ತನ್ನ ಮೂವತ್ತನೆ (ತ್ರಿಂಶತಿ) ಯಕ್ಷೋತ್ಸವವನ್ನು 2014ರಲ್ಲಿ ಆಚರಿಸಿತು. ಪ್ರತಿವರ್ಷವೂ ಪ್ರದರ್ಶನ ನೀಡುತ್ತಾ, ಹಿರಿಯ ಕಲಾವಿದರೊಬ್ಬರನ್ನು ಸನ್ಮಾನಿಸುವ ಕಾರ್ಯವನ್ನು ಅನೂಚಾನವಾಗಿ ನಡೆಸಿಕೊಂಡು ಬರಲಾಗುತ್ತಿದೆ. ನಮ್ಮೆಲ್ಲ ಚಟುವಟಿಕೆಗಳ ಬುನಾದಿಯೆಂದರೆ ರವೀಂದ್ರ ಕಲಾಕ್ಷೇತ್ರ ಮತ್ತು ಅದರ ಆವರಣ. ಈ ಕಾರಣ ಇದು ಚಿರಕಾಲ ಉಳಿಯಲಿ ಎಂಬುದೇ ನಮ್ಮೆಲ್ಲರ ಶುಭಕಾಮನೆ.

– ಲೇಖಕರು : ಸೇರಾಜೆ ಸೀತಾರಾಮ ಭಟ್

'ದೀಪ್ತಿ', ಪಾಂಚಜನ್ಯ ರೆಸಿಡೆನ್ಸಿ,

ಕುಲಾಲ ಭವನದ ಎದುರು, ತಡಂಬೈಲು

ಸುರತ್ಕಲ್ – 575 015. ದಕ್ಷಿಣ ಕನ್ನಡ

ಲೇಖಕರ ಪರಿಚಯ:

ದಿ. ಕುರಿಯ ವಿಠಲ ಶಾಸ್ತ್ರಿಗಳ ದೀರ್ಘ ಕಾಲದ ಸಂಪರ್ಕದಲ್ಲಿ ಯಕ್ಷಗಾನದ ಒಳಹೊರಗನ್ನು ಅರಿತ ಸೇರಾಜೆಯವರು ಕುರಿಯರನ್ನು ಗುರುಗಳೆಂದೇ ಸ್ವೀಕರಿಸಿದ್ದಾರೆ. ಹವ್ಯಾಸಿ ವೇಷಧಾರಿಯಾಗಿ ಅರ್ಥಧಾರಿಯಾಗಿ 4 ದಶಕಗಳ ಅನುಭವ ಇರುವ ಶ್ರೀಯುತರು ಬೆಂಗಳೂರಿನಲ್ಲಿ 70–80ರ ದಶಕಗಳಲ್ಲಿ ವಾಸಿಸಿದ್ದು, ತೆಂಕುತಿಟ್ಟು ಯಕ್ಷಗಾನದ ಪ್ರಸಾರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಭಗವದ್ಗೀತೆಯನ್ನು ಭಾಮಿನಿ ಷಟ್ಪದಿಯಲ್ಲಿ ಭಾವಾನುವಾದ ಮಾಡಿರುವುದಲ್ಲದೆ, ಯಕ್ಷಗಾನ ಪ್ರಸಂಗಗಳನ್ನು ರಚಿಸಿದ್ದಾರೆ. ಅವರ ಯಕ್ಷಗಾನ 'ಪ್ರಸಂಗ ಪಂಚಕ' ಎಂಬ ಕೃತಿಗೆ ಯಕ್ಷಗಾನ ಬಯಲಾಟ ಅಕಾಡೆಮಿಯ 2014ರ ಪುಸ್ತಕ ಪುರಸ್ಕಾರ ಲಭಿಸಿದೆ. ಅತಿಕಾಯ, ದೇವೇಂದ್ರ, ಕರ್ಣ, ಸುಧನ್ವ, ಅರ್ಜುನ, ದೇವೇಂದ್ರ ಮುಂತಾದ ಪಾತ್ರಗಳು ಕೀರ್ತಿಯನ್ನು ಇವರಿಗೆ ತಂದುಕೊಟ್ಟಿವೆ. ವಿಟ್ಲ ಜೋಷಿ ಪ್ರಶಸ್ತಿ, ಕಲ್ಲೂರ ಪ್ರಶಸ್ತಿ, ಮುಂತಾದ ಪ್ರಶಸ್ತಿ–ಪುರಸ್ಕಾರಗಳು ಇವರಿಗೆ ಲಭಿಸಿವೆ.

ನ ಭೂತೋ ನ ಭವಿಷ್ಯತಿ

–ಕೆ.ಎನ್. ಅಡಿಗ, ಅಡೂರು

ರವೀಂದ್ರ ಕಲಾಕ್ಷೇತ್ರ ಅಂತ ಹೇಳಿದ್ರೇನೆ ಅದೊಂದು ಸಾಂಸ್ಕೃತಿಕ ಕ್ಷೇತ್ರದ ಆಕರ್ಷಣೀಯ ಸ್ಥಳ. ಈಗಾಗಲೆ ಅದು ಐವತ್ತು ವರ್ಷ ತುಂಬಿದ್ದರ ನೆನಪಿಗಾಗಿ ಸುಮಾರು ಐವತ್ತಕ್ಕೂ ಮೇಲ್ಪಟ್ಟು ವಿವಿಧ ಕಾರ್ಯಕ್ರಮಗಳು ಶ್ರೀ ಕಪ್ಪಣ್ಣನವರ ನೇತೃತ್ವದಲ್ಲಿ ನಡೆಯಿತು. ಆ ಕಾರ್ಯಕ್ರಮಗಳನ್ನು "ನೆನಪಿನೋಕುಳಿ"ಯೆಂದು ಕನ್ನಡ ಮತ್ತು ಸಾಂಸ್ಕೃತಿಕ ಇಲಾಖೆ ಸಾದರಪಡಿಸಿತ್ತು. ಬಹಳಷ್ಟು ಮಂದಿ ಈ ಕಾರ್ಯಕ್ರಮಗಳಿಗೆ ಸಾಕ್ಷಿಯಾದರು. ರವೀಂದ್ರ ಕಲಾಕ್ಷೇತ್ರದಲ್ಲಿ ಐವತ್ತು ವರ್ಷದಲ್ಲಿ ಏನೇನು ಕಾರ್ಯಕ್ರಮಗಳು ನಡೆಯಿತೋ, ಅದಕ್ಕೆ ಸಂಬಂಧಪಟ್ಟ ಜನಗಳನ್ನು, ಕಲಾವಿದರನ್ನು ಜತೆಗೂಡಿಸಿ ಅವರಿಗೆಲ್ಲ ಅವಕಾಶ ಕೊಟ್ಟು ಕಾರ್ಯಕ್ರಮಗಳನ್ನು ಸಾಕ್ಷಾತ್‌ಗೊಳಿಸಿದಂತ ದೊಡ್ಡ ಹೆಸರು ಶ್ರೀ ಶ್ರೀನಿವಾಸ ಕಪ್ಪಣ್ಣನವರಿಗೆ ಸಲ್ಲುತ್ತದೆ. ಒಂದು ಕಲಾಭವನ ಹೆಮ್ಮೆಪಡಬಹುದಾದ ಕಾರ್ಯಕ್ರಮವಾಗಿದೆ.

ನಾವು ಕರಾವಳಿಗರಿಗೆ ಹಾಗೂ ಮಲೆನಾಡಿನವರಿಗೆ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯುವ ಯಕ್ಷಗಾನ ಎಂಬುದು ಬಹಳ ಹೆಮ್ಮೆಯ ಕಲೆ. ರವೀಂದ್ರ ಕಲಾಕ್ಷೇತ್ರದಲ್ಲಿ ಬಹಳಷ್ಟು ಯಕ್ಷಗಾನ ಕಾರ್ಯಕ್ರಮಗಳು ತುಂಬಿದ ಸಭಾಂಗಣದಲ್ಲಿ ನಡೆದಿದೆ. ರಾತ್ರಿಯಿಂದ ಬೆಳಗಿನ ತನಕ, ಇಲ್ಲವೇ ಹಗಲು ಎರಡು ಘಂಟೆಯಿಂದ ರಾತ್ರಿ ಹತ್ತರವರೆಗೆ ಯಕ್ಷಗಾನ ನಡೆಯುತ್ತದೆ. ಇತರ ಎಲ್ಲಾ ಕಾರ್ಯಕ್ರಮಗಳು ಇಲ್ಲಿ ನಡೆದರೂ ಸಹ ಈ ರೀತಿ ಜನ ಸೇರುವುದು ಕಡಿಮೆ. ಇದು ಇತರ ಎಲ್ಲಾ ಸಾಂಸ್ಕೃತಿಕ ಸಂಘಟನೆಗಳು ಮೂಗಿನ ಮೇಲೆ ಬೆರಳಿಟ್ಟು ಯೋಚಿಸುವಂತೆ, ಆಶ್ಚರ್ಯಪಡುವಂತೆ ಮಾಡಿದೆ. ಇದು ಯಕ್ಷಗಾನದ ಶಕ್ತಿ. ಯಕ್ಷಗಾನ ಜನರಿಂದ ಜನರಿಗಾಗಿ, ಜನರೇ ಸೇರಿ ನಡೆಯುವ ಒಂದು ಪರಂಪರೆಯ ಕಲೆ. ಇಲ್ಲಿ ಎಲ್ಲವೂ ಇದೆ. ಯಕ್ಷಗಾನದಲ್ಲಿ ಸಂಗೀತ, ನೃತ್ಯ, ಅಭಿನಯ, ವೇಷಭೂಷಣ, ಹಿಮ್ಮೇಳ,

ಮುಮ್ಮೇಳಗಳು ಇವೆ. ಇಲ್ಲಿ ಅರ್ಥಧಾರಿಗಳು ಯಾವುದನ್ನೂ ಕಂಠಪಾಠ ಮಾಡದೆ ಸಾಂದರ್ಭಿಕವಾಗಿ, ಆಂಗ್ಲ ಅಥವಾ ಇತರ ಯಾವ ಭಾಷೆಯನ್ನು ಬೆರಸದೆ ಅಚ್ಚ ಕನ್ನಡದಲ್ಲೇ ಮನಸ್ಸಿಗೆ ನಾಟುವಂತೆ ಅರ್ಥವನ್ನು ಹೇಳುತ್ತಾರೆ. ಇದು ಯಕ್ಷಗಾನ ಕಲೆಯ ವೈಶಿಷ್ಟ್ಯ. ಇದನ್ನು ಕಲಾಕ್ಷೇತ್ರದಲ್ಲಿ ನೋಡಿದ ರಾಜ್ಯದ ಬೇರೆ ಪ್ರದೇಶದ ಜನರು ಯಕ್ಷಗಾನದ ಗೀಳನ್ನು ಬೆಳಸಿಕೊಂಡರು. ಇದರಿಂದಾಗಿ ಯಕ್ಷಗಾನವೀಗ 'ಕರ್ನಾಟಕದ ಕಲೆ' ಎಂಬುದಾಗಿ ರಾಜ್ಯದ ಜನತೆ ಸ್ವೀಕಾರ ಮಾಡಿದ್ದಾರೆ.

ಇಷ್ಟೆಲ್ಲಾ ವಿಷಯಗಳನ್ನು ಯಾಕೆ ಹೇಳಿದೆ ಎಂದರೆ ರವೀಂದ್ರ ಕಲಾಕ್ಷೇತ್ರದಲ್ಲಿ 'ನ ಭೂತೋ ನ ಭವಿಷ್ಯತಿ' ಎಂಬಂತೆ ಒಂದು ಯಕ್ಷಗಾನ ಕಾರ್ಯಕ್ರಮವು ಮದರ್ ಫೌಂಡೇಷನ್, ಬೆಂಗಳೂರು ಅರ್ಪಿಸಿದ ಶ್ರೀಮತಿ ಪ್ರೇಮಾ ಆರ್. ಶೆಟ್ಟಿ ಕುತ್ಯಾರು ಮತ್ತು ಮಕ್ಕಳ ಸೇವಾರ್ಥವಾಗಿ ನಡೆದ "ಶ್ರೀದೇವಿ ಮಹಾತ್ಮೆ" ಎಂಬ ಯಕ್ಷಗಾನ ಪ್ರಸಂಗವು ಶ್ರೀ ಕರ್ನೂರು ಸುಭಾಷ್‌ರೈಯವರ ಸಂಯೋಜನೆಯಲ್ಲಿ ನೆರವೇರಿತು. ಇದಕ್ಕೆ ಸುಮಾರು ಐದು ಸಾವಿರ ಜನರು ಸಾಕ್ಷಿಯಾಗಿ ಇತಿಹಾಸ ನಿರ್ಮಿಸಿದರು. ಇದರ ಪೂರ್ವ ಸಿದ್ಧತೆಯೇ ಅಪೂರ್ವವಾಗಿತ್ತು. ವಾಟ್ಸ್‌ಅಪ್, ಫೇಸ್‌ಬುಕ್, ಪತ್ರಿಕಾ ಪ್ರಚಾರ ಇವೆಲ್ಲವೂ ಇದರ ಬಗ್ಗೆ ಕುತೂಹಲ ಹುಟ್ಟಿಸಿತ್ತು. ಅದು ಕಟೀಲು ದೇವಾಲಯದ ಮೇಳವಾಗಿತ್ತು. ನಾಲ್ಕು ಗಂಟೆಗೆ ನಡೆಯಬೇಕಾಗಿದ್ದ ಕಾರ್ಯಕ್ರಮಕ್ಕೆ ಯಕ್ಷಾಭಿಮಾನಿಗಳು ಎರಡು ಘಂಟೆಯಿಂದಲೇ ಸಾಗರೋಪಾದಿಯಾಗಿ ಬರಲು ಆರಂಭಿಸಿದರು. ಹೆಚ್ಚಿನ ಜನರ ಆಗಮನದ ನಿರೀಕ್ಷೆಯಲ್ಲಿದ್ದ ವ್ಯವಸ್ಥಾಪಕರು ಬಹಳಷ್ಟು ಸಿದ್ಧತೆಗಳನ್ನು ಮಾಡಿದ್ದರು. ಸಂಸ ಬಯಲು ರಂಗಮಂದಿರ ಮತ್ತು ಕಲಾಕ್ಷೇತ್ರದ ಹೊರ ಭಾಗದಲ್ಲಿ ದೊಡ್ಡ ತೆರೆಯ ವ್ಯವಸ್ಥೆ ಮಾಡಿದ್ದರು. ಸುಮಾರು ನಾಲ್ಕು ಘಂಟೆಗೆ ಕಲಾಕ್ಷೇತ್ರದ ಸಭಾಂಗಣ ತುಂಬಿ ತುಳುಕುತ್ತಿತ್ತು. ಸಾಲದೆಂಬಂತೆ ಕಲಾಕ್ಷೇತ್ರದಲ್ಲಿ ಸಾಗುವ ದಾರಿಯಲ್ಲಿ ಸಹ ಜನರು ಆಸೀನರಾಗಿದ್ದರು. ಕಲಾಕ್ಷೇತ್ರದ ವೇದಿಕೆಯ ಮೇಲೆ ಭವ್ಯ "ಯಕ್ಷ ಮಂಟಪ" ಸಿದ್ಧವಾಗಿತ್ತು. ಎಡಭಾಗದಲ್ಲಿ "ದೇವರ ಮಂಟಪ", ಬಲಭಾಗದಲ್ಲಿ ದೇವಿ ಆಸೀನರಾಗುವ ಉಯ್ಯಾಲೆ ಮಲ್ಲಿಗೆ ಹೂಗಳಿಂದ ಅಲಂಕೃತವಾಗಿತ್ತು.

ಕಲಾಕ್ಷೇತ್ರದ ಹೊರಭಾಗದಲ್ಲಿ ಹಾಗೂ ಸಂಸ ಬಯಲು ರಂಗಮಂದಿರದಲ್ಲಿ ವೀಕ್ಷಣೆಗೆ ಅನುವಾಗಲು ದೊಡ್ಡ ಪರದೆಯು ಸಿದ್ಧವಾಗಿತ್ತು. ನೋಡ ನೋಡುತ್ತಿದ್ದಂತೆಯೇ ರವೀಂದ್ರ ಕಲಾಕ್ಷೇತ್ರಕ್ಕೆ ಜನಸಾಗರವೇ ಹರಿದು ಬಂತು.

ರಾಜಧಾನಿಯ ಎಲ್ಲ ಮೂಲೆಗಳಿಂದಲೂ ಯಕ್ಷಗಾನದ ಅಭಿಮಾನಿಗಳು ಕಲಾಕ್ಷೇತ್ರಕ್ಕೆ ಆಗಮಿಸಿದರು. ಆದರೆ ಕುಳಿತುಕೊಳ್ಳಲು ಜಾಗವೇ ಸಾಲದಾಯಿತು. ಕಲಾಕ್ಷೇತ್ರದ ಸಭಾಂಗಣದಲ್ಲಿ ಜನರು ಸಿಕ್ಕ ಸಿಕ್ಕ ಜಾಗದಲ್ಲಿ ಆಸೀನರಾದರು. ರಂಗಸ್ಥಳದ ಮೇಲೂ ಕೂಡ ಇಕ್ಕೆಲಗಳಲ್ಲಿ ಜನರು ಆಸೀನರಾಗಿ ವೇಷಧಾರಿಗಳಿಗೆ ರಂಗಸ್ಥಳ ಪ್ರವೇಶಕ್ಕೂ ಕಷ್ಟವಾಯಿತು.

ಅಂದಿನ ವಿಶೇಷವೆಂದರೆ ಐದು ಮಹಿಷಾಸುರ ವೇಷಗಳೂ ಸಭಾಂಗಣಕ್ಕೆ ಏಕಕಾಲಕ್ಕೆ ಪ್ರವೇಶಿಸಬೇಕಿತ್ತು. ಸಂಸ ಬಯಲು ರಂಗಮಂದಿರದಿಂದ ಚಂಡೆಯ ನಾದದೊಂದಿಗೆ ಕಣ್ಣು ಕೋರೈಸುವ ಬೆಳಕಿನೊಂದಿಗೆ ಬಂದಾಗ ಒಳಗೆ ಪ್ರವೇಶಿಸಲು ಸ್ವಲ್ಪ ಕಷ್ಟವಾಯಿತು. ವೇದಿಕೆಯಲ್ಲಿ ಚಂಡೆಯ ಅಬ್ಬರ. 'ಮಗಾ ಬಾ' ಎಂದು ಮಹಿಷಿಯ ಕರೆ ಮಗನಿಗೆ. ಐದು ಕಡೆಯಿಂದ ಪ್ರವೇಶಿಸಿದ ಮಹಿಷಾಸುರ ನಿಧಾನವಾಗಿ ಆರ್ಭಟಿಸುತ್ತ ದಾರಿಯಲ್ಲಿ ಕುರ್ಚಿ ಹತ್ತಿ ಬೊಬ್ಬೆ ಹಾಕುತ್ತಾ ಅಲ್ಲಿಂದಲೇ ನರ್ತನ ಮಾಡುತ್ತಾ ಬರುತ್ತಿರುವಾಗ ಸಭಾಂಗಣದ ಎಲ್ಲ ವಿದ್ಯುತ್‌ದೀಪಗಳನ್ನು ಆರಿಸಲಾಗಿತ್ತು.

ಸಭಾಂಗಣದಲ್ಲಿ ಹೊಸ ಲೋಕವೆ ಸೃಷ್ಟಿಯಾಯಿತು. ನೀಲಿ ಆಗಸದಲ್ಲಿ ಮಿನುಗುತಾರೆ ನಕ್ಷತ್ರವನ್ನು ಕಾಣುತ್ತೇವೆ. ಆದರೆ ಈ ಸಭಾಂಗಣದಲ್ಲಿ ಎಲ್ಲರ ಸಂಚಾರಿ ದೂರವಾಣಿಯ ಬೆಳಕು ಮಹಿಷನ ಮೇಲೆ ಬಿದ್ದು ಹೊಸ ಅನುಭವವು ಮೂಡಿಬಂತು. ಆರ್ಭಟದೊಂದಿಗೆ ಸಭಾಂಗಣವನ್ನು ಪ್ರವೇಶಿಸಿ ಕುಣಿಯುತ್ತಾ ವೇದಿಕೆಯನ್ನು ತಲುಪಿ, ಹಂಬಲಿಸುತ್ತಿದ್ದ ಅಮ್ಮನನ್ನು ಸೇರಿದ ಮಹಿಷನ ವೇಷಧಾರಿಗಳು ಕಣ್ಣಿಗೆ ಅದ್ಭುತ ಆನಂದವನ್ನು ನೀಡಿದವು.

ನಾವು ಆಗಾಗ 'ಗೃಹಬಂಧನ' ಎಂಬ ಪದವನ್ನು ಈಗೀಗ ಕೇಳುತ್ತೇವೆ. ಅಂದು ಸಭಾಂಗಣದಲ್ಲಿ ಕುಳಿತಿದ್ದ ಜನಗಳಿಗೆ ಗೃಹಬಂಧನದಲ್ಲಿ ಇದ್ದಂತೆ ಭಾಸವಾಗುತ್ತಿತ್ತು. ಹೊರಹೋಗಲು ಸಾಧ್ಯವಾಗುತ್ತಿಲ್ಲ. ಹೊರಗೆ ಹೋದರೆ ಒಳಗೆ ಬರಲಾಗುವುದಿಲ್ಲ. ಹವಾನಿಯಂತ್ರಿತ ವ್ಯವಸ್ಥೆ ಅಧಿಕ ಜನಗಳಿಂದಾಗಿ ಪ್ರಯೋಜನವಾಗಲಿಲ್ಲ. ಆದರೂ ಜನಗಳು ವೇದಿಕೆಯಲ್ಲಿರುವ ವೇಷಧಾರಿಗಳನ್ನು ನೋಡಿ ಕಣ್ತುಂಬಿಕೊಂಡರು. ಸ್ವತಃ ಕಟೀಲು ಮೇಳದ ಕಲಾವಿದರೇ ಅಂದು ಬೆಂಗಳೂರಿಗೆ ಆಗಮಿಸಿದ್ದರಿಂದ ಬಂದಿರುವ ಪ್ರೇಕ್ಷಕರು ಭಕ್ತಿಪರವಶತೆಯಲ್ಲಿ ಮಿಂದೆದ್ದರು. ಪ್ರದರ್ಶನದಲ್ಲಿ ಬಣ್ಣದ ವೇಷಗಳು ಬರುತ್ತಿದ್ದಂತೆ ಬ್ಯಾಂಡ್‌ಸೆಟ್‌ಗಳನ್ನು ಜೋರಾಗಿ ಬಾರಿಸುತ್ತಿದ್ದರು. ಜೊತೆಗೆ ಚಂಡೆಯ ಜೋರಾದ ನಾದ ಕೇಳುತ್ತಿತ್ತು. ಕಲಾಕ್ಷೇತ್ರಕ್ಕೆ ಬಂದ ಜನರ ವಾಹನಗಳನ್ನು ಒಂದು ಕಡೆ ನಿಲ್ಲಿಸುವುದೇ ಕಷ್ಟ.

ಅಂದು ವಿಶೇಷವಾಗಿ ನಿಲುಗಡೆಗೆ ಅಕ್ಕಪಕ್ಕದ ಟೌನ್‌ಹಾಲ್, ಯೂನಿಟಿ ಬಿಲ್ಡಿಂಗ್‌ಗಳಲ್ಲೂ ನಿಲುಗಡೆ ಮಾಡಬೇಕಾಯಿತು. ಇದನ್ನೆಲ್ಲ ನೋಡುತ್ತಿದ್ದ ನಾಗರೀಕರು ಇಲ್ಲೇನು ನಡೆಯುತ್ತಿದೆ ಎಂದು ಕುತೂಹಲದಿಂದ ರಸ್ತೆಯಲ್ಲಿ ನಿಂತು ನೋಡುತ್ತಿದ್ದರು. ಈ ವಿಷಯವೇ ಮುಂದೆ ರಾಜಧಾನಿಯ ಎಲ್ಲಾ ಕಲಾಸಂಸ್ಥೆಗೆ ಹೀಗೊಂದು ಬಗೆಯ ಯಕ್ಷಗಾನವಿದೆ, ಜನರು ಈ ರೀತಿ ಪ್ರದರ್ಶನವನ್ನು ಪ್ರೋತ್ಸಾಹಿಸುತ್ತಾರೆ. ನಗರವಾಸಿಗಳಾದರೂ ತಮ್ಮ ಹುಟ್ಟೂರ ಕಲೆಯನ್ನು ಮರೆತಿಲ್ಲ ಎಂದು ತಿಳಿಯುವಂತಾಯಿತು.

ಭಾಗವತರಾಧ ಪಟ್ಲ ಸತೀಶ್ ಶೆಟ್ಟಿ ಇನ್ನೆಲ್ಲೊ ಕಾರ್ಯಕ್ರಮ ಮುಗಿಸಿ ಅಂದು ವಿಮಾನದಲ್ಲಿ ಆಗಮಿಸಿ ವೇದಿಕೆಗೆ ಬಂದಾಗ ಜನರ ಹರ್ಷೋದ್ಗಾರ ಮುಗಿಲು ಮುಟ್ಟಿತು. ಯಕ್ಷಗಾನದಲ್ಲಿ ಧ್ರುವತಾರೆಯಾಗಿ ಈಗ ಹೊರಹೊಮ್ಮಿದ್ದಾರೆ ಪಟ್ಲ ಸತೀಶ್ ಶೆಟ್ಟಿ. ಸಭಾಂಗಣದಲ್ಲಿ ಎಲ್ಲರಿಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿತ್ತು. ತೆಂಕು ಮತ್ತು ಬಡಗುತಿಟ್ಟಿನ ಕಲಾವಿದರು ಜೊತೆಯಾಗಿದ್ದರು. ಯಕ್ಷಗಾನದ ಎಲ್ಲಾ ತಂಡದ ಜನರು ಮುಂಭಾಗದಲ್ಲಿ ಯಾವ ತೊಡಕೂ ಇಲ್ಲದೆ ಆಸೀನರಾಗಿ ಯಕ್ಷಗಾನವನ್ನು ವೀಕ್ಷಿಸಿದರು. ಈ ವ್ಯವಸ್ಥೆ ಸಂಘಟಕರ ಪರಿಶ್ರಮವನ್ನು ಬಿಂಬಿಸುವಂತಿತ್ತು.

ಯಕ್ಷಗಾನಕ್ಕೆ ದುಡಿದ ಮಹನೀಯರನ್ನು ಈ ವಿಶೇಷ ಯಕ್ಷಗಾನದ ಸಂದರ್ಭದಲ್ಲಿ ಗೌರವಿಸಲಾಯಿತು. ಮದರ್ ಫೌಂಡೇಷನ್ ಇವರು ಅರ್ಪಿಸಿದ ಶ್ರೀಮತಿ ಪ್ರೇಮಾ ಆರ್. ಶೆಟ್ಟಿ, ಕುತ್ಯಾರ್ ಮತ್ತು ಅವರ ಮಕ್ಕಳ ಸೇವಾರ್ಥವಾಗಿ ನಡೆದ ಈ ಕಾರ್ಯಕ್ರಮ ರವೀಂಧ್ರ ಕಲಾಕ್ಷೇತ್ರದಲ್ಲಿ ನಡೆದ ಅದ್ಭುತ ಕಾರ್ಯಕ್ರಮಗಳಲ್ಲಿ ಒಂದು ಎಂಬಂತಾಯಿತು. ಹಗಲು ಕಾರ್ಯಕ್ರಮದಲ್ಲಿ ಜನ ಸೇರಿಸುವುದೇ ಕಷ್ಟವಾದಾಗ, ರಾತ್ರಿ ಪೂರ್ತಿ ಯಕ್ಷಗಾನ ಕಾರ್ಯಕ್ರಮ ತುಂಬಿದ ಸಭಾಗೃಹದಲ್ಲಿ ನಡೆಯುತ್ತದೆ ಎಂಬುದೇ ವಿಶೇಷ. ರವೀಂದ್ರ ಕಲಾಕ್ಷೇತ್ರ ಕಳೆದ ಐವತ್ತು ವರ್ಷಗಳಿಂದ ಈ ಕಲೆಯ ಪ್ರದರ್ಶನಕ್ಕೆ ಅವಕಾಶವೀಯುವ ಮೂಲಕ ಬೆಂಗಳೂರಿನಲ್ಲಿ ಯಕ್ಷಗಾನ ಬೇರು ಬಿಡಲು ಕಾರಣವಾಗಿದೆ.

ಕಲಾಕ್ಷೇತ್ರದ ಐವತ್ತರ ಸಂಭ್ರಮದಲ್ಲಿ ಯಕ್ಷಗಾನ ಹಾಗೂ ಇತರೇ ರಂಗಸಂಪ್ರದಾಯದ ಕಲಾವಿದರನ್ನು ಗೌರವಿಸಲಾಯಿತು. ಇಂತಹ ಕಾರ್ಯಕ್ರಮಕ್ಕೆ ನಾನು ಸಾಕ್ಷಿಯಾಗಿದ್ದೇನೆ ಎಂಬುದೇ ನನ್ನ ಸಂತೋಷ. ದೇವಿ ಮಹಾತ್ಮೆಯ ಸಂಘಟಕರಾದ ಕರ್ನೂರು ಸುಭಾಷ್‌ರೈ ಒಬ್ಬ ಒಳ್ಳೆಯ ಯಕ್ಷ ಸಂಘಟಕ

ಎನ್ನಿಸಿಕೊಂಡಿದ್ದಾರೆ. ಮದರ್ ಫೌಂಡೇಷನ್ ಇವರಿಂದ 4–8–2017ರಂದು ಅದೇ ರೀತಿಯ ದೇವಿಮಹಾತ್ಮೆ ಪ್ರಸಂಗವು ಕಲಾಕ್ಷೇತ್ರದಲ್ಲಿ ನಡೆಯಿತು. ಇದೂ ಕೂಡ ಅದ್ದೂರಿಯಾಗಿ ನಡೆಯುವಂತೆ ಸಂಘಟಕರು ಆಯೋಜಿಸಿದ್ದರು.

ಕಲಾಕ್ಷೇತ್ರದ ಐವತ್ತರ ಸಂಭ್ರಮದಲ್ಲಿ ಯಕ್ಷಗಾನವನ್ನು ಪ್ರೋತ್ಸಾಹಿಸಿದ ಸಮಿತಿಗೆ ಯಕ್ಷ ಅಭಿಮಾನಿಗಳು ಆಭಾರಿಯಾಗಿರುತ್ತಾರೆ. ರವೀಂದ್ರ ಕಲಾಕ್ಷೇತ್ರ, ಕಲಾಜಗತ್ತಿಗೆ ಸದಾ ಬಾಗಿಲು ತೆರೆದಿರುವಂತಾಗಲಿ ಎಂದು ಆಶಿಸುತ್ತೇವೆ.

– ಲೇಖಕರು : ಕೆ.ಎನ್. ಅಡಿಗ, ಅಡೂರು
ಯಕ್ಷಕಲೋಪಾಸಕರು
ಚ.ರೂ. : 96862 04659

ಲೇಖಕರ ಪರಿಚಯ

ಅಡೂರು ಮೂಲದ ಶ್ರೀ ಕೆ.ಎನ್. ಅಡಿಗರು (ಕೆ. ನಾರಾಯಣ ಅಡಿಗ) ಬೆಂಗಳೂರಿನ ಸಾಂಸ್ಕೃತಿಕ ವಲಯಕ್ಕೆ ಚಿರಪರಿಚಿತರು. ಉತ್ತಮ ವಾಗ್ಮಿಗಳು, ಕಲಾಸಂಘಟಕರು, ಖ್ಯಾತ ಕಾರ್ಯಕ್ರಮ ನಿರೂಪಕರಾಗಿ ಅವರು ಹೆಸರು ಮಾಡಿದ್ದಾರೆ. ದಕ್ಷಿಣ ಕನ್ನಡ ಸಂಘ, ಆನಂದ ಬಳಗ, ತುಳು ವೆಂಕುರುಲು ಮುಂತಾದ ಸಂಘ–ಸಂಸ್ಥೆಗಳ ಪದಾಧಿಕಾರಿಗಳಾಗಿ, ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದವರು. ಯಕ್ಷಗಾನ ನಾಟಕ, ಸಾಹಿತ್ಯ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ಕನ್ನಡ ಹಾಗೂ ತುಳುವಿನಲ್ಲಿ ಅದ್ವಿತೀಯ ಪ್ರಭುತ್ವ ಹೊಂದಿದ್ದು, ಸ್ಪಷ್ಟ ಹಾಗೂ ಆಕರ್ಷಕವಾದ, ಅಸ್ಖಲಿತವಾದ ಮಾತುಗಾರಿಕೆಯಿಂದ ಮನಸೆಳೆಯಬಲ್ಲವರು.

"ಯಕ್ಷಗಾನಂ ವಿಶ್ವಗಾನಂ"

– ಡಾ॥ ಬೇಗಾರ್ ಶಿವಕುಮಾರ್

ಕಲಾಕ್ಷೇತ್ರದ ಅಂತರಂಗ ಹಾಗೂ ನನ್ನ ಬಹಿರಂಗ

ಅಂತರಂಗ (ಚೌಕಿಯಲ್ಲಿ – ಗ್ರೀನ್ ರೂಂ)

ಗಜ ಮು । ಖ – – – ॥ ದ ವ – । ಗೆ – – ಗ ॥

ಣಪ – । ಗೆ

ತಾ ಕಿಟತಕ । ತರಿಕಿಟ ಕಿಟತಕ ॥ ತಾ ತೈ ತ ಕ ದಿತ್ತಾ ದದಿಗಿಣ

ಗಜ ಮು । ಖ – – – ॥ ದ □ ವ – ಗೆ – – ಗ ॥

ಣಪ – । ಗೆ – – – ॥ – – – । – – ಚೆಲ್ವ ॥

ತ್ರಿಜ – । ಗ – – ವಂ ॥ ದಿ – ತ । ನಿ – ಗಾ – ॥

ರತಿ – । ಎ – – ತ್ತಿ ॥ ರೇ – – । – – – ॥

ಗಜ ಮು । ಖ – – – – । ದ ವ – । ಗೆ – – ಗ ॥

ಖಿಪ – – । ಗೆ – – – – – –

ತಾ ಕಿಟತಕ । ತರಿಕಿಟ ಕಿಟತಕ ॥ ತಾ ತೈ ತಕ ದಿತ್ತಾ ದದಿಗಿಣ ದಿಂ

ಹೀಗೆ ವಿಘ್ನ ನಿವಾರಕ ಗಣಪತಿಯನ್ನ ಪೂಜೆ ಮಾಡಿ ಹಿಮ್ಮೇಳದ ಕಲಾವಿದರು ರಂಗವನ್ನು ಪ್ರವೇಶ ಮಾಡಿ ತಮ್ಮದೇ ಆದ ಹಿಮ್ಮೇಳದ ಎತ್ತರದ ಮಂಚದಲ್ಲಿ ಕುಳಿತು ಭಾಗವತರು, ಮದ್ದಳೆಯವರು, ಚಂಡೆಯವರು – ಪುನಃ ಅಭ್ರ ಬೀಡ್ತಿಗೆಯನ್ನು ಭಾರಿಸಿ, ರಂಗದಲ್ಲಿ ಗಣೇಶನನ್ನು ಆರಾಧಿಸುತ್ತಾರೆ. ಈ ರೀತಿಯಲ್ಲಿ

ಮುದದಿಂ – ದ । ನಿ – ನ್ನ । ಕೊಂ । ಡಾ ಡುವೆನು । ಅನವರತ ।

ಮದವೂರ । ವಿ – ಘ್ನೇ । ಶ । ದೇವಜಗ । ಧೀ ಶ – – – ।

ಮುದದಿಂ – ದ । ನಿ – ನ್ನ ತಾ ತಾ ಕಡ್ತಕ ತಾಗಡ್ ತದ್ದಿನ್ನಾಕ । ತೈ.. .. ..

ತಕ ದದಿಗಿಣ – (ದಿಂ) ಹೀಗೆ ಮುಂದುವರಿದು [ಇದ್ದರೇ]

ಬಾಲ ಗೋಪಾಲ – ಪೀಠಿಕಾ ಸ್ತ್ರೀ ವೇಷಗಳ ನಾಟ್ಯಾಭಿನಯ ಮುಗಿದ ಮೇಲೆ – ಪ್ರಸಂಗ ಪೀಠಿಕೆಯ ಅಬ್ಬರ ನನಗಂತೂ ಇದನ್ನ ಆಲಿಸುವುದು ಅತಿಯಾದ ಆನಂದ.

ಆಗಲೇ, ಓಲಗ ಆರಂಭವಾಯಿತು .. .. .. ಆಹಾ .. .. ..

'ಅಂಬುರುಹ ದಳ ನೇತ್ರೆ ಶ್ರೀ ದುರ್ಗಾಂಬಿಕೆಗೆ ಬಲವಂದು

ಭಾಗವತ = ಪರಾಕ್ರಮ ಕಂಠೀರವ

ಕಲಾಕ್ಷೇತ್ರ = ಭಲ್ಲಿರೇನಯ್ಯಾ

ಭಾಗವತ = ತಾವಿರುವಂಥ ಪುಣ್ಯನಾಡು ಯಾವುದು?

ಕಲಾಕ್ಷೇತ್ರ = ಕನ್ನಡ ನಾಡಿನ ರಾಜಧಾನಿಯಲ್ಲಿ

ಭಾಗವತ = ರಾಜಧಾನಿಯ ಯಾವ ಕ್ಷೇತ್ರದಲ್ಲಿದ್ದೀರಿ ?

ಕಲಾಕ್ಷೇತ್ರ = ರಾಜಧಾನಿಯ ರವೀಂದ್ರ ಕಲಾಕ್ಷೇತ್ರ ನಾನು.

ಭಾಗವತ = ಓಹೋ ! ಮರೆತೇ.. .. ತಮ್ಮ ಓಲಗದ ವಿಶೇಷ

ಕಲಾಕ್ಷೇತ್ರ = ಹ್ಹ .. ಹ್ಹ .. ! ಎಲ್ಲರೂ ಮರೆತು .. ಮತ್ತೆ ನನ್ನ ನೆನಪಿಸಿಕೊಂಡ ನೆನಪಿನೋಕುಳಿಯ ಸಾರ್ಥಕ ಕ್ಷಣಗಳಿಗಾಗಿ.. .. .. ..

ನನ್ನ ಪ್ರೀತಿಯ ಕಲಾವಿದರೇ, ಸಾಹಿತಿಗಳೇ, ಕವಿಗಳೇ, ವಿದ್ವಾಂಸರೇ, ಅಧಿಕಾರಿಗಳೇ, ಇಲ್ಲಿಯ ನೌಕರ ವೃಂದದವರೇ, ಮಾಧ್ಯಮದವರೇ, ಮುಖ್ಯವಾಗಿ ರಾಜಕಾರಣಿಗಳೇ, ಹಲವಾರು ಸಂಘ–ಸಂಸ್ಥೆಯವರೇ ಹಾಗೂ ಮುಖ್ಯವಾಗಿ ವೀಕ್ಷಕ – ಪ್ರೇಕ್ಷಕ ಸಭಾಸದಸ್ಯರೇ... ನಾನೇ ಮರೆತ ನನ್ನ ನೆನಪನ್ನು ನೀವೆಲ್ಲಾ

ಸೇರಿ ಮಾಡುತ್ತಿರುವುದು ನನಗೆ ಮುದ ನೀಡಿದೆ. ನೀವು ಮಾಡಿದ ಸಾಧನೆಗಳನ್ನು ಅಕ್ಷರ ರೂಪದಲ್ಲಿ ದಾಖಲೆ ಮಾಡ ಹೊರಟಿದ್ದು, ಒಂದು ವಿಶೇಷ ದಾಖಲೆಯೇ. ಹಾಗೆ ಮಾಡದಿದ್ದಲ್ಲಿ ನಿಮ್ಮ ಪೂರ್ವಿಕರು ನಿರ್ಮಾಣ ಮಾಡಿದ ಐತಿಹಾಸಿಕ ಕೆಲಸಗಳು ದಾಖಲೆಗಳಿಲ್ಲದೇ ನಾಶವಾಗಬಹುದು. ಯಾರೋ ಮಾಡಿದ್ದು, ಯಾರದ್ದೋ ಹೆಸರಲ್ಲಿ ಪ್ರಕಟವಾಗಬಹುದು. ನನ್ನ ಆರಂಭಕ್ಕೆ ಕಾರಣರಾರು, ಉಳಿವಿಗೆ ಕಾರಣರಾರು ಕಾಲಕಾಲಕ್ಕೆ ಬಣ್ಣ ಬದಲಾಯಿಸಲು ಯಾರು ಕಾರಣರು, ವಿನ್ಯಾಸ ವ್ಯತ್ಯಾಸವಾಗಲು ಶ್ರಮಿಸಿದವರು ಯಾರು ಈ ಎಲ್ಲಾ ಮೂಲಗಳು ನನಗಿಂತ ಹೆಚ್ಚಾಗಿ ನಿಮಗೇ ತಿಳಿದಿದೆ. ಕಡು ಬಡತನದಲ್ಲೂ ಕಲೆಗಾಗಿ ತನ್ನ ಜೀವನವನ್ನೇ ಮುಡಿಪಾಗಿಟ್ಟು ಕನ್ನಡ ಕಣ್ಮಣಿಗಳನ್ನ ಕಂಡಿದ್ದೇನೆ. ಆರ್ಥಿಕ ಭದ್ರತೆಯ ಅಹಂಕಾರದಿಂದ ಸ್ವ-ಪ್ರತಿಷ್ಠೆಗಾಗಿ ತಮ್ಮ ಬೆನ್ನನ್ನ ತಾವೇ ತಟ್ಟಿಕೊಳ್ಳುತ್ತಾ ಹಲವು ಆಡಂಬರದ ಕಾರ್ಯಕ್ರಮಗಳನ್ನು ಮಾಡಿದವರನ್ನು ಕಂಡೆ; ನಮ್ಮ ರಾಜ್ಯದ ಪರಮೋಚ್ಚ ಪದವಿ ಪುರಸ್ಕಾರಗಳನ್ನು ಘನ ಸರಕಾರ ಅರ್ಹರಿಗೆ ನೀಡಿದಾಗ ನಾನು ಸಂಭ್ರಮಿಸಿದೆ. ಯಾರನ್ನೋ ಮೆಚ್ಚಿಸುವುದಕ್ಕಾಗಿ ಅನಗತ್ಯವಾಗಿ ನರನನ್ನ ಸುರನನ್ನಾಗಿ ಮಾಡುವ, ಅಜ್ಞಾನಿಯನ್ನು ಸುಜ್ಞಾನಿಯನ್ನಾಗಿ ಮಾಡುವ ಅತಿಯಾದ ಆತ್ಮವಿಶ್ವಾಸದಲ್ಲಿ ತಾವೇ ಹೇಳಿದ್ದು ಮಾಡಿದ್ದು ಸರಿ ಎಂಬ ಭಾವನೆಯಿಂದ ಸಮಾರಂಭಗಳನ್ನು ಮಾಡುವ ವಾಹಿನಿಯನ್ನು ಕಂಡೆ. ನೀವೆಲ್ಲಾ ನರ್ತಿಸುವ ವೇದಿಕೆ ನನ್ನ ಹೃದಯಮಂದಿರ,ವೇದಿಕೆಯ ಬೆಳಕೇ ನನ್ನ ನೇತ್ರಗಳು,ಧ್ವನಿವರ್ಧಿಸಿ ಕೇಳುವ ಶಬ್ದಗಳೇ ನನ್ನ ಕಿವಿಗಳು, ಅಭಿಮಾನಿ ವೀಕ್ಷಕ ಪ್ರೇಕ್ಷಕರು ಕುಳಿತುಕೊಳ್ಳುವ ಆಸನಗಳೇ ನನ್ನ ಆಯಾಸವಾಗಿ, ಅನಾಯಾಸವಾಗಿ ತೂಕಡಿಕೆಯ ನಿಮ್ಮ ನಿದ್ದೆಯನ್ನು ನಿವಾರಿಸುವುದೇ ನನ್ನ ಮಡಿಲು ; ದೂರದೂರಿಂದಲೂ ಅಥವಾ ಕಾರ್ಯಕ್ರಮಕ್ಕಾಗಿ ಆಗಮಿಸುವ ನಿಮ್ಮನ್ನು ಸ್ವಾಗತಿಸುವುದೇ ನನ್ನ ಬಲಿಷ್ಠ ಬಾಹುಗಳು.ನಿಮ್ಮ ನಿರಂತರ ಕ್ರಿಯಾಶೀಲ ಚಟುವಟಿಕೆಗೇ ಸ್ಫೂರ್ತಿಯೇ ನನ್ನ ಕಾಲುಗಳು, ನನ್ನ ಪರಿಸರವನ್ನು ಶುದ್ಧವಾಗಿರಿಸಿ – ಸಭೆ-ಸಮಾರಂಭ ಪ್ರದರ್ಶನ ಗೋಷ್ಠಿಗಳನ್ನು ಮಾಡಿದರೆ, ಅದೇ ನನ್ನ ಉಸಿರಾಟ ಮತ್ತು ಮನಸ್ಸು. ನ್ಯಾಯವಾಗಿ ದುಡಿದ, ಕಲಾವಿದ, ಸಂಸ್ಥೆ, ಸಾಹಿತಿ, ವಿದ್ವಾಂಸರಿಗೆ ನನ್ನನ್ನು ಮುಡಿಪಾಗಿಟ್ಟರೆ ಅದೇ ನನ್ನ ಒಡಲಾನಂದ.

ಓಹೋ ನನ್ನ ಬಗ್ಗೆ ನಾನೇ ಹೆಚ್ಚು ಹೇಳಿಕೊಂಡೆ ಅನ್ನಿಸಿತು, ಪಾಪ.... ಈ ಕಲಾವಿದ ನನ್ನ ಎದೆಯ ಮೇಲೆ ಕುಣಿದವನು, ಏನೋ ಹೇಳಲು ಹೊರಟಿದ್ದಾನೆ – ನಾನು ಕೇಳುವೆ.. .. ನೀವು ಕೇಳಿ .. .. ಮತ್ತೆ ಮಂಗಳಕ್ಕೆ ಬರುವೆ, ಕಾಯುವಿರಲ್ಲಾ??!
.. ..

ಬಹಿರಂಗ

ಕರ್ಣಾಟಕ ರಾಜ್ಯದ ರಾಜಧಾನಿಯ ಹೆಮ್ಮೆಯ ನಮ್ಮ ರಂಗಮಂದಿರ ಕರುನಾಡಿನ ಹಲವಾರು ಕಲಾಕ್ಷೇತ್ರಗಳಲ್ಲಿ ನಮ್ಮ ರವೀಂದ್ರ ಕಲಾಕ್ಷೇತ್ರ ನನ್ನಂತಹ ಹಲವಾರು ಕಲಾವಿದರಿಗೆ ತುಂಬಾ ಸಂತೋಷವನ್ನು ನೀಡುತ್ತದೆ. ಕಾರಣವೇ ನನಗೆ ಅರ್ಥವಾಗಿಲ್ಲಾ. ಭಾರತ ದೇಶದ ತುಂಬಾ ಕಲಾಮಂದಿರಗಳಲ್ಲಿ ಯಕ್ಷಗಾನ ಮಾಡಿದ ನನ್ನ ಅನುಭವದ ಮಿತಿಯಲ್ಲಿ ಹೇಳುತ್ತಿದ್ದೇನೆ : ಕಲಾಕ್ಷೇತ್ರದ ಆವರಣದೊಳಗೆ ಆಗಮನವಾಗುತ್ತಿದ್ದಂತೆ, ನಮ್ಮದಲ್ಲದಿದ್ದರೂ ನನ್ನದೇ ಎಂಬ ಭಾವ ಮೂಡುತ್ತದೆ. ನನಗೆ ರವೀಂದ್ರ ಕಲಾಕ್ಷೇತ್ರದ ಬಾಂಧವ್ಯ ಸುಮಾರು 33 ವರ್ಷಗಳದ್ದು. ಈಗಿನ ವೃತ್ತಿಮೇಳಗಳು ಬೆಂಗಳೂರಿಗೆ ಬರುವುದಕ್ಕೆ ಮುಂಚೆ ಇಲ್ಲಿನ ಹೋಟೆಲ್ ಮಾಲೀಕರು, ಸಂಘ–ಸಂಸ್ಥೆಯವರು ಮೇಳದ ಕಲಾವಿದರನ್ನು ಕರೆಸಿ ಕಾರ್ಯಕ್ರಮ ಮಾಡುತ್ತಿದ್ದರು. ಆನಂತರ ಆರಾಟೆ ಮಂಜುನಾಥರು ಪ್ರಸಿದ್ಧ ಕಲಾವಿದರ ನೇತೃತ್ವದಲ್ಲಿ ಮತ್ತು ಪ್ರಸಿದ್ಧ ಸ್ತ್ರೀ ಪಾತ್ರಧಾರಿ ವೈಕುಂಠ ನಾಯ್ಕರ ನೇತೃತ್ವದಲ್ಲಿ ಮೇಳದ ಕಲಾವಿದರು ಬೆಂಗಳೂರಿಗೆ ಬಂದರು. ಬೆಂಗಳೂರಿನ ಯಕ್ಷದೇಗುಲದವರು, ಹೋಟೆಲ್ ಮಾಲೀಕರು – ಅಪರೂಪಕ್ಕೆ ಕಲಾವಿದರನ್ನು ಕರೆಸಿ ಕಲಾಕ್ಷೇತ್ರದಲ್ಲಿ ಕಾರ್ಯಕ್ರಮಗಳು ಜರುಗಿತು. ಆನಂತರ ಆಗಿನ ಕಾಲದ ಖ್ಯಾತ ಯುವ ಭಾಗವತರಾದ ಕೊಕ್ಕರ್ಣೆ ಸದಾಶಿವ ಅಮಿನರು – ಸಂಘಟಕರಾದ ಕೋಟಾ ಗುಂಡು ಕಾಂಚನ ಹಾಗೂ ನಾನು ಸೇರಿ ಬೇರೆ ಮೇಳದ ಕಲಾವಿದರನ್ನ ಬೆಂಗಳೂರಿಗೆ ಕರೆಸಿ ರವೀಂದ್ರ ಕಲಾಕ್ಷೇತ್ರದಲ್ಲಿ ಹಲವಾರು ಕಾರ್ಯಕ್ರಮಗಳು ಮಳೆಗಾಲದಲ್ಲಿ ನಿರಂತರವಾಗಿ ನಡೆದವು. ಹೀಗೆ ಮುಖ್ಯವಾಗಿ ಹಿಮ್ಮೇಳದಲ್ಲಿ – ಕಾಳಿಂಗ ನಾವುಡರು, ಮರಿಯಪ್ಪಚಾರ್, ಸುಬ್ರಹ್ಮಣ್ಯ ಧಾರೇಶ್ವರ, ರಾಘವೇಂದ್ರ ಮಯ್ಯರು, ಉಮೇಶಭಟ್ ಬಾಡ, ಕೆ.ಪಿ. ಹೆಗಡೆ, ಸುರೇಶ ಶೆಟ್ಟಿ, ಕೊಳಗಿ ಕೇಶವ ಹೆಗಡೆ, ಹೆರೆಂಜಾಲು ಗೋಪಾಲ ಗಾಣಿಗರು, ಪರಮೇಶ್ವರ ಮುಂತಾದ ಮಹನೀಯರು ಭಾಗವತರುಗಳಾಗಿ ಭಾಗವಹಿಸಿದರು. ಚಂಡೆ–ಮದ್ದಳೆಯಲ್ಲಿ ದುರ್ಗಪ್ಪ ಗುಡಿಗಾರ್, ಶಂಕರ ಭಾಗವತ, ಮಂದಾರ್ತಿ ರಾಮಣ್ಣ, ಗಜಾನನ ಭಂಡಾರಿ, ನಾಗೇಶ ಭಂಡಾರಿ, ಜನಾರ್ಧನ ಆಚಾರ್, ಶಾಂತರಾಮ ಭಂಡಾರಿ ಹೀಗೆ ಹಿಮ್ಮೇಳದ ದಂಡೇ ಬಂದು ಕಲಾಕ್ಷೇತ್ರದ ಯಕ್ಷಗಾನ ಪ್ರದರ್ಶನದಲ್ಲಿ ಭಾಗವಹಿಸಿದ್ದರು.

ಮುಮ್ಮೇಳದಲ್ಲಿ ಪದ್ಮಶ್ರೀ ಪುರಸ್ಕೃತ ಚಿಟ್ಟಾಣಿ ರಾಮಚಂದ್ರ ಹೆಗಡೆಯವರು, ನಗರ ಜಗನ್ನಾಥ ಶೆಟ್ಟಿ, ಐರೋಡಿ ಗೋವಿಂದಪ್ಪ, ಆರಾಟೆ ಮಂಜುನಾಥ, ಜಲವಳ್ಳಿ

ವೆಂಕಟೇಶರಾವ್, ಕೊಂಡದಕುಳಿ ರಾಮಚಂದ್ರ ಹೆಗಡೆ, ಬಳ್ಕೂರು ಕೃಷ್ಣಯಾಜಿ, ರಾಮನ್ಯಾರಿ, ರಾಜೀವ ಶೆಟ್ಟಿ ಹೊಸಂಗಡಿ, ಹೊಸಂಗಡಿ ಕರುಣಾಕರ ಶೆಟ್ಟಿ, ಹಳ್ಳಾಡಿ ಜಯರಾಮ ಶೆಟ್ಟಿ, ಸೀತಾರಾಂ ಕುಮಾರ ಕಟೀಲು, ಮುಖ್ಯ ಪ್ರಾಣ ಕಿನ್ನಿಗೋಳಿ, ಕುಂಜಾಲು ರಾಮಕೃಷ್ಣ ನಾಯಕ್, ಮಡಾಮಕ್ಕಿ ಜಯರಾಮಶೆಟ್ಟಿ, ಜಯಕುಮಾರ ಜೈನ್ ಕಾರ್ಗಲ್, ಜೋಗು ಕುಲಾಲ, ರಮೇಶ ಭಂಡಾರಿ, ಕೋಡಿ ವಿಶ್ವನಾಥ ಗಾಣಿಗ, ಗೋಪಾಲ ಆಚಾರ್ಯ ತೀರ್ಥಹಳ್ಳಿ, ಬೇಗಾರ್ ಪದ್ಮನಾಭ ಶೆಟ್ಟಿಗಾರ್, ಉಪ್ಪುಂದ ನಾಗೇಂದ್ರ, ಕೋಟ ಸುರೇಶ, ಮೊಳಹಳ್ಳಿ ಹೆರಿಯ ನಾಯ್ಕ, ಮೊಳಹಳ್ಳಿ ಕೃಷ್ಣ,ಮೊಳಹಳ್ಳಿ ಉದಯ, ನಾಗರಾಜ ಶೆಟ್ಟಿ ಆನಂದಪುರ, ಕಣ್ಣಿಮನೆ ಗಣಪತಿ ಭಟ್, ತೋಟಿಮನೆ ಗಣಪತಿ ಭಟ್, ಶ್ರೀ ಪಾದ ಭಟ್, ಥಂಡಿಮನೆ ಶ್ರೀಪಾದ ಹೆಗಡೆ, ಕಡಬ ಪೂವಪ್ಪ, ಲಕ್ಷ್ಮಣ ಕಾಂಚನ, ಹೊಸಂಗಡಿ ಜಯರಾಂ ಗಾಣಿಗ, ಕೊಳಾಳಿ ಕೃಷ್ಣಶೆಟ್ಟಿ, ಹೊಸಂಗಡಿ ಕೃಷ್ಣ ಗಾಣಿಗ, ಸುಳುಗೋಡು ನಾರಾಯಣ, ಚಕ್ರ ಮೈದಾನ ಕೃಷ್ಣ.

ಇನ್ನು ನಾನು ಮರೆತ ಕಲಾವಿದರು ತುಂಬಾ ಇದ್ದಾರೆ – ಅವರೆಲ್ಲಾ ಇಲ್ಲಿ ನಲಿದು–ನಗಿಸಿ, ಅಭಿನಯಿಸಿ, ಸಾರ್ಥಕತೆಯನ್ನು ಪಡೆದಿದ್ದಾರೆ.

ಇನ್ನೂ ವಿಶೇಷವಾಗಿ – ಅಮಿನ್, ಕಾಂಚನ್, ಬೇಗಾರ್ ಹೀಗೆ ನಮ್ಮ ತ್ರಿಮೂರ್ತಿಗಳ ತಂಡ ತೆಂಕುತಿಟ್ಟಿನ ಪ್ರಸಿದ್ಧ ಮೇಳವಾದ ಶ್ರೀ ಧರ್ಮಸ್ಥಳ ಯಕ್ಷಗಾನ ಮಂಡಳಿಯ ಬಹುಪಾಲು ಕಲಾವಿದರು – ಹಾಗೆಯೇ ಕುಮಟಾ ಗೋವಿಂದ ನಾಯಕರ ಶ್ರೀ ರಾಮನಾಥ ಪ್ರಸಾದಿತ ಯಕ್ಷಗಾನ ಮಂಡಳಿಯ ಬಡಗಿನ ಕಲಾವಿದರನ್ನು ಸೇರಿಸಿ 1991–92ರ ಸಮಯದಲ್ಲಿ ಅದ್ಭುತ. ತೆಂಕು ಹಾಗೂ ಬಡಗಿನ ಆಟಗಳನ್ನು ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡು ವಿಶೇಷವಾಗಿ ಎಲ್ಲಾರ ಮನ್ನಣೆಗೆ ಪಾತ್ರರಾದೆವು.

ಧರ್ಮಸ್ಥಳ ಮೇಳದ ಮಹಾನ್ ಕಲಾವಿದರಾದ – ಪುತ್ತಿಗೆ ರಘುರಾಮ ಹೊಳ್ಳರು, ಸಿರಿಬಾಗಿಲು ರಾಮಕೃಷ್ಣ ಮಯ್ಯರು, ಚಿಪ್ಪಾರು ಕೃಷ್ಣಯ್ಯ ಬಲ್ಲಾಳರು, ಅಡೂರು ಗಣೇಶ್‌ರಾವ್ ಮುಂತಾದ ದಿಗ್ಗಜರ ಹಿಮ್ಮೇಳದೊಂದಿಗೆ, ಮುಮ್ಮೇಳದಲ್ಲಿ – ಮಾನನೀಯ ರಾಜ್ಯಪ್ರಶಸ್ತಿ ಪುರಸ್ಕೃತ ಕುಂಬ್ಳೆ ಸುಂದರರಾವ್, ರಾಷ್ಟ್ರಪ್ರಶಸ್ತಿ ಪುರಸ್ಕೃತ ಶ್ರೀ ಕೆ. ಗೋವಿಂದ ಭಟ್ಟರು, ಎಂಪಕಟ್ಟೆ ರಾಮಯ್ಯ ರೈ, ಪುತ್ತೂರು ಶ್ರೀಧರ ಭಂಡಾರಿ, ನಯನ ಕುಮಾರ್, ಕುಂಬ್ಳೆ ಶ್ರೀಧರರಾವ್, ವಸಂತಗೌಡ, ಗಂಗಾಧರ ಸೇಡಿಯಾಪು ಹಾಗೂ ಹಲವಾರು ಕಲಾವಿದರ ಸಮ್ಮಿಲನದ ಯಕ್ಷಗಾನ ಪ್ರದರ್ಶನಗಳಿಗೆ ರವೀಂದ್ರ ಕಲಾಕ್ಷೇತ್ರ ಸಾಕ್ಷಿಯಾಯಿತು.

ನಾನಾಗ ಧರ್ಮಸ್ಥಳ ಮೇಳದ ಕಲಾವಿದನಾಗಿದ್ದೆ. [ಅಂದು ಬೆಂಗಳೂರಿನಲ್ಲಿ ಆಟವನ್ನು ವಹಿಸಿಕೊಳ್ಳುವ ಸಂಘಟಕರು – ಹೋಟೆಲ್ ಉದ್ಯಮಿಗಳೂ, ಕಾರ್ಮಿಕರು – ಕೆಲವು ಮಿತ್ರರು ಸೇರಿ ಸಂಘಟಿಸುತ್ತಿದ್ದರು.] ಈಗ ನನಗೆ ನೆನಪಿರುವ ಕೆಲವು ಹೆಸರುಗಳು: ವಕ್ಕಾಡಿ ಮೋಹನ್, ವಕ್ಕಾಡಿ ಗೋಪಾಲ, ರಮೇಶ ಗುಟ್ಟಹಳ್ಳಿ, ಕುಶಲಶೆಟ್ಟಿ, ದುಗ್ಗನಮಕ್ಕಿ ಸುಧಾಕರ ಶೆಟ್ಟಿ, ದುಗ್ಗನಮಕ್ಕಿ ಸುರೇಶಶೆಟ್ಟಿ, ನಾರಾಯಣರಾವ್, ಸಂಜೀವ ರಾವ್, ಅಣ್ಣಯ್ಯ ಪೂಜಾರಿ, ಎ.ವಿ.ಎಸ್. ಕಾರಂತರು, ಆಡುಗೋಡಿ ಚಂದ್ರಣ್ಣ, ತೇಜಪ್ಪ ಶೆಟ್ಟರು, ಅಂಪಾರು ರತ್ನಾಕರ ಶೆಟ್ಟಿ, ನೈಲಾಡಿ ಪ್ರಕಾಶ್‌ಶೆಟ್ಟಿ, ಚಂದ್ರಶೇಖರ ಶೆಟ್ಟಿ, ಎ.ಪಿ. ಕಾರಂತ್, ಮಹಾಬಲ, ಪ್ರಕಾಶ ಶೆಟ್ಟಿ, ಹೀಗೆ–ಹೀಗೆ ತುಂಬಾ ಸಜ್ಜನ ಸಂಘಟಕರು ಅತಿ ಪ್ರೀತಿಯಿಂದ ನಮಗೆ ಪ್ರೋತ್ಸಾಹ ನೀಡಿದರು. ಕಾಲಕ್ರಮೇಣ ಮೇಳದ ಯಜಮಾನರೇ ಮೇಳವನ್ನು ಬೆಂಗಳೂರಿಗೆ ತರುವ ಸಂಪ್ರದಾಯ ಮುಂದುವರಿಯಿತು.

ಆನಂತರ ನಾವು ಶ್ರೀ ಅಮೃತೇಶ್ವರ ಪ್ರವಾಸಿ ಯಕ್ಷಗಾನ ಮಂಡಳಿ ಎಂಬ ತಂಡವನ್ನು ಆರಂಭಿಸಿ, ದೇಶದಾದ್ಯಂತ ಸಂಚಾರ ಮಾಡಿದೆವು. ಆದರೂ ನಮಗೆ ಹಿರಿಮೆಯ ಗರಿ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶನ ಮಾಡಿಸುವುದು.

ಕಲಾಕ್ಷೇತ್ರದಲ್ಲಿ ಸುಮಾರು ದೇವಿ ಮಹಾತ್ಮೆಗಳನ್ನು ಮಾಡಿಸಿ – ವಿಶೇಷ ಆಕರ್ಷಣೆಯಾಗಿ ಗಗನದಿಂದ ಧರೆಗಿಳಿದಂತೆ, ಮೇಲಿನಿಂದ ಕೆಳಗೆ ಉಯ್ಯಾಲೆಯ ಜೋಕಾಲಿ, ಜೀವಂತ ಶಿಶು ರಂಗದಲ್ಲಿ ದೊಂದಿಯೊಂದಿಗೆ ರಂಗಪ್ರವೇಶ ? – ಮತ್ತೆ ಅದು ತಪ್ಪು ಎಂದು ತಿಳಿದು ಮುಂದುವರಿಸಲಿಲ್ಲ.

ನಮ್ಮ ಸಂಘಟನೆಯ ಚತುರತೆಯನ್ನು ಕಂಡು – ಅಭಿಮಾನಿಗಳು 1995ರಲ್ಲಿ "ಚತುರ ಸಂಘಟಕ" ಎಂಬ ಗೌರವವನ್ನು – ಕನ್ನಡದ ಕಟ್ಟಾಳು ಮುಂಡಲೀಕ ಹಾಲಂಬಿ, ಕಲಾಪೋಷಕ ಬಿಳೇಕಹಳ್ಳಿ ನರಸಿಂಹ ನಾಯಕ ನೇತೃತ್ವದಲ್ಲಿ ನೀಡಿ ಅಭಿನಂದಿಸಿದರು.

ಇದು ಕಲಾಕ್ಷೇತ್ರದಲ್ಲಿ ನೀಡಿದ ದೊಡ್ಡ ಗೌರವವಾಗಿ ಪರಿಣಮಿಸಿತು. ನಮ್ಮ ಸಂಘಟನೆಯ ಆರಂಭದಲ್ಲಿ ಕಲಾಕ್ಷೇತ್ರವನ್ನು ಯಕ್ಷಗಾನಕ್ಕೆ ನೀಡುವುದಿಲ್ಲ ಎಂದು ಸರಕಾರ ಹೇಳಿತು – ಕಾರಣ ಖ್ಯಾತ ಕಲಾವಿದರೊಬ್ಬರ ಸಂಘಟನೆಯು ಕಾರ್ಯಕ್ರಮದಲ್ಲಿ ಸಣ್ಣ ಸಂಘರ್ಷದಿಂದಾಗಿ ಅಹಿತಕರ ಘಟನೆಯನ್ನು ಮುಂದಿಟ್ಟುಕೊಂಡು ಹೀಗೆ ಹೇಳಿದರು – ನಮ್ಮ ತಂಡ ಆವಾಗಲೇ ಕಲಾವಿದರೊಂದಿಗೆ

ಮಾತಾಡಿ – ಬೆಂಗಳೂರಿನಲ್ಲಿ ಕಾರ್ಯಕ್ರಮ ನಿಗದಿಯಾಗಿತ್ತು. ಪುರಭವನ ದುರಸ್ಥಿಯಲ್ಲಿತ್ತು (ಅಂಥ ನೆನಪು).

ಕಲಾಕ್ಷೇತ್ರ ಕೊಡುವುದಿಲ್ಲ – ಹಾಗಾದರೆ ನೂತನವಾಗಿ ಆರಂಭಗೊಂಡ ಎ.ಡಿ.ಎ. ರಂಗಮಂದಿರದಲ್ಲಿ ಪ್ರದರ್ಶನವೆಂದು ತೀರ್ಮಾನಿಸಿದೆವು. ನಮ್ಮ ದುರಾದೃಷ್ಟ ಎ.ಡಿ.ಎ. ವ್ಯವಸ್ಥಾಪಕರಾದ ಜಯರಾಮಶೆಟ್ಟಿಯವರಿಗೆ ಆದ ಸಣ್ಣ ಅಪಘಾತದಿಂದ ಎ.ಡಿ.ಎ. ರಂಗ ಮಂದಿರ ನಮಗೆ ದೊರೆಯಲಿಲ್ಲ. ಸುಬ್ರಹ್ಮಣ್ಯ ಧಾರೇಶ್ವರರು ಪೆರ್ಡೂರು ಮೇಳದಲ್ಲಿ ಭಾಗವತರಾಗಿದ್ದ ಕಾಲ – ಎಲ್ಲಾ ಹೋರಾಡಿ ಹುಡುಕಾಡಿ – ಗಾಯನ ಸಮಾಜದಲ್ಲಿ ಆಟ ಮಾಡಿದೆವು.

ರವೀಂದ್ರ ಕಲಾಕ್ಷೇತ್ರವನ್ನು ಯಕ್ಷಗಾನಕ್ಕೆ ಮರಳಿ ಪಡೆಯುವಲ್ಲಿ – ಪುಂಡಲೀಕ ಹಾಲಂಬಿಯವರು ನಮಗೆ ಹಲವು ಮಾರ್ಗದರ್ಶನಗಳನ್ನು ನೀಡಿದರು. ಆಗ ಅಮಿನ್ ಹಿತೈಷಿ ಬಳಗ, ನಾವೆಲ್ಲ ಪಟ್ಟ ಪ್ರಯತ್ನ ಫಲ ದೊರಕುವಲ್ಲಿ ಕಷ್ಟವಾದಾಗ ಸನ್ಮಾನ್ಯ ಕಿಶನ್ ಹೆಗಡೆಯವರು, ಕುಂಬ್ಳೆ ಸುಂದರ ರಾಯರು, ಕರಾವಳಿ ಭಾಗದ ಶಾಸಕ ಮಹನೀಯರ ಸಹಕಾರದಿಂದ ಕಲಾಕ್ಷೇತ್ರ ಪುನಃ ಯಕ್ಷಗಾನಕ್ಕೆ ದೊರಕಿತು.

ಆ ಎಳೆಯವನಾದ ನನಗೇ ಆಗಲೇ ಕಂಡ ಕನಸು ಯಕ್ಷಗಾನಕ್ಕಾಗಿಯೇ ರಾಜಧಾನಿಯಲ್ಲಿ ಪ್ರತ್ಯೇಕ ರಂಗ ಮಂದಿರ ಬೇಕು ಎಂದು !

ರವೀಂದ್ರ ಕಲಾಕ್ಷೇತ್ರದ ಕಲ್ಲುಗಳಿಗೆ, ಕಂಬಗಳಿಗೆ, ಆಸನಗಳಿಗೆ, ಮೆಟ್ಟಿಲುಗಳಿಗೆ, ಛಾವಣಿಗೆ, ಬಾಗಿಲುಗಳಿಗೆ, ಕಿಟಕಿಗಳಿಗೆ, ಬೆಳಕಿಗೆ, ಧ್ವನಿವರ್ಧಕಗಳಿಗೆ, ಗೋಡೆಯ ಬಣ್ಣಗಳಿಗೆ, ನೆಲದ ಹಾಸುಗಳಿಗೆ, ನಾವು ಅಶುಚಗೊಳಿಸುವ ಶೌಚಾಲಯಗಳಿಗೆ, ಕಲಾವಿದನ ಬಗ್ಗೆ ಅಭಿಮಾನವಿದೆ, ಗೌರವವಿದೆ, ಅನುಕಂಪವಿದೆ, ದಯೆಯಿದೆ, ಕರುಣೆಯಿದೆ.

ಕಲಾವಿದರಿಗೂ ಸಹ ಈ ಆವರಣ ಪ್ರವೇಶ ಮಾಡುವಾಗ – ನನ್ನ ರಂಗಸ್ಥಳ ಎನ್ನುವ ಸದ್ಭಾವನೆ ಮೂಡುತ್ತದೆ. ಊರಿಂದ ಬಂದ ಕಲಾವಿದರನ್ನ ಭೇಟಿಯಾಗಲೆಂದೇ ಕಲಾಕ್ಷೇತ್ರಕ್ಕೆ ಬರುವ ಬಾಂಧವರಿದ್ದಾರೆ.

ನನಗೆ ತುಂಬಾ ಬೇಸರ ಹಾಗೂ ನೋವುಂಟುಮಾಡಿದ ಘಟನೆಗಳು ನಾಲ್ಕು ವರ್ಷಗಳ ಹಿಂದೆ ನಮ್ಮ "ಗಾನ ಸೌರಭ ಯಕ್ಷಗಾನ ಶಾಲೆ"ಯ ವಾರ್ಷಿಕೋತ್ಸವವನ್ನು ಹಾಗೂ ನನ್ನ ಪುಟಾಣಿ ವಿದ್ಯಾರ್ಥಿಗಳ ಕಾರ್ಯಕ್ರಮವನ್ನು ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡು ಕೊನೆಯ ಕ್ಷಣದಲ್ಲಿ ಸರಕಾರಿ ಕಾರ್ಯಕ್ರಮ ಎಂದು ರದ್ದು

ಮಾಡಲಾಯಿತು. ಇದು ನಾನು ಕಲಾಕ್ಷೇತ್ರದ ಆವರಣದಲ್ಲಿ ಕುಳಿತು ಅಲ್ಲಿಯೇ ಕೇಳಿದ್ದೆ, ನನ್ನಂತಹ ಕಲೆಯನ್ನೇ ನಂಬಿದ ಕಲಾವಿದರ ಕಾರ್ಯಕ್ರಮ ನಿನಗೆ ಬೇಡವೇ ಅಥವಾ ನನಗೆ ಯೋಗವಿಲ್ಲವೇ? ಎಂದೂ. ಆದರೂ ಸುಮಾರು 33 ವರ್ಷಗಳ ನಿಕಟ ಸಂಪರ್ಕ ಹೊಂದಿರುವ ನನಗೆ ನೆನಪಿನೋಕುಳಿಯಲ್ಲಿ ಒಂದು ಪ್ರದರ್ಶನದ ಅವಕಾಶ ದೊರೆತದ್ದೇ ನನ್ನ ಸೌಭಾಗ್ಯ ಎಂದೇ ಭಾವಿಸಿದ್ದೇನೆ.

ಕಲಾಕ್ಷೇತ್ರಕ್ಕೆ ಸಂಬಂಧಪಟ್ಟ ಹಿರಿಯ – ಕಿರಿಯ ಅಧಿಕಾರಿಗಳು, ಸಿಬ್ಬಂದಿ ವರ್ಗದವರು, ನಮ್ಮನ್ನು ಕರೆದು ಕಾಫಿ ಕೊಡುವ ಎ.ಪಿ. ಕಾರಂತರು ನಾಟಕ, ಸಂಗೀತ, ಸಾಹಿತ್ಯ, ಸಿನಿಮಾ ಕ್ಷೇತ್ರದವರ ಒಡನಾಟಕ್ಕೆ ಕಲಾಕ್ಷೇತ್ರ ತೆರೆದ ಬಾಗಿಲು. ಎಲ್ಲಾ ವರ್ಗದವರು ಒಂದಾಗುವ ಕಲಾಕ್ಷೇತ್ರಕ್ಕೆ ಯಕ್ಷಗಾನ ಕಲಾವಿದರ ಪರವಾಗಿ ಶಿರಸಾಷ್ಟಾಂಗ ಪ್ರಣಾಮಗಳು. ನಾನು ಬರಹಗಾರನಲ್ಲ, ರಂಗದಲ್ಲಿ ಕುಣಿಯುವ ಕಲಾವಿದ. ನನ್ನ ಮಿತಿಯಲ್ಲಿ ಮನಕ್ಕೆ ಅನಿಸಿದ್ದನ್ನು ಇಲ್ಲಿ ಬರೆದೆ. ಇದು ನನಗೊದಗಿದ ಸುವರ್ಣಾವಕಾಶ. ಅವಕಾಶ ನೀಡಿದ ನೆನಪಿನೋಕುಳಿಯ ಸಮಸ್ತರಿಗೂ, ಸರಕಾರಕ್ಕೂ, ಸಂಪಾದಕರಿಗೂ ವಂದನೆಗಳೊಂದಿಗೆ ರವೀಂದ್ರ ಕಲಾಕ್ಷೇತ್ರವೇ ಯಕ್ಷಗಾನಕ್ಕೆ ಸದಾ ನಿನ್ನ ಹೃದಯ ತೆರೆದಿರಲಿ.. ..

* * *

ಮತ್ತೊಮ್ಮೆ ಅಂತರಂಗ

ಪುಟ್ಟ ದೇಹದ, ಗಟ್ಟಿ ಮನಸ್ಸಿನ, ದೊಡ್ಡ ಕನಸಿನ, ಯಕ್ಷಗಾನಂ – ವಿಶ್ವಗಾನಂ ಎಂದು ಕನವರಿಸುವ ಈ ಕಲಾವಿದನ ಬಹಿರಂಗ ತಿಳಿಯಿತಲ್ಲಾ – ಹೌದು ಈ ಕಲಾವಿದರ ಮನಸ್ಸೇ ಹಾಗೆ. ಸುಂದರ ಸಭಾಂಗಣದಲ್ಲಿ ಸುಂದರವಾಗಿ ನರ್ತಿಸಿ ಪ್ರೇಕ್ಷಕರ ಮನಸ್ಸನ್ನೂ ಸುಂದರಗೊಳಿಸಿ ತಮ್ಮ ಬಾಳನ್ನ ಸುಂದರಗೊಳಿಸಿಕೊಳ್ಳಬೇಕು ಎಂದು.. ಆದರೆ ಹೇಗೆ? .. ಎಲ್ಲಿ ? .. ಇವನ ಬಯಕೆಯಂತೇ ನಾನು ಯಕ್ಷಗಾನಕ್ಕೆ ಮಾತ್ರ ಸೀಮಿತ ಅಲ್ಲವಲ್ಲ. ಹಾಗೆಂದು ಇವನ ಆಸೆ ತಪ್ಪಲ್ಲ. ಇಂದು ವಿಶ್ವವೇ ನಿಬ್ಬೆರಗಾಗಿ ನೋಡುವ ಶುದ್ಧ ಕರುನಾಡಿನ ಕನ್ನಡ ಕಲೆಯಾದ ಯಕ್ಷಗಾನಕ್ಕೆ ನನ್ನ ಪೂರ್ಣ ಕೃಪೆಯಿದೆ. ಅದು ನನ್ನ ಮಿತಿಯಲ್ಲಿ. ನನ್ನ ಸಹೋದರ ಬಯಲು ಸಂಸ ರಂಗಮಂದಿರ ಹಗಲಿನಲ್ಲಿ ಕಷ್ಟ, ಕನ್ನಡ ಭವನದ ಕಣ್ಣು ನಯನ ಸಭಾಂಗಣ ಚಿಕ್ಕದಾಗಬಹುದೇನೋ – ಎದುರಿಗಿರುವ ಎ.ಡಿ.ಎ. ರಾತ್ರಿ ಪ್ರದರ್ಶನಗಳಿಗೆ ಪೂರಕವಾಗಿರಲಾರದೇನೋ, ಸರ್, ಪುಟ್ಟಣ್ಣಚೆಟ್ಟಿ ಪುರಭವನ ಈ ಕಲಾವಿದರಿಗೆ

ಮಾತ್ರವಲ್ಲ, ಎಲ್ಲಾ ರೀತಿಯ ಕಲಾವಿದರಿಗೇ ಬಹಳ ದುಬಾರಿಯಾಗಿದೆ. ಹಾಗಾದರೆ ಪರ್ಯಾಯ ವ್ಯವಸ್ಥೇ ಏನು? ಈ ಕಲಾವಿದನ ಕನಸಿನಂತೆಯೇ ಯಕ್ಷಗಾನಕ್ಕಾಗಿಯೇ ರಾಜಧಾನಿಯಲ್ಲಿ ರಂಗ ಮಂದಿರ ಒಂದು ಬೇಕಾಗಿದೆ.

ನಮ್ಮ ಸರಕಾರ ಮನಸ್ಸು ಮಾಡಿದರೆ ಸಾಧ್ಯವಾಗದೇ?? ಏನು, ನಗರಕ್ಕೆ ಸಮೀಪದ ಸ್ಥಳದಲ್ಲಿ ಒಂದು ಸುಸಜ್ಜಿತ ಯಕ್ಷಗಾನಕ್ಕಾಗಿಯೇ ಒಂದು ಕಲಾಕ್ಷೇತ್ರವನ್ನು ಕಟ್ಟಿದರೆ ಈ ಕಲೆ ನಿರಂತರವಾಗಿ ನಡೆದು ಬಂದೀತು, ಉಳಿದೀತು. ನನ್ನಲ್ಲಿ ಸಮಯವಿಲ್ಲದಾಗ ಅಲ್ಲಿಯೇ ಯಕ್ಷಗಾನ ಪ್ರದರ್ಶನ ತರಬೇತಿ ಕಲಾವಿದರ ವಸತಿ ವ್ಯವಸ್ಥೆಯಾದೀತು. ಆಗ ಈ ಕಲಾವಿದನ ಆತ್ಮಕ್ಕೆ ಶಾಂತಿ ಸಿಕ್ಕೀತು. ಓಹೋ.. .. ಆತ್ಮಕ್ಕೆ .. !! ಅದು ಆಗುವವರೆಗೆ ಇವನು ಬದುಕಿರಬೇಕಲ್ಲಾ. ಹಾಗೆ ಹೇಳಿದೆ. ಹೌದು, ಯಾರು ಇರದೇ ಇದ್ದರೂ ನಾನು ಇರುವೆ, ಕಾತುರದಿಂದ ಕಾಯುತ್ತಿರುವೆ.

ನನ್ನ ಕನಸಿನ ನೆನಪಿನೋಕುಳಿಯು ನಿಮಗೆಲ್ಲಾ ಸಂತಸ ನೀಡಿದೆ ಎಂದು ಭಾವಿಸಿರುವೆ..

ಹೋ ಬೆಳಗಾಯಿತು.. ಇನ್ನು ಮಂಗಳ ಪದ..

ರಾಮಕೃಷ್ಣರು ಮನೆಗೆ ಬಂದರು ಬಾಗಿಲು ತೆರೆಯಿರೋ ॥

ಕಾಮಧೇನು ಬಂದಂತಾಯಿತು ವರವ ಪಡೆಯಿರೋ ॥

ತೋದಿಂದ ದಿತ್ತೋಂ ತದಿನ್ನ ॥

ಕರದೊಳು ಪರಶು ಪಾರಾಂಕುಶ ಧರನಿಗೆ।

ಹರುಷದಿಂ ಭಕುತರ ಪೊರೆವನಗೆ ॥

ಉರಗಭೂಷಣನ ಕುಮಾರ ಗಜವದನನ ।

ಚರಣ ಕಮಲಕೆ ಆರತಿಯೆತ್ತರೆ॥ ಆರತಿ ಬೆಳಗಿರೆ॥

ಮಹಿಷಾಸುರ ಮರ್ದಿನಿಗೆ । ಕಿಂಕಿಣಿಹಾರ ಕೇಯೂರಧಾರಿಣಿ ।

ಸುರರನ್ನಳಿಗೇ ಮಂಗಲಂ । ಜಯ ಮಂಗಲಂ ॥

ಮಂಗಲಂ ಭಗವಾನ್ ವಿಷ್ಣು । ಮಂಗಲ ಮಧುಸೂಧನ

ಮಂಗಲಂ ದೇವಕಿ ಪುತ್ರೋ ।

ಮಂಗಲಂ ಗರುಡಧ್ವಜ ।

ಕೃಷ್ಣಾಯ ವಾಸುದೇವಾಯ ದೇವಕಿನಂದನಾಯ ಚ ॥
ನಂದಗೋಪಕುಮಾರಾಯ ಗೋವಿಂದಾಯ ನಮೋ ನಮಃ ॥
"ಯಕ್ಷಗಾನಂ – ವಿಶ್ವಗಾನಂ"

– ಡಾ॥ ಬೇಗಾರ್ ಶಿವಕುಮಾರ್
ಯಕ್ಷಗಾನ ಕಲಾವಿದ
ನಂ.8, 9ನೇ 'ಬಿ' ಮುಖ್ಯರಸ್ತೆ, 1ನೇ ಅಡ್ಡರಸ್ತೆ
ಭೈರವೇಶ್ವರ ನಗರ, ನಾಗರಭಾವಿ, ಬೆಂಗಳೂರು – 560 072

ಲೇಖಕರ ಪರಿಚಯ:

ಮಲೆನಾಡಿನ ಬೇಗಾರಿನಲ್ಲಿ ಜನಿಸಿರುವ ಶ್ರೀ ಶಿವಕುಮಾರ್‌ರು ಉಡುಪಿಯ 'ಯಕ್ಷಗಾನ ಕೇಂದ್ರ'ದಲ್ಲಿ ತರಬೇತಿ ಹೊಂದಿ ಮೊದಲಿಗೆ ಪೆರ್ಡೂರು ಮೇಳದ ಆಟಕ್ಕೆ ಅತಿಥಿ ಕಲಾವಿದರಾಗಿ ಭಾಗವಹಿಸುವ ಮೂಲಕ ಯಕ್ಷಗಾನ ರಂಗಕ್ಕೆ ಬಂದವರು. ಮುಂದೆ ಮೂಲ್ಕಿಮೇಳ, ಕಮಲಶಿಲೆ ಮೇಳ, ಅಮೃತೇಶ್ವರಿ ಮೇಳ, ಸೌಕುರು ಮೇಳಗಳಲ್ಲಿ ತಿರುಗಾಟ ನಡೆಸಿದವರು. ಹೀಗೆ ಬಡಗುತಿಟ್ಟಿನ ಮೇಳಗಳಲ್ಲಿ ಪ್ರಮುಖ ಸ್ತ್ರೀ ಪಾತ್ರಧಾರಿಯಾಗಿ ಖ್ಯಾತಿ ಗಳಿಸಿದ ಬೇಗಾರರು ಅನಂತರ ತೆಂಕುತಿಟ್ಟಿನ ಧರ್ಮಸ್ಥಳ ಮೇಳವನ್ನು ಸೇರಿ ಅಲ್ಲಿ ಕೂಡ ಹನ್ನೆರಡು ವರ್ಷಗಳ ಕಾಲ ಪ್ರಧಾನ ಸ್ತ್ರೀ ವೇಷಧಾರಿಯಾಗಿ ಕರಾವಳಿ ಮಲೆನಾಡಿನ ಉದ್ದಗಲಕ್ಕೂ ಸಂಚರಿಸಿ ಹೆಸರುವಾಸಿಯಾದವರು. ಮಳೆಗಾಲದಲ್ಲಿ ಮೊದಲಿಗೆ ಅರಾಟೆ ಮಂಜುನಾಥ ಅವರ ಒಡನಾಟದಲ್ಲಿ, ಪ್ರವಾಸಿ ಮೇಳದೊಂದಿಗೆ ಬೆಂಗಳೂರಿಗೆ ಬಂದು ಇಲ್ಲಿನ ಪ್ರದರ್ಶನಗಳಲ್ಲಿ ಅತಿಥಿ ಕಲಾವಿದರಾಗಿ ಭಾಗವಹಿಸಿ ಕಳೆದ 3 ದಶಕಗಳಿಂದ ಬೆಂಗಳೂರಿನ ಅಭಿಮಾನಿಗಳ ಮನಸೂರೆಗೊಂಡವರು. 2003ರಲ್ಲಿ ವೃತ್ತಿಮೇಳವನ್ನು ತೊರೆದು ಬೆಂಗಳೂರಿನಲ್ಲಿ ನೆಲೆಸಿ 'ಗಾನಸೌರಭ ಯಕ್ಷಗಾನ ಶಾಲೆ' ಎಂಬ ಸಂಸ್ಥೆಯನ್ನು ಪ್ರಾರಂಭಿಸಿ ಆ ಮೂಲಕ ಅಸಂಖ್ಯರಿಗೆ ಯಕ್ಷಗಾನ ತರಬೇತಿ ನೀಡಿ 'ಯಕ್ಷಗಾನ'ವನ್ನು 'ವಿಶ್ವಗಾನ'ವಾಗಿ ಮಾಡುವ ಸಂಕಲ್ಪದಲ್ಲಿ ಮುನ್ನಡೆಯುತ್ತಿದ್ದಾರೆ.

ಬೆಂಗಳೂರಿಗರಿಗೆ ಆಪ್ತರಾಗಿದ್ದ ನಾರ್ಣಪ್ಪ ಉಪ್ಪೂರರು

– ಡಾ. ಆನಂದರಾಮ ಉಪಾಧ್ಯ

ಕಳೆದ ಶತಮಾನದಲ್ಲಿ ಬೆಂಗಳೂರಿಗೆ ಬಂದ ಅಸಂಖ್ಯ ಕರಾವಳಿಯವರ ಪಾಲಿಗೆ ಯಕ್ಷಗಾನ ಸಮಾರಾಧನೆಯಾಗುತ್ತಿದ್ದುದ್ದು ಮಳೆಗಾಲದಲ್ಲಿ ಮಾತ್ರ. ಬೇಸಿಗೆಯ ಆಟದ ಕಾಲ ಮುಗಿದು ಯಕ್ಷಗಾನ ಕಲಾವಿದರು ಪ್ರವಾಸೀ ಮೇಳದ ಹೆಸರಿನಲ್ಲಿ ಬೆಂಗಳೂರಿಗೆ ಬಂದಾಗ ಅವರ ಪ್ರದರ್ಶನಗಳು ನಡೆಯುತ್ತಿದ್ದುದ್ದು ಪುರಭವನ ಅಥವಾ ರವೀಂದ್ರ ಕಲಾಕ್ಷೇತ್ರದಲ್ಲಿ. ಆಗ ಹೆಚ್ಚಾಗಿ ಬಡಗುತಿಟ್ಟಿನ ಪ್ರದರ್ಶನಗಳೇ ಬೆಂಗಳೂರಿನಲ್ಲಿ ನಡೆಯುತ್ತಿದ್ದುದ್ದು. ಖ್ಯಾತ ಸ್ತ್ರೀ ವೇಷಧಾರಿಗಳಾದ ಕೋಟ ವೈಕುಂಠರು ಅಮೃತೇಶ್ವರೀ ಮೇಳದ ಕಲಾವಿದರನ್ನು ಒಟ್ಟುಗೂಡಿಸಿಕೊಂಡು ಯಕ್ಷಗಾನ ಪ್ರದರ್ಶನ ನಡೆಸುತ್ತಿದ್ದರೆ, ಅರಾಟೆ ಮಂಜುನಾಥ ಅವರು ಶ್ರೀ ಗಣೇಶ ಪ್ರವಾಸೀ ಯಕ್ಷಗಾನ ಮಂಡಳಿಯ ಹೆಸರಿನಲ್ಲಿ ಹಿರಿಯ ಕಲಾವಿದರುಗಳಿಂದ ಪ್ರದರ್ಶನ ಏರ್ಪಡಿಸುತ್ತಿದ್ದರು. ಜಾತಕ ಪಕ್ಷಿಯಂತೆ ಕಾಯುತ್ತಿದ್ದ ಯಕ್ಷಗಾನದ ಅಭಿಮಾನಿಗಳಿಗೆ ಯಕ್ಷಗಾನ ಸಿಂಚನವಾಗುತ್ತಿದ್ದುದ್ದು ಈ ಬಗೆಯ ಪ್ರಸಿದ್ಧ ಕಲಾವಿದರ ಕಲಾಭಿವ್ಯಕ್ತಿಯಿಂದ. ಆಗ ಹೆಚ್ಚು ಹೆಚ್ಚು ಚರ್ಚೆಗೆ, ಮಾತಿಗೆ ಒಳಪಡುತ್ತಿದ್ದವರು ಅಂದಿನ ಖ್ಯಾತ ಭಾಗವತರಾಗಿದ್ದ ಎಂ. ನಾರ್ಣಪ್ಪ ಉಪ್ಪೂರರು. ಅಂದಿನ ಹೋಟೆಲ್ ಮಾಲೀಕರುಗಳಿಗೆ, ನೌಕರರಿಗೆ, ಬ್ಯಾಂಕ್ ಉದ್ಯೋಗಿಗಳಿಗೆ ಇವರು ಪ್ರೀತಿ ಪಾತ್ರರಾಗಿದ್ದರು. ಉಪ್ಪೂರರ ಸುಸಂಸ್ಕೃತ ನಡವಳಿಕೆಯನ್ನು, ರಂಗದಲ್ಲಿನ ಗತ್ತು ಗಾಂಭೀರ್ಯವನ್ನು, ಭಾವಪೂರ್ಣ ಹಾಡುಗಾರಿಕೆಯನ್ನು, ಖಚಿತ ರಾಗ ಜ್ಞಾನವನ್ನು, ವೇಷವನ್ನು ರಂಗದಲ್ಲಿ ಕುಣಿಸುವ ಪರಿಯನ್ನು ಬೆಂಗಳೂರಿನ ಹಿಂದಿನ ತಲೆಮಾರಿನವರು ಇಂದಿಗೂ ನೆನೆಯುತ್ತಾರೆ.

ಶ್ರೀ ನಾರ್ಣಪ್ಪ ಉಪ್ಪೂರರು ಸಂಪ್ರದಾಯವಾದಿಗಳಂತೆ ಹಳೆಯದರಲ್ಲೇ ಉಳಿಯದವರು. ಹಾಗೆ ಪ್ರಗತಿಪರರಂತೆ ಹಳೆಯದಾದ ಸಂಪತ್ತಿಗೆ ಕಿವುಡಾಗದವರು. ಎಲ್ಲಾ ಅರ್ಥಪೂರ್ಣ ಬದಲಾವಣೆಗಳನ್ನು ತಮ್ಮ ಕಲಾ ಜೀವನದಲ್ಲಿ ಒಗ್ಗಿಸಿಕೊಂಡು

ಭಾಗವತಿಕೆ ಮಾಡುತ್ತಲೇ ತಾವು ಬೆಳೆದವರು. ತಮ್ಮ ಬದುಕಿನ ಹೆಚ್ಚು ಕಾಲವನ್ನು ರಂಗ ನಿರ್ದೇಶನಕ್ಕೆ ಮುಡಿಪಾಗಿಟ್ಟ ಶ್ರೀಯುತರ ಭಾಗವತಿಕೆಯನ್ನು ಬೆಂಗಳೂರಿನಲ್ಲಿ ತೆಂಕು-ಬಡಗು ತಿಟ್ಟೆಂಬ ಭೇದವಿಲ್ಲದೆ ಎಲ್ಲರೂ ಮೆಚ್ಚಿಕೊಂಡಿದ್ದಾರೆ. ಬೆಂಗಳೂರಿನಲ್ಲಿ ನಡೆದ ಪ್ರದರ್ಶನಗಳಲ್ಲಿ ನಾರ್ಣಪ್ಪ ಉಪ್ಪೂರರಿಗೆ ಮದ್ದಲೆವಾದಕರಾಗಿ ಸಹಕರಿಸುತ್ತಿದ್ದವರು ಮೊದಲಿಗೆ ತಿಮ್ಮಪ್ಪ ನಾಯಕರು ಮುಂದೆ ದುರ್ಗಪ್ಪ ಗುಡಿಗಾರರು. ಮುಂದೆ ಯಕ್ಷಗಾನದಲ್ಲಿ ತಾರಾ ಮೌಲ್ಯವನ್ನು ಗಳಿಸಿಕೊಂಡ ಕಾಳಿಂಗ ನಾವಡರು ಇವರಿಗೆ ಸಹಭಾಗವತರಾಗಿ ಸಹಕರಿಸುತ್ತಿದ್ದು ಇವರ ಗರಡಿಯಲ್ಲೇ ಪಳಗಿದವರು. ಕಳೆದ ಶತಮಾನದ ಅರವತ್ತರ ದಶಕದಲ್ಲಿ ಯಕ್ಷಗಾನಕ್ಕೆ ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿ ಗಳಿಸಿಕೊಟ್ಟ ಹಾರಾಡಿ ರಾಮ ಗಾಣಿಗರನ್ನು, ಕೃಷ್ಣ ಗಾಣಿಗರನ್ನು, ಗುರು ವೀರಭದ್ರ ನಾಯಕರನ್ನು, ಕುಮಟಾಗೋವಿಂದ ನಾಯ್ಕರನ್ನು, ವಂಡಾರು ಬಸವರನ್ನು ಕುಣಿಸಿ ರಂಗದಲ್ಲಿ ಮೆರೆಸಿದರು. ಮುಂದೆ ಮೊಳಹಳ್ಳಿ ಹೆರಿಯ, ಉಡುಪಿ ಬಸವ, ಪೆರಡೂರು ರಾಮ, ಶಿರಿಯಾರ ಮಂಜುನಾಯ್ಕ, ಕೋಟ ವೈಕುಂಠ, ಆರಾಟೆ ಮಂಜುನಾಥ, ಕೆರೆಮನೆಯವರಾದ ಮಹಾಬಲ ಹೆಗಡೆ, ಗಜಾನನ ಹೆಗಡೆ, ಶಂಭು ಹೆಗಡೆ, ಚಿಟ್ಟಾಣಿ ರಾಮಚಂದ್ರ ಹೆಗಡೆ, ಗೋಡೆ ನಾರಾಯಣ ಹೆಗಡೆ, ರಾಮನಾಯರಿ, ಜಲವಳ್ಳಿ ವೆಂಕಟೇಶ ರಾವ್, ಗಜಾನನ ಭಂಡಾರಿ, ಕುಂಜಾಲು ರಾಮಕೃಷ್ಣ, ಮುಖ್ಯಪ್ರಾಣ ಕಿನ್ನಿಗೋಳಿ ಮುಂತಾದವರನ್ನೆಲ್ಲ ಪುರಭವನದ ವೇದಿಕೆಯಲ್ಲಿ ಕುಣಿಸಿ ಅವರ ಕಲಾಶಕ್ತಿ ಸೊಗಸಾಗಿ ಹೊರಹೊಮ್ಮುವಂತೆ ನೋಡಿಕೊಂಡರು.

ಆಗ ಬೆಂಗಳೂರಿನಲ್ಲಿ ಇವರ ಅಳಿಯಂದಿರಾದ ಪಿ. ಶ್ರೀಧರ ಹಂದೆಯವರು ಹೋಟೆಲ್ ಉದ್ಯಮಿಯಾಗಿದ್ದರು. ಆಗ ಕೊಡೇರಿಯವರಾದ ಕಾಳಿಂಗ ಕಾರಂತ, ಮಹದೇವ ಕಾರಂತ, ಶಿವರಾಮ ಕಾರಂತ, ಶ್ರೀ ಕೆ.ಎಲ್. ಐತಾಳರು, ಪಿ.ಕೆ. ಮಧ್ಯಸ್ಥರು, ನರಸಿಂಹ ಹೊಳ್ಳರು, ನೀಲಕಂಠ ಐತಾಳ್, ಡಾ. ಚಂದ್ರಶೇಖರ ಹಂದೆ, ವೈಕುಂಠ ಐತಾಳ ಮುಂತಾದವರೆಲ್ಲಾ ಗೆಳೆಯರಾದ ಉಪ್ಪೂರರನ್ನು ಸದಾ ಪ್ರೋತ್ಸಾಹಿಸುತ್ತಿದ್ದರು. ಇವರಿಗಾಗಿಯೇ 'ಶ್ರೀಕೃಷ್ಣ ವಿವಾಹ'ವೆಂಬ ಪ್ರಸಂಗದ ಎರಡು ಪ್ರದರ್ಶನಗಳನ್ನು ನಡೆಸಿ ಹಣ ಸಂಗ್ರಹಿಸಿ ಗೌರವ ಸಲ್ಲಿಸಿದ್ದರು. ಆಗೆಲ್ಲ ಉಪ್ಪೂರರು ಬೆಂಗಳೂರಿಗೆ ಬಂದರೆ ಬಸವನಗುಡಿ ರಸ್ತೆಯಲ್ಲಿರುವ ಶ್ರೀ ಗುರು ನರಸಿಂಹ ಕಲ್ಯಾಣ ಮಂಟಪದಲ್ಲಿ ಉಳಿದುಕೊಳ್ಳುತ್ತಿದ್ದರು. ಮಳೆಗಾಲವಾದ್ದರಿಂದ ಸ್ವಲ್ಪ ಕಾಲ ಕಲಾವಿದರುಗಳು ಕೂಡ ಅಲ್ಲಿ ವಾಸ್ತವ್ಯ ಮಾಡುತ್ತಿದ್ದರು. ಉಪ್ಪೂರರ ಸುಪುತ್ರರು,

ಪ್ಲಾಸ್ಟರ್ ಆಫ್ ಪ್ಯಾರಿಸ್‌ನಲ್ಲಿ ಯಕ್ಷಗಾನ ಮುಖವರ್ಣಿಕೆಗಳನ್ನು ಸಿದ್ಧಪಡಿಸುವುದರಲ್ಲಿ ಖ್ಯಾತಿ ಹೊಂದಿದ್ದ ಶ್ರೀ ಕೃಷ್ಣಮೂರ್ತಿ ಉಪ್ಪೂರರ ಮನೆಯೂ ಅಲ್ಲೇ ಇದ್ದಿತ್ತು. ಎಂಬತ್ತರ ದಶಕಗಳಲ್ಲಿ ಪ್ರಸಂಗ ಸಾಹಿತ್ಯದ ಬಗ್ಗೆ ವಿಚಾರ ತಿಳಿದುಕೊಳ್ಳಲು ಅವರನ್ನು ಇಲ್ಲೇ ಹಲವು ಬಾರಿ ಭೇಟಿ ಮಾಡಿ ಚರ್ಚಿಸಿದ್ದು ಇನ್ನೂ ಹಸಿರಾಗಿದೆ. ಎಳೆಯರ ಬಗ್ಗೆ ಅವರಿಗೆ ಇರುವ ಪ್ರೀತಿ, ಪ್ರಸಂಗಗಳ ಪದ್ಯದ ಬಗ್ಗೆ ಅವರಿಗಿರುವ ಒಲವು, ಸರಳವಾಗಿ ಮನಮುಟ್ಟುವಂತೆ ಮಾತನಾಡುವ ಪರಿ, ಹೇಳುವುದನ್ನು ನಿರ್ಭಿಡೆಯಿಂದ ಹೇಳುವ ರೀತಿ ಇವೆಲ್ಲ ಉಪ್ಪೂರರದ್ದೇ ವೈಶಿಷ್ಟ್ಯವಾಗಿದೆ. ಅವರೊಂದಿಗೆ ನಡೆಸಿದ ಸಂದರ್ಶನದಲ್ಲಿ, ಅವರಾಡಿದ ಮಾತುಗಳಲ್ಲಿ ಯಕ್ಷಗಾನ ರಂಗದ ಕುರಿತಾದ ಅವರ ಖಚಿತ ನಿಲುವುಗಳನ್ನು ಕಾಣಬಹುದಾಗಿತ್ತು.

ಹಾಡಿನ ಪದಪದಗಳನ್ನೂ ಹಿಂಜಿ ಅದರ ಭಾವವನ್ನು ಹೊರ ಹಾಕುವ ಶೈಲಿಯಲ್ಲಿ ಪಾರಂಗತರಾಗಿರುವ ಇವರು ಹಿಮ್ಮೇಳದ ಎಲ್ಲಾ ಅಂಗಗಳಲ್ಲೂ ಪರಿಣತರು. ನಾರ್ಣಪ್ಪ ಉಪ್ಪೂರರು ಭಾಗವತರಾಗಿ ಮಾತ್ರ ಖ್ಯಾತರಾದವರಲ್ಲ, ಉತ್ತಮ ಯಕ್ಷಗಾನ ಬೋಧಕರೂ ಆಗಿದ್ದವರು. ಇವರು ಹಂಗಾರಕಟ್ಟೆ ಯಕ್ಷಗಾನ ಕಲಾ ಕೇಂದ್ರದ ಪ್ರಾಚಾರ್ಯರಾಗಿ ಹದಿಮೂರು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಇದರಡಿಯಲ್ಲಿ 60ಕ್ಕೂ ಹೆಚ್ಚು ಕಲಾವಿದರು ತರಬೇತಿ ಪಡೆದಿದ್ದು ವೃತ್ತಿ ಮೇಳ ಸೇರಿ ಪ್ರಸಿದ್ಧಿ ಪಡೆದಿದ್ದಾರೆ. ಯಕ್ಷಗಾನದ ಅಭ್ಯಾಸಕ್ಕೆ ಅನುಕೂಲವಾಗುವಂತಹ 'ಯಕ್ಷಗಾನ ಶಿಕ್ಷಕ' ಹಾಗೂ 'ಯಕ್ಷಗಾನ ಅಧ್ಯಯನ' ಎಂಬೆರಡು ಗ್ರಂಥಗಳನ್ನು ಬರೆದಿದ್ದಾರೆ. ಇದರಿಂದಾಗಿಯೇ ಯಕ್ಷಗಾನ ಲೋಕ ಅವರನ್ನು 'ಪ್ರಾಚಾರ್ಯ ಎಂ. ನಾರ್ಣಪ್ಪ ಉಪ್ಪೂರ' ಎಂದು ಕರೆದು ಗೌರವಿಸಿದೆ. ಈ ದೃಷ್ಟಿಯಿಂದ ಇವರು ಮಾಡಿರುವ ಸೇವೆ ಕನ್ನಡ ಸಾಹಿತ್ಯದಲ್ಲಿ ಬಿ.ಎಂ.ಶ್ರೀಯವರು ಮಾಡಿದಂತಿದೆ. ಕಳೆದ ಶತಮಾನದ ಪ್ರಾರಂಭದಲ್ಲಿ ಹೊಸಗನ್ನಡದ ಆರಂಭಿಕ ದಿನಗಳಲ್ಲಿ ಕನ್ನಡ ಸಾಹಿತ್ಯ ಹಾಗೂ ಕನ್ನಡದ ಅಧ್ಯಯನ ಹೇಗೆ ಸಾಗಬೇಕೆಂಬ ಕಲ್ಪನೆಯನ್ನು ಹಾಕಿಕೊಟ್ಟವರು 'ಶ್ರೀ'ಯವರು. 'ಕನ್ನಡದ ಕಣ್ವ'ರೆಂದೇ ಅವರು ಖ್ಯಾತಿ ಹೊಂದಿದ್ದರು. ಅದೇ ರೀತಿ ಉಪ್ಪೂರರೂ ಕೂಡ 'ಯಕ್ಷಗಾನದ ಕಣ್ವ'ರೇ ಸರಿ. ಆ ಕಾಲದಲ್ಲಿ ಯಕ್ಷಗಾನದ ಕಲಾವಿದರನ್ನೂ, ಭಾಗವತರನ್ನೂ ಪ್ರೀತಿಯಿಂದ ಸಾಕಿ ಬೆಳೆಸಿದವರು ಋಷಿ ಸದೃಶ ಜೀವನ ನಡೆಸಿದವರು. ಇವರ ಶಿಷ್ಯರಾದ ಕಾಳಿಂಗ ನಾವಡ, ಸುಬ್ರಹ್ಮಣ್ಯ ಧಾರೇಶ್ವರ, ಸದಾನಂದ ಐತಾಳ ಮುಂತಾದವರು ಯಕ್ಷಗಾನ ರಂಗದ ಆಸ್ತಿಯಾಗಿದ್ದಾರೆ.

ಪ್ರಾಚಾರ್ಯ ನಾರ್ಣಪ್ಪ ಉಪ್ಪೂರರು ಸಂತೃಪ್ತ ಭಾವದ ಭಾಗವತರು ಹೊಸದಕ್ಕೆ ತೆರೆದ ಹೃದಯ ಉಳ್ಳವರಾಗಿದ್ದರು. ಹರೆಯ ಕಳೆಯುತ್ತಿದ್ದರೂ ಲೆಕ್ಕಿಸದೆ ಉಪ್ಪೂರರು ಉತ್ಸಾಹದಿಂದ ಪ್ರದರ್ಶನಗಳಲ್ಲಿ ಭಾಗವಹಿಸುತ್ತಿದ್ದರು. ವೃದ್ದಾಪ್ಯ ಎಂದೂ ಉಪ್ಪೂರರಿಗೆ ಸವಾಲಾಗಿರಲಿಲ್ಲ. ಬಯಲಾಟವಿರಲಿ, ಜೋಡಾಟವಿರಲಿ, ಹವ್ಯಾಸಿಗಳ ಚಿಕ್ಕ ಪ್ರದರ್ಶನವಿರಲಿ ಅಥವಾ ರಾತ್ರಿ ಇಡೀ ಒಟ್ಟಾರೇ ಬೆಳಗು ಮಾಡಬೇಕಾದ ಪರಿಸ್ಥಿತಿಯೇ ಬಂದಿರಲಿ ಎದೆಗುಂದದೇ ತಮ್ಮ ಕಾರ್ಯವನ್ನು ಚೊಕ್ಕದಾಗಿ ಮುಗಿಸುತ್ತಿದ್ದರು. ಅರವತ್ತಾರರ ವಯಸ್ಸಿನಲ್ಲೂ ಉಪ್ಪೂರರ ಕಂಠಶ್ರೀ ಅಸಾಧಾರಣವಾಗಿದ್ದು ಅತ್ಯಂತ ಇನಿದನಿಯಿಂದ ಕೂಡಿಕೊಂಡಿತ್ತು. ಶುಭ್ರ ಬಿಳಿಯ ಜುಬ್ಬ, ಬಿಳಿಯ ಕಚ್ಚೆ ಹಾಕಿದ ಪಂಚೆ, ತಲೆಗೆ ಕೆಂಪು ರುಮಾಲು, ಹಣೆಗೊಂದು ಕುಂಕುಮದ ಬೊಟ್ಟು ತೊಟ್ಟು ಕುಳಿತು ಹಾಡತೊಡಗಿದರೆ ಎಂತವರಲ್ಲೂ ಅವರ ಬಗ್ಗೆ ಗೌರವ ಹೊಮ್ಮುತ್ತಿತ್ತು.

* * *

ಬೆಂಗಳೂರು ಯಕ್ಷಗಾನಕ್ಕೆ ತಾಳ್ತಜೆ ಕೇಶವಭಟ್ಟರ ಕೊಡುಗೆ

ಡಾ॥ ಆನಂದರಾಮಉಪಾಧ್ಯ

ತೆಂಕುತಿಟ್ಟು ಯಕ್ಷಗಾನವು ಬೆಂಗಳೂರಿನಲ್ಲಿ ಬೇರೂರಿ ಚಿಗುರೊಡೆಯುವಲ್ಲಿ ಪ್ರೊ॥ ತಾಳ್ತಜೆ ಕೇಶವಭಟ್ಟರ ಪಾತ್ರ ಹಿರಿದು. ನಗರದ ಆಚಾರ್ಯ ಪಾಠಶಾಲೆ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದ ಅವರು ಜಾನಪದ ತಜ್ಞರಾಗಿಯೂ ಖ್ಯಾತಿಯನ್ನು ಗಳಿಸಿದವರು. 1963ಕ್ಕೆ ಬೆಂಗಳೂರಿಗೆ ಬಂದ ಅವರು ಆಗ ರಾಜಾಜಿನಗರದ ಶ್ರೀ ಪದ್ಮಾನಂದ ಗುರೂಜಿಯವರ ಆಶ್ರಮದಲ್ಲಿ ಪ್ರತಿ ಭಾನುವಾರ ನಡೆಯುತ್ತಿದ್ದ 'ತಾಳಮದ್ದಲೆ'ಯಲ್ಲಿ ಅರ್ಥದಾರಿಯಾಗಿ, ಮದ್ದಲೆವಾದಕರಾಗಿ ಭಾಗವಹಿಸಿ ಅದು ನಿರಂತರವಾಗಿ ನಡೆಯಲು ಕಾರಣರಾದರು. ತೆಂಕುತಿಟ್ಟಿನ ಹವ್ಯಾಸಿ ತಂಡಗಳಿಗೆ 40 ವರ್ಷಗಳ ಕಾಲ ಮಾರ್ಗದರ್ಶಕರಾಗಿ, ಒಮ್ಮೊಮ್ಮೆ ಭಾಗವತಿಕೆಯನ್ನು, ಮದ್ದಲೆವಾದನವನ್ನು ಮಾಡುತ್ತಾ ಪ್ರೋತ್ಸಾಹಿಸುತ್ತಾ ಬಂದವರು. ಬನಶಂಕರಿ 2ನೇ ಹಂತದಲ್ಲಿನ ಶ್ರೀ ವೆಂಕಟೇಶ ಯಕ್ಷಗಾನ ಕಲಾವೃಂದದ ಸ್ಥಾಪಕ ಅಧ್ಯಕ್ಷರಾದ ಕೇಶವ ಭಟ್ಟರ ಹಿರಿತನದಲ್ಲಿ ಆ ಸಂಸ್ಥೆ ದೇವಗಿರಿಯ ವೆಂಕಟೇಶ್ವರ ದೇವಸ್ಥಾನದಲ್ಲಿ ಅನೇಕ ಯಕ್ಷಗಾನ ಚಟುವಟಿಕೆಗಳನ್ನು ನಡೆಸಿದ್ದು ಗಮನಾರ್ಹ. ದಕ್ಷಿಣ ಕನ್ನಡ ಜಿಲ್ಲೆಯ ಜಾನಪದದ ಕುರಿತು ಅಧಿಕೃತವಾಗಿ ಮಾತನಾಡಬಲ್ಲ ಅವರು ಬೆಂಗಳೂರಿನ ಅನೇಕ ವೇದಿಕೆಗಳಲ್ಲಿ ದ.ಕ ಜಿಲ್ಲೆಯ ಜಾನಪದ ಹಾಗೂ ಯಕ್ಷಗಾನದ ಸಂಪತ್ತನ್ನು ಪರಿಚಯಿಸಿದರು. ಇದರಿಂದಾಗಿ ಬೆಂಗಳೂರಿನ ವಿದ್ವತ್ ವಲಯದಲ್ಲಿ ಯಕ್ಷಗಾನಕ್ಕೊಂದು ಗೌರವದ ಸ್ಥಾನ ದೊರೆಯುವಂತಾಯಿತು.

ಕಾಸರಗೋಡು ತಾಲೂಕಿನ ಬಾಯಾರು ಗ್ರಾಮದ, ಗೋವಿಂದಭಟ್ಟ ಹಾಗೂ ಸಾವಿತ್ರಿ ಯಾನೆ ಸಾಂತಮ್ಮನವರ ಮಗನಾಗಿ 2.2.1920ರಲ್ಲಿ ಕೇಶವಭಟ್ಟರು ಜನಿಸಿದರು. ತಾಳ್ತಜೆ ಮನೆತನಕ್ಕೆ ಯಕ್ಷಗಾನದೊಂದಿಗೆ ಮೊದಲಿನಿಂದಲೂ ಬಲವಾದ

ನಂಟಿತ್ತು. ಇವರ ತಂದೆ ಪದರಚನಕಾರರು ಮದ್ದಲೆಚಂಡೆ ವಾದನಗಳ ಬಲ್ಲವರು. ಚಿಕ್ಕಪ್ಪಂದಿರಾದ ಶಂಕರಭಟ್ಟರು ಪ್ರಸಿದ್ಧ ಭಾಗವತರು. ಇನ್ನಿಬ್ಬರು ಮದ್ದಲೆ ಹಾಗೂ ಚಂಡೆವಾದಕರು. ಇವರ ಅಣ್ಣ ಕೃಷ್ಣಭಟ್‌ರು ವಿದ್ವಾನ್ ಪದವಿಧರರೂ, ಯಕ್ಷಗಾನ ಚಿಂತಕರು, ಅರ್ಥದಾರಿಗಳು. ಕೇಶವಭಟ್‌ರು ಪ್ರಾರಂಭದಲ್ಲಿ ಕುದ್ರೆ ಕೋಡ್ಲು ರಾಮಭಟ್‌ರಲ್ಲಿ ಯಕ್ಷಗಾನದ ಕಲಿಕೆ ಪ್ರಾರಂಭಿಸಿದರು. ಪ್ರಾಥಮಿಕ ಶಿಕ್ಷಕರಾಗಿ 1938ರಲ್ಲಿ ತಮ್ಮ ವೃತ್ತಿಜೀವನವನ್ನು ಆರಂಭಿಸಿದ ಇವರು ಮೊದಲಿಗೆ ಪೆರ್ವೋಡಿ ಪ್ರಾಥಮಿಕ ಶಾಲೆಯಲ್ಲಿ 6 ವರ್ಷ ಮುಂದೆ ಪೆರ್ಲ ಸತ್ಯನಾರಾಯಣ ಹೈಸ್ಕೂಲ್‌ನಲ್ಲಿ ನಾಲ್ಕು ವರ್ಷ ಅಧ್ಯಾಪಕರಾಗಿದ್ದರು. ಕನ್ನಡದಲ್ಲಿ ವಿದ್ವಾನ್, ಹಿಂದಿಯಲ್ಲಿ ವಿಶಾರದ, ಮುಂದೆ ಕನ್ನಡದಲ್ಲಿ ಎಂ.ಎ(1958) ಹಾಗೂ ಗಮಕದಲ್ಲಿ ಪ್ರೌಢ ಪದವಿಗಳಿಸಿದ್ದರು. ಕೊಡಗಿನ ಹಾತೂರು ಹೈಸ್ಕೂಲ್ ಹಾಗೂ ಮಡಿಕೇರಿಯ ಹಾಯರ್ ಸೆಕೆಂಡರಿ ಸ್ಕೂಲ್‌ನಲ್ಲಿ ಅಧ್ಯಾಪಕರಾಗಿದ್ದರು. 1960ರಲ್ಲಿ ಮೈಸೂರಿಗೆ ಬಂದ ಭಟ್‌ರು ಮಹಾರಾಣಿ ಮಹಿಳಾ ಟ್ರೈನಿಂಗ್ ಕಾಲೇಜಿನಲ್ಲಿ 3 ವರ್ಷ ಉಪನ್ಯಾಸಕರಾಗಿದ್ದರು. 1963ರಲ್ಲಿ ಬೆಂಗಳೂರಿಗೆ ಬಂದ ಕೇಶವಭಟ್ಟರು ಇಲ್ಲೇ ಖಾಯಂ ಆಗಿ ನೆಲೆಸಿದರು. ಬನಶಂಕರಿ 2ನೇ ಹಂತದಲ್ಲಿರುವ ಅವರ ಮನೆ "ಗಮಕ ಹಾಗೂ ಯಕ್ಷಗಾನ" ಕಲಿಕಾ ಕೇಂದ್ರವಾಗಿ ಕೂಡ ಪರಿವರ್ತಿತವಾಗಿತ್ತು.

ಯಕ್ಷಗಾನದ ಭಾಗವತರಾಗಿ ಹವ್ಯಾಸಿಗಳನ್ನು ಹುರಿದುಂಬಿಸುತ್ತಿದ್ದ ಶ್ರೀಯುತರು ಮದ್ದಲೆವಾದಕರಾಗಿ ಖ್ಯಾತಿಗೊಂಡವರು. ಮಾಂಬಾಡಿ ನಾರಾಯಣ ಭಾಗವತರಿಗೆ, ಹರಿದಾಸ ಮಲ್ಪೆ ಶಂಕರನಾರಾಯಣ ಸಾಮಗರಿಗೆ, ಬಲಿಪ ನಾರಾಯಣ ಭಾಗವತರಿಗೆ ಮದ್ದಲೆ ನುಡಿಸಿದ ಖ್ಯಾತಿ ಇವರದು. ಬೆಂಗಳೂರಿನ ಅನೇಕ ಗಣೇಶೋತ್ಸವ, ರಾಮೋತ್ಸವದ ಕಾರ್ಯಕ್ರಮಗಳಲ್ಲಿ ಜರಗಿದ ಯಕ್ಷಗಾನಗಳಿಗೆ ಇವರು ಮದ್ದಲೆವಾದಕರಾಗಿದ್ದರು. ಬೆಂಗಳೂರಿನ ತುಳು ಕೂಟದವರು ನಡೆಸುತ್ತಿದ್ದ ತಾಳಮದ್ದಲೆಗಳಲ್ಲಿ ಅರ್ಥದಾರಿಗಳಾಗಿ ಭಾಗವಹಿಸಿದ್ದರು ಅಷ್ಟಾವಧಾನ ಕಾರ್ಯಕ್ರಮಗಳಲ್ಲಿ ಪ್ರಚ್ಛಕರಾಗಿಯೂ ಪಾಲ್ಗೊಳ್ಳುತ್ತಿದ್ದ ಕೇಶವಭಟ್‌ರು ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿ, ದೇವಗಿರಿ ವೆಂಕಟೇಶ್ವರ ದೇವಸ್ಥಾನಗಳಲ್ಲಿ, ಆಕಾಶವಾಣಿಯಲ್ಲಿ ಯಕ್ಷಗಾನ ಕಾರ್ಯಕ್ರಮಗಳನ್ನು ನೀಡುವ ಮೂಲಕ ಈ ಕಲೆಯ ಪ್ರಚಾರಕ್ಕೆ ಶ್ರಮಿಸಿದರು. ಕನ್ನಡದ ವಿದ್ವತ್ ಪರಂಪರೆಯ ಕೊಂಡಿಯಾದ ಇವರು ಸಂಸ್ಕೃತ, ಕನ್ನಡ ಮಲೆಯಾಳಂ, ತುಳು, ಹಿಂದಿ ಭಾಷೆಗಳಲ್ಲಿ ಪಾಂಡಿತ್ಯ ಹೊಂದಿದ್ದರು. ಸರಳ ಸಜ್ಜನಿಕೆಯ ವ್ಯಕ್ತಿತ್ವ ಉಳ್ಳಭಟ್ಟರು ಮೊದಲಿಗೆ 'ಸತ್ವಾಲೋಕನಂ' ಎಂಬ ಚಂಪುಕಾವ್ಯ ರಚಿಸಿದ್ದರು. ಇದಲ್ಲದೆ ಶ್ರೀಗುರು ಚರಿತಾಮೃತಂ, ತೂಗುದೀವಿಗೆ,

ರಾಮ ವಿಜಯಕಾವ್ಯ ಎಂಬ ಕೃತಿಗಳನ್ನು ಬರೆದಿದ್ದಾರೆ. ಈ ಹಿನ್ನೆಲೆಯಿಂದ ಯಕ್ಷಗಾನ ಬೇಷಜ ಪ್ರಸಂಗ'ವೆಂಬ ಕೃತಿಯನ್ನು ಸಂಪಾದಿಸಿದ್ದಾರೆ. ತುಳುವಿನಲ್ಲಿ 'ಪಂಚವಟಿ ವಾಲಿ ಸುಗ್ರೀವ ಕಾಳಗೋ' ಎಂಬ ಪ್ರಸಂಗವನ್ನು ಬರೆದಿದ್ದಾರೆ. ವ್ಯಾಘ್ರನಖ, ಯುಗಾದಿ ವೈಭವ ಎಂಬೆರಡು ನೂತನ ಪ್ರಸಂಗಗಳನ್ನು ರಚಿಸಿದ್ದಾರೆ.

ಕೇಶವಭಟ್ಟರ ಪ್ರತಿಭೆಯ ಇನ್ನೊಂದು ಮುಖವೆಂದರೆ ಗಮಕವಾಚನ. ಮೊದಲಿಗೆ ಮಡಿಕೇರಿಯಲ್ಲಿ ಎಂ.ಎಸ್. ಅನಂತಪದ್ಮನಾಭರಾಯರಿಂದ ಗಮಕ ತರಬೇತಿ ಗಳಿಸಿದ ಇವರು ಮುಂದೆ ಮೈಸೂರಿನಲ್ಲಿ ಶ್ರೀ ಕಂಠಶಾಸ್ತ್ರಿ, ಕೃಷ್ಣಗಿರಿ ಕೃಷ್ಣರಾವ್, ತ.ಸು. ಶಾಮರಾವ್ ಮುಂತಾದವರ ಪ್ರೋತ್ಸಾಹ ದೊರೆತು ಮುಂದೆ 1968ರಲ್ಲಿ 'ಗಮಕ ಪ್ರೌಢ' ಪದವಿ ಗಳಿಸಿದರು. ಅನೇಕ ಹಳೆಗನ್ನಡ, ನಡುಗನ್ನಡ ಕಾವ್ಯವನ್ನು ಬೆಂಗಳೂರಿನ ಕಾವ್ಯಸಕ್ತರಿಗೆ ಉಣಬಡಿಸಿದ್ದಾರೆ. ಬೆಂಗಳೂರಿನಲ್ಲಿ ಖ್ಯಾತ ಗಮಕಿ ಎಂ. ರಾಘವೇಂದ್ರರಾಯರ ಸಹಚರ್ಯದಿಂದಾಗಿ ಆಕಾಶವಾಣಿಯಲ್ಲಿ, ಗಾಯನ ಸಮಾಜದಲ್ಲೆಲ್ಲ ಕಾರ್ಯಕ್ರಮ ನೀಡಿದರು. ನಲವತ್ತಕ್ಕೂ ಹೆಚ್ಚು ಗಮಕ ಕುರಿತು ಲೇಖನ ಬರೆದಿದ್ದಾರೆ. ಮನೆಯಲ್ಲೇ 'ಗಮಕ ಅಧ್ಯಯನ ಸಂಶೋಧನ ಕೇಂದ್ರ' ಸ್ಥಾಪಿಸಿದರು. ಗಾಯನ ಸಮಾಜದಲ್ಲಿ ನಡೆದ ಸಂಗೀತ ಸಮ್ಮೇಳನದಲ್ಲಿ "ಯಕ್ಷಗಾನದಲ್ಲಿ ತಾಳ ಮತ್ತು ಲಯ" ಎಂಬ ಉಪನ್ಯಾಸವನ್ನು ಪ್ರಾತ್ಯಕ್ಷಿಕೆ ಯೊಂದಿಗೆ ನೀಡಿದ್ದಲ್ಲದೆ 'ಯಕ್ಷಗಾನದಲ್ಲಿ ಸಂಗೀತ' ಎಂಬ ಲೇಖನವು ಇವರ ಆಳವಾದ ಜ್ಞಾನವನ್ನು ಬಿಂಬಿಸುತ್ತದೆ. ಯಕ್ಷಗಾನ ಸಭಾಲಕ್ಷಣವನ್ನು ಮೈಕ್ರೋಫಿಲಂ ಮಾಡಿಸಿದ ಕೇಶವಭಟ್‌ರು ಖ್ಯಾತ ಮದ್ದಲೆವಾದಕ ನೆಡ್ಲೆ ನರಸಿಂಹಭಟ್ಟರ ಮೆಚ್ಚುಗೆಯನ್ನು ಪಡೆದಿದ್ದರು. ಇವರ "ಯಕ್ಷಗಾನ ಕಲಾದರ್ಶನ" ಎಂಬ ಪುಸ್ತಕದಲ್ಲಿ ಯಕ್ಷಗಾನದ ಕುರಿತಾದ ವಿಚಾರ ಪೂರ್ಣ ಲೇಖನಗಳಿವೆ. ಪ್ರೊ.ಸ.ಸ ಮಾಳವಾಡರ ಮಾರ್ಗದರ್ಶನದಲ್ಲಿ "ದಕ್ಷಿಣ ಕನ್ನಡ ಜಿಲ್ಲೆಯ ಜನಪದ ಗೀತೆಗಳು" ಎಂಬ ಸಂಶೋಧನಾತ್ಮಕ ಪ್ರೌಢಪ್ರಬಂಧವನ್ನು ರಚಿಸಿದ್ದಾರೆ. ಇದಲ್ಲದೆ 'ಸಂಶೋಧನಾ ರತ್ನ ಮಾಲಿಕೆ' 'ಮಣಿಹಾರ' 'ಕನ್ನಡ ಪ್ರಾಚೀನ ಸಾಹಿತ್ಯದ ಲಕ್ಷಣಗಳು' ಗೋವಿನ ಕಥಾ ಸಾಹಿತ್ಯ ಮುಂತಾದ ಸಂಶೋಧನಾತ್ಮಕ ಕೃತಿಗಳನ್ನು ರಚಿಸಿದ ಹೆಗ್ಗಳಿಕೆ ಇವರದು. ಜಾನಪದ ಶಾಸ್ತ್ರವೇತ್ತರಾಗಿ ಖ್ಯಾತಿಪಡೆದಿರುವ ಭಟ್‌ರು ಶೈಕ್ಷಣಿಕ ಕೃತಿಗಳಾದ 'ಭಾಷಾದೀಪಿಕ' 'ಭಾಷಾಭಾಸ್ಕರ' ಮುಂತಾದವನ್ನು ಕೂಡ ರಚಿಸಿದ್ದಾರೆ.

ಖ್ಯಾತ ಯಕ್ಷಗಾನ ಸಂಶೋಧಕರಾದ ಶ್ರೀ ಕುಕ್ಕಿಲ ಕೃಷ್ಣಭಟ್‌ರ ಸಮೀಪ ವರ್ತಿಗಳಾಗಿದ್ದರು ಯಕ್ಷಗಾನ ಛಂದೋವಿದರಾದ ಸೀಮಂತೂರು ನಾರಾಯಣ

ಶೆಟ್ಟರೊಂದಿಗಿನ ಸಂವಾದದಿಂದಾಗಿ ಯಕ್ಷಗಾನ ಛಂದಸ್ಸು ಹಾಗೂ ರಾಗ ತಾಳಗಳ ಕುರಿತಾಗಿ ಆಳವಾದ ಜ್ಞಾನ ಹೊಂದಿದ್ದರು. ಕರ್ನಾಟಕ ಜಾನಪದ ಅಕಾಡೆಮಿಯಿಂದ ಹೊರತಂದಿರುವ 'ಹವ್ಯಕರ ಶೋಭಾನೆಗಳು (1986)' ಇವರಿಗೆ ಖ್ಯಾತಿ ತಂದು ಕೊಟ್ಟಿದೆ, 'ಹಾಡಿನ ಚೂಡಾಮಣಿ', 'ಹವ್ಯಕ ಪದಸಂಚಯ' ವೆಂಬೆಲ್ಲ ಕೃತಿಗಳು ಜನಪ್ರಿಯವಾಗಿವೆ. ಗಮಕಕಲಾ ಪರಿಷತ್ತು ಪ್ರಕಟಿಸಿರುವ ಗಮಕಕ್ಕೆ ಸಂಬಂಧಿಸಿರುವ 'ಗಮಕ ಗಂಗೋತ್ರಿ' 'ಗಮಕ ಸುರಭಿ' 'ಗಮಕವಾಹಿನಿ' ಗಳಲ್ಲಿ ಇವರ ಆಳವಾದ ಪರಿಶ್ರಮ ಹಾಗೂ ಪ್ರೌಢಿಮೆಯ ಪರಿಚಯವಾಗುತ್ತದೆ. 'ರಾಷ್ಟ್ರಭಕ್ತಿ ಮಾನಸ' ಮತ್ತು ಲಂಕಾದಹನ ವೆಂಬ ನಾಟಕಗಳ ರಚನೆ ಇವರ ವೈವಿಧ್ಯಮಯ ಪ್ರತಿಭೆಗೆ ಸಾಕ್ಷಿ. ಕ್ರಿ.ಶ. 2005ರಲ್ಲಿ ಯಕ್ಷಗಾನ ಅಭಿಮಾನಿಗಳನ್ನು ಅಗಲಿದ ಕೇಶವ ಭಟ್ಟರು ಬೆಂಗಳೂರಿನ ಯಕ್ಷಗಾನ ಕ್ಷೇತ್ರಕ್ಕೆ ನಲ್ವತ್ತಕ್ಕೂ ಹೆಚ್ಚು ವರ್ಷ ಸೇವೆ ಸಲ್ಲಿಸಿದ್ದಾರೆ.

ಇಂತಹ ಹಿರಿಯ ವಿದ್ವಾಂಸರಿಗೆ ಪಾದೆಕಲ್ಲು ವಿಷ್ಣುಭಟ್‌ರ ಸಂಪಾದಕತ್ವದಲ್ಲಿ 'ಸುಕೃತಿ' ಎಂಬ ಸಂಸ್ಮರಣ ಗ್ರಂಥವನ್ನು ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರದ ಆಶ್ರಯದಲ್ಲಿ ಹೊರತರಲಾಯಿತು. ನಾಡಿನ ಅನೇಕ ವಿದ್ವಾಂಸರು ಭಟ್ಟರ ಯಕ್ಷಗಾನ ಕೆಂಕರ್ಯವನ್ನು ಮುಕ್ತಕಂಠದಿಂದ ಹೊಗಳಿದ್ದಾರೆ. ಕೇಶವಭಟ್ಟರಿಗೆ ಸೆಡಿಯಾಪುಕೃಷ್ಣಭಟ್ಟ ಪ್ರಶಸ್ತಿ, ಜಾನಪದ ಅಕಾಡೆಮಿಯಿಂದ 'ಜಾನಪದ ತಜ್ಞ' ಪ್ರಶಸ್ತಿ, ಬಿಎಂ ಶ್ರೀ ಸಾಹಿತ್ಯ ಪ್ರಶಸ್ತಿ, ರಾಜ್ಯೋತ್ಸವ ಸಂಮಾನ, ಜಚನಿ ಸ್ವಾಮೀಜಿಯವರ ಪೀಠದಿಂದ 'ನುಡಿರೂಹುರುವಾರಿ' ಬಿರುದು, ಶ್ರೀ ರಾಮಚಂದ್ರಪುರ ಮಠದಿಂದ ಗೌರವ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಜಾನಪದ ಅಕಾಡೆಮಿಗಳಿಂದ ಪುಸ್ತಕ ಬಹುಮಾನ ಮುಂತಾದವುಗಳು ಲಭಿಸಿವೆ. ಹೀಗೆ ಕವಿ, ಸಂಶೋಧಕ, ಸಂಗೀತಜ್ಞ, ಜಾನಪದ ತಜ್ಞ, ನಾಟಕಕಾರ, ಗ್ರಂಥಸಂಪಾದಕ, ಗಮಕಿ, ಯಕ್ಷಗಾನ ಭಾಗವತ, ಮದ್ದಲೆವಾದಕ, ಅರ್ಥದಾರಿಯಾಗಿ ಬಹುಶ್ರುತರಾಗಿದ್ದು ಬಹು ಮುಖಪ್ರತಿಭೆಯ ತಾಳ್ತಜೆ ಕೇಶವಭಟ್‌ರು ಬೆಂಗಳೂರು ಯಕ್ಷಗಾನ ರಂಗದ ಘನತೆಯನ್ನು ಏರಿಸಿದವರು.

ಲೇಖಕರ ಪರಿಚಯ

ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲೂಕಿನ ಚಿತ್ರಪಾಡಿ ಗ್ರಾಮದಲ್ಲಿ ಕ್ರಿ.ಶ. 1952ರಲ್ಲಿ ನಾರಾಯಣ ಉಪಾಧ್ಯ ಹಾಗೂ ಕಾವೇರಮ್ಮನವರ ಕೊನೆಯ ಮಗನಾಗಿ ಜನಿಸಿದ್ದಾರೆ. ಕನ್ನಡ ಹಾಗೂ ಯಕ್ಷಗಾನದ ಕುರಿತಾಗಿ ಅಣ್ಣ ನರಸಿಂಹ ಉಪಾಧ್ಯರಿಂದ ಒಲವನ್ನು ಗಳಿಸಿಕೊಂಡು, ಕನ್ನಡ ಸ್ನಾತಕೋತ್ತರ ಪದವಿಯನ್ನುಗಳಿಸಿದರು. ಯಕ್ಷಗಾನ ರಾಮಾಯಣ ಪ್ರಸಂಗಗಳು ಎಂಬ ಪ್ರಬಂಧಕ್ಕೆ ಎಂ.ಫಿಲ್ ಪದವಿಯನ್ನು "ಯಕ್ಷಗಾನ ಮಹಾಭಾರತ ಪ್ರಸಂಗಗಳು" ಎಂಬ ಪ್ರೌಢ ಪ್ರಬಂಧನಕ್ಕೆ ಪಿ.ಹೆಚ್.ಡಿ ಪದವಿಯನ್ನು ಉಸ್ಮಾನೀಯ ವಿಶ್ವವಿದ್ಯಾಲಯದಿಂದ 1984ರಲ್ಲಿ ಗಳಿಸಿದರು. ಹಾರಿದಾಸ ಸಾಹಿತ್ಯದ ಹಿರಿಯ ವಿದ್ವಾಂಸರಾದ ಡಾ|| ಕೆ.ಎಂ. ಕೃಷ್ಣರಾವ್ ಇವರಿಗೆ ಮಾರ್ಗದರ್ಶಕರಾಗಿದ್ದರು. ಇವರ ಈ ಎರಡು ಪುಸ್ತಕಗಳು 1980 ಹಾಗೂ 1990 ರಲ್ಲಿ ಪ್ರಕಟಗೊಂಡಿವೆ. ಇವಲ್ಲದೆ ಯಕ್ಷದರ್ಶನ (1986) ಯಕ್ಷಚಿಂತನೆ (2015) ಪ್ರತಿಬಿಂಬ (2018) ಎಂಬ ಪುಸ್ತಕಗಳನ್ನು ಬರೆದಿದ್ದಾರೆ. 'ಯಕ್ಷಗಾನಂ ವಿಶ್ವಗಾನಂ' ಮತ್ತು 'ಕೋದಂಡ' ಎಂಬ ಯಕ್ಷಗಾನ ಸಂಬಂಧಿ ಸ್ಮರಣ ಸಂಚಿಕೆಗಳಿಗೆ ಸಂಪಾದಕರಾಗಿದ್ದಾರೆ. ಪ್ರಕೃತ ನಿಮ್ಮ ಕೈಯಲ್ಲಿರುವ 'ಯಕ್ಷಪಥ'ದ ಸಂಪಾದಕರೂ ಆಗಿದ್ದಾರೆ. ಇವರಿಗೆ ಅರ್ಯಭಟ ಪ್ರಶಸ್ತಿ, ನರಸಿಂಹ ಪ್ರಶಸ್ತಿ, ಕೆರೆಮನೆ ಶಂಭು ಹೆಗಡೆ ಸಂಮಾನ ಮುಂತಾದ ಗೌರವಗಳು ಲಭಿಸಿವೆ. ಕರ್ಣಾಟಕ ಬ್ಯಾಂಕ್‌ನ ವಲಯ ಮುಖ್ಯಸ್ಥರು ಹಾಗೂ ಸಹಾಯಕ ಮಹಾ ಪ್ರಬಂಧಕರಾಗಿ 2012ರಲ್ಲಿ ನಿವೃತ್ತಿ ಹೊಂದಿದ ಇವರು ಈಗ ಖ್ಯಾತ ಪಿ.ಇ.ಎಸ್. ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಯಕ್ಷವಾಹಿನಿ ಸಂಸ್ಥೆಯ ಅಧ್ಯಕ್ಷರಾಗಿ, ನರಹಳ್ಳಿ ಪ್ರತಿಷ್ಠಾನದ ಕಾರ್ಯದರ್ಶಿಯಾಗಿ ಪು.ತಿ.ನ ಟ್ರಸ್ಟ್‌ನ ಸದಸ್ಯರಾಗಿ ಸಾಹಿತ್ಯದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಪತ್ನಿ ಪ್ರೇಮಾ ಮಗಳು ಸೀಮಂತಿನಿ, ಅಳಿಯ ವೆಂಕಟೇಶ್ ಹಾಗೂ ಮೊಮ್ಮಗ ಅರ್ಣವನೊಂದಿಗೆ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

ಬೆಂಗಳೂರಿನ ಯಕ್ಷಗಾನ ಶಾಲೆಗಳು ಮತ್ತು ಸಂಘ ಸಂಸ್ಥೆಗಳು

– ರಾಜಗೋಪಾಲ ಕನ್ಯಾನ

'ವಿದ್ಯಾವಿಹೀನಂ ಪಶು ಸಮಾನಂ' ಎಂಬ ಮಾತಿದೆ. ವಿದ್ಯೆಯಲ್ಲಿ ಅರವತ್ತನಾಲ್ಕು ಕಲೆಗಳನ್ನು ಹೆಸರಿಸಿದ್ದಾರೆ. ಅವುಗಳಲ್ಲಿ ಸಾಹಿತ್ಯ ಹಾಗೂ ಸಂಗೀತ ಅತ್ಯಂತ ಶ್ರೇಷ್ಠವೆಂದು ತಿಳಿದವರು ಹೇಳುತ್ತಾರೆ. ಸಾಹಿತ್ಯ, ಸಂಗೀತ, ನಾಟ್ಯ, ವೇಷಭೂಷಣ ಹಾಗೂ ಅಭಿನಯಗಳೆಂಬ ಪಂಚ ಅಂಗಗಳಿರುವ 'ಯಕ್ಷಗಾನ'ವನ್ನು ಕಲೆಗಳಲ್ಲಿ 'ರಾಜಕಲೆ'ಯೆಂದು ಗುರುತಿಸುತ್ತಾರೆ. ಕರ್ನಾಟಕದಲ್ಲೇ ಆಗಲಿ, ಪರರಾಜ್ಯಗಳಲ್ಲೇ ಆಗಲಿ ಅಥವಾ ವಿಶ್ವದ ಯಾವುದೇ ಕಲೆಗಳನ್ನು ಅವಲೋಕಿಸಿದರೂ ನಮ್ಮ 'ಯಕ್ಷಗಾನ'ದಂತಹ 'ಪರಿಪೂರ್ಣ' ಕಲೆ ಪ್ರಪಂಚದಲ್ಲಿಯೇ ಬೇರ್ಯಾವುದೂ ಇಲ್ಲವೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಯಕ್ಷಗಾನದಲ್ಲಿ ಹಲವು ಪ್ರಭೇದಗಳಿದ್ದರೂ ಮುಖ್ಯವಾಗಿ ಕರಾವಳಿ ಕರ್ನಾಟಕದ ಪಡುವಲಪಾಯ ಯಕ್ಷಗಾನದ ಬಗ್ಗೆ ಇಲ್ಲಿ ಹೇಳ ಹೊರಟಿದ್ದೇನೆ. ಇದರಲ್ಲಿ ಈಗ ಕೇರಳಕ್ಕೆ ಸೇರಿರುವ ಕಾಸರಗೋಡಿನಿಂದ ಹಿಡಿದು ಉಡುಪಿಯವರೆಗೆ ಜಾಸ್ತಿ ಪ್ರಚಲಿತದಲ್ಲಿರುವ ತೆಂಕುತಿಟ್ಟು (ದಕ್ಷಿಣಾದಿ) ಹಾಗೂ ಉಡುಪಿಯಿಂದ ಕಾರವಾರದವರೆಗಿರುವ ಬಡಗುತಿಟ್ಟು (ಉತ್ತರಾದಿ) ಎಂಬ ಎರಡು ಪ್ರಮುಖ ತಿಟ್ಟುಗಳ ಸಂಘ ಸಂಸ್ಥೆಗಳು ಕರ್ನಾಟಕದ ರಾಜಧಾನಿಯಾದ ಬೆಂಗಳೂರು ಮಹಾನಗರದಲ್ಲಿ ನೆಲೆಯೂರಿ, ಆ ಮೂಲಕ ಯಕ್ಷಗಾನ ಕಲೆಗಾಗಿ ಸೇವೆ ಸಲ್ಲಿಸಿದ ಹಾಗೂ ಸಲ್ಲಿಸುತ್ತಿರುವ ವಿವರಗಳನ್ನು ಆದಷ್ಟು ಸಂಕ್ಷಿಪ್ತವಾಗಿ ಇಲ್ಲಿ ದಾಖಲಿಸಲಾಗಿದೆ.

ಯಕ್ಷದೇಗುಲ (ರಿ) ಬೆಂಗಳೂರು:

1980ರಲ್ಲಿ ಪ್ರಾರಂಭವಾದ ಈ ಸಂಸ್ಥೆ ಶ್ರೀಯುತ ಕೆ. ಮೋಹನ್ ಹೊಳ್ಳರಿಂದ ಈಗಲೂ ಸಮರ್ಥವಾಗಿ ಮುನ್ನಡೆಯುತ್ತಿದೆ. ಕಳೆದ 25 ವರ್ಷಗಳಿಂದ ಯಕ್ಷಗಾನ ನಾಟ್ಯ ತರಬೇತಿಯನ್ನು ಪ್ರಾರಂಭಿಸಿದರು. ಇಲ್ಲಿ ವರ್ಷಕ್ಕೆ 15ರಿಂದ 20 ವಿದ್ಯಾರ್ಥಿಗಳು ಕಲಿಯುತ್ತಿರುತ್ತಾರೆ. ಇದರಲ್ಲಿ 10 ಮಂದಿ ಸ್ತ್ರೀಯರಿದ್ದು ಮೋಹನ್ ಹೊಳ್ಳರ ಮಗಳು ಕು. ಪ್ರಿಯಾಂಕಾ ಕೆ. ಹೊಳ್ಳರೇ ಗುರುಗಳು. ಇದಲ್ಲದೆ, ಶಾಲಾ ಕಾಲೇಜು, ಸಂಘ ಸಂಸ್ಥೆಗಳಲ್ಲಿ ಕಿರು ತರಬೇತಿಗಳನ್ನು ನಡೆಸುತ್ತಾರೆ. ತ್ಯಾಗರಾಜ ನಗರದಲ್ಲಿರುವ ತಮ್ಮ ಮನೆಯನ್ನೇ ಕಲಾ ಶಾಲೆಯನ್ನಾಗಿ ಮಾಡಿಕೊಂಡಿರುವ, ಇವರಿಂದ ಈವರೆಗೆ ಸಾವಿರಾರು ವಿದ್ಯಾರ್ಥಿಗಳು ಯಕ್ಷಗಾನವನ್ನು ಕಲಿತು ಕಲೆಯನ್ನು ಬೆಳಗುತ್ತಿದ್ದಾರೆ. ಸರಕಾರದ ಧನ ಸಹಾಯವನ್ನು ಪಡೆದು ವ್ಯವಸ್ಥಿತವಾಗಿ ಕ್ಲಾಸುಗಳನ್ನು ನಡೆಸುತ್ತಿರುವ ಶ್ರೀಯುತರು ಮಕ್ಕಳಿಗೆ ಉಚಿತವಾಗಿಯೇ ಕಲಿಸುವುದು ಯಕ್ಷದೇಗುಲದ ವೈಶಿಷ್ಟ್ಯ. 'ಯಕ್ಷಾಂಗಣ ಟ್ರಸ್ಟ್ (ರಿ)' ಮೂಲಕವೂ ಯಕ್ಷಕಲಾ ವ್ಯವಸಾಯವು ಸಾಗುತ್ತಿದೆ. ಒಟ್ಟಾರೆಂಯಾಗಿ 'ಯಕ್ಷದೇಗುಲವು' ನಗರದಲ್ಲಿ ಬಡಗುತಿಟ್ಟಿನ 'ಮಾತೃಸಂಸ್ಥೆ'ಯೋಪಾದಿಯಲ್ಲಿದೆ ಎಂದರೆ ತಪ್ಪೇನೂ ಇಲ್ಲ.

ಕರ್ನಾಟಕ ಕಲಾದರ್ಶಿನಿ (ರಿ):

ಸ್ಥಾಪನೆ: 1996ರಲ್ಲಿಯೇ ಆದರೂ ತರಬೇತಿ ಪ್ರಾರಂಭವಾದುದು 1992ರಿಂದ ಕೆಂಗೇರಿ (25) ಜನ ವಿದ್ಯಾರ್ಥಿಗಳು, ವಿಜಯನಗರ (15 ಜನ), ಬಸವೇಶ್ವರನಗರ (10 ಜನ ಸ್ತ್ರೀಯರು), ಗಿರಿನಗರ (30 ಜನ), ಜೆ.ಪಿ. ನಗರ (25 ಜನ)ಗಳಲ್ಲಿ ಯಕ್ಷಗಾನ ನಾಟ್ಯ ತರಗತಿಗಳು ನಡೆಯುತ್ತಿವೆ. ಜೆ.ಪಿ. ನಗರ ಮತ್ತು ವಿಜಯನಗರಗಳಲ್ಲಿ ಮಹಿಳೆಯರೂ ಇದ್ದಾರೆ. ವಾರಕ್ಕೆ 2 ಕ್ಲಾಸ್ 2 ರೀತಿಯ ತರಬೇತಿಗಳಿವೆ. 10 ತಿಂಗಳ ಕೋರ್ಸ್, ಕಡೆಗೆ ವಿದ್ಯಾರ್ಥಿಗಳಿಂದ ಒಂದು ಪ್ರದರ್ಶನವಿರುತ್ತದೆ. ಎರಡನೆಯದರಲ್ಲಿ 3 ವರ್ಷಗಳ ಅವಧಿ. ಕೆಲವೊಮ್ಮೆ 5 ವರ್ಷಗಳ ತನಕವೂ ನಡೆಯುತ್ತದೆ. ಇದಕ್ಕಾಗಿಯೇ ಪಠ್ಯವನ್ನು ತಯಾರು ಮಾಡಿದ್ದಾರೆ. ಯಕ್ಷಗಾನವನ್ನು ವೃತ್ತಿಯಾಗಿ ತೆಗೆದುಕೊಳ್ಳುವವರಿಗೆ ರೂ. 3000/–ದಂತೆ ತಿಂಗಳಿಗೆ ಸ್ಕಾಲರ್‌ಶಿಪ್ಪನ್ನು ಕೊಡುತ್ತಾರೆ. ಅವರ ಮೇಳದ ಕಲಾವಿದರಿಗೆ ವೃತ್ತಿಯಾಗಿ ರೂ. 12000/–ದಂತೆ ವೇತನ ನೀಡುತ್ತಾರೆ. ವಿಶೇಷವಾಗಿ ಜೆ.ಪಿ. ನಗರ ಹಾಗೂ ಗಿರಿನಗರದಲ್ಲಿ ತೆಂಕು ಹಾಗೂ ಬಡಗಿನ ಚೆಂಡೆ ವಾದನದ ತರಗತಿಗಳಿವೆ. ಇವಲ್ಲದೆ ವಿವಿಧ ಶಾಲೆಗಳಲ್ಲಿ ತರಬೇತಿ ನಡೆಯುತ್ತಿದ್ದು 30–40

ವಿದ್ಯಾರ್ಥಿಗಳಿದ್ದಾರೆ. ವಿವಿಧೆಡೆ ಸ್ಮಾರ್ಟ್ ಕೋರ್ಸ್, ಪ್ರಾತ್ಯಕ್ಷಿಕತೆ, ಕಮ್ಮಟಗಳನ್ನು ಏರ್ಪಡಿಸುತ್ತಾರೆ. ಡಾ. ಶಿವರಾಮ ಕಾರಂತರ 'ಯಕ್ಷಗಾನ ಬ್ಯಾಲೆ'ಯನ್ನು ಇವರ ತಂಡ ಸಮರ್ಥವಾಗಿ ರಂಗಕ್ಕೆ ತಂದಿದೆ.

ಬೆಂಗಳೂರಲ್ಲಿ ಪ್ರಥಮವಾಗಿ 'ಮಕ್ಕಳ ತರಬೇತಿ'ಯನ್ನು ಪ್ರಾರಂಭಿಸಿದ್ದು ಕರ್ನಾಟಕ ಕಲಾದರ್ಶಿನಿಯಾಗಿದೆ. ಇಲ್ಲಿ ಪುರುಷರ ತಂಡ, ಮಕ್ಕಳ ತಂಡ ಹಾಗೂ ಶ್ರೀಮತಿ ಗೌರಿ ಸಾಸ್ತಾನರ ಸಂಚಾಲಕತ್ವದಲ್ಲಿ ಮಹಿಳಾ ತಂಡವು ಕಾರ್ಯ ನಿರ್ವಹಿಸುತ್ತಿವೆ. ಸರಕಾರದಿಂದ ಧನ ಸಹಾಯವನ್ನೂ ಪಡೆಯುತ್ತಿದ್ದಾರೆ. ಶ್ರೀ ಸಾಸ್ತಾನರ ಸ್ವಗೃಹ ಜೆ.ಪಿ. ನಗರವೇ ಈ ಸಂಸ್ಥೆಯ ಪ್ರಧಾನ ಕಛೇರಿಯಾಗಿದೆ.

ಯಕ್ಷ ಕಲಾ ಅಕಾಡೆಮಿ (ರಿ):

ಶ್ರೀ ಕೃಷ್ಣಮೂರ್ತಿ ತುಂಗರ ಸಂಚಾಲಕತ್ವದಲ್ಲಿ 2003ರಲ್ಲಿ ಪ್ರಾರಂಭವಾದ ಈ ಸಂಸ್ಥೆಯಿರುವುದು ನಾಗರಬಾವಿಯಲ್ಲಿ. ಚೆನ್ನಮ್ಮನಕೆರೆ ಅಚ್ಚುಕಟ್ಟಿನ 'ಪರಂಪರಾ'ದಲ್ಲಿ (25 ಪುರುಷರು ಹಾಗೂ 5 ಮಂದಿ ಸ್ತ್ರೀಯರು), ನಾಗರಬಾವಿ (22)ಯಲ್ಲಿ ನಿಶ್ಚಿತ ತರಗತಿಗಳು ನಡೆಯುತ್ತಿವೆ. ಬಿಡದಿಯ ಶಾಲೆಯೊಂದರಲ್ಲಿ 10 ಹುಡುಗರು ಹಾಗೂ 3 ಮಂದಿ ಹುಡುಗಿಯರಿದ್ದು, ನಿಶ್ಚಿತ ತರಗತಿ ನಡೆಯುತ್ತಿದೆ. ವಾರಕ್ಕೆ ಮೂರು ತರಗತಿಗಳು. ಇವುಗಳಲ್ಲದೆ ನಗರದ ವಿವಿಧೆಡೆಗಳಲ್ಲು ತರಬೇತಿ ನಡೆಯುತ್ತಿವೆ. ಇವರು ನಾಟ್ಯಗಾರಿಕೆಯನ್ನು ಮಾತ್ರ ಹೇಳಿ ಕೊಡುತ್ತಿದ್ದು, ಹೆಜ್ಜೆಗಾರಿಕೆಯನ್ನು ಅಚ್ಚುಕಟ್ಟಾಗಿ ಕಲಿಸುತ್ತಾರೆ. ಕನಿಷ್ಠ ಒಂದು ವರ್ಷ ತರಬೇತಿ ಪಡೆದರೆ ರಂಗಸ್ಥಳಕ್ಕೆ ಹೋಗಬಹುದು. ಯಕ್ಷಗಾನದ ಸಂಪೂರ್ಣ ವಿಷಯಗಳು ಕರಗತವಾಗಬೇಕಾದರೆ ನಾಲ್ಕು ವರ್ಷವಾದರೂ ಬೇಕಾಗುತ್ತದೆ ಎನ್ನುತ್ತಾರೆ ಶ್ರೀಯುತ ತುಂಗರು.

ಕಲಾ ಕದಂಬ ಸೆಂಟರ್ (ರಿ):

ತ್ಯಾಗರಾಜ ನಗರದಲ್ಲಿರುವ ಈ ಸಂಸ್ಥೆಯು (2009) ಚಿಕ್ಕಲ್ಲಸಂದ್ರದ ಕೆ.ಎಸ್.ಆರ್.ಟಿ.ಸಿ. ಲೇಔಟ್‌ನ ಶ್ರೀ ಸಿದ್ದಿಗಣಪತಿ ದೇವಳದಲ್ಲಿ ಪ್ರತಿ ಭಾನುವಾರ ಬೆಳಗ್ಗೆ ಗಂಟೆ 9.30ರಿಂದ 12.30ರವರೆಗೆ, ಯಕ್ಷಗಾನ, ನಾಟಕ, ಜಾನಪದ ನೃತ್ಯ, ಹಾಡು......ಮುಂತಾದವುಗಳನ್ನು ಕಲಿಸುತ್ತಿದೆ. ಸುಮಾರು 35 ವಿದ್ಯಾರ್ಥಿ ಹಾಗೂ 15 ಜನ ವಿದ್ಯಾರ್ಥಿನಿಯರಿದ್ದಾರೆ. ಬೇಸಿಗೆ ರಜೆಯಲ್ಲಿ 'ಕಲಾ ವಿಕಸನ ಶಿಬಿರ'ವನ್ನು ನಡೆಸಲಾಗುತ್ತಿದೆ. ಸುಮಾರು ಮೂರು ತಿಂಗಳಲ್ಲಿ ಎಲ್ಲಾ ತಾಳಗಳನ್ನು ಕಲಿಯಬಹುದು, ಚಿಕ್ಕ ಪ್ರಸಂಗಕ್ಕಾಗುವಷ್ಟು ಹತ್ತರಿಂದ ಹದಿನೈದು ದಿನಗಳ ತರಬೇತಿಯಿಂದ 'ಆಟ'

ಮಾಡಬಹುದು. ಜೈನ್ ಹೆರಿಟೇಜ್ ಶಾಲೆ ಹೆಬ್ಬಾಳದಲ್ಲಿ 8 ವರ್ಷದಿಂದ ತರಗತಿಯನ್ನು ನಡೆಸುತ್ತಿದ್ದು, 25 ಹುಡುಗರು ಹಾಗೂ 25 ಹುಡುಗಿಯರಿದ್ದಾರೆ. ಈ ಶಾಲೆಯಲ್ಲಿ 'ಯಕ್ಷಗಾನ'ವನ್ನು ಒಂದು 'ಸಬ್ಜೆಕ್ಟ್' ಮಾಡಿದ್ದಾರೆ. ವಾರಕ್ಕೆ ಎರಡು ದಿನ ತರಗತಿಗಳು ಇವೆ. ಇದಲ್ಲದೆ, ಬಂಗಾರುಪೇಟೆ, ಕೆ.ಜಿ.ಎಫ್., ಗಿರಿನಗರ (ಶಾಂತಿನಿಕೇತನ), ಅರ್‌ಚ್ಚೀವ್ ಸ್ಕೂಲ್ – ಬಸವನಗುಡಿ, ಈಸ್ಟ್ ವೆಸ್ಟ್ ಶಾಲೆ – ಬಸವನಗುಡಿ, ಗ್ರೀನ್‌ವ್ಯಾಲಿ ಸ್ಕೂಲ್ – ಕನಕಪುರ ರಸ್ತೆ, ಡೆಲ್ಲಿ ಪಬ್ಲಿಕ್ ಶಾಲೆ – ಸರ್ಜಾಪುರ ರಸ್ತೆ ಮತ್ತು ಕನಕಪುರ ರಸ್ತೆ, ಇಲ್ಲೆಲ್ಲಾ ವಾರ್ಷಿಕೋತ್ಸವಗಳಿಗಾಗಿ ತರಬೇತಿಯನ್ನು ಕೊಟ್ಟು ಕಲಾವಿದರನ್ನಾಗಿ ರೂಪಿಸುತ್ತಾರೆ. ಕಲಾಕದಂಬ ಸೆಂಟರಿನ ಸಂಚಾಲಕ ಶ್ರೀರಾಧಾಕೃಷ್ಣ ಉರಾಳ.

ಯಕ್ಷ ಸಂಭ್ರಮ, ಹುಳಿಮಾವು. ಸ್ಥಾಪನೆ – 2009

ಬನ್ನೇರು ಘಟ್ಟ ರಸ್ತೆಯ ಹುಳಿಮಾವು ಗೇಟ್ ಹತ್ತಿರ ಇರುವ ಈ ಸಂಸ್ಥೆಯ ಸಂಚಾಲಕ ಶ್ರೀ ಶಂಕರ ಬಾಳೆಕುದ್ರು. ಉಡುಪಿ ಯಕ್ಷಗಾನ ಕೇಂದ್ರದಲ್ಲಿ ಕಲಿತು ಹೊರಬಂದ ಶಂಕರ ಬಾಳೆಕುದ್ರು ಕರ್ನಾಟಕ ಕಲಾದರ್ಶಿನಿಯಲ್ಲಿ ಸೇವೆ ಸಲ್ಲಿಸಿದರು. ವಿದ್ವಾನ್ ಗಣಪತಿ ಭಟ್ಟರಿಂದ ಭಾಗವತಿಕೆಯಲ್ಲಿ, ಆರ್ಗೋಡು ಮೋಹನದಾಸ್ ಶೆಣೈಯವರಿಂದ ಪ್ರಸಂಗ ಸಾಹಿತ್ಯ, ಕಾರ್ಕಳದ ಜಯಕರ ಆಚಾರ್ಯರಿಂದ ತೆಂಕುತಿಟ್ಟಿನ ಹೆಜ್ಜೆಗಾರಿಕೆಯನ್ನು ಹೆಚ್ಚುವರಿಯಾಗಿ ಅಭ್ಯಸಿಸಿದ ಶಂಕರರು, ಈಗ ಭಾಗವತಿಕೆ, ಚೆಂಡೆ, ನಾಟ್ಯಗಾರಿಕೆ, ಪ್ರಸಂಗ ಹಾಗೂ ವೇಷಗಾರಿಕೆಗಳಲ್ಲಿ ತರಬೇತಿಯನ್ನು ಕೊಡುತ್ತಾರೆ. ಸರ್ಕಾರದ ನೆರವನ್ನು ಅಪೇಕ್ಷಿಸದೇ, ಯಕ್ಷಗಾನವನ್ನು ಕನ್ನಡೇತರರಿಗೂ ಪ್ರಸರಿಸಬೇಕೆಂಬುದು ಇವರ ಅಪೇಕ್ಷೆ. ಕುಂಟಿಕಾನ ಮಠ ಮೀಡಿಯಾ ಲಿಮಿಟೆಡ್ ಆಯೋಜಿಸಿರುವ 'ಲಂಡನ್ ಯಕ್ಷಗಾನ ಅಂತಾರಾಷ್ಟ್ರೀಯ ಸ್ಪರ್ಧೆ 2014'ಕ್ಕೆ ತಮ್ಮ ಮಹಿಳಾ ತಂಡವನ್ನು ಸಜ್ಜುಗೊಳಿಸಿದ್ದರು. ಅವರ ಅನುಭವದಂತೆ ಒಂದು ಪ್ರಸಂಗ ಪ್ರದರ್ಶಿಸಲು 15 ನಾಟ್ಯ ಕ್ಲಾಸುಗಳು, 10 ಪ್ರಸಂಗ ಕ್ಲಾಸುಗಳು (ಒಟ್ಟು 25 ತರಗತಿಗಳು) ಬೇಕಾಗುತ್ತವೆ ಎನ್ನುತ್ತಾರೆ. ಮೇಳಕ್ಕೆ ವೃತ್ತಿಪರ ಕಲಾವಿದನಾಗಿ ಸೇರಲು ಒಂದು ವರ್ಷ ನಾಟ್ಯ ಒಂದು ವರ್ಷ ಮೇಳದ ತಿರುಗಾಟ ಮಾಡಿದರೆ ಒಳ್ಳೆಯ ಕಲಾವಿದನಾಗಬಹುದು ಎನ್ನುತ್ತಾರೆ.

ಪ್ರಸ್ತುತ, ಇವರ ಕೈಯಲ್ಲಿ ಸುಮಾರು 250 ಪುರುಷ ಹಾಗೂ ಮಹಿಳಾ ವಿದ್ಯಾರ್ಥಿಗಳು ಯಕ್ಷಗಾನವನ್ನು ಕಲಿಯುತ್ತಿದ್ದಾರೆ ಎಂದರೆ ಅಚ್ಚರಿಯೆನಿಸುವುದಿಲ್ಲವೇ?

ಕರ್ನಾಟಕದ ರಾಜ್ಯದವರಷ್ಟೇ ಅಲ್ಲ, ಅಕ್ಕಪಕ್ಕದ ತಮಿಳುನಾಡು, ಆಂಧ್ರ, ಕೇರಳಗಳಲ್ಲದೆ, ಉತ್ತರ ಭಾರತದ ಹಲವರು ಕಲಿಯುತ್ತಿದ್ದಾರೆ ಎನ್ನುವುದು ವಿಶೇಷ. ಆಯುರಾಶ್ರಯ ಸುಂಕದಕಟ್ಟೆಯ ಶ್ರೀ ಶ್ರೀ ಸಂತೋಷ ಗುರೂಜಿಯವರು 'ಚೆಂಡೆ ಕಲಿಸುತ್ತಿದ್ದಾರೆ. ಇವರ ಆಶೀರ್ವಾದದಿಂದ ಜಾಲಹಳ್ಳಿ ಕ್ರಾಸಿನ ಶ್ರೀಮತಿ ಸರೋಜ ಅವರ ಸಂಚಾಲಕತ್ವದಲ್ಲಿ 'ಯಕ್ಷ ಸಂಜೀವಿನಿ'ಯೆಂಬ ಮಹಿಳಾ ತಂಡವೊಂದು ಲೋಕಾರ್ಪಣೆಗೊಂಡಿದೆ. ಅಲ್ಲದೆ, ಯಲಹಂಕ, ಸುಲ್ತಾನ್‌ಪಾಳ್ಯ, ಇಂದಿರಾನಗರ ಹಾಗೂ ಹುಳಿಮಾವುಗಳಲ್ಲಿ 'ಮಹಿಳಾ ತಂಡ'ಗಳೇ ಇವೆ. ಡೈರಿಸರ್ಕಲ್‌ನ ಕ್ರೈಸ್ಟ್ ಯೂನಿವರ್ಸಿಟಿಯಲ್ಲಿ 8 ವರ್ಷಗಳಿಂದ ಸತತವಾಗಿ ಕಲಿಕೆ ಸಾಗುತ್ತಾ ಇದೆ. ವಿವಿಧ ಶಾಲಾ ಕಾಲೇಜುಗಳಲ್ಲಿ ಪ್ರತಿ ತರಗತಿಯಲ್ಲೂ 15–20 ವಿದ್ಯಾರ್ಥಿನಿಯರಿದ್ದಾರೆ. ಶೂರ್ಪನಖಾ ವಿವಾಹ, ಮಹಾಚೇತನ ಸುದರ್ಶನ ಗರ್ವಭಂಗ, ಶ್ರೀ ದೇವಿಮಹಾತ್ಮೆ, ಇಂದ್ರಜಿತು ಕಾಳಗ ಮುಂತಾದ ಪ್ರಸಂಗಗಳನ್ನು ಪ್ರದರ್ಶಿಸುತ್ತಾರೆ.' ಕೆಂಗೇರಿ (8 ಜನ), ಗೊಟ್ಟಿಗೆರೆಯ ನೋಭೋ ನಗರ (15), ಯಲಹಂಕದ ವಿಶ್ವಕರ್ಮ ವೇದಿಕೆ ಹಾಗೂ ಲಯನ್ಸ್ ಕ್ಲಬ್ (30) ಎಲೆಕ್ಟ್ರಾನಿಕ್ ಸಿಟಿಯ ಅನಂತ ನಗರ (35), ಆರ್.ಟಿ. ನಗರ (28), ಸುಲ್ತಾನ್‌ಪಾಳ್ಯ (8), ಇಂದಿರಾನಗರದ 'ಯಕ್ಷ ಸಂಭ್ರಮ ಮಕ್ಕಳ ಮೇಳ (13), ಬಾಣಸವಾಡಿ (4), ಶ್ರೀನಗರದ ವಿ.ಪ್ರ. ವೃಂದ ನೆಲಮಂಗಲ (6), ಹುಳಿಮಾವು (40), ಆಯುರಾಶ್ರಮ ಸುಂಕದಕಟ್ಟೆ (10) ಹೀಗೆ ನಗರದ ವಿವಿಧೆಡೆ ಯಕ್ಷಗಾನದ ತರಬೇತಿ ಕ್ಲಾಸುಗಳು ನಡೆಯುತ್ತಿವೆ. ವಿದ್ಯಾಸಂಸ್ಥೆಗಳಲ್ಲಿ ಮುಖ್ಯವಾಗಿ, ಕಾರ್ಮೆಲ್, ಸೆಂಟ್ ಆನ್ಸ್, ಲೋಯಲ್ಲಾ, ವಿ.ಐ.ಪಿ. ಸ್ಕೂಲ್, ಆಡುಗೋಡಿ ಕ್ರೈಸ್ಟ್ ಮುಂತಾದವುಗಳು ಮುಖ್ಯವಾದುವು. ವೇಷಗಾರಿಕೆಯ ವಿವಿಧ ಕಮ್ಮಟಗಳನ್ನು ನಡೆಸಿದ್ದಾರೆ. ಹಲವೆಡೆಗಳಲ್ಲಿ 'ಯಕ್ಷ ಸಂಭ್ರಮ'ದ ಶಾಖೆಗಳ ರೀತಿಯಲ್ಲಿ ಕಾರ್ಯವೆಸಗುತ್ತಿರುವುದು ಇವರ ಸಂಸ್ಥೆಯ ವಿಶೇಷ. ಯಕ್ಷ ಗುರುಗಳಾಗಿ ಒಳ್ಳೆಯ ಹೆಸರಿರುವ ಶ್ರೀ ಶಂಕರ ಬಾಳಕುದ್ರು ಅವರಿಂದ ಬೆಂಗಳೂರು ಮಹಾನಗರದಲ್ಲಿ ಒಂದು ರೀತಿಯ ಸದ್ದಿಲ್ಲದೆ ಕ್ರಾಂತಿ ಯಕ್ಷಗಾನ ಕ್ಷೇತ್ರದಲ್ಲಿ ನಡೆಯುತ್ತಿದೆ ಎಂದರೆ ತಪ್ಪಾಗಲಾರದು. ಇನ್ನೊಂದು ವಿಚಾರ, ವರ್ತಮಾನ ಕಾಲದಲ್ಲಿ ಕ್ಲಾಸೊಂದರಲ್ಲಿ ಮಕ್ಕಳೆಷ್ಟೇ ಇರಲಿ, ರೂ. 800/–ರಷ್ಟಾದರೂ ಸಿಗಬೇಕೆಂಬುದು ಶ್ರೀ ಬಾಳಕುದ್ರು ಅವರ ಅಂಬೋಣ.

ಶ್ರೀ ಮಹಾಗಣಪತಿ ಕೃಪಾಶ್ರಿತ ಯಕ್ಷ ಬಳಗ:

ಶ್ರೀ ಮಹಾಗಣಪತಿ ಕೃಪಾಶ್ರಿತ ಯಕ್ಷ ಬಳಗ ಹೊಂದಿರುವ ಶ್ರೀ ನಾಗೇಂದ್ರ ಪಂಚಲಿಂಗರು ಈ ಬಳಗವನ್ನು 2008ರಲ್ಲಿ ಸ್ಥಾಪಿಸಿದರೂ ತನ್ನ ಪತ್ನಿ ಶ್ರೀಮತಿ ಶಶಿಕಲಾ ಅವರು ತಮ್ಮ ಸಂಸ್ಥೆಯ ಮುಂದಿನ ಅಧ್ಯಕ್ಷೆ ಎನ್ನುತ್ತಾರೆ ಪಂಚಲಿಂಗರು. ತಮ್ಮದೇ ಆದ ಪ್ರಸಾದನ ಪರಿಕರಗಳನ್ನು ಹೊಂದಿರುವ ಈ ಕಲಾಸಂಸ್ಥೆಯು ಈವರೆಗೆ 1000ಕ್ಕಿಂತಲೂ ಹೆಚ್ಚಿನ ಪ್ರದರ್ಶನಗಳನ್ನು ಕೊಟ್ಟಿದೆ. ಯಕ್ಷಗಾನವಲ್ಲದೆ, ನೃತ್ಯ, ರೂಪಕಗಳ ತರಬೇತಿಯನ್ನು ಕೊಡಲಾಗುತ್ತದೆ. ವಿಜಯನಗರದ ಶ್ರೀನಿವಾಸನಗರದಲ್ಲಿರುವ ಈ ಸಂಸ್ಥೆಯಿಂದ ನಂದಿನೀ ಲೇಔಟ್, ಕಾರ್ಮೆಲ್, ಬಸವೇಶ್ವರ ನಗರ, ಮುಂತಾದ ಕಡೆಗಳಲ್ಲಿ ಯಕ್ಷಗಾನ ತರಬೇತಿಗಳು ನಡೆಯುತ್ತಿವೆ.

ಯಕ್ಷರಂಜಿನಿ (ರಿ):

ತ್ಯಾಗರಾಜನಗರದಲ್ಲಿದ್ದ ಈ ಸಂಸ್ಥೆಯು 1975ರಲ್ಲಿ ಶ್ರೀ ಗುಂಡ್ಮಿ ರಘುರಾಮರಿಂದ ಪ್ರಾರಂಭವಾಯಿತು. ಬಸವನಗುಡಿಯ ನೆಟ್ಟಕಲಪ್ಪ ಸರ್ಕಲ್‌ನ ವಾದಿರಾಜ ಕಲ್ಯಾಣ ಮಂಟಪದಲ್ಲಿ ನಿತ್ಯ ನಾಟ್ಯ ಹಾಗೂ ಹಿಮ್ಮೇಳಗಳ ತರಬೇತಿಯನ್ನು ನಡೆಸುತ್ತಿದ್ದುದಲ್ಲದೆ, ನಗರದ ಹಲವು ಶಾಲಾ ಕಾಲೇಜುಗಳಲ್ಲಿ ತರಗತಿಗಳನ್ನು ನಡೆಸುತ್ತಿದ್ದರು. ಆಕಾಶವಾಣಿ, ದೂರದರ್ಶನಗಳಲ್ಲೂ 'ಆಟ'ವನ್ನು ತಾಳಮದ್ದಲೆಯನ್ನೂ ಪ್ರದರ್ಶಿಸುತ್ತಿದ್ದರು. ತನ್ನದೇ ಆದ ವೇಷ ಭೂಷಣ, ಹಿಮ್ಮೇಳ ವಾದ್ಯ , ಪ್ರದರ್ಶನ ಪರಿಕರಗಳನ್ನು ಹೊಂದಿದ್ದರು. ಊರಿನಿಂದ ಒಳ್ಳೆಯ ಕಲಾವಿದರನ್ನು ಕರೆಸಿ ಪ್ರದರ್ಶನಗಳನ್ನು ಏರ್ಪಡಿಸುತ್ತಿದ್ದರು. ಶಾಸಕರಿಂದ ಯಕ್ಷಗಾನ, ಸಂಸ್ಕೃತ ಯಕ್ಷಗಾನಗಳನ್ನು ಏರ್ಪಡಿಸಿದ್ದಲ್ಲದೆ, ಚೆನ್ನೈ, ದೆಹಲಿ ಮುಂತಾದ ಮಹಾನಗರಗಳಲ್ಲೂ ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ. (ಸದ್ಯಕ್ಕೆ ಅವರು ನಗರದಲ್ಲಿ ವಾಸವಾಗಿಲ್ಲ).

ಗಾನ ಸೌರಭ ಯಕ್ಷಗಾನ ಶಾಲೆ (ರಿ) 2004:

ಶ್ರೀ ಧರ್ಮಸ್ಥಳ ಯಕ್ಷಗಾನ ಮಂಡಳಿಯಲ್ಲಿ ಸ್ತ್ರೀ ವೇಷಧಾರಿಯಾಗಿದ್ದ ಶ್ರೀ ಬೇಗಾರು ಶಿವಕುಮಾರರು ಬೆಂಗಳೂರಿಗೆ ಬಂದು, ಪ್ರಥಮದಲ್ಲಿ ತೆಂಕುತಿಟ್ಟಿನ ತರಗತಿಗಳನ್ನು ಪ್ರಾರಂಭಿಸಿದರು. ಬೆಂಗಳೂರು ನಗರದಲ್ಲಿ ತೆಂಕುತಿಟ್ಟಿನ ಹುಲುಸಾಗಿ ಬೆಳೆಸಬೇಕೆಂದು ಕನಸು ಕಂಡವರು. ಆದರೆ ಅವರ ಉತ್ಸಾಹಕ್ಕೆ ಸರಿಯಾಗಿ ತೆಂಕುತಿಟ್ಟಿನ ಕಲಾಪ್ರೇಮಿಗಳು ಸ್ಪಂದಿಸಲಿಲ್ಲವೆಂದು ಕಾಣುತ್ತದೆ. ಸದ್ಯಕ್ಕೆ ಬಡಗುತಿಟ್ಟಿನ ತರಬೇತಿಯನ್ನೇ ಹೆಚ್ಚಾಗಿ ನೆಚ್ಚಿಕೊಂಡಿದ್ದಾರೆ. ನಾಗರಬಾವಿಯನ್ನು ಮುಖ್ಯ

ನೆಲೆಯಾಗಿಸಿಕೊಂಡು, ನಗರದ ಸುಮಾರು 50 ಕಡೆಗಳಲ್ಲಿ ಯಕ್ಷಗಾನ ತರಬೇತಿಯನ್ನು ಕೊಡುತ್ತಿದ್ದಾರೆ. ಪುರುಷ ಹಾಗೂ ಸ್ತ್ರೀ ಶಿಕ್ಷಣಾರ್ಥಿಗಳಿದ್ದಾರೆ. ಎ.ಪಿ. ಪಾಠಕ್‌ರಿಂದ ಹಿಮ್ಮೇಳ ತರಬೇತಿಯನ್ನು ಕೊಡುತ್ತಿದ್ದಾರೆ.

ಕೆನರಾ ಬ್ಯಾಂಕ್ ಕಾಲೋನಿ – ನಾಗರಬಾವಿ, ಕಾಶೀಮಠ – ಮಲ್ಲೇಶ್ವರಂ, ಬಿಟಿಯಂನ ಗಣೇಶ ದೇವಳ, ಶ್ರೀನಗರದ 'ಹಂಸಿಕೆ' ರಾಘವೇಂದ್ರ ಬಡಾವಣೆ, ಬನಗಿರಿಯ ಗಣೇಶ ದೇವಸ್ಥಾನದಲ್ಲಿ ಹಿಮ್ಮೇಳ ತರಗತಿಗಳನ್ನು ನಡೆಸುತ್ತಿದ್ದಾರೆ. ಹಿಂದೂ ಸೇವಾ ಪ್ರತಿಷ್ಠಾನ ಲಗ್ಗೆರೆ (ನರೇಂದ್ರ ನೆಲೆ) ಹಾಗೂ ಜ್ಞಾನಭಾರತೀ ಉಲ್ಲಾಳುವಿನ 'ನಿವೇದಿತಾ ನೆಲೆ'ಗಳಲ್ಲಿ ಯಕ್ಷಗಾನ ಕಲಿಸುತ್ತಿರುವುದು ವಿಶೇಷವಾಗಿದೆ. ಜುಲೈ 20ರ ಆದಿತ್ಯವಾರ 2014ರಂದು ವಿಜಯನಗರದ ಬಂಟರ ಭವನದಲ್ಲಿ ನಡೆದ ತನ್ನ 'ದಶಮಾನೋತ್ಸವ'ದಲ್ಲಿ ವಿಶೇಷ ಸ್ಮರಣ ಸಂಚಿಕೆ ಬಿಡುಗಡೆಮಾಡಿರುವುದು ಯಕ್ಷಗಾನ ಕಲಾ ಇತಿಹಾಸದಲ್ಲಿ ಒಂದು ದಾಖಲಾರ್ಹ ವಿಚಾರವೇ ಆಗಿದೆ. ಬೆಂಗಳೂರಿನಲ್ಲಿ ಅತಿ ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿರುವ ಶಾಲೆ.

ಮೇಲೆ ತಿಳಿಸಿದ ಕಲಾ ಸಂಸ್ಥೆಗಳು ಪ್ರಧಾನವಾಗಿ ಬಡಗು ತಿಟ್ಟು ಯಕ್ಷಗಾನವನ್ನು ನೆಚ್ಚಿಕೊಂಡಿದ್ದು, ಈ ತೆಂಕುತಿಟ್ಟಿನ ಯಕ್ಷಗಾನ ತರಬೇತಿ ಶಾಲೆಗಳ ಬಗ್ಗೆ ಅವಲೋಕಿಸೋಣ. ಬಡಗು ತಿಟ್ಟಿನಲ್ಲಿ ಸಂಸ್ಥೆಯ ಹೆಸರುಗಳಲ್ಲಿ ತರಬೇತಿ ನಡೆಯುತ್ತಿದ್ದರೆ, ತೆಂಕಿನಲ್ಲಿ 'ವ್ಯಕ್ತಿ ಪ್ರಧಾನವಾಗಿ' ತರಗತಿಗಳು ನಡೆಯುತ್ತಿರುವುದನ್ನು ನಾವು ಕಾಣಬಹುದು. ಆದ್ದರಿಂದ ತರಬೇತಿ ಕೊಡುವ 'ಗುರು'ಗಳನ್ನೇ ಪ್ರಧಾನವಾಗಿಟ್ಟುಕೊಂಡು ಈ ಲೇಖನವನ್ನು ಸಿದ್ಧಪಡಿಸಲಾಗಿದೆ.

ಶ್ರೀ ಪಾವಂಜೆ ಶಿವರಾಂ ಭಟ್:

1984ರಲ್ಲಿ ರಾಜಾಜಿನಗರದಲ್ಲಿ 'ಕರಾವಳಿ ಯಕ್ಷಗಾನ ಕಲಾವಿದರು (ರಿ) ಬೆಂಗಳೂರು' ಎಂಬ ಯಕ್ಷಗಾನ ಮಂಡಳಿಯನ್ನು ಹುಟ್ಟು ಹಾಕಿದ ಶಿವರಾಂ ಭಟ್ಟರು, ಬೆಂಗಳೂರು ನಗರದಲ್ಲಿ ಏಕಮೇವಾದ್ವಿತೀಯವಾಗಿ ತೆಂಕುತಿಟ್ಟು ಯಕ್ಷಗಾನವನ್ನು ಮೆರೆಸಿದರು. ತೆಂಕುತಿಟ್ಟಿನ ಕಡು ಅಭಿಮಾನಿಯಾದ ಶಿವರಾಂ ಭಟ್ಟರಿಗೆ 'ಆಟ'ವನ್ನು ಕೊಡುವುದರಲ್ಲಿ ತೃಪ್ತಿ ಕಾಣದೆ, 2002ರಿಂದ ಮಕ್ಕಳಿಗೆ ನಾಟ್ಯ ತರಬೇತಿಯನ್ನು ಪ್ರಾರಂಭಿಸಿದರು. ಯಾವುದೇ ಹಣದ ಆಸೆಗೆ ಬಲಿ ಬೀಳದೆ 'ನನ್ನ ಮನ: ಸಂತೋಷ'ಕ್ಕಾಗಿ ನನಗೆ ತಿಳಿದದ್ದನ್ನು ಮಕ್ಕಳಿಗೆ ಕಲಿಸುತ್ತಿದ್ದೇನೆ ಎನ್ನುತ್ತಾರೆ ಭಟ್ಟರು. ಮೊದಲಿನಂತೆ ಈ ವೃತ್ತಿಪರ ಕಲಾವಿದರು ಮಳೆಗಾಲದಲ್ಲೂ ಕಲಿಸಲು

ಸಿಗುವುದಿಲ್ಲ. ದೇಶದಾದ್ಯಂತ ವಿವಿಧ ನಗರಗಳಲ್ಲಿ ಆಟಗಳನ್ನು ಏರ್ಪಡಿಸುತ್ತಾರೆ. ಆದ್ದರಿಂದ ಅವರಿಗೆ ಬಿಡುವು ಇರುವುದಿಲ್ಲ. ಆ ಕಾರಣಕ್ಕಾಗಿ ನಾನು ತರಬೇತಿಯನ್ನು ಪ್ರಾರಂಭಿಸಿದೆನೆನ್ನುತ್ತಾರೆ.

ಕತ್ತರಿಗುಪ್ಪೆಯ 'ಪೂರ್ಣ ಪ್ರಜ್ಞ ವಿದ್ಯಾಪೀಠ'ದಲ್ಲಿ 2002–2003ರಲ್ಲಿ ಸುಮಾರು 20 ಮಂದಿಗೆ ನಾಟ್ಯ ಕಲಿಸಿದ್ದು, 2013ರಲ್ಲಿ ಸುಮಾರು 13 ಜನರಿಗೆ ಚೆಂಡೆ ಕಲಿಸಿದ್ದಾರೆ. ಈಗ 'ಕರಾವಳಿ ಯಕ್ಷಗಾನ ಕಲಾವಿದರು – ಬಾಲ ವಿಭಾಗ'ವಿದ್ದು 6 ಮಂದಿ ವಿದ್ಯಾರ್ಥಿನಿಯರೂ ಸೇರಿ ಒಟ್ಟು 22 ಮಂದಿ ಇದ್ದಾರೆ. ದಕ್ಷಿಣ ಕನ್ನಡ ಮೂಲದ 'ಆನಂದ ಬಳಗ' ಮಹಿಳಾ ಕಲಾವಿದರಿಗೆ ತರಬೇತಿ ಕೊಟ್ಟು 'ಹೆಣ್ಮಕ್ಕಳ ಆಟ'ವನ್ನು ಆಡಿಸಿದ್ದಾರೆ. ತಾಳಮದ್ದಳೆಯ ತರಬೇತಿಯನ್ನು ಕೊಟ್ಟಿದ್ದಾರೆ. ರಾಜರಾಜೇಶ್ವರಿ ನಗರದ ಜ್ಞಾನಾಕ್ಷಿ ವಿದ್ಯಾನಿಕೇತನ – ಇಂಗ್ಲಿಷ್ ಮೀಡಿಯಂ ಸ್ಕೂಲ್‌ನಲ್ಲಿ ಕಳೆದ 10 ವರ್ಷಗಳಿಂದ, ವರ್ಷವೊಂದಕ್ಕೆ ಸರಾಸರಿ 20 ವಿದ್ಯಾರ್ಥಿನಿಯರಂತೆ, ತರಬೇತಿ ಕೊಡುತ್ತಿದ್ದಾರೆ. ಈ ಶಾಲೆಯ ವಿಶೇಷವೆಂದರೆ ಯಕ್ಷಗಾನವನ್ನು ಒಂದು 'ಸಬ್ಜೆಕ್ಟ್' ಆಗಿ ಇಟ್ಟಿರುವುದು. ಪ್ರತೀ ವರ್ಷ ಡಿಸೆಂಬರ್‌ನಲ್ಲಿ

'ಲಲಿತ ಕಲಾ ವೈಭವ'ವೆಂದು 3 ದಿನಗಳ ಕಾಲ ಆಚರಿಸಲಾಗುತ್ತಿದ್ದು, ಒಂದು ದಿನ ಯಕ್ಷಗಾನದ್ದೇ ಕಾರ್ಯಕ್ರಮ. ಈ ಶಾಲೆಯ ಸಂಚಾಲಕರಾದ ಶ್ರೀ ಶ್ರೀಗಳ ಯಕ್ಷಗಾನ ಪ್ರೇಮವನ್ನು ಅವರು ಮನದುಂಬಿ ಕೊಂಡಾಡುತ್ತಾರೆ. 2000–2007ರವರೆಗೆ ರಾಜಾಜಿನಗರದ ಇಸ್ಕಾನ್‌ನಲ್ಲಿ ಬೇಸಿಗೆ ಶಿಬಿರವನ್ನು ಸತತವಾಗಿ ನಡೆಸಿದ್ದಾರೆ. ವಿಜಯನಗರದ ಬಂಟರ ಸಂಘದಲ್ಲಿ 25 ವರ್ಷಗಳ ಮೊದಲು ಮಹಿಳಾ ತಂಡವನ್ನು ತಯಾರು ಮಾಡಿದ್ದರು. ಮುಖವರ್ಣಿಕೆಯ ತರಬೇತಿಯನ್ನು ಕೊಟ್ಟಿದ್ದಾರೆ. ತನ್ನ 'ಕರಾವಳಿ ಯಕ್ಷಗಾನ ಕಲಾವಿದರು' ವಾರ್ಷಿಕೋತ್ಸವವನ್ನು ವರ್ಷಕ್ಕೊಮ್ಮೆ ಅದ್ದೂರಿಯಾಗಿ ಆಚರಿಸಿಕೊಂಡು ಬರುತ್ತಿದ್ದು (ಕುಮಾರವ್ಯಾಸ ಮಂಟಪ – ರಾಜಾಜಿನಗರ) ಇಬ್ಬರು ಕಲಾವಿದರಿಗೆ ನಗದಿನೊಂದಿಗೆ ಸನ್ಮಾನಿಸುತ್ತಾರೆ. ಒಟ್ಟಾರೆಯಾಗಿ, ಈ ಸಂಸ್ಥೆಯು ನಗರದಲ್ಲಿ ಮಾತೃಸಂಸ್ಥೆಯಂತಿದ್ದು, ತೆಂಕಿನ ತರಬೇತಿಯೆಂದಾಗ, ಫಕ್ಕನೆ ನೆನಪಿಸಿಕೊಳ್ಳುವುದು ಶ್ರೀ ಪಾವಂಜೆ ಶಿವರಾಂ ಭಟ್ರನ್ನೇ.

ಶ್ರೀ ಕಾರ್ತಿಕ್ ರಾವ್, ಕೊರ್ಡೇಲು:

ಮಂಗಳೂರು ಮೂಲದ ಕಾರ್ತಿಕರು ಒಬ್ಬ ಒಳ್ಳೆಯ ಯಕ್ಷಗಾನ ಕಲಾವಿದ. ಕಲಾವಿದ ಎನ್ನುವುದಕ್ಕಿಂತಲೂ 'ಯಕ್ಷಗಾನ ಸವ್ಯಸಾಚಿ' ಎನ್ನಬಹುದು. ನಾಟ್ಯ, ಅಭಿಯಾನ, ವೇಷಗಾರಿಕೆ, ಚೆಂಡೆ, ಮದ್ದಳೆಗಳಲ್ಲದೆ ಒಬ್ಬ ರಂಗಭೂಮಿ – ಕಿರುತೆರೆ ಕಲಾವಿದನೂ ಹೌದು. 2009ರಿಂದ ಭಾವಶ್ರೀ ಪ್ರಾರಂಭವಾಯಿತು. 2010ರಿಂದ ಕೋಣನಕುಂಟೆಯ ಶ್ರೀರಾಮ ಕಲಾ ಸಂಘದ ಆಶ್ರಯದಲ್ಲಿ 10 ಮಕ್ಕಳಿಗೆ ಹೆಜ್ಜೆಗಾರಿಕೆಯ ತರಗತಿಯನ್ನು ನಡೆಸುತ್ತಿದ್ದರು. ಅಲ್ಲಿಯ ಅವರ ಶಿಷ್ಯ ವೃಂದವರೀಗ ಸೊಗಸಾದ ಮಕ್ಕಳ ಆಟವನ್ನು ಪ್ರದರ್ಶಿಸುತ್ತಿದ್ದಾರೆ. ಪಕ್ಕದ ದೊಡ್ಡಕಲ್ಲಸಂದ್ರದ 'ಕರಾವಳಿ ಯಕ್ಷಕೂಟ'ದ ಆಶ್ರಯದಲ್ಲಿ 20 ವಿದ್ಯಾರ್ಥಿಗಳು ತರಬೇತಿಯನ್ನು ಪಡೆದಿದ್ದಾರೆ. ವಿಜಯನಗರದಲ್ಲಿ 7 ಜನ, ಪೀಣ್ಯಾ, ಶ್ರೀನಗರ, ನಾಗದೇವನಹಳ್ಳಿಗಳಲ್ಲದೆ ದೂರದ ಮೈಸೂರಲ್ಲೂ 2 ವರ್ಷಗಳ ಕಾಲ ಐವರು ಮಹಿಳೆಯರೂ ಸೇರಿ 21 ಮಂದಿಗೆ ತರಬೇತಿಯನ್ನಿತ್ತಿದ್ದಾರೆ. ಪಕ್ಕದ ತುಮಕೂರಲ್ಲಿಯೂ 20 ಮಂದಿಗೆ ಚೆಂಡೆ ವಾದನದ ತರಬೇತಿಯನ್ನಿತ್ತಿದ್ದಾರೆ. ಸದ್ಯಕ್ಕೆ ಅವರು ನಗರದಲ್ಲಿ ವಾಸವಿಲ್ಲವೆಂದು ತಿಳಿದು ಬಂದಿದೆ. ಯಕ್ಷ ನಾಟ್ಯ ಕಲಿಸುವುದರಲ್ಲಿ 'ಎತ್ತಿದ ಕೈ'ಯೆಂದು ಪೋಷಕರನೇಕರು ಕಾರ್ತಿಕರನ್ನು ಹೊಗಳುತ್ತಾರೆ.

ಶ್ರೀ ಸುಬ್ರಹ್ಮಣ್ಯ ಶಾಸ್ತ್ರಿ, ಮಣಿಮುಂಡ (ಶ್ರೀ ಕಟೀಲು ಮೇಳ):

ಯಕ್ಷಕರ್ದಮ (ರಿ) ಸಂಸ್ಥೆಯ ಸದಸ್ಯರಾದ ಶ್ರೀರಘು, ಮಂಗಳೂರು ಇವರ ನೇತೃತ್ವದಲ್ಲಿ, ಶ್ರೀ ಕಟೀಲು ಮೇಳದ ಮದ್ದಳೆ ವಾದಕರಾದ ಶ್ರೀ ಸುಬ್ರಹ್ಮಣ್ಯ ಶಾಸ್ತ್ರಿ, ಮಣಿಮುಂಡ ಇವರ ಗುರುತ್ವದಲ್ಲಿ ನಗರದ 2 ಕಡೆಗಳಲ್ಲಿ ತರಬೇತಿ ನಡೆಯುತ್ತಿದೆ. ಬಿ.ಇ.ಎಲ್. ಲಲಿತಾ ಕಲಾ ಸಂಘದಲ್ಲಿ 10 ಜನ ಶಿಕ್ಷಣಾರ್ಥಿಗಳಿದ್ದಾರೆ. 15 ದಿನಗಳಿಗೊಮ್ಮೆ ಶಾಸ್ತ್ರಿಗಳು ಊರಿಂದ ಬಂದು ಶನಿವಾರ ಭಾನುವಾರಗಳಲ್ಲಿ ತರಗತಿಗಳು ನಡೆಯುತ್ತಿವೆ. ಬಸವನಗುಡಿಯ ಪುತ್ತಿಗೆ ಮಠದಲ್ಲಿ 5 ವಿದ್ಯಾರ್ಥಿನಿಯರೂ ಸೇರಿ ಒಟ್ಟು 40 ಮಂದಿ ಕಲಿಯುವವರಿದ್ದು, ಚೆಂಡೆ, ಮದ್ದಳೆ, ಭಾಗವತಿಕೆಗಳ ಕ್ಲಾಸು ನಡೆಯುತ್ತಿದೆ. ಇದನ್ನು ತೌಳವ ಮಾಧ್ವ ಒಕ್ಕೂಟದವರು ನಡೆಸುತ್ತಿದ್ದಾರೆ. ತೌಳವ ಮಾಧ್ವ ಕೂಟದವರಿಗೆ ಬೇಗಾರ್ ಶಿವಕುಮಾರ್ ಅವರು ಮೊದಲು ಗದಾಯುದ್ಧ ಪ್ರಸಂಗ ತೆಂಕು ತಿಟ್ಟಿನದ್ದು ತರಬೇತಿ ನೀಡಿದ್ದಾರೆ.

2010ರಲ್ಲಿ ಶ್ರೀ ಜನಾರ್ಧನ ಗುಡಿಗಾರ, ವೃತ್ತಿ ಮೇಳದ ಕಲಾವಿದರಿಂದ 2 ದಿನಗಳ ಕಾಲ 20 ಜನ ವಿದ್ಯಾರ್ಥಿಗಳಿಗೆ ಬಣ್ಣಗಾರಿಕೆಯ ಕಮ್ಮಟ ನಡೆಯಲಿದೆ. ಇದು ನಡೆದದ್ದು ಕೊಡಿಗೇಹಳ್ಳಿಯ ವಿರೂಪಾಕ್ಷ ಪುರದಲ್ಲಿ.

ವಿಷ್ಣು ಕಿದೂರು (ಪೀಣ್ಯ):

2011ರಲ್ಲಿ ಪೀಣ್ಯದಲ್ಲಿ ತೆಂಕುತಿಟ್ಟು ಯಕ್ಷಗಾನ ಪ್ರತಿಷ್ಠಾನ (ರಿ) ಆಶ್ರಯದಲ್ಲಿ 8 ಜನ ಮಕ್ಕಳಿಗೆ 8 ತಿಂಗಳ ಕಾಲ ಕ್ಲಾಸ್ ನಡೆಸಿದ್ದಾರೆ. ಸದ್ಯ ಕೆ.ಆರ್. ಪುರದ ದೂರವಾಣಿ ನಗರದ ಐ.ಟಿ.ಐ. ಕಾಲೋನಿಯ ಶ್ರೀ ರಾಘವೇಂದ್ರ ಮಠದಲ್ಲಿ ಶ್ರೀ ಗುರು ರಾಘವೇಂದ್ರ ಯಕ್ಷ ಕಲಾವೃಂದದ ಆಶ್ರಯದಲ್ಲಿ ಬಣ್ಣಗಾರಿಕೆಯ ತರಬೇತಿಯನ್ನು ನಡೆಸುತ್ತಿದ್ದಾರೆ. 15 ಜನ ವಿದ್ಯಾರ್ಥಿಗಳಿದ್ದಾರೆ.

ಶ್ರೀ ಲಕ್ಷ್ಮೀನಾರಾಯಣ ಕಲ್ಚಾರು:

ಬಾಲ ಯಕ್ಷ ವೃಂದ – ಸಂಸ್ಕಾರ ಭಾರತಿ, ವಿಜಯನಗರವೆಂಬ 25 ಬಾಲ ಕಲಾವಿದರಿಂದ ಈ ಸಂಸ್ಥೆ ಪ್ರಾರಂಭವಾಗಿದ್ದು 2004ರಲ್ಲಿ ವಿಜಯನಗರದ ಶ್ರೀ ಭಾರತೀ ವಿದ್ಯಾಲಯದಲ್ಲಿ ವಾರಕ್ಕೊಮ್ಮೆ ಉಚಿತ ಕ್ಲಾಸುಗಳು ನಡೆಯುತ್ತಿವೆ. ರವಿಶಂಕರ ಬಡಕ್ಕಿಲ (ಮದ್ದಳೆ ವಾದಕರು)ರೂ ಸಾಥ್ ನೀಡುತ್ತಿದ್ದಾರೆ. ಈ ತಂಡವು ಕಳೆದ 10 ವರ್ಷಗಳಲ್ಲಿ ಮಂಗಳೂರು, ಕಾಸರಗೋಡು, ಪುತ್ತೂರು, ಮೈಸೂರು, ತಿಪಟೂರು, ಕೋಲಾರ, ಚಿಂತಾಮಣಿ......ಇತ್ಯಾದಿ ಕಡೆಗಳಲ್ಲಿ 100ಕ್ಕಿಂತಲೂ ಹೆಚ್ಚಿನ ಪ್ರದರ್ಶನಗಳನ್ನಿತ್ತಿವೆ. ಹನ್ನೊಂದು ಪ್ರಸಂಗಗಳ ಪ್ರಯೋಗಗಳಾಗಿವೆ. ಗಣೇಶ ಲೀಲಾಮೃತ, ಶಿವಲೀಲಾಮೃತ ಮುಂತಾದ ನೂತನ ಪ್ರಸಂಗ ರಚಿಸಿ, ಪ್ರಯೋಗಿಸಿದ್ದಾರೆ. ಮುಳಿಯ ರಘುರಾಂ ಭಟ್ ಇದರ ಅಧ್ಯಕ್ಷರು.

ಶ್ರೀ ಕೃಷ್ಣಮೂರ್ತಿ ಪಾಂಗಣ್ಣಾಯ:

ಜೆ.ಪಿ. ನಗರದ ಜಂಬೂಸವಾರಿ ದಿಣ್ಣೆಯ ಬಲಮುರಿ ಗಣಪತಿ ದೇವಳದಲ್ಲಿ ವಾರಕ್ಕೊಂದು ದಿನದಂತೆ ಕಳೆದ 6 ತಿಂಗಳಿನಿಂದ ಚೆಂಡೆ ವಾದನದ ತರಗತಿ ನಡೆಯುತ್ತಿದೆ. 6 ಜನ ವಿದ್ಯಾರ್ಥಿಗಳಿದ್ದಾರೆ. ಪಾಂಗಣ್ಣಾಯರೆನ್ನುವಂತೆ ದಿನಾಲೂ ಒಂದು ಗಂಟೆಯಂತೆ ಸತತ ಅಭ್ಯಾಸ ಮಾಡಿದರೆ 1–5–2 ವರ್ಷಗಳಲ್ಲಿ ಚೆಂಡೆ ಕಲಿಯಬಹುದೆನ್ನುತ್ತಾರೆ. ಹಿಂದೆ, 'ಮರದ' ಮದ್ದಳೆ (ಮುಚ್ಚಿಗೆ ಮರದ್ದು)ಯಲ್ಲಿ ಅಭ್ಯಾಸ ಮಾಡುವ ಕ್ರಮವಿತ್ತು. ಚೆಂಡೆಯೂ ಅಷ್ಟೆ. ಕಲ್ಲಿನ ಮೇಲೆ ಒಂದು ಇಂಚು

ದಪ್ಪದ ಕೋಲಿನಲ್ಲಿ ಬಾರಿಸಿ, ಬಾರಿಸಿ, ಕಲಿಯುವ ಪದ್ಧತಿ ಇತ್ತು. ಇದರಿಂದ ಕೋಲು ಅಥವಾ ಕೈ ಜಾರದೆ ಉರುಳಿಕೆ ಚೆನ್ನಾಗಿ ಬರುತ್ತಿತ್ತು. ಬೆಳಗ್ಗೆ 8ರಿಂದ 11ರವರೆಗೆ ಹಾಗೂ ಅಪರಾಹ್ನ 4ರಿಂದ 8 ಗಂಟೆಯವರೆಗೆ ಸತತವಾಗಿ ಅಭ್ಯಾಸ ಮಾಡುತ್ತಿದ್ದರಂತೆ. ಪುತ್ತೂರು ಕಡೇಶಿವಾಲಯದ ರಾಮಕೃಷ್ಣಯ್ಯ ಪದಾರ್ಥಿಗಳು ಪಾಂಗಣ್ಣಾಯರ ಗುರುಗಳಾಗಿದ್ದರಂತೆ. ಕರ್ನಾಟಕ ಕಲಾದರ್ಶಿನಿಯ ಮೂಲಕ ಗಿರಿನಗರದ ರಾಮಮಂದಿರದಲ್ಲೂ 5 ತಿಂಗಳ ಕಾಲ 6 ಜನ ವಿದ್ಯಾರ್ಥಿಗಳಿಗೆ ಚೆಂಡೆ ಕ್ಲಾಸನ್ನು ನಡೆಸಿದ್ದಾರೆ.

ಗಣೇಶ ಭಟ್ ಬಾಯಾರು:

2004ರಲ್ಲಿ ಗಣೇಶರ ನಿರ್ದೇಶನ ಹಾಗೂ ತರಬೇತಿಯಲ್ಲಿ ಪ್ರಾರಂಭವಾದ ಮಹಿಳಾ ತಂಡವೇ ಶ್ರೀದೇವಿ ಯಕ್ಷಗಾನ ಕಲಾ ಸಂಘ. ಬಿಟಿಯಂ ಲೇಔಟ್‌ನ ಬಿಳೇಕಹಳ್ಳಿಯನ್ನು ಕೇಂದ್ರವಾಗಿಟ್ಟುಕೊಂಡು, ವರ್ಷಕ್ಕೆ ಸುಮಾರು 10 ಕಾರ್ಯಕ್ರಮಗಳನ್ನು ಕೊಡುತ್ತಿದ್ದಾರೆ. ಶ್ರೀಮತಿ ವೀಣಾ ರಾಮಚಂದ್ರರಾಯರು ಇದರ ಸಂಚಾಲಕಿ. 15 ಜನ ಸದಸ್ಯರಿದ್ದಾರೆ. ಬೆಂಗಳೂರು ಆಕಾಶವಾಣಿ, ದೂರದರ್ಶನಗಳಲ್ಲದೆ ಅಂತರಾಷ್ಟ್ರೀಯ ವಿಜ್ಞಾನ ಸಮ್ಮೇಳನಗಳಲ್ಲೂ ಯಕ್ಷಗಾನ ಪ್ರದರ್ಶನಗಳನ್ನಿತ್ತಿವೆ.

ಶ್ರೀಪಾದ ದಾಮ್ಲೆ:

ಚಿತ್ಪಾವನ ಮಹಿಳಾ ಯಕ್ಷಗಾನ ಮಂಡಳಿ, ನಾಗರಬಾವಿ (ಸ್ಥಾಪನೆ: 2009)ಯ ಸುಮಾರು 15 ವಿದ್ಯಾರ್ಥಿಗಳಿಗೆ ನಾಗರಬಾವಿಯ ಐಸೆಕ್ ಲೇಔಟ್‌ನಲ್ಲಿ ತೆಂಕುತಿಟ್ಟಿನ ನಾಟ್ಯ ತರಗತಿಗಳು ತಿಂಗಳಿಗೆ 2 ದಿನದಂತೆ ನಡೆಯುತ್ತಿದೆ. ಈವರೆಗೆ ಸುಮಾರು 25 ಕಾರ್ಯಕ್ರಮಗಳನ್ನು ಕೊಟ್ಟಿದ್ದು, ಆಸ್ಟ್ರೇಲಿಯಾ, ಡೆಲ್ಲಿ, ಮೈಸೂರು ದಸರಾ 2013ರಲ್ಲೂ ಯಕ್ಷಗಾನ ಕಂಪನ್ನು ಬೀರಿದೆ.

ಧೀಂಗಿಣ ಕಲಾಕೇಂದ್ರ:

ಈ ಹೆಸರಿನಲ್ಲಿ 2012ರಲ್ಲಿ ಶ್ರೀ ಸುಧಾಕರ ಜೈನ್ ನೇತೃತ್ವದಲ್ಲಿ ಪ್ರಾರಂಭವಾದ ಈ ಸಂಸ್ಥೆಯು ಪಾರಂಪರಿಕ ಯಕ್ಷಗಾನ ಪ್ರದರ್ಶನಕ್ಕೆ ಒತ್ತು ಕೊಡುತ್ತಿದೆ. ಹೆಚ್ಚಾಗಿ, ಪತ್ರಿಕಾ ವರದಿಗಾರರು, ಎಂಜಿನಿಯರ್ ಹಾಗೂ ಡಾಕ್ಟರ್‌ಗಳೇ ಇರುವ ಇಲ್ಲಿಯ ಕಲಾವಿದರಿಗೆ ಮೊದಲು ಪ್ರಸಾದ್ ಚೇರ್ಕಾಡಿ ತರಬೇತಿ ನೀಡಿದರು. ಈಗ ಪವನ್

ಕಾರ್ಕಳ ಹಾಗೂ ಶ್ರೀಮತಿ ಸೌಮ್ಯಶ್ರೀ ಅಲಂಗಾರು ಹೆಜ್ಜೆಗಾರಿಕೆಯನ್ನು ಕಲಿಸುತ್ತಿದ್ದಾರೆ. 25 ಮಂದಿ ಸದಸ್ಯರಿದ್ದು, ಆರ್.ಟಿ. ನಗರ, ಶಾಂತಿನಗರ ಹಾಗೂ ಗಾಂಧೀ ನಗರಗಳಲ್ಲಿ ಕ್ಲಾಸುಗಳು ನಡೆಯುತ್ತಿವೆ. ಯಕ್ಷಗುರು ಕೋಡಪದವಿನ ಕರ್ಗಲ್ಲು ವಿಶ್ವೇಶ್ವರ ಭಟ್ಟರಿಂದಲೂ ಒಂದು ವಾರಗಳ ಕಾಲ ವಿವಿಧ ಸಭಾ ಕ್ಲಾಸುಗಳ ತರಬೇತಿಯನ್ನು ಪಡೆದಿದ್ದಾರೆ. ಶ್ರೀಮತಿ ಸೌಮ್ಯಶ್ರೀ ಗಾನಸೌರಭ ಯಕ್ಷಗಾನ ಶಾಲೆಯಲ್ಲಿ ಬಡಗುತಿಟ್ಟಿನ ನಾಟ್ಯವನ್ನು ಅಭ್ಯಸಿಸುತ್ತಿದ್ದಾರೆ.

ತೆಂಕುತಿಟ್ಟು ಯಕ್ಷಗಾನ ಪ್ರತಿಷ್ಠಾನ (ರಿ), ಟಿ. ದಾಸರಹಳ್ಳಿ, ಪೀಣ್ಯ:

ತಾರೀಖು 06–10–2004ರಂದು ಉದ್ಘಾಟನೆಗೊಂಡ ಈ ಸಂಸ್ಥೆಯ ಕಳೆದ ಹತ್ತು ವರ್ಷಗಳ ಸಾಧನೆ ಅಮೋಘವಾದುದು. ಮೊದಲೇ ತಿಳಿಸಿದಂತೆ, ವಿಷ್ಣು ಕಿದೂರರು ನಾಟ್ಯ ಕ್ಲಾಸ್ ನಡೆಸಿದರೆ, ಊರ ಪ್ರಸಿದ್ಧ ಪ್ರಸಾದನ ನಿಪುಣರು ಬಂದು ಬಣ್ಣಗಾರಿಕೆಯ ಕಮ್ಮಟವನ್ನೇರ್ಪಡಿಸಿದ್ದಾರೆ. 75ಕ್ಕಿಂತಲೂ ಹೆಚ್ಚು ಸಂಪೂರ್ಣ ರಾಮಾಯಣದ ತಾಳಮದ್ದಳೆಯನ್ನು ನಡೆಸಿ, ಹವ್ಯಾಸಿಗಳು ಅರ್ಥವನ್ನು ಕಲಿಯಲು ಸಹಕರಿಸಿದ್ದಾರೆ. ಶ್ರೀ ಮೂಡಂಬೈಲು ಗೋಪಾಲಕೃಷ್ಣ ಶಾಸ್ತ್ರಿಗಳಿಂದ ಬೇರೆ ಬೇರೆ ಪಾತ್ರಗಳ ಅರ್ಥ ವೈಭವದ ಪ್ರಾತ್ಯಕ್ಷಿಕೆಯನ್ನು ಏರ್ಪಡಿಸಿದ್ದಾರೆ. 'ಯಕ್ಷಗಾನದಲ್ಲಿ ನವರಸಗಳು' ಎಂಬ ವಿಶಿಷ್ಟ ಕಾರ್ಯಕ್ರಮವನ್ನು ಭಾಗವತ ಜಿ.ಕೆ. ನಾವುಡ ಬಾಯಾರು, ಸ್ವರ್ಣ ಪದಕ ವಿಜೇತ ರಮೇಶ ಶೆಟ್ಟಿ ಬಾಯಾರು ಹಾಗೂ ಶೇಣಿ ಸುಬ್ರಹ್ಮಣ್ಯ ಭಟ್ಟರ ಮೂಲಕ ಏರ್ಪಡಿಸಿದ್ದಾರೆ.

ಅಲ್ಲದೇ ಪುತ್ತೂರು ಶ್ರೀಧರ ಭಂಡಾರಿ ಸಂಚಾಲಕತ್ವದ ಶ್ರೀ ಮಹಾಲಿಂಗೇಶ್ವರ ಪ್ರವಾಸೀ ಯಕ್ಷಗಾನ ಮಂಡಳಿ ಪುತ್ತೂರು ಇವರಿಂದ 70 ಯಕ್ಷಗಾನ ಪ್ರದರ್ಶನಗಳು, ಹೊಸನಗರ ಮೇಳದಿಂದ 10 ಆಟಗಳು, ನಿಡ್ಲೆ ಮಹಾಗಣಪತಿ ಯಕ್ಷಗಾನ ಮಂಡಳಿಯಿಂದ 10 ಆಟಗಳು, ಅಲ್ಲದೇ ಎಡನೀರು, ಯಕ್ಷ ಮಂಜೂಷಾ ಮಂಗಳೂರು ಇವರಿಂದ 3 ಹಿಂದೀ ಯಕ್ಷಗಾನ ಹಾಗೂ 6 ಕನ್ನಡ ಯಕ್ಷಗಾನ ಆಟಗಳು ನಡೆದಿವೆ ಹಾಗೂ ಮಾಣಿಲ ಮಹಾಲಕ್ಷ್ಮೀ ಯಕ್ಷಗಾನ ಮಂಡಳಿ, ತರಿಕಿಟ ಯಕ್ಷ ಕಮ್ಮಟ ಬಂಟ್ವಾಳ, ಬಾಲ ಯಕ್ಷ ವೃಂದ – ಸಂಸ್ಕಾರ ಭಾರತಿ, ವಿಜಯನಗರ, ನಾರಾಯಣ ಶಬರಾಯರ ಯಕ್ಷ, ಗಾನ, ಸಂಗೀತ ವೈಭವವೇ ಮೊದಲಾದವರಿಂದ ಸುಮಾರು 300 ಕಾರ್ಯಕ್ರಮಗಳನ್ನು ಏರ್ಪಡಿಸಿ, ಟಿ. ದಾಸರಹಳ್ಳಿಯನ್ನು ಒಂದು ಯಕ್ಷಗಾನ ನಗರವನ್ನಾಗಿ ಕೀರ್ತಿಸಿದ ಹೆಮ್ಮೆಯ ಬೆನ್ನೆಲುಬು ಶ್ರೀ ಆರ್.ಕೆ. ಭಟ್, ಬೆಳ್ಳಾರೆ ಅವರಾಗಿದ್ದಾರೆ.

ಯಕ್ಷಕರ್ಧಮ (ರಿ) ಬೆಂಗಳೂರು, ಶ್ರೀ ವಾಜಪೇಯಿ ನಗರ, ಚಿಕ್ಕಲ್ಲಸಂದ್ರ:

ಶ್ರೀ ರಾಜಗೋಪಾಲ್ ಕನ್ಯಾನ (ಈ ಲೇಖನದ ಕರ್ತೃ) ಸಂಚಾಲಕತ್ವದಲ್ಲಿ 1998ರಿಂದ ಪ್ರಾರಂಭಗೊಂಡ ಈ ಸಂಸ್ಥೆಯು ಈಗ 22ನೇ ವರ್ಷದಲ್ಲಿ ಮುನ್ನಡೆಯುತ್ತಿದೆ. ಸುಮಾರು 2002ರಲ್ಲಿಯೇ ಪೆರ್ಲ ದಿ. ಪಡ್ರೆ ಚಂದು ಯಕ್ಷಗಾನ ಶಾಲೆಯ ಕುಲಪತಿ ಯಕ್ಷಗುರು ಸಬ್ಬಣ ಕೋಡಿ ರಾಮ್ ಭಟ್‌ರಿಂದ ಒಂದು ತಿಂಗಳ ಕಾಲ, ಸುಮಾರು 25 ಮಂದಿಗೆ (4 ಸ್ತ್ರೀಯರು) ಯಕ್ಷಗಾನ ನಾಟ್ಯವನ್ನು ಕಲಿಸಿದ ಹೆಮ್ಮೆ ನಮ್ಮದು. ಯಕ್ಷಗಾನದೊಂದಿಗೆ ಭರತನಾಟ್ಯ, ಕಥಕ್, ವಿದೂಷಿಯರಿಂದ ತೌಲನಿಕ ಕ್ಲಾಸು, ಶಶಿಧರ ಕೋಟೆಯವರಿಂದ ಸಂಗೀತ ಹಾಗೂ ಯಕ್ಷಗಾನದ ಬಗ್ಗೆ ಪ್ರಾತ್ಯಕ್ಷಿಕತೆ, ಕೃಷ್ಣಮೂರ್ತಿ ಕವತ್ತಾರರಿಂದ ರಂಗಭೂಮಿ ಹಾಗೂ ಯಕ್ಷಭೂಮಿಗಳ ಬಗ್ಗೆ, ಪಾತಾಳ ವೆಂಕಟರಮಣ ಭಟ್ರಿಂದ ಸ್ತ್ರೀ ವೇಷದ ಬಗ್ಗೆ ಹಾಗೂ ಪೆರ್ನಡ್ಕ ಶ್ಯಾಂ ಭಟ್ಟ ಹಾಗೂ ಪ್ರಾತ:ಸ್ಮರಣೀಯ ದಿ. ಹೆಚ್.ಎಲ್. ಭಟ್ ಇವರಿಂದ ಮುಖವರ್ಣಿಕೆಗಳ ಬಗ್ಗೆ ಅಲ್ಲಿ ತಿಳಿಸಿ ಕೊಡಲಾಗಿತ್ತು. ತ್ಯಾಗರಾಜ ನಗರದ ದತ್ತಾತ್ರೇಯ ದೇವಳದಲ್ಲಿ ನಡೆದ ಈ ಕಲಾ ಶಿಬಿರವನ್ನು ಈಗಲೂ ಅನೇಕರು ನೆನಪಿಸಿಕೊಳ್ಳುತ್ತಾರೆ. ಕೆ.ಆರ್. ರಸ್ತೆಯ ಮಂಜುನಾಥ ದೇವಳದಲ್ಲಿ 7 ತಿಂಗಳುಗಳ ಕಾಲ 'ಮಾಸಿಕ ತಾಳಮದ್ದಳೆ' ನಡೆಸಿದ್ದು ಅರ್ಥಗಾರಿಕೆಯನ್ನು ಸುಧಾರಿಸಿಕೊಳ್ಳುವಲ್ಲಿ ಸಹಕಾರಿಯಾಗಿತ್ತು. ಇಲ್ಲಿಯೇ ಯಕ್ಷಗಾನದ ಚಾಪ್ಲಿನ್ ಕಟೀಲು ಸೀತಾರಾಂ ಕುಮಾರ್‌ರು ತನ್ನ ಪ್ರಥಮ ಅರ್ಥವನ್ನು ತಾಳಮದ್ದಳೆಯಲ್ಲಿ ಹೇಳಿದ್ದು ದಾಖಲಿಸಬೇಕಾದ ವಿಚಾರ ಹಾಗೂ ಇತ್ತೀಚೆಗೆ ನಿಧನರಾದ ಶ್ರೀ ಸಿದ್ದಕಟ್ಟೆ ಚೆನ್ನಪ್ಪ ಶೆಟ್ಟರು ಅರ್ಥ ಹೇಳಿದ್ದರು. ಕೊಟ್ಟ ಸಂಭಾವನೆ ಬರೀ ರೂ. 50/- ಮಾತ್ರ. ಬೆಂಗಳೂರಲ್ಲಿ ಪ್ರಥಮ ಬಾರಿಗೆ ಡಾ. ಕಬ್ಬಿನಾಲೆ ವಸಂತ ಭಾರದ್ವಾಜರಿಂದ ಯಕ್ಷಗಾನ ಅಷ್ಟಾವಧಾನ 'ಗಂಧರ್ವ ಗಾನ ತಾಳಮದ್ದಳೆ'ಗಳೇ ಮುಂತಾದ ವಿನೂತನ ಪ್ರಯೋಗಗಳನ್ನು ಮಾಡಿದೆ. 'ಲಂಡನ್ ಯಕ್ಷಗಾನ ಸ್ಪರ್ಧೆ 2014'ರ ರೂವಾರಿಯಾದ ಶ್ರೀ ಕುಮಾರ ಕುಂಟಿಕಾನರ ತಂದೆ ದಿ. ವಿದ್ವಾನ್ ಬಾಲಕೃಷ್ಣ ಭಟ್ಟರು ನಮ್ಮ ಸಂಸ್ಥೆಯ ಸ್ಥಾಪಕಾಧ್ಯಕ್ಷರಾಗಿದ್ದರು. ಶ್ರೀ ಕುಮಾರರು ನಮ್ಮ ತಂಡದಲ್ಲಿ ಗೆಜ್ಜೆ ಕಟ್ಟಿ ಕುಣಿದಿದ್ದಾರೆ. 'ಕಲೆ-ಬೆಲೆ-ನೆಲೆ' ಇವರ ಧ್ಯೇಯ ವಾಕ್ಯ.

ಕರ್ನಾಟಕ ಸಾಂಸ್ಕೃತಿಕ ಕಲಾ ಪ್ರತಿಷ್ಠಾನ (ರಿ) ನಾಗರಬಾವಿ, ಬೆಂಗಳೂರು – 72:

12 ಅಖಿಲ ಭಾರತ ಯಕ್ಷಗಾನ ಸಾಹಿತ್ಯ ಸಮ್ಮೇಳನಗಳನ್ನು ಸಂಘಟಿಸುವ ಮೂಲಕ, ಮನೆ ಮಾತಾಗಿರುವ ಶ್ರೀಯುತ ಪಂಜಾಜೆಯವರು ಹಲವು ವರ್ಷಗಳ ಹಿಂದೆಯೇ ಜಯನಗರದ ಎನ್.ಎಂ.ಕೆ.ಆರ್.ವಿ. ಮಹಿಳಾ ಕಾಲೇಜಿನಲ್ಲಿ ಯಕ್ಷಗಾನದ ಹೆಜ್ಜೆಗಾರಿಕೆಯನ್ನು ಕಲಿಸಿ, ಪ್ರಯೋಗವನ್ನು ಮಾಡಿದ ಚತುರಮತಿ ಇವರು. ಅಲ್ಲದೇ, ಆನಂದ ಬಳಗ (ರಿ)ದ ಮಹಿಳೆಯರನ್ನೂ ತರಬೇತುಗೊಳಿಸಿ, ಯಕ್ಷಗಾನವನ್ನು ಮಾಡಿಸಿದವರು. ವಿವಿಧ ಕಾರ್ಪೋರೇಟ್ ಆಫೀಸ್, ಸಂಘ ಸಂಸ್ಥೆಗಳಲ್ಲಿ 'ಕಿಟ್' ಮಾದರಿಯ ಬ್ರಿಜ್ ಕೋರ್ಸನ್ನು ಮಾಡಿದ್ದಾರೆ. ವಿವಿಧ ಯಕ್ಷಗಾನ ಪ್ರಕಾರ, ಯಕ್ಷಗಾನ ಅಕಾಡೆಮಿಯ ಬಗ್ಗೆ ಚಿಂತನೆಗಳಿವೆ. ತೆಂಕುತಿಟ್ಟಿನ ಪ್ರಸಾಧನ ಸಾಮಗ್ರಿ ವೇಷಭೂಷಣಗಳು ಇವೆ. ಮೇಲೆ ತಿಳಿಸಿದ ವ್ಯಕ್ತಿ ಹಾಗೂ ಸಂಘ ಸಂಸ್ಥೆಗಳು ಪ್ರತ್ಯಕ್ಷವಾಗಿ ನಾಟ್ಯ, ಚೆಂಡೆ, ಮದ್ದಳೆ, ಬಣ್ಣಗಾರಿಕೆಗಳ ಬಗ್ಗೆ ತರಬೇತಿ ಕೊಟ್ಟಿವೆ.

ಒಟ್ಟಾರೆಯಾಗಿ, ದಶಕದ ಹಿಂದೆ ಬೆಂಗಳೂರಲ್ಲಿ ಬೆರಳೆಣಿಕೆಯ ಸಂಘ ಸಂಸ್ಥೆಗಳಿದ್ದರೆ, ಈಗ ಹತ್ತಾರು ಕಲಾ ತಂಡಗಳಿವೆ. ಆದರೆ, ಅದಕ್ಕೆ ತಕ್ಕಂತೆ ಸತ್ವಯುತ ಪ್ರದರ್ಶನಗಳಾಗಲೀ, ಚಿಂತನೆಗಳಾಗಲೀ, ಸಾಮೂಹಿಕವಾಗಿ ಮೂಡಿಬರುತ್ತಿಲ್ಲ ವೆನ್ನುವುದೇ ಕೊರತೆ. ಇಷ್ಟೆಲ್ಲಾ ಕಲಾ ತಂಡಗಳ ಅವಲೋಕನ ಮಾಡಿದಾಗ ನನಗೆ ಅನ್ನಿಸಿದ್ದು ಇಷ್ಟು.

(ಅ) : ಕರ್ನಾಟಕದ ರಾಜಧಾನಿಯಾದ ಬೃಹತ್ ಬೆಂಗಳೂರಿನಲ್ಲಿ ಯಕ್ಷಗಾನಕ್ಕಾಗಿಯೇ ವಿಶೇಷ ಪರಿಕಲ್ಪನೆಯ 'ರಂಗ ಮಂದಿರ' ಒಂದು ಬೇಕು. 'ಎಕ್ಕೋ' ಶಬ್ದ ಬಾರದ ಎಲ್ಲಾ ಋತುಮಾನಗಳಲ್ಲಿಯೂ ಪ್ರದರ್ಶನ ಕೊಡಬಲ್ಲ, ಆಟಕ್ಕೆಂದೇ ಇರುವ ಸ್ಟೇಜ್, ಚೌಕಿ ಪರಿಕಲ್ಪನೆಯ ಗ್ರೀನ್ ರೂಂ, ಕಲಾವಿದರಿಗೆ ವಿಶ್ರಾಂತಿ ಕೊಠಡಿ, ಊಟದ ಕೋಣೆ, ರಂಗತಾಲೀಮು ಹಾಲ್, ಉತ್ತಮ ಧ್ವನಿ ಹಾಗೂ ಬೆಳಕಿನ ವ್ಯವಸ್ಥೆ ಇದ್ದು ಕನಿಷ್ಠ 1000 ಜನರು ಕೂಡುವ ಸ್ಥಳಾವಕಾಶವು ಇರಬೇಕು.

(ಆ) : ವರ್ಷ ವರ್ಷವೂ ನಗರ ಮಟ್ಟದ 'ಯಕ್ಷಗಾನ ಸಮ್ಮೇಳನ' ನಡೆಯಬೇಕು. ಇದಕ್ಕೆ ಎಡನೀರು ಮಠ, ಕರಾವಳಿ ಮೂಲದ ಶೈಕ್ಷಣಿಕ ಸಂಸ್ಥೆಗಳೇ ಮೊದಲಾದವರು ಕೈಜೋಡಿಸಿದರೆ ಕೆಲಸ ಸುಲಭವಾದೀತು.

(ಇ) : ನಗರದಲ್ಲಿ ಹತ್ತಾರು ಕಡೆ ಯಕ್ಷಗಾನೀಯ ಕಾರ್ಯಕ್ರಮಗಳು ನಡೆಯುತ್ತಿದ್ದರೂ, ಪ್ರಚಾರದ ಕೊರತೆಯಿಂದಾಗಿ, ತಲುಪಬೇಕಾದವರಿಗೆ ಇದು ತಲುಪುತ್ತಿಲ್ಲ. ನಿ:ಶುಲ್ಕವಾಗಿಯೋ ಅಥವಾ ಕನಿಷ್ಠ ಶುಲ್ಕ ಪಡೆದು, ವಿವಿಧ ವಿಡಿಯೋಗಳ ಮೂಲಕ ಪ್ರತೀ ಕಾರ್ಯಕ್ರಮಕ್ಕೂ ಪ್ರಚಾರ ಸಿಗುವ ವ್ಯವಸ್ಥೆಯಾಗಬೇಕು.

(ಈ) : ನಗರದಲ್ಲಿ ದತ್ತಿ ಮೂಲಕ ನೂರಾರು ಕಾರ್ಯಕ್ರಮಗಳು ನಡೆಯುತ್ತಿವೆ. ಆದರೆ ಯಕ್ಷಗಾನಕ್ಕೆ ಇಲ್ಲವೆಂದೇ ಹೇಳಬೇಕು. ಆದ್ದರಿಂದ ಉದಾ: ಭಾರತೀಯ ವಿದ್ಯಾ ಭವನ, ಕನ್ನಡ ಸಾಹಿತ್ಯ ಪರಿಷತ್, ವಿವಿಧ ಜಾತಿ ಸಂಘಟನೆಗಳಲ್ಲಿ 'ಯಕ್ಷಗಾನ ದತ್ತಿ ನಿಧಿ'ಗಳನ್ನು ಸ್ಥಾಪಿಸಬೇಕು. ಇದಕ್ಕೆ ಶ್ರೀಮಂತರ, ಉದ್ಯಮಿಗಳ ಮನವೊಲಿಸಿ ಕೆಲಸ ಮಾಡುವ ತಂಡವೊಂದು ಬೇಕು.

(ಉ) : 'ಯಕ್ಷಗಾನ ವಸ್ತು ಸಂಗ್ರಹಾಲಯ'ದ ಅವಶ್ಯಕತೆ ಇದೆ. ಸಮಗ್ರ ಯಕ್ಷಗಾನದ ವೇಷಭೂಷಣ, ಪ್ರಸಂಗ ಸಾಹಿತ್ಯ, ಹಿಮ್ಮೇಳ ವಾದನ ಸಾಮಗ್ರಿ, ಗೊಂಬೆ ಮುಖವರ್ಣಿಕೆ, ಕಲಾವಿದರ ಪರಿಚಯ, ಭಾವಚಿತ್ರ, ಆಡಿಯೋ ವಿಡಿಯೋ, ಮುಂತಾದವುಗಳ ಸಂಗ್ರಹ ಬೇಕು. ಅಲ್ಲದೇ ಪರದೇಶ, ರಾಜ್ಯಗಳಿಂದ ಬರುವ ಪ್ರವಾಸಿಗರು, ಕಲಾ ವಿದ್ವಾಂಸರು, ಸಂಶೋಧನಾರ್ಥಿಗಳಿಗೆ 'ಕ್ವಿಕ್' ಆಗಿ ಯಕ್ಷಗಾನ ಪ್ರದರ್ಶನವನ್ನು ಕೊಡುವ ವ್ಯವಸ್ಥೆ. ಆಡಿಯೋ ವಿಡಿಯೋ ಥಿಯೇಟರ್, ಪ್ರಾತ್ಯಕ್ಷಿಕತೆ, ಸಂವಾದ ತೌಲನಿಕಗಳ ವ್ಯವಸ್ಥೆ ಇಲ್ಲಿರಬೇಕು. (ಕೇರಳದಲ್ಲಿ ಕಥಕ್ಕಳಿಯ ಬಗ್ಗೆ ಈ ವ್ಯವಸ್ಥೆ ಇದೆ ಎಂದು ಕೇಳಿ ಬಲ್ಲೆ.)

(ಊ) : ಯಕ್ಷಗಾನ ಕಲಾವಿದ, ಯಕ್ಷಪ್ರಿಯ, ಯಕ್ಷಪೋಷಕರ ಒಂದು 'ಸಹಕಾರೀ ಸಂಘ' ಬೇಕು. ಈ ಕಲೆಗೆ ಸಂಬಂಧಿಸಿದ ಎಲ್ಲಾ ರೀತಿಯ ಆರ್ಥಿಕ, ಶೈಕ್ಷಣಿಕ ಕೊಳ್–ಕೊಡುಗೆಗಳು ಇಲ್ಲಿ ನಡೆಯುವಂತಿರಬೇಕು. ಸರ್ಕಾರದ ಧನ ಸಹಾಯ ಪಡೆಯುವುದು, ಸಂಸ್ಥೆಯ ರಿಜಿಸ್ಟ್ರೇಶನ್ ಮಾಡುವ ಬಗ್ಗೆ ಮಾರ್ಗದರ್ಶನ, ವಿವಿಧ ಸ್ಕೀಂಗಳ ಮೂಲಕ ಹೊರದೇಶಗಳಲ್ಲಿ ಕಲಾ ಪ್ರದರ್ಶನದ ವ್ಯವಸ್ಥೆ, ರಾಜ್ಯ ರಾಷ್ಟ್ರ ಅಂತರಾಷ್ಟ್ರೀಯ ಪ್ರಶಸ್ತಿ ಪುರಸ್ಕಾರಗಳನ್ನು ದೊರಕಿಸಿಕೊಳ್ಳುವಲ್ಲಿ ಮಾರ್ಗದರ್ಶನ, ವಿವಿಧ ಕಲೆಗಳ ತೌಲನಿಕ ಅಧ್ಯಯನ, ಸಂಶೋಧನೆಗಳಿಗೆ ಸಹಾಯ ಮುಂತಾದವುಗಳು ಈ ಸಹಕಾರೀ ಸಂಘದಲ್ಲಿ ದೊರೆಯುವಂತಿರಬೇಕು.

(ಎ) : ಅಧೀಕೃತವಾಗಿ ಶಿಸ್ತು ಬದ್ಧವಾಗಿ, ತೆಂಕು ಬಡಗು ತಿಟ್ಟುಗಳ ಹೆಜ್ಜೆಗಾರಿಕೆ, ವೇಷಗಾರಿಕೆ, ಹಿಮ್ಮೇಳ ವಾದನ, ಭಾಗವತಿಕೆ ಹಾಗೂ ಅರ್ಥಗಾರಿಕೆಗಳ ಬಗ್ಗೆ

ತರಬೇತಿ ಸಿಗುವಂತಹ ಒಂದು ಶಾಲೆ (ವಿದ್ಯಾಕೇಂದ್ರ)ಯ ಅಗತ್ಯವಿದೆ. ಇಲ್ಲಿ ಕಾಲು, ಅರ್ಧ ಘಂಟೆಯ (ಕಿಟ್) ಪ್ರದರ್ಶನದಿಂದ ಹಿಡಿದು, ಸಮಗ್ರ ಕಲೆಯನ್ನು ಕಲಿಯುವವರೆಗಿನ ವಿವಿಧ ನಮೂನೆಯ, ಕಾಲಾವಧಿಯ ಕೋರ್ಸ್‌ಗಳಿರಬೇಕು.

ಅನುಬಂಧ

ಹಲವಾರು ಯಕ್ಷಗಾನೀಯ ಕಾರ್ಯಕ್ರಮಗಳನ್ನು ಏರ್ಪಡಿಸಿ, ಪರೋಕ್ಷವಾಗಿ ಯಕ್ಷ ಶಿಕ್ಷಣವನ್ನು ಕೊಟ್ಟ ಸಂಘ ಸಂಸ್ಥೆಗಳ ಹೆಸರುಗಳು ಇಲ್ಲಿವೆ.

ಬಡಗು ತಿಟ್ಟು ಮೂಲದ ಯಕ್ಷಕಲಾ ಸಂಸ್ಥೆಗಳು:

1) **ಸುವರ್ಣ ಪ್ರಸಾಧನ ಯಕ್ಷರಂಗ (ರಿ), ಆರ್.ಟಿ. ನಗರ (ಸ್ಥಾಪನೆ – 2010):** ಕೃಷ್ಣ ಪ್ರಸಾದ ಪಂಜಿಮೊಗರು, ಸಂಚಾಲಕರು ಸರ್ಕಾರದ ಅನುದಾನ ಬೇಡ. ಕರಾವಳಿಯೇತರರಿಗೂ ಯಕ್ಷಗಾನವನ್ನು ಪ್ರಸರಿಸುವ ಧ್ಯೇಯ. 2010ರಲ್ಲಿಯೇ ಜಾಂಬವತಿ ಕಲ್ಯಾಣ ಪ್ರಸಂಗದ 50ನೇ ಪ್ರಯೋಗವನ್ನು ಮಾಡಿದವರು.

2) **ಯಕ್ಷ ಲಾಸ್ಯ, ಗಿರಿನಗರ (ಸ್ಥಾಪನೆ – 1997):** ಸಂಚಾಲಕ ಶ್ರೀ ಮಹಾಬಲೇಶ್ವರ ಕೊಡ್ಲಕೆರೆ – ವಿದೇಶಿಯರಿಗೆ ಈ ಕಲೆಯನ್ನು ಪರಿಚಯಿಸುವ ಧ್ಯೇಯ ಇವರದು. ಇವರು ಕನ್ನಡದ ಖ್ಯಾತ ಸಾಹಿತಿಯಾಗಿದ್ದು, ಹವ್ಯಾಸಿ ಕಲಾವಿದರಾಗಿ ಅನೇಕ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ.

3) **ವಾಗರ್ಥ ಪ್ರಾಂಗಣ, (ಸ್ಥಾಪನೆ – 2014):** ಜೆ.ಪಿ. ನಗರದ ಕೊತ್ತನೂರು ದಿಣ್ಣೆಯ ಗಾಯತ್ರೀ ಬಡಾವಣೆ, ವಿ. ನರಹರಿ ಭಟ್ಟ ಶಿರಸಿ – 9448170760. ತಾಳಮದ್ದಳೆಯ ಮೂಲಕ ಮೂಲ ಪೌರಾಣಿಕ ಕಥೆಗಳನ್ನು ಕೊಡುವ ಉದ್ದೇಶ ಇವರದ್ದಾಗಿದೆ. ಇವರು ಕನ್ನಡ, ಸಂಸ್ಕೃತ ಪ್ರಸಂಗಗಳನ್ನು ರಚಿಸಿದ್ದಾರೆ.

4) **ಯಕ್ಷ ಶಾರದೆ – ಕೋಣನ ಕುಂಟೆ:** ವಿ.ಎಸ್.ಕೆ. ವಾಸಿಷ್ಠ ಶೃಂಗೇರಿ, ತಾಳಮದ್ದಳೆ (ಬೈಠಕ್) ಪ್ರಸರಣ ಸಂಸ್ಥೆಯ ಧ್ಯೇಯವಾಗಿದೆ. ಇವರು ಶ್ರೀ ರಾಮ ಕಲಾ ಸಂಘದ ಅಧ್ಯಕ್ಷರೂ ಆಗಿದ್ದಾರೆ.

5) **ಶ್ರೀ ರಾಮ ಕಲಾ ಸಂಘ – ಕೋಣನ ಕುಂಟೆ :** 2006ರಲ್ಲಿ ಹುಟ್ಟಿಕೊಂಡ ಈ ಸಂಸ್ಥೆ ಶ್ರೀ ನಿಧಿ ದೇವಸ್ಥಾನದಲ್ಲಿ ಸತತ ಯಕ್ಷಗಾನ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ. ಸುಬ್ರಹ್ಮಣ್ಯ ಭಟ್‌ರು ಸಂಸ್ಥಾಪಕ ಅಧ್ಯಕ್ಷರು. 100ಕ್ಕೂ ಹೆಚ್ಚು ತಾಳಮದ್ದಲೆ ನಡೆಸಿದ್ದಾರೆ.

6) **ಯಕ್ಷ ಸಂಪದ (ರಿ), ಬನಶಂಕರಿ, ಕಾವೇರಿ ನಗರ (ಸ್ಥಾಪನೆ – 1994):** ಶ್ರೀನಿವಾಸ ಆಲ್ಸೆ ಸಂಚಾಲಕರು. 1995–97ರಲ್ಲಿ ಮೇಕ್ರೀ ಸರ್ಕಲ್‌ನ ನಾಗಸೇನಾ ವಿದ್ಯಾಲಯದಲ್ಲಿ ಇವರು ತರಗತಿಗಳನ್ನು ನಡೆಸಿದ್ದಾರೆ. 1995ರಿಂದ 2005ರವರೆಗೆ ನಗರದ ಬೇರೆ ಬೇರೆ ಕಡೆಗಳಲ್ಲಿ ತರಗತಿಗಳನ್ನು ನಡೆಸುತ್ತಿದ್ದರು. ಸದ್ಯಕ್ಕೆ ಕೆಲವು ಆಟಗಳಿಗಷ್ಟೇ ತಮ್ಮನ್ನು ಸೀಮಿತಗೊಳಿಸಿಕೊಂಡಿದ್ದಾರೆ. ಈಗ ಆಟಕ್ಕೆ ಪ್ರಾಯೋಜಕರ ಕೊರತೆಯಿದೆ ಎನ್ನುತ್ತಾರೆ.

7) **ಯಕ್ಷ ಕಲಾ ಮಂಡಲಿ (ರಿ), ಆರ್.ಟಿ. ನಗರ (ಸ್ಥಾಪನೆ – 2003):** 'ಆಟಕ್ಕಾಗಿ ಆಟ' ಇವರ ಧ್ಯೇಯ ವಾಕ್ಯ. ಪ್ರಶಾಂತ ಹೆಗಡೆ ಮೂರೂರು 50 ಪ್ರದರ್ಶನಗಳನ್ನು ಕೊಟ್ಟಿದ್ದಾರೆ. 'ಯಕ್ಷ ಪಂಚಮಿ', 'ಯಕ್ಷ ಪೂರ್ಣಿಮೆ' ಯಕ್ಷಗಾನದ ಮಧ್ಯೆ ಮಧ್ಯೆ ವೇಷಧಾರಿಗಳಿಂದ ಜಾಹೀರಾತು ಪ್ರದರ್ಶನ, ಯಕ್ಷಗಾನ ಗೇಂ ಸಾಫ್ಟ್‌ವೇರ್....ಇವರ ಕೊಡುಗೆಗಳಾಗಿವೆ.

8) **ಯಕ್ಷ ಸಿಂಚನ ಟ್ರಸ್ಟ್ (ರಿ), ಪೂರ್ಣ ಪ್ರಜ್ಞ ನಗರ (ಸ್ಥಾಪನೆ – ಜೂನ್ 2009):** ರವಿ ಮುಡೋಡಿ, ಶಶಿಧರ ಸೋಮಯಾಜಿ – 9986363495. ಅಸಂಖ್ಯ ಕಾರ್ಯಕ್ರಮಗಳನ್ನು ಕುಂದಾಪುರ, ರಾಜಸ್ಥಾನ, ಮೈಸೂರು, ಶಿವಮೊಗ್ಗ ಮೊದಲಾದೆಡೆ ಕೊಟ್ಟಿದ್ದಾರೆ. 12 ಸದಸ್ಯರಿದ್ದಾರೆ. ಈಚೆಗೆ ದಶಮಾನೋತ್ಸವ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ನಡೆಸಿದ್ದಾರೆ. ಅನೇಕ ಪೌರಾಣಿಕ ಪ್ರಸಂಗಗಳನ್ನು ಕಲಿತು ಪ್ರದರ್ಶಿಸಿ ಜನರ ಮೆಚ್ಚುಗೆ ಗಳಿಸಿದ್ದಾರೆ. ಕೃಷ್ಣಮೂರ್ತಿ ತುಂಗರ ನಿರ್ದೇಶನವಿದೆ.

9) **ಗಾಳಿ ಯಕ್ಷ ಕಲಾ ಬಳಗ (2005):** ಗಾಳಿ ಸತ್ಯನಾರಾಯಣ ಭಟ್ – ಸಾಗರ. 35 ಸದಸ್ಯರಿದ್ದಾರೆ 70 ಪ್ರದರ್ಶನಗಳನ್ನು ಕೊಟ್ಟಿದ್ದಾರೆ. ಯಕ್ಷಗಾನವಲ್ಲದೆ, ಡ್ಯಾನ್ಸ್, ಭರತನಾಟ್ಯ, ನಾಟಕ, ಯಕ್ಷಿಣಿ, ಮುಂತಾದ ಕಲೆಗಳನ್ನು ಪ್ರೋತ್ಸಾಹಿಸುತ್ತಾರೆ. ಎಲ್ಲಿಯೇ ಆಗಲಿ, ಯಕ್ಷಗಾನಕ್ಕಾಗುವಷ್ಟು ಜನ ಬೇರೆ ಯಾವುದೇ ಕಲಾ ಪ್ರದರ್ಶನಗಳಿಗೂ ಆಗುವುದಿಲ್ಲವೆನ್ನುತ್ತಾರೆ. ಆಟ ಬಿಟ್ಟರೆ ನಂತರದ ಸ್ಥಾನ ಭರತನಾಟ್ಯಕ್ಕೆನ್ನುತ್ತಾರೆ. ಆದರೆ ಈಗ, ಯಕ್ಷಗಾನದಲ್ಲಿ ನೃತ್ಯ, ನಾಟ್ಯಗಳಿಗೆ ಜಾಸ್ತಿ ಒತ್ತು ನೀಡುತ್ತಾರೆಯೇ ಹೊರತು, ಅರ್ಥಗಾರಿಕೆ ಮಾತ್ರ ಜಾಳು ಜಾಳಾಗಿರುತ್ತದೆ ಎಂದು ಬೇಸರಿಸುತ್ತಾರೆ.

10) **ಯಕ್ಷ ಸಿರಿ ಬೆಂಗಳೂರು (ರಿ) ವಿಜಯನಗರ, ಬೆಂಗಳೂರು – 23 (ಸ್ಥಾಪನೆ – 2011):** ಮಯೂರಿ ಗಜಾನನ ಉಪಾಧ್ಯಾಯ, ಕುಮಟ, ಶ್ರೀಮತಿ ಗೀತಾ ಹೆಗಡೆ, ಸರೋಜ ಆಚಾರ್, ದೇವಿಕಾ ಮಂಜುನಾಥ್, ಜ್ಯೋತಿ ನಾಯಕ್, ಪೃಥ್ವಿ ನಾಯಕ್ ಮುಂತಾದ ಸದಸ್ಯೆಯರು ಇರುವ ಇವರ ಕಲಾ ತಂಡವು 25ಕ್ಕಿಂತಲೂ ಹೆಚ್ಚಿನ ಆಟ ಕೊಟ್ಟಿದ್ದಾರೆ. ಕೀಚಕ ವಧೆ, ಮಾಗಧ ವಧೆ, ಕಂಸ ವಧೆ, ಭಸ್ಮಾಸುರ ಮೋಹಿನಿ, ದಕ್ಷ ಯಜ್ಞ, ಸುಧನ್ವಾರ್ಜುನ, ಜಾಂಬವತಿ ಕಲ್ಯಾಣ ಮುಂತಾದವು ಇವರು ಆಡುವ ಪ್ರಸಂಗಗಳು.

11) **ಯಕ್ಷಗಾನ ತಪಸ್ಸಂಘ (ರಿ) ಸ್ಥಾಪನೆ – 2010:** ಅಜಿತೇಶ ಹೆಗಡೆ. ಬನಶಂಕರಿ 2ನೇ ಹಂತದ ದೇವಗಿರಿ ದೇವಳದ ಹತ್ತಿರ. ಈ ಸಂಸ್ಥೆಯ ಹೆಸರೇ ಸೂಚಿಸುತ್ತದೆ. ಯಕ್ಷಗಾನವೆಂಬುದು ತಪಸ್ಸೆಂಬುದು. 7 ಜನ ಸದಸ್ಯರಿದ್ದು 21 ಪ್ರದರ್ಶನಗಳನ್ನು ಕೊಟ್ಟಿದ್ದಾರೆ. ಶ್ರೀ ಅಜಿತೇಶ ಹೆಗಡೆಯವರು ಇಲ್ಲಿನ ಮುಖ್ಯ ಕಲಾವಿದರು. ನಿಧಾನಗತಿಯ ಯಕ್ಷಗಾನಕ್ಕೆ ಮರುಹುಟ್ಟು ನೀಡಿದ್ದಾರೆ.

12) **ಮಹಾಗಣಪತಿ ಯಕ್ಷಗಾನ ಮಂಡಳಿ (ರಿ), ಹಣಜಿಬೈಲು, ಸ್ಥಾಪನೆ – 2004:** ಕಾಳಿದಾಸ ಲೇಔಟ್, ಶ್ರೀನಗರ, ಸಂಚಾಲಕರು: ಸದಾನಂದ ಹೆಗಡೆ. ದಿ. ಭಾಗವತ ಅನಂತ ಹೆಗಡೆಯವರಿಂದ ಉದ್ಘಾಟನೆಗೊಂಡ ಈ ಸಂಸ್ಥೆಯು 30 ಕಲಾವಿದರಿಗೆ ಸನ್ಮಾನ, 300ಕ್ಕಿಂತಲೂ ಹೆಚ್ಚು ಕಾರ್ಯಕ್ರಮಗಳನ್ನು ಕೊಟ್ಟಿದೆ. ಮುಖವರ್ಣಿಕೆಯನ್ನು ಕಲಿಸಿದ್ದಾರೆ. ಬೆಂಗಳೂರಿನ ಹವ್ಯಕ ಮಹಾಸಭಾದಲ್ಲಿ (ಮಲ್ಲೇಶ್ವರಂ) ಯಕ್ಷಗಾನದ ಕ್ರಾಂತಿಯನ್ನೇ ಮಾಡಿದ್ದಾರೆ. 2014ರ ಕನ್ನಡ ಸಂಸ್ಕೃತಿ ಇಲಾಖೆಯ ಸಹಾಯದಿಂದ ದಶಮಾನೋತ್ಸವವನ್ನು ಆಚರಿಸಿದ್ದಾರೆ.

13) **ಯಕ್ಷ ಕಲಾ ಸಾಗರ (ರಿ) ಸ್ಥಾಪನೆ – 2001:**ಎ.ಎನ್. ಹೆಗಡೆ, ಹೆಗಡೆಮನೆ ಕಡತೋಕ ಹೊನ್ನಾವರ, ಮೈಸೂರು, ಬೆಂಗಳೂರು ಸಿಟಿ ಕೋರ್ಟಿನಲ್ಲಿ ವಕೀಲರಿಗಾಗಿ ಹೀಗೆಯೇ 80ಕ್ಕೂ ಹೆಚ್ಚು ಪ್ರದರ್ಶನವನ್ನು ಕೊಟ್ಟಿದ್ದಾರೆ. 2005ರಲ್ಲಿ ಟೌನ್ ಹಾಲ್ ಹಾಗೂ ಕುವೆಂಪು ರಂಗಮಂದಿರದಲ್ಲಿ ನಿರಂತರ 32 ಗಂಟೆಗಳ ಯಕ್ಷಗಾನ ಪ್ರದರ್ಶನವನ್ನು ಏರ್ಪಡಿಸಿದ್ದಾರೆ. ಊರ ಯಕ್ಷಗಾನ ತಂಡಗಳನ್ನು ನಗರಕ್ಕೆ ಪರಿಚಯಿಸಿದ್ದು, ಹೊಸ ಕಲಾವಿದರ ಪರಿಚಯ, ಆರ್ಥಿಕ ಸಹಾಯ, ತೆಂಕು ಆಟಗಳ ಪ್ರದರ್ಶನಗಳ ಏರ್ಪಡಿಕೆ ಮಾಡಿದ್ದಾರೆ. ಬೆಂಗಳೂರಿನಲ್ಲಿ ಯಕ್ಷಗಾನ ಕಲೆಗೆ 100% ಭವಿಷ್ಯವಿದೆಯೆನ್ನುತ್ತಾರೆ

ಶ್ರೀ ಎ.ಎನ್. ಹೆಗಡೆಯವರು, ವೇಣುಗೋಪಾಲ್ ನಗರ, ಇನ್ನೊಬ್ಬ ಉತ್ತಮ ಯಕ್ಷ ಶಿಕ್ಷಕರಾಗಿದ್ದಾರೆ.

14) **ಯಕ್ಷ ಕುಟೀರ, ಬಸವೇಶ್ವರ ನಗರ (ಸ್ಥಾಪನೆ – 2011):** ಶ್ರೀನಿವಾಸ ಪ್ರಭು (ಗುಂಡ) ಯಕ್ಷಗಾನ ತರಬೇತಿಯನ್ನು ಕೊಡದಿದ್ದರೂ, ಹಲವಾರು ಆಟ ತಾಳಮದ್ದಳೆ, ಕಲಾವಿದರಿಗೆ (ತೆಂಕು–ಬಡಗು) ಪ್ರಶಸ್ತಿಗಳನ್ನು ಕೊಟ್ಟಿದ್ದಾರೆ. ನಗರದ ತೆಂಕು–ಬಡಗು ಹವ್ಯಾಸಿ ಬಳಗದ ಕಲಾವಿದರನ್ನು ಬಳಸಿಕೊಂಡು ಎರಡೂ ತಿಟ್ಟಿನ ಕಾರ್ಯಕ್ರಮಗಳನ್ನು ಕೊಡುವ ಸಂಸ್ಥೆಯಲ್ಲಿ ಇವರು ಒಬ್ಬರು.

15) **ರಂಗಸ್ಥಳ ಯಕ್ಷ ಮಿತ್ರಕೂಟ (ರಿ), ಹಲಸೂರು, ಬೆಂಗಳೂರು – 8 (ಸ್ಥಾಪನೆ – 2000):** ಕೆ.ಎಂ. ಶೇಖರ್, ಕುಂದಾಪುರ. ಬೆಂಗಳೂರು ಮಹಾನಗರದಲ್ಲಿ ಯಕ್ಷಗಾನಕ್ಕಾಗಿಯೇ 'ಒಂದು ಬಯಲು ರಂಗಮಂದಿರ' ಬೇಕೆಂಬುದು ಇವರ ಮಹದಾಸೆ. ಅದಕ್ಕಾಗಿ ಪ್ರಯತ್ನಿಸುತ್ತಿದ್ದಾರೆ. ಉದ್ಯಮಿ ದಯಾನಂದ ಪೈಗಳು ರೂ. 2000/–ದಂತೆ ಮಾಸಿಕವಾಗಿ ಕಳೆದ 4 ವರ್ಷಗಳಿಂದ ಅಶಕ್ತ ಕಲಾವಿದರಿಗೆ ಮಾಸಾಶನವನ್ನು ಕೊಡಿಸುತ್ತಿದ್ದಾರೆ. ಸ್ಥಾಪನೆ ಆದಂದಿನಿಂದ ಅಶಕ್ತ ಹಾಗೂ ನಿವೃತ್ತ 2 ಕಲಾವಿದರಿಗೆ 'ರಂಗಸ್ಥಳ' ಪ್ರಶಸ್ತಿಯನ್ನು ಕೊಡುತ್ತಿದ್ದಾರೆ. 40 ಜನ ಸದಸ್ಯರಿದ್ದಾರೆ. ಯಕ್ಷ ಪಂಚಮಿ, ಯಕ್ಷ ಸಪ್ತಮಿ, ತಾಳಮದ್ದಳೆ ಸಪ್ತಾಹಗಳನ್ನು ಏರ್ಪಡಿಸಿದ್ದಾರೆ. 2010ರಲ್ಲಿ ರವೀಂದ್ರ ಕಲಾಕ್ಷೇತ್ರದ ತಾಲೀಮು ಕೊಠಡಿಯಲ್ಲಿ ಗುರು ಹೆರೆಂಜಾಲು ತರಬೇತಿಯನ್ನು ಕೊಡಿಸಿದ್ದಾರೆ. 'ಉಡುಪಿ ಮಿತ್ರ' ಪತ್ರಿಕೆಯ ವರದಿಗಾರರಾಗಿರುವ ಶೇಖರರು ಈಗ 'ಜ್ಞಾನ–ಯೋಗಸ್ಥಾನ' ಎಂಬ ಉಚಿತ ಯೋಗ ತರಗತಿಗಳನ್ನು ನಡೆಸುತ್ತಿದ್ದಾರೆ.

16) **ಸಿರಿ ಕಲಾ ಮೇಳ (ರಿ), ಬೇಗೂರು:** ಸುರೇಶ ಹೆಗಡೆ ಕಡತೋಕ. ಯಕ್ಷಗಾನ ಯೋಗಕ್ಷೇಮ ಅಭಿಯಾನದ ರುವಾರಿ ದಿ. ವಿ.ಆರ್. ಹೆಗಡೆ ಮಾರ್ಗದರ್ಶನದಲ್ಲಿ ಹನುಮಂತನಗರದ ಕುಮಾರಸ್ವಾಮಿ ದೇವಳದಲ್ಲಿ 2010ಕ್ಕೆ ಪ್ರಾರಂಭವಾದ ಹೆಣ್ಮಕ್ಕಳ ಮೇಳದಲ್ಲೀಗ ಕುಮಾರಿ ಅರ್ಪಿತಾ ಹೆಗಡೆ (ಕೆಂಪೇಗೌಡ ಪ್ರಶಸ್ತಿ ವಿಜೇತೆ), ನಿಹಾರಿಕಾ ಕಾಸರಗೋಡು, ಸೌಮ್ಯ, ಅರುಣ, ನಾಗಶ್ರೀ ಗೀಜಗಾರು, ಗೀತಾ ಹೆಗಡೆ, ಮಯೂರಿ ಉಪಾಧ್ಯಾಯ ಮುಂತಾದವರಿದ್ದಾರೆ. ಈವರೆಗೆ ಸುಮಾರು 200ರ ಹತ್ತಿರ ಪ್ರದರ್ಶನಗಳನ್ನು ಕೊಟ್ಟಿದ್ದಾರೆ. ಅವರದ್ದೇ ಆದ ಸ್ವಂತ ವೇಷಭೂಷಣಗಳಿವೆ. ಬೆಂಗಳೂರಲ್ಲಿ

'ಯಕ್ಷ ಸಪ್ತಾಹ' ಹಾಗೂ ಉತ್ತರ ಕನ್ನಡದಲ್ಲಿ 'ಯಕ್ಷ ಪಂಚಮಿ'ಯನ್ನು ನಡೆಸುತ್ತಾರೆ. ಹೈದರಾಬಾದ್‌ಗೆ ಹೋಗಿದ್ದಾಗ 'ಮಲೆನಾಡು-ಕರಾವಳಿ ಮಿತ್ರ ಸಂಘದ ಮೂಲಕ' ಸುಪ್ರಭಾತ ಹೋಟೆಲ್ ಗ್ರೂಪಿನ ಕೃಷ್ಣಮೂರ್ತಿ ಮಂಜ್ರು, ಮಾರಣಕಟ್ಟೆಯವರ ಸಹಕಾರವನ್ನು ನೆನೆಯುತ್ತಾರೆ. ಟಿ.ಎಸ್. ಮಹಾಬಲೇಶ್ವರ ಹಾಗೂ ಪಿ.ವಿ. ಕೃಷ್ಣ ಭಟ್, ಕಾಸರಗೋಡು ಮತ್ತು ಶ್ರೀಮತಿ ಶ್ರೀದೇವಿ ಹೆಗಡೆಯವರ ಸಹಕಾರವೇ ನಮ್ಮ ತಂಡದ ಬೆನ್ನೆಲುಬು ಎನ್ನುತ್ತಾರೆ ಸುರೇಶ ಹೆಗಡೆ. ದಕ್ಷಯಜ್ಞ, ಭೀಷ್ಮ ವಿಜಯ, ಲವಕುಶ, ಕೃಷ್ಣಾರ್ಜುನ, ರುದ್ರ ಕೋಪ, ಧರ್ಮಾಂಗದ ದಿಗ್ವಿಜಯ, ನಾಗ ಪಂಚಮಿ, ಇವರು ಪ್ರದರ್ಶಿಸುವ ಆಖ್ಯಾನಗಳು.

17) **ಬಂಟರ ಸಂಘ :** ಬಂಟರ ಸಂಘದ ಆಶ್ರಯದಲ್ಲಿ ಯಕ್ಷಗಾನ ಸಮಿತಿಯನ್ನು ಆರಂಭಿಸಿ, ಸುಮಾರು 2 ವರ್ಷಗಳಿಂದ ವರ್ಷಕ್ಕೆ 25 ವಿದ್ಯಾರ್ಥಿಗಳಿಗೆ ಆರ್.ಎನ್.ಎಸ್. ಶಾಲೆಯಲ್ಲಿ ಯಕ್ಷಗಾನ ತರಬೇತಿಯನ್ನು ನೀಡಲಾಗುತ್ತಿದೆ. ಗುರುಗಳಾಗಿ ಬೇಗಾರ್ ಶಿವಕುಮಾರ್‌ರವರು ಸಂಘದ ಆಶ್ರಯದಲ್ಲಿ ಶಿಕ್ಷಣ ನೀಡುತ್ತಿದ್ದಾರೆ. ಕಲಾ ಪೋಷಕರಾದ ಬಂಟರ ಸಂಘದವರು ಪ್ರತಿ ವರ್ಷ ಯಕ್ಷೋತ್ಸವ ಮುಂತಾದ ಕಾರ್ಯಕ್ರಮಗಳನ್ನು ಮಾಡಿ, ಕಲಾವಿದರಿಗೆ ಸಹಾಯ ಧನವನ್ನು ನೀಡಿ ಗೌರವಿಸುತ್ತಾ ಬಂದಿದ್ದಾರೆ. ಯಕ್ಷಗಾನ ಸಮಿತಿಯ ಅಧ್ಯಕ್ಷರಾಗಿ ಸಂತೋಷ್ ಕುಮಾರ್ ಶೆಟ್ಟಿ, ಸಂಚಾಲಕರಾಗಿ ಶ್ರೀ ಬಿ. ಆನಂದರಾಮ ಶೆಟ್ಟಿ ಕಾರ್ಯ ನಿರ್ವಹಿಸುತ್ತಿದ್ದಾರೆ.

18) **ಯಕ್ಷ ಕಲಾ ರಂಗ :** ಶ್ರೀ ಎ.ಪಿ. ಕಾರಂತ್ ಹಾಗೂ ಹೆಚ್.ಬಿ. ರಾಜೀವ ಶೆಟ್ಟಿಯವರ ಸಂಚಾಲಕತ್ವದ ಈ ತಂಡವು ಕಳೆದ 40 ವರ್ಷಗಳಿಂದ ಯಕ್ಷಗಾನ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ. ರವೀಂದ್ರ ಕಲಾಕ್ಷೇತ್ರದಲ್ಲಿ ಇವು ನಡೆದಿವೆ.

19) **ಕರ್ನಾಟಕ ಯಕ್ಷ ಧಾಮ :** ಯಕ್ಷಗಾನ ಕಾರ್ಯಕ್ರಮಗಳನ್ನು ಸಂಘಟಿಸುತ್ತಾರೆ.

20) **ಭಾಗವತರು, ಬೆಂಗಳೂರು:** ಶ್ರೀ ಎ.ಪಿ. ಕಾರಂತರು ರೇವಣ್ಣನವರ ಸಹಯೋಗದೊಂದಿಗೆ ಪ್ರಾರಂಭಿಸಿದ ಈ ಸಂಸ್ಥೆ ಅನೇಕ ರಂಗಭೂಮಿ ಚಟುವಟಿಕೆಗಳನ್ನು ನಡೆಸುತ್ತಿದೆ, ಅವುಗಳಲ್ಲಿ ಯಕ್ಷಗಾನವೂ ಇದೆ.

21) **ಸಪ್ತಕ** : ಜಿ.ಎಸ್. ಹೆಗಡೆ. ವರ್ಷಕ್ಕೊಂದು ಸನ್ಮಾನ ಹಾಗೂ ಎರಡು ಕಾರ್ಯಕ್ರಮಗಳನ್ನು ಕೊಡುತ್ತಾರೆ. ಸಂಗೀತ ಇವರ ಪ್ರಧಾನ ಕ್ಷೇತ್ರವಾಗಿದೆ.

22) **ಮಂಟಪ ಉಪಾಧ್ಯರ 'ಏಕ ವ್ಯಕ್ತಿ ಯಕ್ಷಗಾನ'** : ಶ್ರೀ ಮಂಟಪ ಪ್ರಭಾಕರ ಉಪಾಧ್ಯರು ಶತಾವಧಾನಿ ಶ್ರೀ ಆರ್. ಗಣೇಶ್ ಅವರ ನಿರ್ದೇಶನದಲ್ಲಿ ಸಾವಿರಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡಿದ್ದಾರೆ.

23) **ಯಕ್ಷಗಾನ ಯೋಗಕ್ಷೇಮ ಅಭಿಯಾನ, ಹನುಮಂತ ನಗರ** : ದಿ. ವಿ.ಆರ್. ಹೆಗಡೆ. ಹೆಗಡೆ ಮನೆಯವರ ನಿಧನದಿಂದ ಈ ಅಭಿಯಾನವು ಮಂಕಾದರೂ, ಅವರು ಬೆಂಗಳೂರು ನಗರದಲ್ಲಿ ಎಬ್ಬಿಸಿದ ಯಕ್ಷಗಾನದ ಅಲೆ ಅಥವಾ ಅಬ್ಬರವನ್ನು ಯಾರೂ ಮರೆಯುವಂತಿಲ್ಲ. ಊರ-ಪರವೂರ ಯಕ್ಷಗಾನ ತಂಡಗಳನ್ನು ಕರೆಯಿಸಿ, ಲಕ್ಷಲಕ್ಷದ ಹಮ್ಮಿಣಿಯೊಂದಿಗೆ ಸನ್ಮಾನ, ಯಕ್ಷ ಸಪ್ತಾಹ, ದಶಮಿ, ಪಂಚಮಿ ಮುಂತಾದ ಜನಪ್ರಿಯ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದರು. ತೆಂಕು ಬಡಗು ಭೇದವಿಲ್ಲದೆ ಕೈಲಾದ ಸಹಾಯವನ್ನು ಮಾಡುತ್ತಿದ್ದರು. ಅವರಿಗೊಂದು ನನ್ನ ಗೌರವಪೂರ್ವಕ ಸೆಲ್ಯೂಟ್.

24) **ಯಕ್ಷಪ್ರೇಮಿ ವಕೀಲರ ಬಳಗ.**

25) **ಮೈಯಾಸ್ ಯಕ್ಷಗಾನ.**

26) **ಸೃಷ್ಠಿ ಸಾಂಸ್ಕೃತಿಕ ಕಲಾ ಸಂಘ, ಬೆಂಗಳೂರು.**

27) **ಕಾಳಿಂಗ ಯಕ್ಷ ಕಲಾ ವೈಭವ.**

28) **ಕರಾವಳಿ ಮಿತ್ರ ಬಳಗ – ಬಸವೇಶ್ವರ ನಗರ.**

29) **ವಿಶ್ವಕರ್ಮ ಸಾಂಸ್ಕೃತಿಕ ವೇದಿಕೆ – ಯಲಹಂಕ.**

30) **ಹವ್ಯಕ ಯಕ್ಷಗಾನ ವೇದಿಕೆ – ಮಲ್ಲೇಶ್ವರಂ.**

ಇವರೆಲ್ಲರೂ ಬೆಂಗಳೂರಿನಲ್ಲಿ ಯಕ್ಷಗಾನವು ಸಕ್ರಿಯುವಾಗಿರಲು ಕಾರಣರಾದವರು.

ಅಲ್ಲದೇ ಜಾತಿ ಆಧಾರಿತ ಕರಾವಳಿ, ಮಲೆನಾಡ ಮೂಲದ ಗಾಣಿಗ, ವಿಶ್ವಕರ್ಮ, ಮರಾಠಿ ನಾಯಕ್, ಬಂಟ, ಕೋಟ, ಹವ್ಯಕ, ಶಿವಳ್ಳಿ, ಸ್ಥಾನಿಕ, ಮಡಿವಾಳ, ಮೂಲ್ಯ, ಮೊಗವೀರ..........ಮುಂತಾದ ಜಾತಿ ಸಂಘಟನೆಗಳಡಿಯಲ್ಲಿ

ಸಾಂದರ್ಭಿಕವಾಗಿ ಆಗಾಗ ಯಕ್ಷಗಾನೀಯವಾದ ಹತ್ತು ಹಲವು ಕಾರ್ಯಕ್ರಮಗಳು, ಸನ್ಮಾನ ಪ್ರಶಸ್ತಿಗಳು ನಡೆಯುತ್ತಿರುತ್ತದೆ.

ತೆಂಕುತಿಟ್ಟು ಮೂಲದ ಸಂಸ್ಥೆಗಳು:

1) **ಜ್ಞಾನಶಕ್ತಿ ಸಾಂಸ್ಕೃತಿಕ ವೇದಿಕೆ, ಕೊಡಿಗೆಹಳ್ಳಿ, ಮಾಗಡಿ ರಸ್ತೆ (ಸ್ಥಾಪನೆ – 2001):** ಸಂಚಾಲಕರು ಶರವೂರು ಸುಬ್ರಹ್ಮಣ್ಯ ರಾವ್. ಇದರ 17ನೇ ವಾರ್ಷಿಕೋತ್ಸವವು ಇತ್ತೀಚೆಗೆ ನಡೆಯಿತು. ಇವರು ಒಬ್ಬೊಬ್ಬರ ಮನೆಯಲ್ಲಿ ತಿಂಗಳಿಗೊಂದು ತಾಳಮದ್ದಳೆಯನ್ನು ನಡೆಸುತ್ತಿದ್ದಾರೆ. ಇದು ಸ್ಥಾನಿಕ ಬ್ರಾಹ್ಮಣ ಅಂಗಸಂಸ್ಥೆ.

2) **ಸಾಂಗತ್ಯ ಕಲಾ ಚಾವಡಿ, ಹನುಮಂತ ನಗರ, ಸ್ಥಾಪನೆ – 2013:** ಸಂಚಾಲಕರು: ಶರವೂರು ಶ್ರೀಮತಿ ಶೋಭಾ ಸುಬ್ರಹ್ಮಣ್ಯ ರಾವ್. ಇದರಲ್ಲಿ ನಾಲ್ಕು ವಿದ್ಯಾರ್ಥಿನಿಯರು ಸೇರಿ 10 ಜನರಿಗೆ ಶ್ರೀ ಕಾರ್ತಿಕ್ ಕೋರ್ಡೆಲ್ ನಾಟ್ಯ ತರಬೇತಿಯನ್ನು 6 ವರ್ಷಗಳ ಕಾಲ ಕೊಟ್ಟಿದ್ದಾರೆ. ಶ್ರೀ ಸಬ್ಬಣ್ಣ ಕೋಡಿ ರಾಮ ಭಟ್ಟರು 2000ನೇ ಇಸವಿಯಲ್ಲಿ ಎರಡೂವರೆ ವರ್ಷಗಳ ಕಾಲ ತಿಂಗಳಿಗೊಮ್ಮೆ ಒಂದು ವಾರದ ಕಾಲ ಇದ್ದು ತರಬೇತಿ ಕೊಡುತ್ತಿದ್ದರು. ಸುದರ್ಶನ ವಿಜಯ, ಶಾಂಭವಿ ವಿಲಾಸ, ಕುಶ ಲವ, ಜಾಂಬವತಿ ಕಲ್ಯಾಣ, ಮಹಿಷಾಸುರ ವಧೆ, ಇವರಾಡುವ ಪ್ರಮುಖ ಪ್ರಸಂಗಗಳಾಗಿವೆ.

3) **ಯಕ್ಷ ವಾರಿಧಿ:** ಎಂ.ಎಸ್. ರಾಮಯ್ಯ ಆಸ್ಪತ್ರೆ ಪಕ್ಕ, ವೆಂಕಟೇಶ್ವರ ಲೇ ಔಟ್, ನ್ಯೂ ಬಿ.ಇ.ಎಲ್. ರಸ್ತೆ. ಸಂಚಾಲಕರು: ನರಸಪ್ಪಯ್ಯ ಕಾರಂತ, ಬಿ.ಸಿ. ರೋಡ್. ಕಾರ್ತಿಕ್ ಕೋರ್ಡೆಲ್ ಸ್ಥಳೀಯ ಗೋಕುಲ ಕಲ್ಯಾಣ ಮಂಟಪದಲ್ಲಿ ಒಂದೂವರೆ ತಿಂಗಳು ನಾಟ್ಯ ಕ್ಲಾಸನ್ನು ನಡೆಸಿದ್ದಾರೆ. ಈಗ ಮಣಿಮುಂಡ ಸುಬ್ರಹ್ಮಣ್ಯ ಶಾಸ್ತ್ರಿಗಳು ಹಿಮ್ಮೇಳ ತರಬೇತಿಯನ್ನು ಕೊಡುತ್ತಿದ್ದಾರೆ. ನಾಟ್ಯವನ್ನು ರಘು ಮಂಗಳೂರು (ಕಾಫಿ ಬೋರ್ಡ್) ನಡೆಸುತ್ತಿದ್ದಾರೆ. ಈವರೆಗೆ 18 ಪ್ರದರ್ಶನಗಳನ್ನು ಏರ್ಪಡಿಸಿದ್ದಾರೆ. ಜಯಪ್ರಕಾಶ್ – ಕಾಕ್ಸ್‌ಟೌನ್ ಚೆಂಡೆವಾದನ ತರಬೇತಿಯನ್ನು ಕೊಡುತ್ತಿದ್ದಾರೆ. ಮೊದಲು ಈ ಸಂಸ್ಥೆಗೆ 'ಯಕ್ಷ ವಿಲಾಸ'ವೆಂದೂ ತದನಂತರ 'ಯಕ್ಷ ಸಿಂಚನ'ವೆಂತಲೂ, ಕಡೆಗೆ ಈಗ 'ಯಕ್ಷ ವಾರಿಧಿ' ಆಗಿದೆ. ಕಾರ್ತಿಕ್ ಕೋರ್ಡೆಲ್ ಅತ್ಯುತ್ತಮ ನಾಟ್ಯ ಗುರುವೆಂಬುದು ಇವರ ಅನಿಸಿಕೆ.

4) **ಶ್ರೀ ಗುರು ರಾಘವೇಂದ್ರ ಯಕ್ಷ ಕಲಾ ವೃಂದ :** ಐ.ಟಿ.ಐ. ದೂರವಾಣಿ ನಗರ, ಬೆಂಗಳೂರು – 12. ಸಂಚಾಲಕರು: ಕೃಷ್ಣ ಪ್ರಸಾದ್ ಪಾವಂಜೆ. 2012ರ

ಅಕ್ಟೋಬರ್‌ನಲ್ಲಿ ಪ್ರಾರಂಭವಾದ ಈ ಸಂಸ್ಥೆಯಲ್ಲಿ 12 ಜನ ಕಲಾವಿದರಿದ್ದು, ಸುಮಾರು 12 ಆಟಗಳನ್ನೂ, ತಾಳಮದ್ದಳೆ ಕಾರ್ಯಕ್ರಮಗಳನ್ನೂ ಕೊಟ್ಟಿದೆ. ಪಾವಂಜೆ ಸೀತಾರಾಂ ಭಟ್ ಅಧ್ಯಕ್ಷರು, ಯು.ಬಿ. ಗುರುರಾಜ ರಾವ್ ಗೌರವಾಧ್ಯಕ್ಷ, ಅನಂತ ಭಟ್ ಪಾವಂಜೆ ಕಾರ್ಯದರ್ಶಿ, ರಾಘವೇಂದ್ರ ಉಡುಪಿ ಸಹಕಾರ್ಯದರ್ಶಿ, ವಾಸುದೇವ ಭಟ್ ಎರ್ಮಾಳ್ ಭಾಗವತರಾದರೆ, ಅಜೇಯಕೃಷ್ಣ ಹಿಮ್ಮೇಳದಲ್ಲಿ ಸಹಕರಿಸುತ್ತಾರೆ. ದೂರವಾಣಿ ನಗರದ ರಾಘವೇಂದ್ರ ಮಠವೇ ಇವರ ಕೇಂದ್ರ ಸ್ಥಾನ. ಪ್ರತೀ ಗುರುವಾರ 'ಚೆಂಡೆ ವಾದನ'ದ ಸೇವೆ ನಡೆಯುತ್ತದೆ. ರಾಘವೇಂದ್ರ ಆರಾಧನೆಗೆ 'ಯಕ್ಷಗಾನ ಬಯಲಾಟ'ವನ್ನು ಏರ್ಪಡಿಸುತ್ತಾರೆ. 2012ರಲ್ಲಿ ಚೆನ್ನೈಯ ನಾಗೇಶ್ವರ ರಾವ್ ಪಾರ್ಕ್‌ನಲ್ಲಿ ಮೂರು ದಿನಗಳ ಕಾಲ ನಡೆದ 'ಸಮಾಗಮ' ಫೆಸ್ಟಿವಲ್‌ನಲ್ಲಿ ಭಾಗವಹಿಸಿದ್ದರು. ಅಲ್ಲದೆ ವಿವಿಧ ಕಲಾ ಪ್ರಕಾರಗಳ 30 ತಂಡಗಳಲ್ಲಿ 'ಯಕ್ಷಗಾನ'ಕ್ಕೆ ಪ್ರಥಮ ಪ್ರಶಸ್ತಿಯನ್ನು ಪಡೆದುಕೊಂಡು ಬಂದಿರುವುದು ಇವರ ಹೆಗ್ಗಳಿಕೆ.

5) **ಯಕ್ಷ ಕಲಾರಂಜಿನಿ (ರಿ):** ಮಿತ್ತೂರು ಈಶ್ವರ ಭಟ್ ಜಯನಗರ, ಇವರ ನೇತೃತ್ವದಲ್ಲಿ ಅಸಂಖ್ಯ ಕಾರ್ಯಕ್ರಮಗಳನ್ನು ಆಯೋಜಿಸಿದ ಸಂಸ್ಥೆ.

6) **ಯಕ್ಷಾಂಗಣ:** ಜೆ.ಪಿ. ನಗರ ಶಂಕರನಾರಾಯಣ ಉಪಾಧ್ಯಾಯ, ಕಟೀಲು. ಇವರ ನಿರ್ದೇಶನದಲ್ಲಿ ಈ ಸಂಸ್ಥೆ ಬೆಂಗಳೂರಿನಲ್ಲಿ ಯಕ್ಷಗಾನ ಕಾರ್ಯಕ್ರಮಗಳನ್ನು ನೀಡಿದೆ.

7) **ರಾಜ್‌ಕುಮಾರ್ ಮತ್ತು ಮಿತ್ರರು:** ಗಾಯತ್ರೀ ನಗರ. ಇವರು 'ಯಕ್ಷಚಿಂತನ ಬ್ಲೋಗ್ ಸ್ಪೋಟ್'ನಲ್ಲಿ ಯಕ್ಷಗಾನದ ಕುರಿತು ಅತ್ಯುತ್ತಮ ವಿಮರ್ಶೆ, ಲೇಖನಗಳಲ್ಲಿ ಬರೆಯುವುದಲ್ಲದೇ, ಹಲವಾರು ಭಾಗವತರ ಹಾಡುಗಳನ್ನು ಅಪ್‌ಲೋಡ್ ಮಾಡಿದ್ದಾರೆ. ಇವರ ಹತ್ತಿರ ತಾಳಮದ್ದಳೆ, ಆಟಗಳ, ಬೃಹತ್ ಸಂಗ್ರಹವೇ ಇದೆ. ತನ್ನ ಮನೆಯಲ್ಲಿಯೇ ಮಿತ್ರರೆಲ್ಲ ಸೇರಿ ಭಾಗವತಿಕೆ, ಅರ್ಥ ವಿಮರ್ಶೆಗಳನ್ನು ನಡೆಸುತ್ತಾರೆ. ಬಲಿಪ ನಾರಾಯಣ ಭಾಗವತರ ದೊಡ್ಡ ಅಭಿಮಾನಿ. ಶುದ್ಧ ತೆಂಕುತಟ್ಟಿನ 'ಬಲಿಪ ಶೈಲಿ'ಯು ಬೆಂಗಳೂರಲ್ಲಿ ಪ್ರಚಾರ ಪ್ರಸಾರವಾಗಬೇಕೆಂಬುದು ಇವರ ಮಹದಾಸೆ.

8) **ಶ್ರೀ ಕಲಾ ಸಂಗಮ:** ಶ್ರೀನಗರ– ಶರವೂರು ಶ್ರೀನಿವಾಸ ರಾವ್. ಇವರು ಹಲವಾರು ಯಕ್ಷಗಾನ ಕಾರ್ಯಕ್ರಮಗಳನ್ನು ಸಂಘಟಿಸುತ್ತಾರೆ. 'ನಾದ ತರಂಗಿಣಿ'

ಎಂಬ ಕೂಟದ ಮೂಲಕ ದಕ್ಷಿಣ ಕನ್ನಡ ಜಿಲ್ಲೆಯ ಪಾರಂಪರಿಕ ಚೆಂಡೆ, ಡೋಲು, ಕೊಂಬು (ಕಹಳೆ), ಚಕ್ರತಾಳಗಳ ಝೇಂಕಾರವನ್ನು ಪಸರಿಸುತ್ತಿದ್ದಾರೆ.

9) **ಶ್ರೀ ದುರ್ಗಾಂಬಾ ಕಲಾ ಸಂಗಮ:** ಗಿರಿನಗರ, ರಮಾಕಾಂತ ಭಟ್, ಲೆಕ್ಕ ಪರಿಶೋಧಕರು.

10) **ಯಕ್ಷ ದಿಶಾ:** ಬೆಂಗಳೂರು, ಡಾ. ಗಿರೀಶ ದೈಗೋಳಿ.

11) **ಯಕ್ಷ ಲೋಕ:** ಹೆಣ್ಣೂರು ಕ್ರಾಸ್, ಪೂಕಳ ಕೃಷ್ಣ ಭಟ್.

12) **ಯಕ್ಷ ಪ್ರಭಾ:** ಬಾಣಸವಾಡಿ. ಸ್ವಯಂ ಪ್ರಕಾಶ್ ದಿ. ಪ್ರಭಾಕರ ಶೆಟ್ರಿಂದ ಪ್ರಾರಂಭವಾಗಿ ಈಗ ಸ್ವಯಂ ಪ್ರಕಾಶ ಸುಳ್ಯ ವಕೀಲರು ಮುನ್ನಡೆಸುತ್ತಿದ್ದಾರೆ.

13) **ಅರ್ಜುನ್ ಕೋರ್ಡೆಲ್:** ಶ್ರೀನಗರ. ತೆಂಕಿನ ವೇಷಭೂಷಣ ಹಾಗೂ ಹಿಮ್ಮೇಳ ಪರಿಕರಗಳಿವೆ. ಇವರೆಲ್ಲ ತೆಂಕು ತಿಟ್ಟಿ ಯಕ್ಷಗಾನ ಪ್ರಸಾರಕ್ಕೆ ಸಹಕರಿಸಿದವರು.

(ಈ ಲೇಖನವನ್ನು ಫೋನಿನ ಮೂಲಕ ಸಂಗ್ರಹಿಸಿದ ಮಾಹಿತಿಗಳಿಂದ ರಚಿಸಿದ ಕಾರಣ, ಸಂಘ ಸಂಸ್ಥೆಗಳ ಹೆಸರಾಗಲೀ, ವ್ಯಕ್ತಿಗಳ ಹೆಸರಾಗಲೀ ಅಥವಾ ಮಾಹಿತಿಗಳಲ್ಲಿ ತಪ್ಪುಗಳಿದ್ದರೆ, ಅದು ಸಾಂದರ್ಭಿಕವೇ ಹೊರತು ಉದ್ದೇಶಪೂರ್ವಕ ಅಲ್ಲವೆಂದು ನನ್ನ ವಿನಮ್ರ ವಿನಂತಿ.)

ಯಕ್ಷಗಾನಂ ಗೆಲ್ಗೆ – ಯಕ್ಷಗಾನಂ ಬಾಳ್ಗೆ – ಯಕ್ಷಗಾನಂ ಏಳ್ಗೆ

* * *

ಲೇಖಕರ ಪರಿಚಯ

ರಾಜಗೋಪಾಲ್ ಕನ್ಯಾನರು ದಿನಾಂಕ 08.07.1963ರಂದು ಮರ್ತನಾಡಿ ಭೀಮಭಟ್ಟ ಹಾಗೂ ವೆಂಕಟೇಶ್ವರಿ ಅಮ್ಮ ಅವರ ದ್ವಿತೀಯ ಪುತ್ರನಾಗಿ ಜನಿಸಿದರು. ಇವರ ಪ್ರಾಥಮಿಕ ಶಿಕ್ಷಣ ಬಂಟ್ವಾಳ ತಾಲೂಕಿನ ಕನ್ಯಾನ, ನೀರ್ಪಾಡೆ, ಹೆಬ್ರಿಗಳಲ್ಲೂ ಮುಂದೆ ಮಂಗಳೂರು ಹಾಗೂ ಮೈಸೂರುಗಳಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿ ಶಿಕ್ಷಣಗಳನ್ನು (ಬಿ.ಕಾಂ.ಎಂ.ಎ) ಗಳಿಸಿದರು. ಯಕ್ಷಗಾನದ ಬಗ್ಗೆ ಅತೀವ ಆಸಕ್ತಿ ಉಳ್ಳ ಇವರು ಅನೇಕ ಸಂಸ್ಥೆಗಳಲ್ಲಿ ಹವ್ಯಾಸಿ ಕಲಾವಿದರಾಗಿ, ತಾಳಮದ್ದಲೆಯಲ್ಲಿ ಅರ್ಥದಾರಿಗಳಾಗಿ ಭಾಗವಹಿಸಿದ್ದಾರೆ. ಮೊದಲಿಗೆ ಬೆಂಗಳೂರು, ಮುಂಬಯಿ, ದುಬೈಗಳಲ್ಲಿ ಉದ್ಯೋಗಗಳಲ್ಲಿದ್ದು ಈಗ ಕನ್ಯಾನದಲ್ಲಿ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಬೆಂಗಳೂರಿನ "ಯಕ್ಷಕರ್ದಮ" ಸಂಸ್ಥೆಯ ಬೆಳವಣಿಗೆಯಲ್ಲಿ ಇವರ ಪಾತ್ರ ಹಿರಿದು. ಉತ್ತಮ ಸಂಘಟಕರು, ಯಕ್ಷಗಾನ ಲೇಖಕರು, ವೇಷಧಾರಿ ಹಾಗೂ ಅರ್ಥದಾರಿಯಾಗಿ ಯಕ್ಷಗಾನ ರಂಗದ ಎಲ್ಲರಿಗೂ ಚಿರಪರಿಚಿತರು. ಇವರು ಹತ್ತಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ತುಳು ಸಾಹಿತ್ಯ, ಸಂಸ್ಕೃತಿಗಳಲ್ಲಿ ಪ್ರೀತಿ ಉಳ್ಳ ಕನ್ಯಾನರು ತುಳು ಸಂಘಟನೆಗಳಲ್ಲೂ ಜನಾನುರಾಗಿಯಾಗಿದ್ದಾರೆ. ಯಕ್ಷಗಾನ ಪ್ರಸಂಗಗಳ ಬಗ್ಗೆ ಆಸಕ್ತಿ ಉಳ್ಳ ಇವರು ಹನುಮಂತನಿಗೆ ಸಂಬಂಧಿಸಿ "ಶ್ರೀ ವೀರಾಂಜನೇಯ ವೈಭವ" ಎಂಬ ಕೃತಿಯನ್ನು ಪ್ರಕಟಿಸುವಲ್ಲಿ ವಹಿಸಿದ ಪಾತ್ರವನ್ನು ಯಕ್ಷಗಾನ ಸಾಹಿತ್ಯಾಸಕ್ತರು ಮರೆಯುವಂತಿಲ್ಲ. ಇವರು 'ಕುವೆಂಪುಶ್ರೀ' ಪ್ರಶಸ್ತಿ ವಿಜೇತರಾಗಿದ್ದು ಪತ್ನಿ ಪ್ರತಿಮಾ ಹಾಗೂ ಪುತ್ರಿ ನಯನಾಶಂಕರಿ ಯವರೊಂದಿಗೆ ಕನ್ಯಾನದಲ್ಲಿ ಸಂತೃಪ್ತ ಜೀವನ ನಡೆಸುತ್ತಿದ್ದಾರೆ.

ಕಾರಂತರ ಬ್ಯಾಲೆಗೆ ಸಾರ್ಥಕ ಮರು ನಿರ್ಮಾಣ

ಡಾ॥ ಆನಂದರಾಮ ಉಪಾಧ್ಯ

ಗ್ರಾಮೀಣಭಾರತ ನಗರಭಾರತದೆಡೆಗೆ ಹೊರಳುತ್ತಿರುವ ಸಂಕ್ರಮಣದ ಕಾಲವಿದು. ನಗರಗಳ ದಾಪುಗಾಲಿನ ನಡಿಗೆಯ ಅಡಿಯಲ್ಲಿ ನಮ್ಮ ಹಳ್ಳಿಗಳು ನಲುಗುತ್ತಿವೆ. ಗ್ರಾಮೀಣರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ವ್ಯವಸ್ಥೆಗಳೆಲ್ಲ ಕುಸಿಯುತ್ತಿದ್ದು ನಗರಪರದನಿಯೇ ಮಾರ್ದನಿಗೊಳ್ಳುತ್ತಿದೆ. ಹಿಂದೆಲ್ಲ ಹಳ್ಳಿಗರ ರಾತ್ರಿಯನ್ನೆಲ್ಲ ಬೆಳಗುಮಾಡಿ, ಅವರ ಬದುಕನ್ನು ಶ್ರೀಮಂತಗೊಳಿಸಿ, ಅವರ ಬೌದ್ಧಿಕ, ನೈತಿಕ, ಪಾರಮಾರ್ಥಿಕ ವಿಕಾಸಕ್ಕೆ ಕಾರಣವಾದ ಯಕ್ಷಗಾನ ಇಂದು ನಲುಗುತ್ತಿರುವ ಹಳ್ಳಿಗಳಿಂದ ಗುಳೆಹೊರಡುವ ಸ್ಥಿತಿ ನಿರ್ಮಾಣವಾಗುತ್ತಿದೆ. ಇಂತಹ ಸಂದರ್ಭದಲ್ಲಿ ಬೆಂಗಳೂರಿನ ಕರ್ನಾಟಕ ಕಲಾದರ್ಶಿನಿಯಂತಹ ತಂಡಗಳು ವಹಿಸುತ್ತಿರುವ ಶ್ರಮ, ನಡೆಸುತ್ತಿರುವ ಕಾರ್ಯಗಳು ಆಂತಕಗೊಂಡ ಮನಸ್ಸಿಗೆ ಸಮಾಧಾನ ತರುವಂತಿವೆ. ಯಕ್ಷಗಾನದಂತಹ ಪಾರಂಪರಿಕ ಕಲೆ ಹೊಸವ್ಯವಸ್ಥೆಗೆ ತೆರೆದುಕೊಳ್ಳಬೇಕಾದ ದಾರಿಯನ್ನು, ಗಳಿಸಿಕೊಳ್ಳಬೇಕಾದ ರೂಪವನ್ನು ಸೂಚಿಸುವ ಕಾಯಕವನ್ನು ಇಂತಹ ತಂಡಗಳು ನೀಡುತ್ತಿವೆ. ಇದಕ್ಕಾಗಿಯೇ ಜನಮನ್ನಣೆಯನ್ನು ಗಳಿಸುತ್ತಿವೆ.

ಯಕ್ಷಗಾನದ ಬಗ್ಗೆ ಅಪಾರ ಅಭಿಮಾನ, ಪ್ರೀತಿ, ಆಸ್ತೆ ಉಳ್ಳ ಶ್ರೀನಿವಾಸ ಸಾಸ್ತಾನ ಹಾಗೂ ಗೌರಿಸಾಸ್ತಾನ ಅವರ ಅವಿರತ ಶ್ರಮದ ಫಲವಾಗಿ ಉದಯಿಸಿದ ಸಂಸ್ಥೆಯೇ 'ಕರ್ನಾಟಕ ಕಲಾದರ್ಶಿನಿ'. ಮೂಲತಃ ಯಕ್ಷಗಾನ ಕಲಾವಿದರು, ಗುರುಗಳು ಹಾಗೂ ಹವ್ಯಾಸಿ ತಂಡಗಳನ್ನು ಸಮರ್ಥವಾಗಿ ನಡೆಸಿಕೊಂಡು ಹೋಗಬಲ್ಲ ಸಾಮರ್ಥ್ಯವುಳ್ಳ ಸಾಸ್ತಾನ ದಂಪತಿಗಳ ಸಾಧನೆ ಯಕ್ಷಗಾನ ಕ್ಷೇತ್ರದಲ್ಲಿ ಅಸಾಮಾನ್ಯವಾದದ್ದು. ಇವರಿಬ್ಬರೂ ಯಕ್ಷಗಾನ ಬಯಲಾಟ ಅಕಾಡೆಮಿಯ ಸದಸ್ಯರಾಗಿದ್ದು ಯಕ್ಷಗಾನದ ಬೆಳವಣಿಗೆಗೆ ಸಕ್ರಿಯವಾಗಿ ದುಡಿದವರು. ಇವರು ಕಟ್ಟಿ ಬೆಳೆಸಿದ ಕಲಾದರ್ಶಿನಿ ತಂಡ ರಾಷ್ಟ್ರದಾದ್ಯಂತ ಯಕ್ಷಗಾನ ಪ್ರದರ್ಶನ ನೀಡಿರುವುದೇ ಅಲ್ಲದೆ ಹೊರ ದೇಶಗಳಾದ ಅಮೆರಿಕಾ, ಚೀನಾ, ದುಬೈ, ಕುವೈತ್, ಬೆಹರಿನ್,

ಜರ್ಮನಿ, ಸಿಂಗಾಪುರ, ನೇಪಾಳದಲ್ಲೂ ಪ್ರದರ್ಶನ ನಡೆಸಿ ಅಲ್ಲಿನವರ ಮೆಚ್ಚುಗೆ ಗಳಿಸಿದೆ. ಈಗಾಗಲೇ ಆಕಾಶವಾಣಿ, ದೂರದರ್ಶನ, ಇತರ ಟಿವಿ ಮಾಧ್ಯಮಗಳಲ್ಲೂ ಕೂಡ ನಿರಂತರ ಪ್ರದರ್ಶನ ನೀಡುತ್ತಿರುವ ಇಲ್ಲಿನ ಕಲಾವಿದರು ಆರ್‌ಬಿಐ, ಐಸಿ.ಸಿ.ಆರ್ ಮುಂತಾದ ಸ್ವಾಯತ್ತ ಸಂಸ್ಥೆಗಳ ಕಾರ್ಯಕ್ರಮಗಳಲ್ಲೂ ಭಾಗಿಗಳಾಗಿ ನಾಡಿನ ಉದ್ದಗಲದಲ್ಲೂ ಪರಿಚಿತರಾದವರು. ಭಾರತ ಗಣರಾಜ್ಯೋತ್ಸವದಲ್ಲಿ ಎರಡು ಭಾರಿ ರಾಜ್ಯವನ್ನು ಪ್ರತಿನಿಧಿಸಿರುವ ಈ ಕಲಾತಂಡದಲ್ಲಿ ಮಕ್ಕಳ ಮೇಳ, ಮಹಿಳೆಯರ ಮೇಳಗಳಿದ್ದು ಯಕ್ಷಗಾನದ ಕಾಲಮಿತಿ ಪ್ರದರ್ಶನಗಳನ್ನು ಪ್ರದರ್ಶಿಸುತ್ತಿವೆ. ಸಾಸ್ತಾನ ದಂಪತಿಗಳು ವಿಶ್ವಕನ್ನಡ ಸಮ್ಮೇಳನ ಹಾಗೂ ಸುವರ್ಣ ಕರ್ನಾಟಕದ ಉತ್ಸವಗಳಲ್ಲಿ ಅಸಂಖ್ಯ ಜಾನಪದಕಲಾವಿದರನ್ನು ನೃತ್ಯ ಸಂಯೋಜನೆಗೆ ಒಳಪಡಿಸಿದ ಹಿರಿಮೆಯನ್ನು ಗಳಿಸಿದ್ದಾರೆ. ಯಕ್ಷ ಶಿಕ್ಷಣಕ್ಕಾಗಿ ತಮ್ಮದೇ ಆದ 'ಯಕ್ಷಗುರು ಕುಲ' ಹೊಂದಿದ್ದು ಮಕ್ಕಳು, ಮಹಿಳೆಯರ ಹಾಗೂ ಹವ್ಯಾಸಿಗಳಿಗೆ ನಿರಂತರವಾಗಿ ಯಕ್ಷಗಾನ ತರಗತಿಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಹೀಗೆ ವೈವಿಧ್ಯಮಯವಾದ ಕಾರ್ಯಗಳ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯ ಸೇರ್ಪಡೆಯಾದದ್ದು ಈಚೆಗೆ ಪ್ರದರ್ಶನಗೊಳ್ಳುತ್ತಿರುವ ಅವರ "ಯಕ್ಷಗಾನ ಬ್ಯಾಲೆ".

ಯಕ್ಷಗಾನ ಬ್ಯಾಲೆ ಡಾ॥ ಶಿವರಾಮ ಕಾರಂತರ ಕನಸಿನ ಕೂಸು. ಅವರಿದ್ದಷ್ಟು ಕಾಲ ಅದು ದೇಶದಾದ್ಯಂತ ಪ್ರದರ್ಶನ ಗೊಂಡದ್ದೆ ಅಲ್ಲದೆ ದೇಶದ ಹೊರಗೆ ಟರ್ಕಿ, ರಷ್ಯ, ದಕ್ಷಿಣ ಅಮೇರಿಕಾ, ಬಲ್ಗೇರಿಯಾ, ಜಪಾನ್, ಇಂಗ್ಲೆಂಡ್ ಮುಂತಾದ ಕಡೆಯಲ್ಲೂ ಪ್ರದರ್ಶನಗಳ ಮೂಲಕ ಜಯಭೇರಿ ಬಾರಿಸಿದೆ. ಕನ್ನಡ ತಿಳಿಯದ ಹೃದಯಗಳಿಗೆ ಯಕ್ಷಗಾನದ ಸವಿ ಉಣಿಸುವ ಸಂಕಲ್ಪದಿಂದ ಜನ್ಮ ತಳೆದ ಈ ಯಕ್ಷಗಾನ ಪ್ರಕಾರದಲ್ಲಿ ಗದ್ಯದಲ್ಲಿ ಆಡುವ ಸಂಭಾಷಣೆ ಇರುವುದಿಲ್ಲ. ಕೋರಿಯೋಗ್ರಫಿಯಲ್ಲಿ ವಿಭಿನ್ನತೆಯನ್ನು ತಂದ ಕಾರಂತರು ಹಿಮ್ಮೇಳದಲ್ಲಿ ಭಾವಸ್ಪಂದನೆಗೆ ಅಗತ್ಯವಾಗುವ ಸುಧಾರಣೆಗಳನ್ನು ಮಾಡಿದರು. ಪಿಟೀಲು, ಸ್ಯಾಕ್ಸೊಫೋನ್‌ಗಳನ್ನು ಬಳಕೆಗೆ ತಂದರು. ವೇಷ ಭೂಷಣದಲ್ಲಿ ಸಾಂಪ್ರದಾಯಿಕತೆಗೆ ಮನ್ನಣೆ ತರುವುದರೊಂದಿಗೆ ಬೆಳಕಿನ ವಿನ್ಯಾಸಕ್ಕೆ ಒದಗುವ ಸುಧಾರಣೆಗಳನ್ನು ತಂದರು. ಯಕ್ಷಗಾನದ ಸ್ತ್ರೀವೇಷಕ್ಕೆ ಶ್ರೀಮಂತಿಕೆಯ ನೋಟ ಬರುವಂತೆ ಮಾಡಿದರು. ಈ ಬಗೆಯ ಬದಲಾವಣೆಯಿಂದ ರಂಗದಲ್ಲಿ ಪ್ರಚಾರಗೊಂಡ ಯಕ್ಷಗಾನ ಬ್ಯಾಲೆ ಡಾ॥ ಕಾರಂತರ ಮರಣಾನಂತರ ಸ್ಥಭ್ಧಗೊಂಡಿತ್ತು. ಇದೀಗ ಬೆಂಗಳೂರಿನ ಕರ್ನಾಟಕ ಕಲಾದರ್ಶಿನಿ ತಂಡವು ಡಾ॥ ಕಾರಂತರ ಯಕ್ಷಗಾನ ಬ್ಯಾಲೆಯ ಮರು ನಿರ್ಮಾಣದ ಸಾಹಸಕ್ಕೆ ದುಮುಕಿ ಯಶಸ್ವಿಯಾಗಿದೆ.

ಸಾಲಿಗ್ರಾಮದ ಡಾ॥ ಕೆ. ಶಿವರಾಮ ಕಾರಂತ ಸಂಶೋಧನೆ ಮತ್ತು ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಮಾಲಿನಿ ಮಲ್ಯರ ಸಂಚಾಲಕತ್ವದಲ್ಲಿ, ವಿದ್ವಾನ್ ಸುಧೀರ್ ಕೊಡವೂರು ಅವರ ನಿರ್ದೇಶನದಲ್ಲಿ ಹಾಗೂ ಶ್ರೀನಿವಾಸ ಸಾಸ್ತಾನ ಅವರ ಸಂಯೋಜನೆಯಲ್ಲಿ ಇದೀಗ ಡಾ॥ ಕಾರಂತರ 'ಯಕ್ಷಗಾನ ಬ್ಯಾಲೆ' ಮರು ಹುಟ್ಟು ಪಡೆದಿದೆ. ವಿದ್ವಾನ್ ಸುಧೀರ್ ಅವರು ಕಾರಂತರ ಗರಡಿಯಲ್ಲಿ ಪಳಗಿರುವವರು. ಅವರೇ 'ಕರ್ನಾಟಕ ಕಲಾದರ್ಶಿನಿ' ತಂಡದ ಕಲಾವಿದರಿಗೆ ತರಬೇತಿಯನ್ನು ನೀಡಿದ್ದಾರೆ. ಸ್ವತಹ ಭಾಗವತಿಕೆಯನ್ನು ಅವರೇ ನಿರ್ವಹಿಸುತ್ತಿದ್ದಾರೆ. ಈಗಾಗಲೇ 'ಅಭಿಮನ್ಯು ವಧೆ' ಪ್ರಸಂಗವನ್ನು ಯಶಸ್ವಿಯಾಗಿ ಪ್ರದರ್ಶಿಸಲಾಗಿದೆ. ಈಗ 'ಪಂಚವಟಿ' ಬ್ಯಾಲೆಯು ಮೊದಲಬಾರಿಗೆ ಆರ್‌ಟಿನಗರದ ತರಳಬಾಳು ಕೇಂದ್ರದಲ್ಲಿ ಶಿವರಾಮ ಕಾರಂತ ವೇದಿಕೆಯ ಆಶ್ರಯದಲ್ಲಿ 2017ರ ಜನವರಿ 18 ರಂದು ಪ್ರಯೋಗ ಗೊಂಡಿದೆ. ಕಾರಂತರ ಕನಸನ್ನು ಉಳಿಸುವ ನಿಟ್ಟಿನಲ್ಲಿ ಈ ತ್ರಿಮೂರ್ತಿಗಳ ಪ್ರಯತ್ನ ಸಾರ್ಥಕವಾಗಿದೆ.

ನಾನೂರು ವರ್ಷಗಳ ಕೆಳಗೆ ಪಾರ್ತಿಸುಬ್ಬ (1590–1620)ನಿಂದ ರಚಿತವಾದ 'ಪಂಚವಟಿ' ಯು ಸಾಹಿತ್ಯ ದೃಷ್ಟಿಯಿಂದ ಉತ್ಕೃಷ್ಟವಾಗಿದೆ. ಶಿವರಾಮ ಕಾರಂತರೇ ತಮ್ಮ 'ಯಕ್ಷಗಾನ ಬಯಲಾಟ'ದಲ್ಲಿ ಇಲ್ಲಿನ ಸುಲಲಿತವಾದ ತರಂಗಿತ ಪದ್ಯರಚನೆ ಹಾಡುವುದಕ್ಕೆ ಹೇಗೋ ಹಾಗೆ ಕುಣಿಯುವುದಕ್ಕೆ ಬೇಕಾದ ಅರ್ಥಪೂರ್ಣ ತರಂಗಿತತೆಯನ್ನು ಸೃಜಿಸುತ್ತದೆ ಎಂದು ಹೇಳಿದ್ದಾರೆ. ಈ ಕಾರಣದಿಂದಲೇ ಕಾರಂತರು ಈ ಪ್ರಂಸಗವನ್ನು ಆಯ್ದುಕೊಂಡು ತಮ್ಮ ಯಕ್ಷಗಾನ ಬ್ಯಾಲೆಯ ಮೂಲಕ ಪ್ರಸ್ತುತ ಪಡಿಸಿದ್ದರು. ಇದೀಗ ಅವರ ಪ್ರದರ್ಶನಕ್ಕೆ ಸರಿಸಾಟಿಯೆಂಬಂತೆ 'ಕರ್ನಾಟಕ ಕಲಾದರ್ಶಿನಿ' ಯವರು ಪ್ರಸ್ತುತ ಪಡಿಸಿದ್ದು ಹೆಚ್ಚುಗಾರಿಕೆಯಾಗಿದೆ.

ಹಿಮ್ಮೇಳದಲ್ಲಿ ಡಾ॥ ಕಾರಂತರ ಸೂಕ್ಷ್ಮಕಲಾಪ್ರಜ್ಞೆಯ ಅರಿವಿರುವ ಸುಧೀರ್ ಕೊಡವೂರು ಅವರೇ ಭಾವಪೂರ್ಣ ಭಾಗವತಿಕೆಯ ಮೂಲಕ ಪ್ರೇಕ್ಷಕರನ್ನು ಎರಡು ತಾಸುಗಳ ಕಾಲ ಸೆರೆಹಿಡಿದಿಟ್ಟುಕೊಳ್ಳುವಲ್ಲಿ ಯಶಸ್ವಿಯಾದರು. ಇದಕ್ಕೆ ಪೂರಕವಾಗಿ ಇವತ್ತಿನ ಮೃದಂಗವಾದಕರಲ್ಲಿ ಅತ್ಯಂತ ಪ್ರಜ್ಞಾವಂತರೆಂದು ಗುರುತಿಸಿಕೊಂಡಿರುವ ವಿದ್ವಾನ್ ಅನಂತಪದ್ಮನಾಭ ಪಾಠಕರಿದ್ದು ಪಾತ್ರಗಳನ್ನು ಮದ್ದಲೆಯ ಬಿಡ್ತಿಗೆಗೆ ಸರಿಯಾಗಿ ಕುಣಿಸುವಲ್ಲಿ ಸಹಕರಿಸುತ್ತಿದ್ದರು. ಮೃದಂಗ ಹಾಗೂ ಚಂಡೆ (ಬಸವ ಮರಕಾಲ ಮತ್ತು ಶ್ರೀರಾಮ ಬಾಯರಿ) ಯ ಪೆಟ್ಟಿಗೆ ಸಾಂಗತ್ಯವಾಗುವಂತೆ ಪಾತ್ರಧಾರಿಗಳ ಹೆಜ್ಜೆಗಾರಿಕೆ ಇತ್ತು. ವೀರರಸ ಪ್ರಚುರಕ್ಕೆ ಪೂರಕವಾಗಿ ಹರಿದಾಸ

ಡೋಗ್ರಾ ಅವರ ಸ್ಯಾಕ್ಸೋಫೋನ್ ವಾದನ, ವಿಲಂಬಿತಗತಿಯ ಪದ್ಯಕ್ಕೆ ಮೈಸೂರು ರವಿಕುಮಾರ್ ಅವರ ವಯಲಿನ್ ಪೂರಕವಾಗಿ ಬಂದಿತ್ತು.

ಮುಮ್ಮೇಳದಲ್ಲಿ ಸ್ವತಹ ಶ್ರೀನಿವಾಸ ಸಾಸ್ತಾನ ಅವರೇ ರಾಮನ ಪಾತ್ರವನ್ನು ವಹಿಸಿದ್ದರು. ಗಾಂಭೀರ್ಯಪೂರ್ಣನಡೆ, ರಾಮನ ಪಾತ್ರಕ್ಕೆ ಒಪ್ಪುವ ವೇಷಗಾರಿಕೆ, ದುಃಖದ ಸಂದರ್ಭದಲ್ಲಿ ತೋರಿಸಿದ ಅಭಿನಯ ಎಲ್ಲವೂ ಮನೋಜ್ಞವಾಗಿತ್ತು. ತಮ್ಮ ಚುರುಕು ನಡೆಯಿಂದ, ಮನ ಮುಟ್ಟುವ ಅಭಿನಯದಿಂದ ಲಕ್ಷ್ಮಣ ಪಾತ್ರಧಾರಿಯಾದ ಕುಮಾರಿ ಮಾನಸಿ ಪ್ರೇಕ್ಷಕರ ಮನಗೆದ್ದರು. ಬಣ್ಣದ ವೇಷವಾಗಿ ರಂಗಪ್ರವೇಶಿಸಿದ ಶೂರ್ಪನಖಿ (ಶ್ರೀಧರಕಾಂಚನ್)ನಯ ಕುಣಿತ, ಅಭಿನಯ ಮುಂದೆ ಆಕೆ ರಾಮನನ್ನು ನೋಡಿ ಮೋಹಗೊಳ್ಳುವ ಬಗೆ, ನಾಸಾಚೇದನ ವಾದಾಗ ಗೋಳಾಡುವಪರಿ, ರಾವಣನಲ್ಲಿ ದ್ವೇಷ ಬಿತ್ತುವ ರೀತಿ ಇವೆಲ್ಲವನ್ನು ಸಮರ್ಪಕವಾಗಿ ಸಂವಹನ ಮಾಡಿದರು. ಎಲ್ಲಕ್ಕೆ ಕಲಶವಿಟ್ಟಂತೆ ಪ್ರದರ್ಶನದಲ್ಲಿ ಮೂಡಿಬಂದದ್ದು ಖ್ಯಾತಸ್ತ್ರೀ ವೇಷಧಾರಿ ರಾಧಾಕೃಷ್ಣ ಉರಾಳರ ಮಾಯಾ ಶೂರ್ಪನಖಿಯ ಭಾಗ. 'ರಾಘವನರಪತೇ ಕೇಳೆನ್ನ ಮಾತ' ಎಂಬ ಸುಧೀರ್‌ರ ಹಾಡುಗಾರಿಕೆಗೆ ಅವರು ನೀಡಿದ ಅಭಿನಯ, ಮಾಡಿದ ಹಾವಭಾವ ಆಕರ್ಷಕವಾಗಿತ್ತು. ಮುಂದೆ ಪ್ರಣಯಭಿಕ್ಷೆ ಬೇಡುವ ಶೂರ್ಪನಖಿಯನ್ನು ರಾಮನಡೆಸಿಕೊಂಡ ಪರಿ ಅದೇ ಹೇತುವಾಗಿ ಮುಂದಿನ ದುರಂತಗಳಿಗೆ ಮುನ್ನುಡಿಯಾಗುತ್ತದೆ. ಇಲ್ಲೆಲ್ಲಾ ಉರಾಳರು ತಮ್ಮ ನರ್ತನದ ಮೂಲಕ ಮಾತು ಸಾಧಿಸಲಾರದ್ದನ್ನು ಸಾಧಿಸಿ ತೋರಿಸಿದರು. ಕಪ್ಪುದೋಗಲೆಯಲ್ಲಿ ಕಾಣಿಸಿಕೊಂಡ ರಾವಣ (ವಿಠಲ ಆಚಾರ್) 'ಅಂಥಾ ಚೆಲುವೆ ಯೇನೆ ಜಾನಕಿದೇವಿ' ಎಂಬ ಪದ್ಯಕ್ಕೆ ಪ್ರಶ್ನಾರ್ಥಕವಾಗಿ ನರ್ತಿಸುತ್ತಾ ಸೀತೆಯನ್ನು ತರುವ ಸಂಕಲ್ಪ ಮಾಡುತ್ತಾನೆ. ಮಾರೀಚ (ರಾಜು ಪೂಜಾರಿ) ಜಿಂಕೆಯಾಗಿ ಮಾರ್ಪಟ್ಟು 'ಪಂಚವಟಿ'ಯಲ್ಲಿ ಕಾಣಿಸಿಕೊಳ್ಳುತ್ತಾನೆ. ಜಿಂಕೆಯು ಸುಳಿದಾಡುವ ನರ್ತನವನ್ನು ಶಿವಕುಮಾರ ಶಿರಳಗಿಯವರು ನಡೆಸಿದಾಗ ಸೀತೆ (ಶೃತಿ ಸೋಮಯಾಜಿ) ಜಿಂಕೆಯ ಸೆಳೆತಕ್ಕೆ ಒಳಗಾಗುವ ಬಗೆಯನ್ನು, ರಾಮನ ಮಾತನ್ನು ವಿರೋಧಿಸಿ ಹಠಗೊಳ್ಳುತ್ತಾಳೆ. ಜಿಂಕೆ ತರಲು ಹೋದ ರಾಮ, ಅವನನ್ನು ಹುಡುಕಿಕೊಂಡು ಹೊರಟ ಲಕ್ಷ್ಮಣ, ಸನ್ಯಾಸಿಯಾಗಿ (ಗೌತಮ ಸಾಸ್ತಾನ) ಕಾಣಿಸಿಕೊಂಡ ರಾವಣ, ಲಕ್ಷ್ಮಣ ರೇಖೆ ದಾಟಲು ಅಂಜುವ ಸೀತೆ ಇವೆಲ್ಲ ಭಾಗ ನಾಟಕೀಯವಾಗಿ ಬಂದು ಚುರುಕಾಗಿ ಸಾಗಿದೆ. ರಮೇಶ ಆಡುಕಟ್ಟೆಯವರ ಜಟಾಯುವಿನ ವೇಷವಂತು ಬಹಳ ಸೊಗಸಾಗಿತ್ತು. ಜಟಾಯು ರಾವಣರ ಯುದ್ಧ ನಡೆದು ರೆಕ್ಕೆ ಕಳಚಿ ಬೀಳುವ ಭಾಗ ಹೃದಯ ಕಲಕುವಂತಿತ್ತು. ಮುಂದೆ

ಜಟಾಯು ಮೋಕ್ಷದೊಂದಿಗೆ ಪ್ರಸಂಗ ಕೊನೆಗೊಳ್ಳುತ್ತದೆ. ವಿಶೇಷ ಭಾಗವತರಾಗಿ ಸುಬ್ರಾಯ ಹೆಬ್ಬಾರರಿದ್ದು ಇಡೀ ರಂಗದ ನಡೆಯಲ್ಲಿ ಎಲ್ಲೂ ಸಪ್ಪೆ ಎನಿಸಲಿಲ್ಲ. ಅಚ್ಚುಕಟ್ಟಾದ ನಿರೂಪಣೆ, ಭಾವಪೂರ್ಣವಾದ ಅಭಿನಯ ಕುಣಿತಗಳೇ ಇಡೀ ಪ್ರಸಂಗದ ಜೀವಾಳವಾಗಿತ್ತು.

ಹೀಗೆ ಮೊದಲಬಾರಿಗೆ ಪ್ರಸ್ತುತಿಗೊಂಡ 'ಪಂಚವಟಿ' ಶಿವರಾಮ ಕಾರಂತ ವೇದಿಕೆಯ ವಾರ್ಷಿಕೋತ್ಸವದಲ್ಲಿ ನಡೆದದ್ದು ಕೂಡ ಒಂದು ಯೋಗಯೋಗ. ಕಾರಂತರಿಗೆ ಸಂದ ನಿಜವಾದ ಶ್ರದ್ಧಾಂಜಲಿ, ಕರ್ನಾಟಕ ಕಲಾದರ್ಶಿನಿ ತಂಡ ಹಾಸನ, ಮಂಗಳೂರು, ಮೈಸೂರು, ಕುಂದಾಪುರ, ಉಡುಪಿಗಳಲ್ಲಿ 'ಅಭಿಮನ್ಯು ವಧೆ' ಹಾಗೂ 'ಪಂಚವಟಿ' ಪ್ರಸಂಗಗಳನ್ನು ಕಾರಂತೋತ್ಸವದ ಅಂಗವಾಗಿ ಪ್ರದರ್ಶಿಸಿದ್ದಾರೆ. ಈ ಎರಡು ಬ್ಯಾಲೆಗಳು ಇನ್ನಷ್ಟು ಪ್ರದರ್ಶನಗೊಂಡು ನಾಡಿನ ಹೊರಗೆ, ಕನ್ನಡಿಗರಲ್ಲದವರ ಮುಂದೆ ನಡೆದಾಗ ಮಾತ್ರ 'ಬ್ಯಾಲೆ' ಎಂಬ ಪ್ರಕಾರದ ಅವಿಷ್ಕಾರಕ್ಕೆ ನಿಜವಾದ ಧನ್ಯತೆ ದೊರೆಯುತ್ತದೆ. ಹಾಗೆ ಅಗಲೆಂಬುದೇ ಯಕ್ಷಗಾನ ಆಸಕ್ತರ ಅಭಿಲಾಷೆ.

ಯಕ್ಷಗಾನ ಯೋಗಕ್ಷೇಮ ಅಭಿಯಾನ ಬೆಂಗಳೂರು

ಟಿ. ಎಸ್. ಮಹಾಬಲೇಶ್ವರ

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರಕ್ಕೂ ಯಕ್ಷಗಾನಕ್ಕೂ ಅವಿನಾಭಾವ ಸಂಬಂಧವಿದೆ. 80ರ ದಶಕದಲ್ಲಿ ವೃತ್ತಿ ಮೇಳಗಳು ಯಕ್ಷಗಾನ ಪ್ರದರ್ಶಿಸುತ್ತಿದ್ದುದು ರವೀಂದ್ರ ಕಲಾಕ್ಷೇತ್ರ ಮತ್ತು ಪಕ್ಕದ ಟೌನ್ ಹಾಲ್ ಆಗಿತ್ತು. ನಂತರದ ದಿನಗಳಲ್ಲಿ ಅದು ವಿಕೇಂದ್ರೀಕರಣಗೊಂಡು ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಪ್ರದರ್ಶನ ನಡೆಯುವಂತಾಯಿತು. ಈಗ ಪ್ರತಿ ವಾರಾಂತ್ಯದಲ್ಲಿ ಬೆಂಗಳೂರಿನಲ್ಲಿ ಚಂಡೆ ಮದ್ದಳೆಗಳ ಸದ್ದು ಕೇಳುವಂತಾಗಿದೆ.

ರವೀಂದ್ರ ಕಲಾಕ್ಷೇತ್ರವನ್ನು ಯಕ್ಷಗಾನವು ಬಹಳವಾಗಿ ಬಳಸಿಕೊಂಡಿದೆ. ದಿ.ವಿ.ಆರ್.ಹೆಗಡೆ ಹೆಗಡೆಮನೆಯವರ ಪರಿಕಲ್ಪನೆಯಲ್ಲಿ ಮೂಡಿ ಬಂದ ಯಕ್ಷಗಾನ ಯೋಗಕ್ಷೇಮ ಅಭಿಯಾನ 90ರ ದಶಕದಲ್ಲಿ ಒಂದು ಸಂಚಲನವನ್ನೇ ಉಂಟುಮಾಡಿತು. ಯಕ್ಷಗಾನಕ್ಕೆ ಪ್ರತ್ಯೇಕ ಅಕಾಡೆಮಿ ಬೇಕೆಂಬ ಕೂಗಿಗೆ ಸಾಕ್ಷಿಯಾಗಿದ್ದು ಇದೇ ರವೀಂದ್ರ ಕಲಾಕ್ಷೇತ್ರದ ಮೆಟ್ಟಿಲುಗಳು. ಹಲವಾರು ಯಕ್ಷ ಸಂಘಟಕರು, ಕಲಾ ಪ್ರೋತ್ಸಾಹಕರು, ಕಲಾಭಿಮಾನಿಗಳನ್ನು ಒಟ್ಟುಗೂಡಿಸಿ ಅಕಾಡೆಮಿ ಬೇಕೇಬೇಕೆಂಬ ಕೂಗು, ಸರ್ಕಾರದ ಕಣ್ಣು ತೆರೆಸಿ ಪ್ರತ್ಯೇಕವಾಗಿ ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿಯಾಗಿ ಘೋಸಿಸಲ್ಪಟ್ಟಿದ್ದು ಇತಿಹಾಸ.

ಯಕ್ಷಗಾನ ಕಲಾವಿದರಿಗೆ ಒಂದು ಲಕ್ಷ ರೂಪಾಯಿಗಳ ಹಮ್ಮಿಣಿಯೊಂದಿಗೆ ಗೌರವಿಸುವ ಕಾರ್ಯವನ್ನು ಪ್ರಾರಂಭಿಸಿದ ಕೀರ್ತಿ ಸಲ್ಲುವುದು ಯೋಗಕ್ಷೇಮ ಅಭಿಯಾನದ ರೂವಾರಿ ಕಡತೋಕದ ದಿ. ವಿ.ಆರ್.ಹೆಗಡೆ ಹೆಗಡೆಮನೆಯವರಿಗೆ. ಯಕ್ಷಗಾನವನ್ನು ಬಳಸಿ ಬೆಳೆಸಬೇಕೆಂಬ ಧ್ಯೇಯದೊಂದಿಗೆ ಚಾಲನೆಗೊಂಡ ಅಭಿಯಾನ ಕಲಾವಿದರನ್ನು ಗೌರವಿಸಲು ಮೊದಲು ಆಯ್ಕೆ ಮಾಡಿಕೊಂಡ ಸ್ಥಳವೇ ರವೀಂದ್ರ ಕಲಾಕ್ಷೇತ್ರ. ಸುಮಾರು ಹದಿನೆಂಟು ಕಲಾವಿದರನ್ನು ಒಂದು ಲಕ್ಷ ರೂಪಾಯಿಗಳ

ಹಮ್ಮಿಣಿಯೊಂದಿಗೆ ಗೌರವಿಸಿದ ಕೀರ್ತಿಗೆ ಭಾಜನರಾದವರು ಹೆಗಡೆಯವರು. ಅದರಲ್ಲಿ ಅರ್ಧಕ್ಕಿಂತಲೂ ಹೆಚ್ಚಿನ ಸನ್ಮಾನ ಕಾರ್ಯಕ್ರಮ ನಡೆದಿರುವುದು ರವೀಂದ್ರ ಕಲಾಕ್ಷೇತ್ರದಲ್ಲಿಯೇ. ಯಕ್ಷಗಾನದ ಹಾಸ್ಯ ಕಲಾವಿದರಾದ ಹಳ್ಳಾಡಿ ಜಯರಾಮ ಶೆಟ್ಟಿ, ರಮೇಶ ಭಂಡಾರಿ ಮತ್ತು ಯಕ್ಷ ಸಂಘಟಕ ಅಂಪಾರು ರತ್ನಾಕರ ಶೆಟ್ಟಿಯವರನ್ನು ಗೌರವಿಸಿದ್ದೂ ಕೂಡಾ ಕಲಾಕ್ಷೇತ್ರದಲ್ಲಿಯೇ.

ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯುವ ಯಕ್ಷಗಾನ ಪ್ರದರ್ಶನಕ್ಕೆ ಹೆಚ್ಚಿನ ಬಾಡಿಗೆಯನ್ನು ನೀಡುವ ಆದೇಶ ಹೊರಬಿದ್ದಾಗ ಅದನ್ನು ಕಡಿಮೆ ಮಾಡಲು ಹೋರಾಟಕ್ಕೆ ಕಾರಣವಾಗಿದ್ದೂ ಈ ಕಲಾಕ್ಷೇತ್ರವೇ. ಕಲಾವಿದರ ಬದುಕಿಗೆ ಆಸರೆಯಾಗಿ ನಿಲ್ಲಬೇಕೆನ್ನುವ ನಿಲುವಿಗೆ ಬದ್ಧವಾಗಿ ಈ ಹೋರಾಟ ಅನಿವಾರ್ಯವಾಗಿತ್ತು. ಅದರಲ್ಲಿ ಯಶಸ್ಸನ್ನೂ ಕಾಣಲು ಸಾಧ್ಯವಾಯಿತು.

ವೃತ್ತಿ ಮೇಳಗಳು ಇಂದಿಗೂ ಹೆಚ್ಚಾಗಿ ಯಕ್ಷಗಾನ ಪ್ರದರ್ಶನಗಳನ್ನು ಕೊಡುತ್ತಿರುವುದು ಕಲಾಕ್ಷೇತ್ರದಲ್ಲಿಯೇ. ಸುಂದರ ಪರಿಸರದ ನಗರದ ಮಧ್ಯ ಭಾಗದಲ್ಲಿರುವುದರಿಂದ ಪ್ರೇಕ್ಷಕರಿಗೆ ಬಂದು ಹೋಗಿ ಮಾಡಲು ಅನುಕೂಲವಾಗಿರುವಂತಹ ಸ್ಥಳ. ಸ್ಟೇಜು, ಕುಳಿತುಕೊಳ್ಳುವ ಆಸನಗಳು, ಧ್ವನಿ ಬೆಳಕಿನ ವ್ಯವಸ್ಥೆ ಅನುಕೂಲಕರವಾಗಿರುವುದು ಇನ್ನೊಂದು ಧನಾತ್ಮಕ ಅಂಶ.

ಯಕ್ಷಗಾನದ ಬಗ್ಗೆ ಅಪಾರ ಕಾಳಜಿ ಹೊಂದಿದ್ದವರು ದಿ.ವಿ.ಆರ್.ಹೆಗಡೆ ಹೆಗಡೆಮನೆಯವರು. ಯಕ್ಷಗಾನದ ಕುರಿತು ದೂರದೃಷ್ಟಿ ಹೊಂದಿದ್ದ ಅವರು ಊರಿನಿಂದ ಬಂದ ಮಹಿಳಾ ಯಕ್ಷಗಾನ ಕಲಾವಿದರ ಒತ್ತಾಸೆಯ ಮೇರೆಗೆ 2010ರಲ್ಲಿ ಸಿರಿಕಲಾಮೇಳ ಸಂಸ್ಥೆಯನ್ನು ಪ್ರಾರಂಭಿಸಿದರು. ಸುರೇಶ ಹೆಗಡೆ ಕಡತೋಕ ಇವರ ಸಂಚಾಲಕತ್ವದಲ್ಲಿ ನಡೆಯುತ್ತಿರುವ ಈ ಸಂಸ್ಥೆ ವರ್ಷಕ್ಕೆ 75 ರಿಂದ 80 ಪ್ರದರ್ಶನಗಳನ್ನು ನಾಡಿನಾದ್ಯಂತ ನೀಡುತ್ತಿದೆ. ಅದರಲ್ಲಿ 10ಕ್ಕೂ ಹೆಚ್ಚು ಪ್ರದರ್ಶನಗಳು ರವೀಂದ್ರ ಕಲಾಕ್ಷೇತ್ರದಲ್ಲಿಯೇ ನಡೆಯುತ್ತಿವೆ. ಯಕ್ಷಗಾನ ಕ್ಷೇತ್ರದಲ್ಲಿ ತನ್ನದೇ ಛಾಪು ಮೂಡಿಸಿರುವ ಅರ್ಪಿತಾ ಹೆಗಡೆಗೆ ಉತ್ತಮ ಅವಕಾಶ ಕಲ್ಪಿಸಿರುವುದು ಸಿರಿಕಲಾಮೇಳ. ಕಲಾಕ್ಷೇತ್ರ ಅದಕ್ಕೊಂದು ಮೆಟ್ಟಿಲಾಗಿದೆ. ಅರ್ಪಿತಾ ಹೆಗಡೆ ಕಾಲಿಗೆ ಗೆಜ್ಜೆ ಕಟ್ಟಿ ಹತ್ತು ವರ್ಷದ ಸವಿನೆನಪಿಗಾಗಿ ಹಮ್ಮಿಕೊಂಡ ದಶಮಾನೋತ್ಸವ ಸಮಾರಂಭದಲ್ಲಿ ಅಭಿಯಾನದ ಮೂಲಕ ಗೌರವಿಸಿದ್ದು ಕಲಾಕ್ಷೇತ್ರದಲ್ಲಿ. ಜೊತೆಗೆ ಅನೇಕ ಹವ್ಯಾಸಿ ಮಹಿಳಾ ಕಲಾವಿದರಿಗೂ ಅವಕಾಶ ಕಲ್ಪಿಸಿರುವುದು ಕಲಾಕ್ಷೇತ್ರ.

ಒಟ್ಟಿನಲ್ಲಿ ರವೀಂದ್ರ ಕಲಾಕ್ಷೇತ್ರದ ಜೊತೆಗೆ ಯಕ್ಷಗಾನ ಯೋಗಕ್ಷೇಮ ಅಭಿಯಾನ ಮತ್ತು ಬೆಂಗಳೂರಿನ ಸಿರಿಕಲಾಮೇಳಗಳು ಸಾಂಸ್ಕೃತಿಕ ಸಂಬಂಧವನ್ನು ಹೊಂದಿವೆ.

ಟಿ. ಎಸ್. ಮಹಾಬಲೇಶ್ವರ
11/1. ಸರ್ಪೆಂಟೈನ್ ರಸ್ತೆ,
ಕುಮಾರಪಾರ್ಕ್ ಪಶ್ಚಿಮ,
ಬೆಂಗಳೂರು–560020.
ದೂರವಾಣಿ : 9986509511. 9341839075.
Email:abhiyanabangalore@gmail.com

ಬೆಂಗಳೂರಿನ ಯಕ್ಷ ಸಾಧಕ ಶ್ರೀ ಕೃಷ್ಣಮೂರ್ತಿ ತುಂಗ

– ರವಿ ಮಡೋಡಿ

ಬೆಂಗಳೂರಿನಂತಹ ನಾಗಾಲೋಟದ ನಗರದಲ್ಲಿ, ಆಧುನೀಕತೆಯ ಜೊತೆಗೆ ತನ್ನದೇ ಆದ ಸಾಂಸ್ಕೃತಿಕ ಅನನ್ಯತೆಯೂ ಬೇರೂರುತ್ತಿರುವುದು ಸಾಂಸ್ಕೃತಿಕ ಸಲ್ಲಕ್ಷಣ. ಕಲೆ–ಕಲಾವಿದರಿಗೆ ಪ್ರೋತ್ಸಾಹದ ಜೊತೆಯಲ್ಲಿ, ಕಲೆಯನ್ನುಕಲಿತು ಕರಗತಮಾಡುವ ಹಂಬಲದ ಮನಸ್ಸುಗಳು ಇಲ್ಲಿ ಸೇರುತ್ತಿವೆ. ಮಹಾನಗರದ ಧಾವಂತದ ಬದುಕಿನ ನಡುವೆಯೂ ಬೇರೆ ಬೇರೆ ಕಲಾ ಪ್ರಕಾರಗಳನ್ನು ಹವ್ಯಾಸಕ್ಕಾಗಿ ಮತ್ತು ಉದ್ಯೋಗಕ್ಕಾಗಿ ಸ್ವೀಕರಿಸಿದವರಿದ್ದಾರೆ. ಈ ಪೈಕಿ ಕರಾವಳಿ/ಮಲೆನಾಡಿನ ಯಕ್ಷಗಾನವೂ ಒಂದು. ಯಕ್ಷಗಾನದ ಸಿದ್ಧ ಪ್ರೇಕ್ಷಕರ ಜೊತೆಯಲ್ಲಿ ಹೊಸ ಪ್ರೇಕ್ಷಕರನ್ನು ಸೃಷ್ಟಿಸುವ, ಪ್ರದರ್ಶನಗಳನ್ನು ನೋಡುವಂತೆ ಮಾಡುವ, ಕಲೆ/ಕಲಾವಿದರನ್ನು ಪ್ರೋತ್ಸಾಹಿಸುವ, ಬೇರೆ ಬೇರೆ ಕಲೆಗಳೊಂದಿಗೆ ಯಕ್ಷಗಾನವನ್ನು ನಿಲ್ಲಿಸುವ ಸಾಹಸವೂ ಇಲ್ಲಿ ನಡೆಯುತ್ತಿದೆ. ಇಂತಹ ಅನೇಕ ಪ್ರಯತ್ನಗಳಲ್ಲಿ ಬೆಂಗಳೂರಿನ ಮಟ್ಟಿಗೆ ಹೊಸ ಹೊಳವನ್ನು ಕೊಟ್ಟವರಲ್ಲಿ ಶ್ರೀಯುತ ಕೃಷ್ಣಮೂರ್ತಿ ತುಂಗರೂ ಒಬ್ಬರು.

ತುಂಗರದ್ದು ಬಹುಮುಖಿವ್ಯಕ್ತಿತ್ವ. ಒಬ್ಬ ಉತ್ತಮ ಕಲಾವಿದನಾಗಿ, ದಕ್ಷ ನಿರ್ದೇಶಕನಾಗಿ, ಸಮರ್ಥ ಸಂಘಟಕನಾಗಿ ಮತ್ತು ಒಬ್ಬ ಶ್ರೇಷ್ಠ ಯಕ್ಷಗುರುವಾಗಿ ಗುರುತಿಸಿಕೊಂಡವರುಇವರು. ಯಕ್ಷಗಾನ ವಲಯದಲ್ಲಿ ಇಂದು ಹಲವಾರು ಮಂದಿ ಯಕ್ಷಗುರುಗಳಿದ್ದಾರೆ. ಅನೇಕ ಬಾರಿ ಕೇವಲ ಸೀಮಿತ ಪ್ರದರ್ಶನಕ್ಕೆ ಅಥವಾ ಕೆಲವು ಪದ್ಯಗಳಿಗೆ/ಪಾತ್ರಗಳಿಗೆ ಮಾತ್ರ ಸಂದರ್ಭೋಚಿತ ನೃತ್ಯವನ್ನು/ಅಭಿನಯವನ್ನು ಕಲಿಯುವವರು,ಕಲಿಸುವವರೇ ಹೆಚ್ಚು. ಆದರೆ, ಸಮಗ್ರವಾದ ಯಕ್ಷಗಾನದ ಶಿಕ್ಷಣವನ್ನು ನೀಡಬಲ್ಲ ಬೆರಳೆಣಿಕೆ ಮಂದಿ ಯಕ್ಷಗುರುಗಳಲ್ಲಿ ಶ್ರೀಯುತ ಕೃಷ್ಣಮೂರ್ತಿ ತುಂಗರೂ ಒಬ್ಬರು. ಹೆಜ್ಜೆಗಾರಿಕೆ, ಹಿಮ್ಮೇಳ, ಅಭಿನಯ, ಮಾತುಗಾರಿಕೆ, ನಿರ್ದೇಶನ, ಆಹಾರ್ಯ, ಪ್ರಸಾದನ ಹೀಗೆ ಎಲ್ಲ ವಿಷಯಗಳಲ್ಲಿ ಪರಿಣಿತರಾಗಿ, ಅದನ್ನು ಆಸಕ್ತರಿಗೆ ಪರಿಣಾಮಕಾರಿಯಾಗಿ ಕಲಿಸುವ ತುಂಗರ ಚಾಕಚಕ್ಯತೆಗೆ ತುಂಗರೇ ಸರಿಸಾಟಿ. ತಾನು ಗುರುಪರಂಪರೆಯಿಂದ ಕಲಿತ ಯಕ್ಷ ಶಿಕ್ಷಣವನ್ನು, ತನ್ನ ಶಿಷ್ಯರಿಗೆ ಧಾರೆಯೆರೆದು ಅವರಿಂದ ಗುಣಮಟ್ಟದ ಪ್ರದರ್ಶನವನ್ನು ಬಯಸುವ ತುಂಗರ ಕಲಾನಿಷ್ಠೆ ಕಾಳಜಿಯಿಂದಾಗಿ ಅವರ ಬಳಿ ಪ್ರತಿಭಾವಂತ ವಿದ್ಯಾರ್ಥಿಗಳೇ ತಯಾರಾಗುತ್ತಿದ್ದಾರೆ.

ಇತ್ತೀಚಿನ ಯಕ್ಷಗಾನದಲ್ಲಿ ನಾವು ಕಳೆದುಕೊಳ್ಳುತ್ತಿರುವ ಅಂಶಗಳೇ ಹೆಚ್ಚು. ಆಧುನಿಕ ಚಲನಚಿತ್ರ, ನಾಟಕ, ಮತ್ತಿತರ ಸಾಮಾಜಿಕ, ಕಳಪೆ ಅಭಿರುಚಿಗಳ ಪ್ರಭಾವದಿಂದ ಯಕ್ಷಗಾನ ಕಲೆಯ ಮೂಲ ಅಸ್ತಿತ್ವಕ್ಕೆ ಧಕ್ಕೆಯಾಗಿದ್ದು ಸುಳ್ಳಲ್ಲ. ಇವುಗಳ ಸಾಲಿನಲ್ಲಿ ಪೂರ್ವರಂಗವೂ ಕೂಡ ಒಂದು. ಪೂರ್ವರಂಗ, ಒಡ್ಡೋಲಗಗಳು, ಯುದ್ಧನೃತ್ಯ, ಪ್ರಯಾಣಕುಣಿತ ಮೊದಲಾದವುಗಳು ಕೇವಲ ಕಾರ್ಯಗಾರದ/ ಪ್ರಾತ್ಯಕ್ಷಿಕೆಯ ವಸ್ತುವಾಗಿರದೇ, ಪ್ರದರ್ಶನದ ಅಂಗವಾಗಿರಬೇಕು ಎಂಬದು ತುಂಗರ ಚಿಂತನೆ. ಇದಕ್ಕಾಗಿ ಈ ಎಲ್ಲ ಅಪರೂಪದ ಯಕ್ಷಗಾನದ ಸಾಂಪ್ರದಾಯಿಕ ಭಾಗಗಳನ್ನು ತನ್ನ ಶಿಷ್ಯರಿಗೆ ಕಲಿಸಿ, ಈ ಮೂಲಕ ಅವಕಾಶ ಇರುವ ಕಡೆಗಳೆಲ್ಲೆಲ್ಲ ಅವುಗಳನ್ನು ಪ್ರದರ್ಶನಗೊಳಿಸುತ್ತಲೇ ಬಂದಿದ್ದಾರೆ. ಕೋಡಂಗಿವೇಷ, ಪೀಠಿಕಾ ಸ್ತ್ರೀವೇಷ, ಪಾಂಡವರ ಒಡ್ಡೋಲಗ, ಯುದ್ಧನೃತ್ಯ, ಬಣ್ಣದ ಒಡ್ಡೋಲಗ, ಕಿರಾತರ ಒಡ್ಡೋಲಗ, ಕೃಷ್ಣನ ಒಡ್ಡೋಲಗ, ಗುಹನ ಒಡ್ಡೋಲಗ, ಪ್ರಯಾಣ ಕುಣಿತ, ಇತ್ಯಾದಿಗಳನ್ನು ಮರೆತೇಹೋಗಿದ್ದ ಬೆಂಗಳೂರಿನ ಪ್ರೇಕ್ಷಕರು ತುಂಗರ ಮೂಲಕ ಪುನಃ ಅದನ್ನು ನೋಡುವಂತಾಗಿದೆ. ಬದಲಾಗುತ್ತಿರುವ ಯಕ್ಷಗಾನ ಪ್ರದರ್ಶನಗಳು ನೃತ್ಯ ರೂಪಕಗಳಾಗುತ್ತಿದೆ. ಕೇವಲ ಕೆಲವು ಕಲಾವಿದರಿಗೆ, ಕೆಲವು ಪದ್ಯಗಳಿಗೆ, ಕೆಲವು ಸನ್ನಿವೇಶಗಳಿಗೆ ಮಾತ್ರ ಯಕ್ಷಗಾನ ಪ್ರದರ್ಶನಗೊಳ್ಳುತ್ತಿರುವುದು ಅಥವಾ ಪ್ರಾಮುಖ್ಯತೆ ಪಡೆದುಕೊಳ್ಳುವುದು ಯಕ್ಷಗಾನದ ಮೂಲ ತತ್ವಕ್ಕೆ ಧಕ್ಕೆ ಅನ್ನುವುದು ತುಂಗರ ಅಭಿಮತ. ಎಲ್ಲ ಪಾತ್ರಗಳಿಗೂ ಅದರದ್ದೇ ಆದ ಪ್ರಾಮುಖ್ಯತೆ, ಸ್ಥಾನ, ಗೌರವ, ಪಾತ್ರದೌಚಿತ್ಯವಿದೆ. ಅದು ಪ್ರದರ್ಶನಗಳಲ್ಲಿ ವ್ಯಕ್ತವಾಗಲೇಬೇಕು. ಅದಕ್ಕಾಗಿ ತಮ್ಮ ಯಾವ ಪ್ರದರ್ಶನವೂ ಕೂಡ ಏಕಮುಖವಾಗಿರುವುದಕ್ಕೆ ಅವಕಾಶ ಕೊಡದೆ, ಪಾತ್ರಕ್ಕೆ ಬೇಕಾದಷ್ಟೆ ನೃತ್ಯ, ಅಭಿನಯ, ಮಾತುಗಾರಿಕೆಯನ್ನು ಅಳವಡಿಸಿ, ಪ್ರಸಂಗದ ಸಂದೇಶವನ್ನು ಅತ್ಯಂತ ಸುವ್ಯವಸ್ಥಿತವಾಗಿ ಹೊರಹೊಮ್ಮಿಸುವ ಅವರ ಪ್ರಯತ್ನ ಕೂಡ ಯಶಸ್ವಿಯಾಗಿದೆ. ಮಕ್ಕಳ ಅಭಿಮನ್ಯು ಕಾಳಗದ ಸುಭದ್ರೆ–ಅಭಿಮನ್ಯು ಪಾತ್ರಗಳು ಪ್ರತೀ ಬಾರಿಯೂ ಪ್ರೇಕ್ಷಕರ ಕಣ್ಣು ಒದ್ದೆಯಾಗುವಂತೆ ಮಾಡುತ್ತಿದ್ದು, ಕೃಷ್ಣಾರ್ಜುನ ಕಾಳಗದ ಅರ್ಜುನ–ಸುಭದ್ರೆಯ ಸನ್ನಿವೇಶ ಜನ ಭಾವಲಹರಿಯಲ್ಲಿ ಮೀಯುವಂತೆ ಮಾಡಿದ್ದು, ಭೀಷ್ಮೋತ್ಪತ್ತಿಯ ವಿಶಿಷ್ಟ ಕಂದರನ ಪಾತ್ರ ನಗೆಗಡಲಿನಲ್ಲಿ ತೇಲುವಂತೆ ಮಾಡಿದ್ದು ಇವರ ಸಾಮರ್ಥ್ಯದ ಬಗೆಗಿನ ಕೆಲವು ಉದಾಹರಣೆಗಳು.

ಇತ್ತೀಚಿನ ವರುಷದಲ್ಲಿ ಯಕ್ಷಗಾನದಲ್ಲಿ ನಿರ್ದೇಶಕನ ಪಾತ್ರದ ಬಗ್ಗೆ ಸಾಕಷ್ಟು ಚರ್ಚೆಗಳು ನಡೆಯುತ್ತಿದೆ. ಒಬ್ಬ ನಿರ್ದೇಶಕನಿಗೆ ಕೇವಲ ಪದ್ಯದ ಆಯ್ಕೆಯ ಸಾಮರ್ಥ್ಯ ಮಾತ್ರವಲ್ಲದೆ ಒಟ್ಟು ಪ್ರದರ್ಶನ ಹೇಗೆ ಮೂಡಿಬರಬೇಕು/ ಪ್ರಸಂಗದ ಸಂದೇಶವೇನು ಎಂಬ ಕಲ್ಪನೆ ಕೂಡ ಇರಬೇಕಾಗುತ್ತದೆ. ತುಂಗರ ನಿರ್ದೇಶನದಲ್ಲಿ ಇವನ್ನು

ಕಾಣಬಹುದು. ಪ್ರಸಂಗಗಳ ಸಂದರ್ಭಕ್ಕೆ ಅನುಗುಣವಾದ ರಾಗ/ತಾಳಗಳ ಆಯ್ಕೆ, ಪ್ರಸಂಗ ನಡೆಯನ್ನು ರೂಪಿಸುವ, ಕಲಾವಿದರಿಂದ ಪಾತ್ರವನ್ನು ಸಮರ್ಥವಾಗಿ ಚಿತ್ರಿಸುವಂತೆ ಮಾಡುವ, ನೃತ್ಯ ಮತ್ತು ಅಭಿನಯಗಳ ಸ್ವರೂಪ, ಪಾತ್ರಗಳ ಔಚಿತ್ಯ, ಪಾತ್ರಗಳ ಮಾತುಗಾರಿಕೆ, ಕಲಾವಿದರ ಆಯ್ಕೆ, ಹೀಗೆ ಸಮಗ್ರವಾದ ಚಿಂತನ ದೃಷ್ಟಿಕೋನದಲ್ಲಿ ಪ್ರದರ್ಶನವಿರುತ್ತದೆ. ಒಬ್ಬ ರಂಗಭೂಮಿಯ ನಿರ್ದೇಶಕನಿಗಿರಬೇಕಾದ ಹೊಣೆಗಾರಿಕೆಯನ್ನು ತುಂಗರು ಯಕ್ಷಗಾನದ ಪರಿಧಿಯಲ್ಲಿ ಅರಿತು ನಿರ್ವಹಿಸುತ್ತಿದ್ದಾರೆ. ಮಕ್ಕಳ ಮೂಲಕ ಪ್ರದರ್ಶನವೆಂದರೆ ಮಕ್ಕಳಾಟಿಕೆಯೆಂದು ತಿಳಿದವರು ಬಹಳ. ಮಕ್ಕಳಿಂದ ಭೀಷ್ಮೋತ್ಪತ್ತಿ, ಕೃಷ್ಣಾರ್ಜುನ, ಮಹಿಷಮರ್ಧಿನಿ,ಪಾರಿಜಾತ,ವೃಷಸೇನ ಕಾಳಗ ಇತ್ಯಾದಿ ಮೌಲ್ಯಯುತ ಪ್ರಸಂಗಗಳನ್ನು ಉತ್ಕೃಷ್ಟ ಗುಣಮಟ್ಟದಲ್ಲಿ ಪ್ರದರ್ಶನಗೊಳಿಸಿದ ಖ್ಯಾತಿಯೂ ತುಂಗರಿಗೆ ಸೇರುತ್ತದೆ. ಯುಕ್ಷಗಾನ ರಂಗಭೂಮಿಯಲ್ಲಿ ಕಾಣಸಿಗದೇ ಇರುವ ರುಕ್ಮಿಣಿ ಕಲ್ಯಾಣ, ಚಿತ್ರಸೇನ ಕಾಳಗ, ತಾಮ್ರಧ್ವಜ ಕಾಳಗ, ಕಚ ದೇವಯಾನಿ, ರಾವಣ ವಧೆ, ದ್ರೌಪದಿ ಸ್ವಯಂವರ, ಭಾರ್ಗವ ರಾಮ ಇತ್ಯಾದಿ ಅಪರೂಪದ ಪ್ರಸಂಗಗಳ ಅಧ್ಯಯನ ಮಾಡಿ ಅವುಗಳನ್ನು ಹಿರಿಯ ಶಿಷ್ಯರಿಂದ ಪುನಃ ಪ್ರದರ್ಶನಗೊಳ್ಳುವಂತೆ ಮಾಡುತ್ತಿದ್ದಾರೆ.

ಯಕ್ಷಗಾನದ ಪರಿಧಿ, ಕ್ಷೇತ್ರ ವಿಸ್ತಾರವಾಗಬೇಕು, ಬೇರೆ ಕಲೆಗಳೊಂದಿಗೆ ನಿಲ್ಲಬೇಕಾದರೆ ಯಕ್ಷಗಾನ ಹೆಚ್ಚಿನ ಶಿಸ್ತನ್ನು ಅಳವಡಿಸಿಕೊಳ್ಳಬೇಕಾಗುತ್ತದೆ ಎನ್ನುವುದು ಅವರ ನಿಲವು. ಯಕ್ಷಗಾನದ ಮೂಲ ಸ್ವರೂಪಕ್ಕೆ ಧಕ್ಕೆಯಾಗದ ರೀತಿಯಲ್ಲಿ ಬೇರೆ ಬೇರೆ ರೂಪಗಳಲ್ಲಿ, ಯಕ್ಷಗಾನೇತರ ವೇದಿಕೆಗಳಲ್ಲಿ ಯಕ್ಷಗಾನವನ್ನು ಪ್ರದರ್ಶಿಸಿ, ಹೆಚ್ಚು ಹೆಚ್ಚು ಹೊಸ ಆಸಕ್ತರು ಯಕ್ಷಗಾನವನ್ನು ನೋಡುವಂತಾಗಬೇಕು ಅನ್ನುವುದು ಅವರ ವಾದ. ಅದಕ್ಕೆ ಅವರೇ ನಿರ್ದೇಶಿಸಿ, ಅಭಿನಯಿಸಿದ, ನಗರಗಳಲ್ಲಿ ಹೆಚ್ಚಾಗಿ ಕಾಣುವ ಫ್ಯೂಷನ್ ನೃತ್ಯಗಳಲ್ಲಿ ಯಕ್ಷಗಾನವನ್ನು ಅಳವಡಿಸಿ ಯಕ್ಷಗಾನದ ವೇಷ, ನೃತ್ಯ, ಬಣ್ಣಗಾರಿಕೆ, ಅಭಿನಯ ಇತ್ಯಾದಿಗಳ ಬಗ್ಗೆ ಹೊರ ಜಗತ್ತು ಬೆಕ್ಕಸ ಬೆರಗಾಗುವಂತೆ ಮಾಡಿ ಯಕ್ಷಗಾನದ ಬಗ್ಗೆ ಕುತೂಹಲ ಮೂಡುವಂತೆ ಮಾಡಿದ್ದಾರೆ. ಈರೀತಿಯಪ್ರಯೋಗಗಳುಈಗಾಗಲೇ ಬೇರೆ ಬೇರೆ ನಗರಗಳಲ್ಲಿ ಸಾವಿರಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡಿದೆ. ನರಸಿಂಹ ಅವತಾರ, ಸಮುದ್ರ ಮಥನ, ಕಂಸ ವಧೆ ಇತ್ಯಾದಿ ಪುರಾಣ ಕತೆಗಳಿಗೆ ಸಹಾ ಯಕ್ಷನೃತ್ಯರೂಪಕವನ್ನು ಅಳವಡಿಸಿದ್ದಾರೆ.

ಕಟ್ಟುನಿಟ್ಟಿನ ಅಭ್ಯಾಸಕ್ಕೆ ಕೊಡುವ ಪ್ರಾಮುಖ್ಯತೆ, ಶಿಸ್ತಿನ ಶಿಕ್ಷಣ, ಗುಣಮಟ್ಟದ ವಿಷಯದಲ್ಲಿ ರಾಜಿ ಮಾಡಿಕೊಳ್ಳದಿರುವುದು ಇವರ ಯಕ್ಷಗಾನ ತರಗತಿಗಳ ವೈಶಿಷ್ಟತೆ. ಯಕ್ಷಗಾನ ಪದ್ಯದ ಭಾವಾಭಿನಯವನ್ನು ಸಮಗ್ರವಾಗಿ ಕಟ್ಟುವ, ಪ್ರತಿಭೆಗಳನ್ನು

ಹುರಿದುಂಬಿಸಿ ಅಣಿಗೊಳಿಸುವ, ಆತ್ಮಸ್ಥೈರ್ಯ ಬೆಳೆಯುವಂತೆ ಮಾಡಿ ಪಕ್ವಗೊಳಿಸುವ, ಯಕ್ಷಗಾನದ ಪ್ರತಿ ಅಂಶಗಳನ್ನು ಸ್ಪಷ್ಟವಾಗಿ ಕಲಿಯುವ ಅನಿವಾರ್ಯತೆಯನ್ನು ತನ್ನ ಶಿಷ್ಯರಲ್ಲಿ ತುಂಬುವ ವೈಖರಿಯೇ ಬೆರಗುಗೊಳಿಸುವಂತದ್ದು. ಅವರಲ್ಲಿ ಕಲಿತ ಕಲಾವಿದರ ಯಕ್ಷಗಾನ ವೇಷದ ನಿರ್ವಹಣೆಯೇ ಖುಶಿ ಕೊಡುವಂತದ್ದು. ಕೇವಲ ಗುರುವಾಗಿ ಅಷ್ಟೇ ಅಲ್ಲ, ಒಬ್ಬ ಶ್ರೇಷ್ಠ ಕಲಾವಿದನಾಗಿ ಪುಂಡುವೇಷ, ರಾಜವೇಷ, ಬಣ್ಣದ ವೇಷ, ಕಿರಾತವೇಷ, ಸ್ತ್ರೀವೇಷ, ಹಾಸ್ಯ ಹೀಗೆ ಯಾವ ವೇಷವಾದರೂ ಸೈ, ಅದಕ್ಕೆ ಬೇಕಾದ ಪೂರ್ಣ ನ್ಯಾಯ ಒದಗಿಸಬಲ್ಲ ಸಾಮರ್ಥ್ಯವನ್ನೂ ಈಗಾಗಲೇ ಸಾಧಿಸಿ ತೋರಿಸಿದ್ದಾರೆ. ಯಕ್ಷಗಾನದ ಶ್ರೇಷ್ಠ ಗುರು ಶ್ರೀ ಬನ್ನಂಜೆ ಸಂಜೀವ ಸುವರ್ಣ ಅವರ ಶಿಷ್ಯರಾಗಿ ಅವರು ಸಾಗಿದ ಮಾರ್ಗದಲ್ಲಿ ಸಾಗುತ್ತಿರುವುದು ವೀಶೇಷ.ಜೊತೆಯಲ್ಲಿ ಬಿ.ವಿ.ಕಾರಂತ, ಬಿ.ವಿ.ರಾಜಾರಾಂ ಮೊದಲಾದ ರಂಗಭೂಮಿ ದಿಗ್ಗಜರು, ನೃತ್ಯಲೋಕದ ವೀಣಾ ವಿಜಯ್, ವೈಜಯಂತಿ ಕಾಶಿ, ನಿರುಪಮಾ ರಾಜೇಂದ್ರ ಮೊದಲಾದ ಖ್ಯಾತನಾಮರುಗಳ ಜೊತೆಗೆ ಒಡನಾಟ ಹೊಂದಿರುವ ತುಂಗರು, ಯಕ್ಷಗಾನೇತರ ಪ್ರಾಕಾರಗಳ ಕಲಾವಿದರಿಗೆ ಯಕ್ಷಗಾನವನ್ನು ಸಮರ್ಥವಾಗಿ ಪರಿಚಯಿಸಿ, ಯಕ್ಷಗಾನದ ಬಗೆಗೆ ಗೌರವ ಮೂಡುವಂತೆ ಮಾಡುವಲ್ಲಿ ಯಶಸ್ವಿಯಾಗಿರುವುದು ನಾವೆಲ್ಲರೂ ಹೆಮ್ಮೆ ಪಡುವ ವಿಷಯ. ಇಂಥವರ ಯಕ್ಷಗಾನದ ಬಗೆಗಿನ ಉತ್ತಮ ಚಿಂತನೆಗಳು ಎಲ್ಲ ಯಕ್ಷಗಾನಾಭಿಮಾನಿಗಳಿಗೆ ಹರಿಯುವಂತಾಗಲಿ. ಯಕ್ಷಗಾನವನ್ನು ಸ್ವಸ್ಥವಾಗಿ ಉಳಿಸಿಕೊಳ್ಳುವ ಹೊಣೆಗಾರಿಕೆಯನ್ನೆಲ್ಲರೂ ಅರಿಯುವಂತಾಗಲಿ ಎಂದು ಆಶಿಸೋಣ.

ಲೇಖಕರ ಪರಿಚಯ

ಹೊಸನಗರ ತಾಲೂಕಿನ ಮಡೋಡಿಯವರಾದ ರವಿಮಡೋಡಿಯವರು ಸದ್ಯ ಬೆಂಗಳೂರಿನ ಬಹುರಾಷ್ಟ್ರೀಯ ಕಂಪನಿಯಲ್ಲಿ, ಮಾಹಿತಿ ತಂತ್ರಜ್ಞಾನ ವಿಭಾಗದಲ್ಲಿ ಉದ್ಯೋಗಿಯಾಗಿದ್ದಾರೆ. ಹವ್ಯಾಸಿಯಾಗಿ ಯಕ್ಷಗಾನದಲ್ಲಿ ತಮ್ಮನ್ನು ತೊಡಗಿಸಿಕೊಂಡು, ಬೆಂಗಳೂರಿನ ಯಕ್ಷಸಿಂಚನ ಸಂಸ್ಥೆಯ ಸಂಸ್ಥಾಪಕರಲ್ಲಿ ಒಬ್ಬರಾಗಿದ್ದಾರೆ. ಇವರ ಅನೇಕ ಪಾತ್ರಗಳು ಜನಮೆಚ್ಚುಗೆಯನ್ನು ಪಡೆದಿದೆ. ಇದರ ಜೊತೆಗೆ ಯಕ್ಷಗಾನದ ಅನೇಕ ಅಕಾಡಮಿ ಕಾರ್ಯದಲ್ಲಿ ಭಾಗಿಯಾಗಿ, ಯಕ್ಷಗಾನ ಡಿಜಿಟಲಿಕರಣದ ಕಾರ್ಯದಲ್ಲಿ ಸಹನಿರತರಾಗಿದ್ದಾರೆ. ಇವರ ಅನೇಕ ಕಥೆ, ಲೇಖನಗಳು ಮುಖ್ಯಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಇವರು ಈಚೆಗೆ 'ಮಲೆನಾಡಿನ ಯಕ್ಷ ಚೇತನಗಳು' ಎಂಬ ಸರಣಿಯ ಮೂಲಕ ಮಲೆನಾಡಿನ ಕಲಾವಿದರನ್ನು ಪರಿಚಯಿಸುತ್ತಿದ್ದಾರೆ.

ಯಕ್ಷಗಾನ ಪ್ರಸಂಗ ಸಾಹಿತ್ಯದ ಡಿಜಿಟಲೀಕರಣ - ಒಂದು ನೋಟ

– ಅಶ್ವಿನಿ ಹೊದಲ

ದ್ರಾವಿಡ ಭಾಷೆಗಳಲ್ಲೇ ಅತ್ಯಂತ ಹಿರಿತನ ಹೊಂದಿರುವ ಕನ್ನಡಕ್ಕೆ, ಸುಮಾರು 2000 ವರುಷಗಳಷ್ಟು ಇತಿಹಾಸವಿದೆ. ಕನ್ನಡ ಸಾಹಿತ್ಯವನ್ನು ಜನಪದ, ವಚನ, ದಾಸ ಸಾಹಿತ್ಯ ಹೀಗೆ ಹಲವು ಪ್ರಕಾರಗಳಾಗಿ ವಿಂಗಡಿಸಬಹುದು. ಇಂಥ ಅನೇಕ ಪ್ರಕಾರಗಳಲ್ಲಿ ಬಹಳಷ್ಟು ಜನರಿಗೆ ತಿಳಿಯದೆ ಇರುವ ಮತ್ತೊಂದು ಸಾಹಿತ್ಯ ಪ್ರಕಾರವೇ ಅದು ಯಕ್ಷಗಾನ ಸಾಹಿತ್ಯ.

ಯಕ್ಷಗಾನವು ಸಾಹಿತ್ಯ, ಗಾಯನ, ನೃತ್ಯ, ಅಭಿನಯ, ವೇಷಭೂಷಣ ಮತ್ತು ಅರ್ಥಗಾರಿಕೆಯನ್ನು ಒಳಗೊಂಡ ಒಂದು ಪರಿಪೂರ್ಣ ಕಲೆ. ನಾಲ್ಕು ಕಲಾಮಾಧ್ಯಮಗಳಿಂದ ಮೈಗೂಡಿನಿಂತ ಒಂದು ಸಮ್ಮಿಶ್ರ ಕಲೆಯಾಗಿದೆ. ಇದರಲ್ಲಿ ಸಂಗೀತ, ಸಾಹಿತ್ಯ, ನೃತ್ಯ ಮತ್ತು ಚಿತ್ರ – ಈ ನಾಲ್ಕು ಕಲೆಗಳ ಔಚಿತ್ಯಪೂರ್ಣವಾದ ಸಾಮರಸ್ಯವಿದೆ.

ಯಕ್ಷಗಾನ ಪರಿಭಾಷೆಯಲ್ಲಿ ಯಕ್ಷಗಾನದ ಪದ/ಪದ್ಯ ಅಥವಾ ಪದಗಳ/ಪದ್ಯಗಳ ಸಮೂಹವನ್ನು ಪ್ರಸಂಗ ಎಂಬುದಾಗಿಯೂ ಮತ್ತು ಕವಿಯನ್ನು ಪ್ರಸಂಗಕರ್ತ ಎಂಬುದಾಗಿ ಕರೆಯುತ್ತಾರೆ. ಪ್ರಸಂಗಕರ್ತನಿಗೆ ಕೇವಲ ಸಾಹಿತ್ಯದ ಪರಿಣಿತಿಯಿದ್ದರೆ ಸಾಲದು. ಅವನಿಗೆ ರಂಗ ಪ್ರಜ್ಞೆ, ರಾಗ–ತಾಳ, ಸ್ವರ, ಲಯ,ಇವುಗಳ ತಿಳುವಳಿಕೆ ಇದ್ದರೆ ಮಾತ್ರ ಒಂದು ಪರಿಣಾಮಕಾರಿಯಾದ ಪ್ರಸಂಗವನ್ನು ರಚಿಸುವುದಕ್ಕೆ ಸಾಧ್ಯವಾಗುತ್ತದೆ. ಕನ್ನಡದ ಶಬ್ದಗಳನ್ನು ಛಂದೋಬದ್ಧವಾಗಿ ಬಳಸಿ, ತಾಳಕ್ಕೆ ಸರಿಯಾಗಿ ಪೋಣಿಸಿ, ಅದು ವಿಶಾಲವಾದ ಅರ್ಥ ಮೂಡುವಂತೆ ರಚಿಸಿದಾಗ ಅದು ಪದವಾಗುತ್ತದೆ ಅಥವಾ ಪದ್ಯವಾಗುತ್ತದೆ. ಇಂಥ ಪದ್ಯಗಳು ರಂಗಪ್ರಯೋಗದಲ್ಲಿ ಸನ್ನಿವೇಶಕ್ಕೆ ತಕ್ಕಂತೆ ಭಾಗವತರು ಹಾಡಿ, ಭಾವವನ್ನು ತುಂಬಿ ಕರುಣ, ಶೃಂಗಾರ,

ಭಯ ಇತ್ಯಾದಿ ನವರಸಗಳು ಮೂಡುವಂತೆ ಸಾಹಿತ್ಯ ರಚನೆಯಾಗಿರುತ್ತದೆ. ಇಂಥ ಕ್ಲಿಷ್ಟ ಮತ್ತು ಅಭೂತವಾದ ಸಾಹಿತ್ಯವು, ಪ್ರಸಂಗಗಳ ಮೂಲಕ ರಂಗದಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ಯಕ್ಷಗಾನ ರಂಗಭೂಮಿಗೆ ಮುಖ್ಯ ಭಾಗವಾಗಿ ಇದು ಜೀವಾಳವಾಗಿರುತ್ತದೆ. ಕೇವಲ ಸಾಹಿತ್ಯ ಮಾತ್ರವಲ್ಲದೇ ಇಡೀ ಯಕ್ಷಗಾನ ರಂಗಭೂಮಿಗೆ, ನಿರ್ದೇಶನವು ಇದರ ಸಾಹಿತ್ಯದಿಂದಲೇ ಸಿಗುತ್ತದೆ. ಮೇಲ್ನೋಟಕ್ಕೆ ಇದು ರಂಗಭೂಮಿಯ 'ಸಂಗೀತ ನಾಟಕ' ದಂತೆ ತೋರಿದರೂ, ಇದು ಗೇಯ ಕಾವ್ಯದ ಲಕ್ಷಣಗಳನ್ನು ಒಳಗೊಂಡಿದೆ.

ಯಕ್ಷಗಾನ ಪ್ರಸಂಗಸಾಹಿತ್ಯವಿಪುಲ ಮತ್ತು ಶ್ರೀಮಂತ ಸಾಹಿತ್ಯವಾಗಿದ್ದು ಹಾಡಿನ ರೂಪದಲ್ಲಿ ಜನಸಾಮಾನ್ಯರನ್ನು ಪೌರಾಣಿಕ ಕಥೆಗಳ ಮೂಲಕ ತಲುಪುವ ಮಾಧ್ಯಮವಾಗಿ ಹಲವು ಶತಮಾನಗಳಿಂದ ನಡೆದು ಬಂದಿದೆ. ಆಧುನೀಕತೆ ಮತ್ತು ತಂತ್ರಜ್ಞಾನದ ಬೆಳಕನ್ನೇ ಕಾಣದ ಕಾಲದಲ್ಲಿ ಯಕ್ಷಗಾನದ ಆಟಗಳು ಹಳ್ಳಿ ಹಳ್ಳಿಗಳನ್ನು ತಲುಪಿ ಜನಮಾನಸದಲ್ಲಿ ಮನೋರಂಜನೆಯ ಜೊತೆಗೆ ಪುರಾಣ – ಕಥೆಗಳ ಜ್ಞಾನದ ಬೆಳಕನ್ನು ಹಚ್ಚಿದ್ದು ಸತ್ಯವಷ್ಟೇ. ಇದಕ್ಕೆ ಪ್ರಮುಖ ಕಾರಣ ಯಕ್ಷ ಸಾಹಿತ್ಯದಲ್ಲಿನ ಶ್ರೀಮಂತಿಕೆ ಮತ್ತು ಅನಕ್ಷರಸ್ಥರ ನೆನಪಿನಲ್ಲೂ ಉಳಿಯುವಂತಹ ಸರಳ ಸಾಹಿತ್ಯ.

ಇದರ ಸಾಹಿತ್ಯ ರಚನೆಗೊಳ್ಳುವುದು ಶುದ್ಧವಾದ, ಅಪ್ಪಟವಾದ ಕನ್ನಡವನ್ನು (ಕಂಗ್ಲೀಷ್ ಕೂಡ ಇಲ್ಲ) ಬಳಸಿಯೇ. 700–800 ವರುಷದ ಇತಿಹಾಸವಿರುವ ಯಕ್ಷಗಾನ ಸಾಹಿತ್ಯದಲ್ಲಿ, ಇಲ್ಲಿವರೆಗೆ 1000 ಅಧಿಕ ಕವಿಗಳನ್ನು ಗುರುತಿಸಬಹುದು. 5,000ಕ್ಕೂ ಅಧಿಕ ಪ್ರಸಂಗಗಳು ರಚನೆಯಾಗಿ, ಸರಿ ಸುಮಾರು 10 ಲಕ್ಷಕ್ಕೂ ಅಧಿಕ ಸಂಖ್ಯೆಯ ಪದ್ಯಗಳು ರಚನೆಯಾಗಿವೆ. 18ನೇ ಶತಮಾನ ಯಕ್ಷಗಾನ ಪ್ರಸಂಗ ಸೃಷ್ಟಿಯ ಪರ್ವಕಾಲ ಎನ್ನುವುದನ್ನು ಕ್ರಿ.ಶ. 1860 ರಲ್ಲಿ ಬಿ.ಎಲ್ ರೈಸ್ ಅವರು ಪ್ರಕಟಿತ 'ಕರ್ನಾಟಕ ಶಬ್ದಾನುಶಾಸನಂ' ನಲ್ಲಿ ಪ್ರಸ್ತಾಪಿಸಿರುತ್ತಾರೆ.

ಈಗಲೂ ಅನೇಕ ಹೊಸ ಹೊಸ ಪ್ರಸಂಗಗಳು ಯಕ್ಷಗಾನದ ಬತ್ತಳಿಕೆಯನ್ನು ಸೇರಿಕೊಳ್ಳುತ್ತಿದೆ. ಪ್ರಸಂಗಕವಿಗಳು, ಯಾವ ಫಲಾಪೇಕ್ಷೆಗಳಿಲ್ಲದೇ ಪ್ರಸಂಗಳನ್ನು ರಚಿಸಿ, ಯಕ್ಷಗಾನಕ್ಕೆ ನೀಡಿದ್ದಾರೆ. ವಿದ್ವಾಂಸರ ಅಭಿಪ್ರಾಯದಂತೆ ಸುಮಾರು 5,000ಕ್ಕೂ ಹೆಚ್ಚಿನ ಪ್ರಸಂಗಗಳು ರಚಿಸಲ್ಪಟ್ಟಿದ್ದರೂ ನಮಗೆ ಈಗ ಲಬ್ಧವಿರುವ ಪ್ರಸಂಗಗಳು ಸುಮಾರು 2,000ದಷ್ಟು ಮಾತ್ರ. ಮುಂಚೆ ದೇವಿದಾಸ, ಪಾರ್ತಿಸುಬ್ಬ ನಂತಹ ಪ್ರಸಂಗ ಕವಿಗಳು ತಾಡವಾಲೆಗಳಲ್ಲಿ ಬರೆಯಲ್ಪಟ್ಟ ಸಾಹಿತ್ಯವನ್ನು 20ನೇ ಶತಮಾನದ ಮೊದಲ ಭಾಗದಲ್ಲಿ ಪಾವಂಜೆ ಗುರುರಾಯರು, ನಿತ್ಯಾನಂದ ಗ್ರಂಥಾಲಯ, ಹೆಚ್.

ಬಿ. ಎಲ್. ರಾವ್‌ರಂತಹ ಬೆರಳೆಣಿಕೆಯಷ್ಟು ಪ್ರಕಾಶಕರು ನೂರಾರು ಪ್ರಸಂಗಗಳನ್ನು ಪುಸ್ತಕ ರೂಪದಲ್ಲಿ ಹೊರತಂದು, ಅದನ್ನು ಸಂರಕ್ಷಿಸುವ ಕಾರ್ಯದಲ್ಲಿ ಮುಂದಾಗಿದ್ದನ್ನು ಅಭಿನಂದಿಸಲೇಬೇಕು. ಹೀಗೆಹಲವು ಪ್ರಸಂಗಗಳು ಮುದ್ರಣ ಭಾಗ್ಯ ಕಂಡರೂ ತೆರೆಮರೆಯ ಕಾಯಿಯಂತೆ ಉಳಿದು ಹೋದ ಪ್ರಸಂಗಗಳೆಷ್ಟೋ. ಕಾಲಾನಂತರದಲ್ಲಿ ಹಸ್ತಪ್ರತಿಗಳು ಜೀರ್ಣಾವಸ್ಥೆ ತಲುಪಿ ನಾಶವಾದ ಉದಾಹರಣೆಗಳು ಅದೆಷ್ಟೋ. ಹಿಂದೆ ಗುರುಮುಖೇನ ಭಾಗವತಿಕೆಯ ಶಿಕ್ಷಣ ಪಡೆದವರು ಸುಮಾರಷ್ಟು ಪ್ರಸಂಗಗಳನ್ನು ಕಂಠಪಾಠ ಮಾಡಿದ್ದರೂ ಈಗ ಅವರೂ ಕೂಡ ಮರೆಯಾದ ನಂತರ ಸಾಹಿತ್ಯದ ಉಳಿಯುವಿಕೆಯು ಅಂಚಿನ ಕೊನೆಗೆ ಬಂದುನಿಂತಿದೆ. ಸದ್ಯ ಹಿರಿಯ ಭಾಗವತರು ಮತ್ತು ಕೆಲವೇ ಕೆಲವು ಕಲಾಸಕ್ತರ ಬಳಿ ಮಾತ್ರವೇ ಸ್ವಲ್ಪ ಪ್ರಮಾಣದ ಪ್ರತಿಗಳು ಉಳಿದಿವೆ.

ಪ್ರತಿಯೊಬ್ಬ ಕಲಾವಿದನೂ ಹಿಮ್ಮೇಳವಿರಲಿ ಅಥವಾ ಮುಮ್ಮೇಳವಿರಲಿ ಪ್ರಸಂಗದ ಸಾಹಿತ್ಯವನ್ನು ಅಭ್ಯಸಿಸಿರಲೇಬೇಕು. ಹಾಗಿದ್ದಾಗ ಮಾತ್ರ ಆ ಪ್ರಸಂಗದ ಆಳ – ಅಗಲ, ರಚನಾ ಕೌಶಲ್ಯದ ಅರಿವು ಅವರಿಗಾಗುತ್ತದೆ. ಪ್ರಸಂಗ ರಚನೆಯಾದ ಕಾಲಘಟ್ಟ, ಅಂದಿನ ಸಾಹಿತ್ಯದಲ್ಲಿನ ವಿಶೇಷತೆ, ಪೌರಾಣಿಕ ಕಥನಗಳನ್ನು ಕವಿ ತೆರೆದಿಟ್ಟ ಪರಿ ಎಲ್ಲವೂ ಅರ್ಥವಾಗುವುದು ಪ್ರಸಂಗ ಸಾಹಿತ್ಯವನ್ನು ಪೂರ್ಣವಾಗಿ ತಿಳಿದು ಕೊಂಡಾಗ ಮಾತ್ರ. ಅದರಲ್ಲೂ ಇತ್ತೀಚೆಗೆ ಪ್ರದರ್ಶನಗೊಳ್ಳುತ್ತಿರುವ ಪ್ರಸಂಗಗಳಲ್ಲಿ ಕವಿಯಿಂದ ರಚಿಸಲ್ಪಟ್ಟ ಪೂರ್ಣ ಪ್ರಸಂಗ ಸಾಹಿತ್ಯವನ್ನು ಬಳಸದೇ, ಬೇರೆ ಪ್ರಸಂಗಗಳ ಪದ್ಯಗಳನ್ನು (ಕಿಸೆ ಪದ್ಯಗಳನ್ನು) ಸೇರಿಸಲಾಗುತ್ತಿದೆ. ಕವಿಗಳ ಮೂಲ ಆಶಯಕ್ಕೆ ಧಕ್ಕೆ ತರುವಂಥಹ ಅಚಾತುರ್ಯಗಳಾಗುವ ಸಾಧ್ಯತೆಗಳು ತುಂಬಾ ಇವೆ. ಎಷ್ಟೋ ಕಡೆ ರಂಗಪ್ರಯೋಗವಾಗುವ ಪ್ರಸಂಗಗಳಲ್ಲಿ ಕಲಾವಿದರಿಗೇ ಅದನ್ನು ರಚಿಸಿದ ಕವಿಯ ಹೆಸರೇ ತಿಳಿದಿರುವುದಿಲ್ಲ.

21ನೇ ಶತಮಾನದ ಆಧುನಿಕ ಭರಾಟೆಯಲ್ಲಿ ಯಕ್ಷಗಾನ ಹಿಂದಿನ ಜನಪ್ರಿಯತೆಯನ್ನು, ಆಸಕ್ತಿಯನ್ನು ಕಳೆದುಕೊಳ್ಳುತ್ತಿರುವ ಕಾರಣಗಳಿಗೆ, ಪ್ರಸಂಗ ಪಠ್ಯಗಳಿಗೆ ವ್ಯಾಪಕ ಮನ್ನಣೆ ಸಿಗುತ್ತಿಲ್ಲ. ಒಂದು ಕಾಲದಲ್ಲಿದ್ದ ಯಕ್ಷಗಾನ ಪುಸ್ತಕಮುದ್ರಿಸಿ, ಪ್ರಕಾಶನಗೊಳಿಸುವ ಉದ್ಯಮ ಇಂದು ಸ್ಥಗಿತವಾಗಿದೆ. 19ನೇ ಶತಮಾನದ ಆದಿಯಲ್ಲಿ ಮುದ್ರಿತವಾದ ಅನೇಕ ಪ್ರಸಂಗಗಳು, ವಾತಾವರಣ ಮತ್ತು ಕಾಗದದ ಗುಣಮಟ್ಟದ ಕಾರಣದಿಂದ ಹಳೆಯ, ಚಾಲ್ತಿಯಲ್ಲಿರುವ ಪ್ರಸಂಗಗಳ ಪಠ್ಯವನ್ನು ಈಗ ಮತ್ತೆ ಬಳಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಜೊತೆಗೆ ಇದು ಮರುಮುದ್ರಣಗೊಳ್ಳದಿರುವುದರಿಂದ

ಹೊಸ ತಲೆಮಾರಿನ ಯಕ್ಷಗಾನಕ್ಕೆ, ಸಮರ್ಪಕವಾಗಿ ಪಠ್ಯಗಳು ದೊರೆಯುತ್ತಿಲ್ಲ. ಜೊತೆಗೆ ನಮ್ಮ ಅವಜ್ಞೆಯ ಕಾರಣದಿಂದಾಗಿ ಎಷ್ಟೋ ಹಳೆಯ ಅನೇಕ ಹಸ್ತಪ್ರತಿಗಳು, ತಾಳೆಗರಿಗಳು ನಾಶವಾಗಿ, ಅಲಭ್ಯವಾಗಿರುವುದನ್ನು ಕಾಣಬಹುದಾಗಿದೆ. ಯಕ್ಷಗಾನ ಪ್ರದರ್ಶನಗಳಿಗೆ ಆಧಾರಸ್ಥಂಭವಾಗಿರುವ ಇಂತಹ ಅಮೂಲ್ಯ ಸಂಪತ್ತನ್ನು ನಾವು ರಕ್ಷಿಸಿಕೊಳ್ಳಬೇಕಿದೆ. ಯಕ್ಷಗಾನದ ಪ್ರಸಂಗಗಳನ್ನು ಹೊರತುಪಡಿಸಿ, ಯಕ್ಷಗಾನ ಪ್ರದರ್ಶನಗಳನ್ನು ಮಾಡಲು ಸಾಧ್ಯವಿಲ್ಲ. ಹೀಗಿರುವಾಗ ಮೂಲ ಸಾಹಿತ್ಯವನ್ನು ಕಾಪಿಟ್ಟು ಮುಂದಿನ ಪೀಳಿಗೆಯ ಜನತೆಗೆ ತಲುಪಿಸಲೇಬೇಕಾದ ಅನಿವಾರ್ಯತೆ ಖಂಡಿತ ಇದೆ. ಹಾಗಾದಾಗ ಮಾತ್ರ ಯಕ್ಷಸಾಹಿತ್ಯ ಉಳಿಯುತ್ತದೆ. ಆಗ ಮಾತ್ರ ಪ್ರತಿಫಲಾಪೇಕ್ಷೆ ಇಲ್ಲದೆ, ಸರ್ವರ ಮನೋರಂಜನೆ ಮತ್ತು ಮನೋವಿಕಾಸವನ್ನೇ ಧ್ಯೇಯವಾಗಿಸಿ ಯಕ್ಷರಂಗಕ್ಕೆ ಶ್ರೀಮಂತ ಸಾಹಿತ್ಯವನ್ನು ಅರ್ಪಿಸಿದ, ಕಲಾಸೇವೆಯನ್ನೇ ತಮ್ಮ ಉಸಿರಾಗಿಸಿಕೊಂಡ ಪ್ರಸಂಗ ಕವಿಗಳಿಗೆ ನಾವು ಗೌರವ ಸಲ್ಲಿಸಲು ಸಾಧ್ಯ. ಇಲ್ಲದಿದ್ದಲ್ಲಿ ಈಗಾಗಲೇ ನಶಿಸಿಹೋದ ಹಲವಾರು ಪ್ರಸಂಗಗಳಂತೆ ಈಗ ಸದ್ಯ ಲಭ್ಯವಿರುವ ಪ್ರತಿಗಳೂ ಒಂದು ದಿನಕಣ್ಮರೆಯಾಗುವುದಂತೂ ಸುಳ್ಳಲ್ಲ.

ಸಾವಿರಾರು ಪ್ರಸಂಗಗಳ ರಚನೆಯಾಗಿದ್ದರೂ ಈಗ ಪ್ರದರ್ಶನಗೊಳ್ಳುತ್ತಿರುವ ಪ್ರಸಂಗಗಳ ಸಂಖ್ಯೆ ಬಹಳ ಕಡಿಮೆ, ಅಂದಾಜು 100 ರಿಂದ 150 ಇರಬಹುದು. ಎಷ್ಟೋ ಕಡೆಗಳಲ್ಲಿ ಪೂರ್ವ ನಿರ್ಧಾರಿತ ಪ್ರಸಂಗಗಳು ರಂಗಪ್ರಯೋಗಗೊಳ್ಳದೆ ಬೇರೆ ಯಾವುದೋ ಪ್ರಸಂಗಗಳನ್ನು ಆಟವಾಡಿದ್ದೂ ಇದೆ. ಕಾರಣ ಪ್ರಸಂಗ ಪ್ರತಿಗಳು ಲಭ್ಯವಿಲ್ಲದಿರುವುದು. ಕನ್ನಡ ಸಾಹಿತ್ಯದ ಇತರೆ ಪ್ರಾಕಾರಗಳಂತೆ ಯಕ್ಷಸಾಹಿತ್ಯಕ್ಕೂ ತನ್ನದೇ ಆದ ಚೌಕಟ್ಟಿದೆ. ಸುಂದರವಾದ ಮನಸೂರೆಗೊಳ್ಳುವ ಛಂದೋಬಂಧಗಳಲ್ಲಿ ಪ್ರಸಂಗ ಪದ್ಯಗಳ ರಚನೆಗಳಾಗಿವೆ. ಇವೆಲ್ಲವೂ ಆಸಕ್ತರಿಗೆ ಸುಲಭವಾಗಿ ಲಭ್ಯವಿದ್ದರೆ ಎಲ್ಲರೂ ಯಕ್ಷಸಾಹಿತ್ಯದ ರಸದೌತಣವನ್ನು ಸವಿಯಬಹುದು.

ಮೇಲಿನ ಎಲ್ಲಾ ಕಾರಣಗಳಿಂದಾಗಿ ಪ್ರಸಂಗ ಸಾಹಿತ್ಯವನ್ನು, ಪ್ರತಿಗಳನ್ನು, ಪೂರಕ ಮಾಹಿತಿಯನ್ನು ತಂತ್ರಜ್ಞಾನದ ಸಹಾಯದಿಂದ ವಿದ್ಯುನ್ಮಾನ (ಪಿ.ಡಿ.ಎಫ್) ಪ್ರತಿಗಳಾಗಿ ಪರಿವರ್ತಿಸುವ ಡಿಜಿಟಲೀಕರಣ ಅತ್ಯಂತ ಸುಲಭ ಮತ್ತು ಶಾಶ್ವತ ಪರಿಹಾರ. ಈ ನಿಟ್ಟಿನಲ್ಲಿ **ಬೆಂಗಳೂರಿನ** ಯಕ್ಷವಾಹಿನಿ(ರಿ) ಸಂಸ್ಥೆ, ಪ್ರಸಂಗಗಳು ಮತ್ತು ಅದರ ಮೂಲ ಅಂತಃಸತ್ವವನ್ನು ಉಳಿಸುವುದಕ್ಕಾಗಿ ? ಯಕ್ಷಗಾನ ಡಿಜಿಟಲೀಕರಣ' ಎಂಬ ಯೋಜನೆಯನ್ನು ರೂಪಿಸಿ, ಯಕ್ಷಗಾನದ ಸಂಪನ್ಮೂಲಗಳನ್ನು (Assests) ಶಾಶ್ವತವಾಗಿ ಉಳಿಸಿ ಬೆಳೆಸುವ ಕಾರ್ಯಕ್ಕೆ ಮುಂದಾಗಿದೆ.

ಡಿಜಿಟಲೀಕರಣದಿಂದಾಗಿ ಪಠ್ಯಗಳು ಶಾಶ್ವತವಾಗಿ ಉಳಿದುಕೊಂಡು, ಮುಂದಿನ ತಲೆಮಾರಿಗೆ ವ್ಯವಸ್ಥಿತವಾಗಿ ತಲುಪಿಸಲು ಸಾಧ್ಯವಾಗುತ್ತದೆ. ಡಿಜಿಟಲೀಕರಣ ಎನ್ನುವುದು ಹಾಳಾಗದ ವ್ಯವಸ್ಥೆಯಾಗಿರುವುದರಿಂದ, ಸಾವಿರ ವರುಷ ಕಳೆದರೂ, ಹಾಗೆ ಇರುವುದಕ್ಕೆ ಸಾಧ್ಯವಾಗುತ್ತದೆ. ಜೊತೆಗೆ ಆಧುನಿಕ ಹೊಸ ಪ್ರವೃತ್ತಿಯಾದ ಮುಕ್ತಜ್ಞಾನದ ಅವಕಾಶಗಳನ್ನು ಯಕ್ಷಗಾನ ವಲಯಕ್ಕೆ ನೀಡುವುದಾಗಿದೆ. ಇದರಿಂದ ಯಾರು ಬೇಕಾದರೂ, ಎಲ್ಲಿ ಬೇಕಾದರೂ, ಹೇಗೆ ಬೇಕಾದರೂ ತಮಗೆ ಬೇಕಾದ ಪ್ರಸಂಗಗಳನ್ನು, ಮಟ್ಟುಗಳನ್ನು ಅಂತರ್ಜಾಲದಿಂದ ಉಚಿತವಾಗಿ ಪಡೆದುಕೊಳ್ಳಬಹುದಾಗಿದೆ. ಜೊತೆಗೆ ಈ ಎಲ್ಲಾ ಅಂಶಗಳು ಒಂದೇ ಸ್ಥಳದಲ್ಲಿ ಸಿಗುವುದರಿಂದ ಇದೊಂದು ಯಕ್ಷಗಾನದ ಪ್ರಸಂಗಗಳ ಇ-ಗ್ರಂಥಾಲಯವೆನಿಸುತ್ತದೆ.

ಇನ್ನು ಈ ಯಕ್ಷವಾಹಿನಿ ಸಂಸ್ಥೆಯು ಸಮಾನ ಮನಸ್ಕ ಯಕ್ಷಪ್ರೇಮಿಗಳ ಸಮೂಹವಾಗಿ, ಸ್ವಯಂಸೇವೆಯ ಬಲದಲ್ಲಿ, ಅರ್ಪಣೆಯ ಮನೋಭಾವದಲ್ಲಿ ತೊಡಗಿಸಿಕೊಂಡ ಸಂಸ್ಥೆಯಾಗಿದೆ. ಸಂಸ್ಥೆಯವಿಶ್ವಸ್ಥಮಂಡಳಿಯಲ್ಲಿ ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಡಾ. ಆನಂದರಾಮ ಉಪಾಧ್ಯ (ಕಾರ್ಯಾಧ್ಯಕ್ಷರು), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ) ಯವರಿದ್ದಾರೆ. ಸಂಸ್ಥೆಯ ಎಲ್ಲಾ ಯೋಜನೆಗಳಿಗೆ ಬೆನ್ನೆಲುಬಾಗಿ ನಿಂತವರು ಹಿರಿಯ ವಿದ್ವಾಂಸರೂ, ಪ್ರಸಂಗಕರ್ತರೂ ಆದ ಶ್ರೀ ಶ್ರೀಧರ ಡಿ. ಎಸ್. ಮತ್ತು ಶ್ರೀ ಗಿಂಡಿಮನೆ ಮೃತ್ಯುಂಜಯರವರು. 30ಕ್ಕೂ ಅಧಿಕ ಸ್ವಯಂಸೇವಕರು ಯಾವುದೇ ಫಲಾಪೇಕ್ಷೆಗಳಿಲ್ಲದೇ ಇಲ್ಲಿನ ಯೋಜನೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಯಕ್ಷಗಾನಕ್ಕೆ ಸಂಬಂಧಿಸಿದ ದಾಖಲೀಕರಣದಲ್ಲಿ ಸಂಚಲನ ಮೂಡಿಸಿದ ಯಕ್ಷವಾಹಿನಿ ಸಂಸ್ಥೆಯಿಂದ ಇದುವರೆಗೂ ನಾಲ್ಕು ಪ್ರಮುಖವಾದ ಡಿಜಿಟಲೀಕರಣ ಯೋಜನೆಗಳನ್ನುರೂಪಿಸಲಾಗಿದೆ:

1. ಪ್ರಸಂಗಪಟ್ಟಿ
2. ಯಕ್ಷಪ್ರಸಂಗಕೋಶ
3. ಪ್ರಸಂಗ ಪ್ರತಿ ಸಂಗ್ರಹ
4. ಯಕ್ಷಮಟ್ಟು ಕೋಶ

ಪ್ರಸಂಗಪಟ್ಟಿ

ಸಂಶೋಧನೆಯ ಪ್ರಕಾರ ಇದುವರೆಗೂ ಅಂದಾಜು 8 ,000ಕ್ಕೂ ಅಧಿಕ ಪ್ರಸಂಗಗಳು ರಚನೆಗೊಂಡಿದ್ದರೂ ಕಾಲಾನಂತರದಲ್ಲಿ ಸಾವಿರಾರು ಪ್ರಸಂಗಗಳು ನಾಶವಾಗಿ ಕೊನೆಗೆ ಉಳಿದಿರುವುದು 5,000ದಷ್ಟು ಪ್ರಸಂಗಗಳೆಂದು ಊಹಿಸಬಹುದು. ಹಾಗಾದರೆ ಆ 5,000ಕ್ಕೂ ಹೆಚ್ಚಿನ ಪ್ರಸಂಗಗಳು ಯಾವುವು, ಅದರ ಪ್ರಸಂಗಕರ್ತರು ಯಾರು ಎಂಬಿತ್ಯಾದಿ ಪ್ರಶ್ನೆಗಳಿಗೆ ಉತ್ತರ ಯಕ್ಷವಾಹಿನಿ ಸಂಸ್ಥೆಯ ಪ್ರಪ್ರಥಮ ಯೋಜನೆ ಪ್ರಸಂಗಪಟ್ಟಿ. ಈ ಪಟ್ಟಿಯಲ್ಲಿ ಪ್ರಸಂಗಗಳ ಹೆಸರು, ಪ್ರಸಂಗ ಕವಿ, ಪ್ರಕಟಿತ / ಅಪ್ರಕಟಿತ, ಪ್ರಸಂಗದ ಆಧಾರದ ವಿವರವನ್ನೊಳಗೊಂಡಿದೆ. ಈ ಪಟ್ಟಿಯು ಪ್ರಸಂಗ ಪ್ರತಿ ಸಂಗ್ರಹಕ್ಕೆ ಪೂರಕವಾಗಿದ್ದು, ಈಗಾಗಲೇ 5,000ಕ್ಕೂ ಹೆಚ್ಚಿನ ಪ್ರಸಂಗಗಳ ವಿವರವನ್ನು ಒಳಗೊಂಡಿದೆ. ಡಾ. ಪಾದೇಕಲ್ಲು ವಿಷ್ಣುಭಟ್ ಮತ್ತು ಡಾ. ಕಬ್ಬಿನಾಲೆ ವಸಂತ ಭಾರದ್ವಾಜರಿಂದ ಈಗಾಗಲೇ ಬಿಡುಗಡೆಯಾಗಿರುವ ಗ್ರಂಥಸೂಚಿಯನ್ನು ಆಧಾರವಾಗಿರಿಸಿ, ಯಕ್ಷವಾಹಿನಿ ಸಂಸ್ಥೆಯ ಸಂಶೋಧನೆಯಿಂದ ಇನ್ನಷ್ಟು ಹೆಚ್ಚಿನ ವಿವರಗಳೊಂದಿಗೆ ಪರಿಷ್ಕೃತ ಆವೃತ್ತಿಯಾಗಿ ಈ ಪ್ರಸಂಗಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಈ ಪಟ್ಟಿ ಮೂಲ ದಾಖಲೆಯಾಗಿದ್ದು ಕಾಲಕಾಲಕ್ಕೆ ನಿರಂತರ ನವೀಕರಿಸಲಾಗುತ್ತಿದೆ. ಈ ಯೋಜನೆಯ ರೂವಾರಿ ಶ್ರೀ ನಟರಾಜ ಉಪಾಧ್ಯ ಮತ್ತು ಸಹಾಯಕರಾಗಿ ಶ್ರೀಮತಿ ಅಶ್ವಿನಿ ಹೊದಲ ಇವರು ಕಾರ್ಯನಿರ್ವಹಿಸುತ್ತಿದ್ದಾರೆ.

ಯಕ್ಷಪ್ರಸಂಗ ಕೋಶ ಯೋಜನೆ

ಈ ಯೋಜನೆಯಲ್ಲಿ ಮುದ್ರಿತ / ಹಸ್ತಪ್ರತಿಗಳನ್ನು ಟೈಪಿಸಿ, ಪರಿಶೀಲಿಸುವ ಮೂಲಕ ಯಕ್ಷಗಾನ ಪ್ರಸಂಗಗಳನ್ನು ಡಿಜಿಟಲಿಕರಣ ಮಾಡಿ, ಅದನ್ನ ಪಿಡಿಎಫ್ ದಾಸ್ತಾವೇಜುಗಳನ್ನು ಅಂತರ್ಜಾಲದಲ್ಲಿ ಪ್ರಕಟಿಸಿ ಸರ್ವರಿಗೂ ತಲುಪುವಂತೆ ಮಾಡುವುದು ಮುಖ್ಯ ಉದ್ದೇಶ. ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ

ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಸರಿಪಡಿಸುವುದಾಗಿದೆ. ಇಲ್ಲಿಯವರೆಗೆ (ಆಗಸ್ಟ್ 2020) 220ಕ್ಕೂ ಅಧಿಕ ಪ್ರಸಂಗಗಳನ್ನು ಅಂತರ್ಜಾಲದಲ್ಲಿ ಪ್ರಕಟಿಸಿದ್ದು, ಆಸಕ್ತರು ತಮಗೆ ಬೇಕಾದ ಪ್ರತಿಗಳನ್ನು, ಅದನ್ನು ಮುದ್ರಿಸಿಕೊಳ್ಳುವುದಕ್ಕೋ ಅಥವಾ ತಮ್ಮ ಮೊಬೈಲ್/ಕಂಪ್ಯೂಟರ್ ನಲ್ಲಿ ಶೇಖರಿಸಿಕೊಳ್ಳಬಹುದಾಗಿದೆ. ಈ ಯೋಜನೆಯಲ್ಲಿ ಯೋಜನಾಧ್ಯಕ್ಷರಾಗಿ ರವಿ ಮಡೋಡಿ, ಅಶ್ವಿನಿ ಹೊದಲ -ಯೋಜನಾ ಕಾರ್ಯದರ್ಶಿ, ವಿಂಧ್ಯಾಶ್ರೀ ಸೋಮಯಾಜಿ- ಯೋಜನಾ ಸಹ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಸಮರ್ಥ ಮಾರ್ಗದರ್ಶಕರಾಗಿ ಹಿರಿಯರಾದ ಶ್ರೀ ಶ್ರೀಧರ್ ಡಿ.ಎಸ್. ಹಾಗೂ ಶ್ರೀ ಗಿಂಡಿಮನೆ ಮೃತ್ಯುಂಜಯರವರು ತಂಡವನ್ನು ಮುನ್ನಡೆಸುತ್ತಿದ್ದಾರೆ. ಗಣಪತಿ ಭಟ್ ಪಿ., ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ, , ನಟರಾಜ ಉಪಾಧ್ಯ, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಪಟ್ಟಾಜೆ ವಸಂತಕೃಷ್ಣ, ಡಾ. ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು, ಅನಂತ ಪದ್ಮನಾಭ ಫಾಟಕ್, ಡಾ. ಪ್ರದೀಪ ಸಾಮಗ, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ ಮುಂಗಳಿಮನೆ ಮುಂತಾದ 30ಕ್ಕೂ ಅಧಿಕ ಸ್ವಯಂಸೇವಕರು ಈ ಯಕ್ಷ ಕೈಂಕರ್ಯದಲ್ಲಿ ತೊಡಗಿದ್ದಾರೆ.

ಈ ಪ್ರಸಂಗ ಕೋಶ ಯೋಜನೆಗೆ ಕರ್ನಾಟಕ ಯಕ್ಷಗಾನ ಅಕಾಡೆಮಿಯಲ್ಲಿ ತನ್ನ ಸಹಾಯ ಹಸ್ತವನ್ನು ನೀಡಿದೆ. ಅಕಾಡೆಮಿ ಅಧ್ಯಕ್ಷರಾದ ಶ್ರೀ ಎಂ.ವಿ. ಹೆಗಡೆಯವರ ದೂರಗಾಮಿ ಚಿಂತನದ ಫಲವಾಗಿ ಅಕಾಡೆಮಿಯು ನಮ್ಮ ಈ ಕಾರ್ಯಕ್ರಮಕ್ಕೆ ಕೈಜೋಡಿಸಿದೆ. ಈಗಾಗಲೇ 100ರಷ್ಟು ಪ್ರಸಂಗಗಳ ಡಿಜಿಟಲೀಕರಣಕ್ಕೆ ನೆರವು ನೀಡಿದೆ. ಸಂಸ್ಥೆ ಪ್ರೊ॥ ಎಂ.ಎ. ಹೆಗಡೆಯವರಿಗೆ ಹಾಗೂ ರಿಜಿಸ್ಟ್ರಾರ್ ಶ್ರೀ ಶಿವರುದ್ರಪ್ಪನವರಿಗೆ ಆಭಾರಿಯಾಗಿದೆ.

ಪ್ರಸಂಗ ಪ್ರತಿಸಂಗ್ರಹ

ಈಗ ಲಭ್ಯವಿರುವ, ಜೀರ್ಣಾವಸ್ಥೆ ತಲುಪುತ್ತಿರುವ ಪ್ರಸಂಗಪ್ರತಿಗಳನ್ನು ಸಂಗ್ರಹಿಸಿ, ವಿದ್ಯುನ್ಮಾನ ಪ್ರತಿಗಳಾಗಿ ಪರಿವರ್ತಿಸಿ ಅಂತರ್ಜಾಲ ಮತ್ತು ಮೊಬೈಲ್ ತಂತ್ರಾಂಶದ ಮೂಲಕ ಕಲಾಸಕ್ತರಿಗೆ ತಲುಪಿಸುವ ಯೋಜನೆ ಮತ್ತು ಆಶಯ ಯಕ್ಷವಾಹಿನಿಯ ಪ್ರಸಂಗ ಪ್ರತಿ ಸಂಗ್ರಹ ಯೋಜನೆಯದ್ದು. ಸಾಂಘಿಕ ನೆಲೆಗಟ್ಟಿನಲ್ಲಿ ಇಂಥಹದ್ದೊಂದು ದಾಖಲೀಕರಣದ ಕಾರ್ಯ ಆಗಲೇ ಬ'ೇಕಾದಅ ನಿವಾರ್ಯತೆಯನ್ನು ಮನಗಂಡು ಯಕ್ಷವಾಹಿನಿ ಸಂಸ್ಥೆಯು ಸಮಾನ ಮನಸ್ಕ ಸದಸ್ಯರ ಸಹಕಾರದೊಂದಿಗೆ ಪ್ರಸಂಗ ಪ್ರತಿಗಳನ್ನು ಉಚಿತವಾಗಿ ಲಭ್ಯವಾಗುವಂತೆ ಮಾಡುತ್ತಿದೆ. ಬಹಳ ಕಡಿಮೆ ಸಮಯದಲ್ಲಿ ಈಗಾಗಲೇ 1,130ಕ್ಕೂ ಹೆಚ್ಚಿನ ಪ್ರತಿಗಳನ್ನು (ವಿವಿಧ ಪ್ರಕಾಶಕರು ಮತ್ತು ಪ್ರಕಾಶನದ ವರ್ಷವನ್ನೂ ಸೇರಿ) ಸಂಗ್ರಹಿಸಲಾಗಿದ್ದು ಇನ್ನೂ ಹೆಚ್ಚಿನ ಪ್ರತಿಗಳನ್ನು ಸಂಗ್ರಹಕ್ಕೆ ಸೇರಿಸುವತ್ತ ಕಾರ್ಯೋನ್ಮುಖವಾಗಿದೆ. ಬಹಳ ಸರಳವಾಗಿ ಆಂಡ್ರಾಯ್ಡ್ ಮೊಬೈಲ್ನಲ್ಲಿ ಲಭ್ಯವಿರುವ ಸ್ಕ್ಯಾನಿಂಗ್ ತಂತ್ರಾಂಶದ ಮೂಲಕ ಪ್ರತಿಗಳನ್ನು ಪಿ.ಡಿ.ಎಫ್ ಆವೃತ್ತಿಗಳಾಗಿ ಸ್ಕ್ಯಾನ್ ಮಾಡಿ ಸಂಗ್ರಹಕ್ಕೆ ಸೇರಿಸಲಾಗುತ್ತದೆ. ಪ್ರಮುಖವಾಗಿ ಶ್ರೀ ನಟರಾಜ ಉಪಾಧ್ಯ ಮತ್ತು ಶ್ರೀಮತಿ ಅಶ್ವಿನಿ ಹೊದಲರವರ ಮುಂದಾಳತ್ವದಲ್ಲಿ ಪ್ರಸಂಗ ಪ್ರತಿ ಸಂಗ್ರಹದ ಕಾಯಕ ನಡೆಯುತ್ತಿದೆ. ಶ್ರೀಲಕ್ಷ್ಮೀನಾರಾಯಣಭಟ್ ಇವರು ಪ್ರಸಂಗ ಪ್ರತಿ ಸಂಗ್ರಹಕ್ಕಾಗಿ ಮೊಬೈಲ್ ತಂತ್ರಾಂಶವನ್ನು ರೂಪಿಸಿದ್ದು ಆಸಕ್ತರು ಸುಲಭವಾಗಿ ಪ್ರತಿಗಳನ್ನು ಪಡೆದುಕೊಳ್ಳಬಹುದಾಗಿದೆ. ಹಿರಿಯ ಪ್ರಸಂಗ ಕವಿಗಳೂ, ರಂಗಪ್ರಮುಖರು, ಸಂಘಟಕರು, ಕಲಾಭಿಮಾನಿಗಳು ಸ್ವಯಂ ಪ್ರೇರಿತರಾಗಿ ತಮ್ಮ ಬಳಿಯಿರುವ ಪ್ರತಿಗಳನ್ನು ನಮ್ಮ ತಂಡಕ್ಕೆ ಕಳುಹಿಸುತ್ತಿದ್ದಾರೆ. ಯಕ್ಷವಾಹಿನಿ ಸಂಸ್ಥೆಯೂ ಕೂಡ ವಾರಾಂತ್ಯಗಳಲ್ಲಿ ಸ್ಕ್ಯಾನಿಂಗ್ ಕಮ್ಮಟಗಳನ್ನು ನಡೆಸುವ ಮೂಲಕ ಪ್ರತಿಗಳನ್ನು ಸಂಗ್ರಹಕ್ಕೆ ಸೇರಿಸುವ ಕಾಯಕದಲ್ಲಿ ತೊಡಗಿದೆ. ಸದ್ಯ ಬೆಂಗಳೂರಿನಲ್ಲಿ ಮಾತ್ರ ಕಮ್ಮಟಗಳನ್ನು ನಡೆಸುತ್ತಿದ್ದು, ಬರುವ ದಿನಗಳಲ್ಲಿ ಕರಾವಳಿ ಮತ್ತು ಮಲೆನಾಡಿನ ಭಾಗಗಳಲ್ಲಿ ಕಮ್ಮಟಗಳನ್ನು ನಡೆಸಿ, ಸ್ವಯಂ ಸೇವಕರ ಸಹಾಯದಿಂದ ಸಂಗ್ರಹದ ಗಾತ್ರವನ್ನು ಇನ್ನಷ್ಟು ಹೆಚ್ಚಿಸುವ ಆಶಯ ಯಕ್ಷವಾಹಿನಿ ಸಂಸ್ಥೆಯದ್ದು.

ಯಕ್ಷಮಟ್ಟು ಕೋಶ

ಯಕ್ಷಗಾನವನ್ನು ಒಂದು ವೃಕ್ಷಕ್ಕೆ ಹೋಲಿಸಿದರೆ ಅದರ ಬೇರು ಪ್ರಸಂಗ ಸಾಹಿತ್ಯ ಎನ್ನಬಹುದು. ಬೇರಿನ ಗಟ್ಟಿತನದ ಮೇಲೆ ಆ ವೃಕ್ಷದ ಆಯುಷ್ಯ

ನಿರ್ಧಾರವಾಗುವ ಹಾಗೆ ಯಕ್ಷಗಾನ ಸಾಹಿತ್ಯದ ಸತ್ವದ ಆಧಾರದಲ್ಲಿ ಅದರ ಭವಿಷ್ಯದ ಅಳಿವು – ಉಳಿವನ್ನುನಿರ್ಧರಿಸಬಹುದು.

ವಿವಿಧ ರಸಾಭಿವ್ಯಂಜನೆಯ ದೃಷ್ಟಿಯಿಂದ ಯಕ್ಷಗಾನದ ಪದ್ಯಬಂಧಗಳು ಅನೇಕ ರಾಗ–ತಾಳಗಳ ಸಮ್ಮೇಳವಾಗಿದೆ. ಯಕ್ಷ ಕವಿಗಳು ಅನೇಕ ಹೊಸ ಛಂದೋಬಂಧಗಳನ್ನು ಸೃಷ್ಟಿಸಿಕೊಂಡಿದ್ದಾರೆ. ಇಂತಹ ಛಂದೋಬಂಧಗಳನ್ನು 'ಮಟ್ಟು' ಎನ್ನಬಹುದು. ಮಟ್ಟುಗಳು ಯಕ್ಷಗಾನ ಕಲೆಯ ಸೊಗಡಿನ ಜೀವಾಳ, ಮಾತ್ರವಲ್ಲ ರಂಗದಲ್ಲಿ ರಸಸೃಷ್ಟಿಗೆ ಪೂರಕವಾದ ಮೂಲಭೂತವಾದ ತಳಹದಿ. ಯಕ್ಷಗಾನ ಸಾಹಿತ್ಯದ ಛಂದಸ್ಸುಗಳು ಈ ಮಟ್ಟುಗಳಿಗೆ ಆಧಾರ, ಈ ಛಂದಸ್ಸಿಗೆ ಅನುಗುಣವಾಗಿ ಕೆಲವೇ ರಾಗ ತಾಳಗಳ ಸಂಯೋಜನೆಯು ಹೊಂದಿಕೊಂಡು ಯಕ್ಷಗಾನದ ಹಿಮ್ಮೇಳ ಗಾಯನವು ಸಂಪನ್ನಗೊಳ್ಳುತ್ತದೆ. ರಂಗದ ಮೇಲೆ ರಸ ಸೃಷ್ಟಿಯಲ್ಲಿ ಹಿಮ್ಮೇಳದ ಭಾಗವತನು ಪ್ರಥಮ ವೇಷಧಾರಿಯಾಗುವ ಜವಾಬ್ದಾರಿಯಲ್ಲಿದ್ದರೆ, ಪ್ರಸಂಗವನ್ನು ರಚಿಸಿದ ಪ್ರಸಂಗಕವಿಯು ಈ ಪ್ರಥಮ ವೇಷಧಾರಿಯನ್ನು ಮುನ್ನಡೆಸುವ ನಿರ್ದೇಶಕನಿರುತ್ತಾನೆ. ಆದುದರಿಂದಲೇ, ಪ್ರಸಂಗವೊಂದನ್ನು ಆಡುವಾಗ ಪ್ರಸಂಗಕವಿಯನ್ನು ನೆನೆಯದೇ ಹೋಗುವುದು ಸುಸಂಸ್ಕೃತಿಯಲ್ಲ.ಎಂದಿನವರೆಗೆ ಸೂಕ್ತ ಮಟ್ಟುಗಳ ಸದುಪಯೋಗ ಹಾಗೂ ಅದಕ್ಕೆ ಹೊಂದಿಕೊಂಡ ಸೂಕ್ತ ಹಿನ್ನಲೆ ಗಾಯನ ಇರುತ್ತದೋ, ಅಲ್ಲಿಯವರೆಗೆ ಯಕ್ಷಗಾನ ಕಲೆಗೆ ಸಾವಿಲ್ಲ. ಹಾಗಾಗಿ ಯಕ್ಷಗಾನ ಪ್ರಸಂಗಕವಿಯಾಗಬಯಸುವವನು ಮಟ್ಟುಗಳ ಸಾಮಾನ್ಯ ಜ್ಞಾನ, ಅವುಗಳನ್ನು ಆಧರಿಸುವ ಛಂದಸ್ಸಿನ ಲಕ್ಷಣ, ಕಥನದ ಸನ್ನಿವೇಶ ಮತ್ತು ಭಾವನಾಲಹರಿಗೆ ಹೊಂದಿಕೆ ಇವುಗಳ ಕುರಿತಾಗಿ ಸಂಪೂರ್ಣ ಹಿಡಿತವನ್ನು ಹೊಂದಲೇಬೇಕು. ಅದೇ ರೀತಿ ಭಾಗವತನಾದವನು ಸನ್ನಿವೇಶ ಹಾಗೂ ಭಾವನಾಲಹರಿಗೆ ಸೂಕ್ತವಾದ, ಮುಖ್ಯವಾಗಿ ಮಟ್ಟಿನ ಛಂದೋಬಂಧಕ್ಕೆ ಹೊಂದಿಕೊಳ್ಳುವ ರಾಗ ತಾಳಗಳನ್ನೇ ಉಪಯೋಗಿಸುವ ವಿವೇಚನೆಯನ್ನು ಹೊಂದಿರಬೇಕು.

ನೂರಾರು ಕವಿಗಳು ಸಾವಿರಾರು ಪ್ರಸಂಗಗಳನ್ನು ರಚಿಸಿದ್ದಾಗಿ ಅಂದಾಜಿಸಬಹುದಾದರೂ ಅವರ ರಚನೆಯಲ್ಲಿನ ಮಟ್ಟುಗಳಲ್ಲೂ ವ್ಯತ್ಯಾಸಗಳಿದ್ದು ಅದು ಕವಿಯ ರಚನಾ ಸ್ವಾತಂತ್ರ್ಯಕ್ಕೆ ಮತ್ತು ಅಂದಿನ ಕಾಲಘಟ್ಟಕ್ಕೆ ತಕ್ಕದ್ದಾಗಿದೆ. ಹೀಗಾಗಿ ಮಟ್ಟುಗಳನ್ನು ಇದಮಿತ್ಥಂ ಎಂದು ಏಕಸೂತ್ರಕ್ಕೆ ಅಳವಡಿಸುವುದು ಕಷ್ಟವಾದರೂ ಅವುಗಳ ಲಕ್ಷಣಗಳನ್ನು ಆಧರಿಸಿ ತಕ್ಕಮಟ್ಟಿಗೆ ವಿಭಾಗಿಸಬಹುದು.

ಇಂಥಹ ಛಂದೋಬಂಧಗಳನ್ನು ತಪ್ಪು ಎಂದು ಪರಿಗಣಿಸದೇ ರಚನಾ ವಿಧಾನಗಳನ್ನು ಗಮನದಲ್ಲಿಟ್ಟುಕೊಂಡು ಮಟ್ಟುಗಳ ವಿವರದೊಂದಿಗೆ ಆಯಾ ಉದಾಹರಣೆಗಳನ್ನು ಸೂಕ್ತವಾಗಿ ಸೂಚಿಸಲಾಗುವುದು. ಒಂದೇ ಬಗೆಯ ರಚನೆಗಳಿದ್ದು ಬೇರೆ ಬೇರೆ ಮಟ್ಟುಗಳ ಹೆಸರನ್ನು ಹೊತ್ತುಕೊಂಡಿದ್ದು ಮತ್ತು ಇದ್ದ ಮಟ್ಟುಗಳಿಗೆ ಅಲ್ಪಸ್ವಲ್ಪ ಬದಲಾವಣೆ ಮಾಡಿ ಹೆಸರು ಬದಲಿಸಿ ಬೇರೆ ಹೆಸರಿಟ್ಟ ಉದಾಹರಣೆಗಳೂ ಸಿಗುತ್ತವೆ. ಕೆಲವು ಪ್ರಸಂಗಗಳನ್ನು ಗಮನಿಸಿದರೆ ಅವುಗಳು ಹಾಡುವ ದಾಟಿಯ ಆಧಾರದಲ್ಲಿ ರಚಿತವಾಗಿದ್ದಾಗಿವೆ. ಇಂತಹಾ ಪ್ರಸಂಗಗಳು ಪೂರ್ಣವಾಗಿ ಛಂದೋಬದ್ಧವಾಗಿಲ್ಲದೇ ಇದ್ದರೂ ಕೂಡ ರಂಗಪ್ರದರ್ಶನಕ್ಕೆ ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ರಚಿತವಾದಂಥದ್ದು.

ಲಭ್ಯವಿರುವ ಪ್ರಸಂಗ ಪ್ರತಿಗಳನ್ನು ಆಳವಾಗಿ ಅಭ್ಯಸಿಸುತ್ತಾ ಹೋದಂತೆ ಯಕ್ಷ ಕವಿಗಳ ಭಾಷಾಪ್ರೌಢಿಮೆ, ರಚನೆಗಳಲ್ಲಿನ ಕೌಶಲ್ಯತೆ, ರಾಗ – ತಾಳಕ್ಕೆ ಹೊಂದಿಕೊಳ್ಳುವಂತೆ ಹೆಣೆದ ಛಂದೋಬಂಧಗಳು, ಪೌರಾಣಿಕಪಾತ್ರ, ವಸ್ತು–ಸ್ಥಿತಿಯನ್ನು ಜ್ಞಾನ ಮತ್ತು ಮನೋರಂಜನೆಗೆ ಸೂಕ್ತವಾಗಿ ಅಳವಡಿಸಿಕೊಳ್ಳುವ ಪರಿ ಎಲ್ಲವೂ ತೆರೆದುಕೊಳ್ಳುತ್ತಾ ಹೋಗುತ್ತದೆ. ಈ ರೀತಿಯ ಸಂಶೋಧನೆಗೆ ಒಡ್ಡಿಕೊಂಡಂತೆ ದೇವಿದಾಸ, ಪಾರ್ತಿಸುಬ್ಬ, ಜತ್ತಿ ಈಶ್ವರ ಭಾಗವತ, ಕನ್ಯಾನ ವೆಂಕಟರಮಣಭಟ್ಟ, ಅಜಪುರದ ವಿಷ್ಣು, ಹಟ್ಟಿಯಂಗಡಿ ರಾಮಭಟ್ಟ, ಕಡಂದಲೆ ರಾಮಯ್ಯ, ಇತ್ಯಾದಿ ಕವಿಗಳಿಂದ ರಚಿಸಲ್ಪಟ್ಟ ಹಲವಾರು ಪ್ರಸಂಗಗಳನ್ನು ಗಮನಿಸಿದಾಗ ಕಂಡುಬರುವ ವಿಶೇಷ ರಚನೆಗಳು ತದನಂತರ ಬಂ ದ ಯಕ್ಷಕವಿಗಳಿಂದ ಅನುಕರಣೆಗೊಂಡಿದ್ದಲ್ಲದೇ ಅವರುಗಳೂ ಕೂಡ ಮತ್ತಷ್ಟು ರಸಪೂರ್ಣ ಛಂದೋಬಂಧಗಳ ಮೂಲಕ ಪ್ರಸಂಗ ಸಾಹಿತ್ಯಕ್ಕೆ ತಮ್ಮ ಅಚ್ಚಳಿಯದ ಕೊಡುಗೆಯನ್ನು ನೀಡಿ ಇಂದಿಗೂ ವರ್ತಮಾನ ಕವಿಗಳಿಗೆ ಆದರ್ಶಪ್ರಾಯರಾಗಿದ್ದಾರೆ.

ಪ್ರಾಚೀನ ಕಾಲದಿಂದಲೂ ಅಂದಿನ ಕಾಲಘಟ್ಟಕ್ಕೆ ಅನುಗುಣವಾಗಿ, ಭಾಷಾ ಸಂಪ್ರದಾಯಕ್ಕೆ ಸಂಬಂಧಿಸಿದಂತೆ ಮತ್ತುಕವಿಯರಚನಾ ಸಾಮರ್ಥ್ಯಕ್ಕೆ ಅನುಸಾರವಾಗಿ ಪ್ರಸಂಗ ಸಾಹಿತ್ಯದ ಛಂದೋಬಂಧಗಳು ಅರ್ಥಾತ್ ಮಟ್ಟುಗಳು ರಚಿಸಲ್ಪಟ್ಟಿವೆ. ಯಕ್ಷಗಾನದ ಉಳಿವು, ಬೆಳೆವಿನ ಮಾತುಗಳಿರುವಲ್ಲಿ ಯಕ್ಷಗಾನ ಮಟ್ಟುಗಳ ಕುರಿತಾದ ಕಾಳಜಿ ಅನಿವಾರ್ಯ. ಈ ರೀತಿಯ ಯಕ್ಷಸಾಹಿತ್ಯದ ಛಂದೋ ವಿಶೇಷ ಮಟ್ಟುಗಳ ಕುರಿತಾಗಿ ಶ್ರೀಕ.ಪು. ಸೀತಾರಾಮ ಕೆದಿಲಾಯರು, ಡಾ. ಎನ್. ನಾರಾಯಣ ಶೆಟ್ಟರು ಮತ್ತು ಡಾ. ಕಬ್ಬಿನಾಲೆ ವಸಂತ ಭಾರದ್ವಾಜರಂತಹ ಮಹನೀಯರು ಸಂಶೋಧನೆ

ನಡೆಸಿ ಛಂದೋಗ್ರಂಥಗಳನ್ನು ರಚಿಸಿದ್ದಾರೆ. ಇವೆಲ್ಲವನ್ನೂ ಆಧಾರವಾಗಿಟ್ಟುಕೊಂಡು, ಇನ್ನೂ ಹೆಚ್ಚಿನ ಅಧ್ಯಯನ ಮತ್ತು ಸಂಶೋಧನೆಯ ಬಲದಿಂದ ಮತ್ತು ಸಾಧ್ಯವಾದ ಮಟ್ಟಿಗೆ ಯಕ್ಷಗಾನ ಕ್ಷೇತ್ರದ ಪ್ರಸಂಗಕರ್ತರು, ವಿದ್ವಾಂಸರುಗಳ ಸಲಹೆ ಸಹಕಾರಗಳೊಂದಿಗೆ ಯಕ್ಷಗಾನ ಸಾಹಿತ್ಯ ರಚನೆಯಲ್ಲಿನ ಛಂದಸ್ಸು, ಬಂಧಗಳು, ಮಟ್ಟುಗಳ ಮೇಲೆ ಬೆಳಕು ಚೆಲ್ಲುವ ಮಾಹಿತಿಯನ್ನುಸರಳವಾಗಿ ದಾಖಲೀಕರಿಸುವ ಸಮುದ್ದೇಶ ಯಕ್ಷವಾಹಿನಿ ಸಂಸ್ಥೆಯ ಈ "ಯಕ್ಷಮಟ್ಟುಕೋಶ" ಯೋಜನೆಯದು. ಈವರೆಗೆ (ಅಗಸ್ಟ್ 2020) 100ಕ್ಕೂ ಹೆಚ್ಚು ಮಟ್ಟುಗಳನ್ನು ಲೋಕಾರ್ಪಣೆಗೊಳಿಸಲಾಗಿದೆ. ಈ ಯೋಜನೆಯ ಮಾರ್ಗದರ್ಶಕರಾಗಿ ಶ್ರೀ ಶ್ರೀಧರ ಡಿ. ಎಸ್., ಶ್ರೀ ಗಿಂಡೀಮನೆ ಮೃತ್ಯುಂಜಯ, ಶ್ರೀ ನಟರಾಜ ಉಪಾಧ್ಯರು ಸಂಪಾದಕರಾಗಿ ಶ್ರೀಅಜಿತ್ ಕಾರಂತ್ ಮತ್ತು ಉಪ-ಸಂಪಾದಕರಾಗಿ ಶ್ರೀಮತಿ ಅಶ್ವಿನಿ ಹೊದಲರವರು ಕಾರ್ಯ ನಿರ್ವಹಿಸುತ್ತಿದ್ದಾರೆ.

ಸರಳವಾಗಿ, ಸುಂದರವಾಗಿ, ಪ್ರತಿಮಟ್ಟಿನ ಲಕ್ಷಣ, ಹಾಡಲು ಸೂಕ್ತವಾದ ರಾಗಗಳು, ಮಟ್ಟನ್ನು ಉಪಯೋಗಿಸುವ ಸೂಕ್ತ ಸಂದರ್ಭಗಳು, ಮಟ್ಟಿನ ದೃಷ್ಟಾಂತವನ್ನೂ ತಿಳಿಸುವ ಮೂಲಕ ಆ ಮಟ್ಟಿನ ಸಂಪೂರ್ಣ ವಿವರವನ್ನು ತಿಳಿಸಲಾಗುತ್ತಿದೆ. ಮುಂಬರುವ ದಿನಗಳಲ್ಲಿ ಪ್ರತಿ ಮಟ್ಟಿನ ಹಾಡು ಗಾರಿಕೆಯ ಒಂದು ಕೊಂಡಿಯನ್ನು ಸೇರಿಸಿ ಇನ್ನೂ ಹೆಚ್ಚಿನ ಮಾಹಿತಿಯನ್ನು ನೀಡುವ ಉದ್ದೇಶವನ್ನು ಯಕ್ಷಮಟ್ಟು ಕೋಶ ಹೊಂದಿದೆ. ಕವಿಯ ಆಶಯದ ಜೊತೆಗೆ ಆತನ ಸಾಮರ್ಥ್ಯವನ್ನು ತೋರಿಸುವ ಮಟ್ಟುಗಳು ಮತ್ತು ಸಾಹಿ ತ್ಯದ ದಾಖಲೀಕರಣದಿಂದಾಗಿ ಸದಾ ಕಾಲ ಇದೊಂದು ಅಚ್ಚಳಿಯದ ಅರ್ಥಪೂರ್ಣ ದಾಖಲೆಯಾಗಿ, ಮುಂಬರುವ ಯುವಜನತೆಗೆ ಸಹಕಾರಿಯಾಗುವುದರ ಮೂಲಕ ಸಾಂಸ್ಥಿಕವಾಗಿಯೂ ಯಕ್ಷರಂಗಕ್ಕೆ ಒಂದು ಕೊಡುಗೆಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ.

ಹಿಂದಿನ ಕವಿಗಳ ಸಾಹಿತ್ಯ, ರಚನೆಯ ಮೂಲಕ ಹಿರಿಯರು ತೋರಿದ ಬೆಳಕಿನಲ್ಲಿ ಹೊಸ ಹೊಸ ಪೌರಾಣಿಕ ಪ್ರಸಂಗಗಳ ರಚನೆಯಾಗಿ ಮುಂದೆಯೂ ಯಕ್ಷ ಸಾಹಿತ್ಯ ಸಂಪನ್ನವಾಗಲಿ ಎಂಬುದು ಯಕ್ಷವಾಹಿನಿ ಸಂಸ್ಥೆಯ ಸದಾಶಯ. ಈ ಎಲ್ಲಾ ಪ್ರಕಾರದ ದಾಖಲೀಕರಣವು ಯಕ್ಷಗಾನ ಲೋಕದಲ್ಲಿ ಮೂಡಿಸಿದ ಸಂಚಲನದ ಕಿಡಿ ಇನ್ನೂ ಹೆಚ್ಚಿನ ಯಕ್ಷಾಭಿಮಾನಿಗಳ ಆಸಕ್ತಿಗೆ, ಅಧ್ಯಯನಕ್ಕೆ, ರಂಗಪ್ರಯೋಗಕ್ಕೆ ಪೂರಕವಾದಲ್ಲಿ ಈ ಕಾರ್ಯಸಾರ್ಥಕ.

ಈ ಎಲ್ಲಾ ಯೋಜನೆಗಳ ದಾಖಲೆಗಳನ್ನು ನೀವು ಕೆಳಕಂಡಕೊಂಡಿಯಿಂದ ಪಡೆದುಕೊಳ್ಳಬಹುದು. ಬೆಂಗಳೂರು ಈ ಎಲ್ಲಾ ಚಟುವಟಿಕೆಗಳಿಗೆ ಕೇಂದ್ರವಾಗಿದೆ.

ಯಕ್ಷವಾಹಿನಿ ಸಂಸ್ಥೆಯ ಬ್ಲಾಗ್ :http://www.yakshavahini.com/

ಮೊಬೈಲ್ ಆಪ್ ನಕೊಂಡಿ: https://play.google.com/store/apps/details?id=prasanga.prati.sangraha

ಈಮೇಲ್: yakshavahini@gmail.com

ಲೇಖಕರ ಪರಿಚಯ

ಅಶ್ವಿನಿಹೊದಲ: ಅಶ್ವಿನಿಯವರು ಮೂಲತಃ ಮಲೆನಾಡಿನ ತೀರ್ಥಹಳ್ಳಿ ಸಮೀಪದ ಹೊದಲ ಎಂಬ ಗ್ರಾಮದವರು. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ವೃತ್ತಿಯಲ್ಲಿ ಅಕೌಂಟೆಂಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಎಳೆವೆಯಿಂದಲೇ ಯಕ್ಷಗಾನದಲ್ಲಿ ಆಸಕ್ತಿ ಹೊಂದಿದ್ದವರಿಗೆ ಯಕ್ಷಸಾಹಿತ್ಯದ ಡಿಜಿಟಲೀಕರಣದಲ್ಲಿ ಸೇವೆ ಸಲ್ಲಿಸಲು ಯಕ್ಷವಾಹಿನಿ ಸಂಸ್ಥೆ ಉತ್ತಮ ವೇದಿಕೆ ಕಲ್ಪಿಸಿತು. ಯಕ್ಷವಾಹಿನಿ ಸಂಸ್ಥೆಯ ಎಲ್ಲಾ ಯೋಜನೆಗಳಲ್ಲಿ ಸ್ವಯಂ ಪ್ರೇರಿತರಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದು, ಉತ್ತಮ ಸಂಘಟನಾ ಕೌಶಲ್ಯದ ಮೂಲಕ ಸಂಸ್ಥೆಯ ಯೋಜನೆಗಳ ಯಶಸ್ಸಿಗೆ ಸಹಕಾರಿಯಾಗಿದ್ದಾರೆ.

ಸಂಪಾದಕರ ಪರಿಚಯ

ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲೂಕಿನ ಚಿತ್ರಪಾಡಿ ಗ್ರಾಮದಲ್ಲಿ ಕ್ರಿ.ಶ. 1952ರಲ್ಲಿ ನಾರಾಯಣ ಉಪಾಧ್ಯ ಹಾಗೂ ಕಾವೇರಮ್ಮನವರ ಕೊನೆಯ ಮಗನಾಗಿ ಜನಿಸಿದ್ದಾರೆ. ಕನ್ನಡ ಹಾಗೂ ಯಕ್ಷಗಾನದ ಕುರಿತಾಗಿ ಅಣ್ಣ ನರಸಿಂಹ ಉಪಾಧ್ಯರಿಂದ ಒಲವನ್ನು ಗಳಿಸಿಕೊಂಡು, ಕನ್ನಡ ಸ್ನಾತಕೋತ್ತರ ಪದವಿಯನ್ನುಗಳಿಸಿದರು. ಯಕ್ಷಗಾನ ರಾಮಾಯಣ ಪ್ರಸಂಗಗಳು ಎಂಬ ಪ್ರಬಂಧಕ್ಕೆ ಎಂ.ಫಿಲ್ ಪದವಿಯನ್ನು "ಯಕ್ಷಗಾನ ಮಹಾಭಾರತ ಪ್ರಸಂಗಗಳು" ಎಂಬ ಪ್ರೌಢ ಪ್ರಬಂಧನಕ್ಕೆ ಪಿ.ಹೆಚ್.ಡಿ ಪದವಿಯನ್ನು ಉಸ್ಮಾನೀಯ ವಿಶ್ವವಿದ್ಯಾಲಯದಿಂದ 1984ರಲ್ಲಿ ಗಳಿಸಿದರು. ಹಾರಿದಾಸ ಸಾಹಿತ್ಯದ ಹಿರಿಯ ವಿದ್ವಾಂಸರಾದ ಡಾ|| ಕೆ.ಎಂ. ಕೃಷ್ಣರಾವ್ ಇವರಿಗೆ ಮಾರ್ಗದರ್ಶಕರಾಗಿದ್ದರು. ಇವರ ಈ ಎರಡು ಪುಸ್ತಕಗಳು 1980 ಹಾಗೂ 1990 ರಲ್ಲಿ ಪ್ರಕಟಗೊಂಡಿವೆ. ಇವಲ್ಲದೆ ಯಕ್ಷದರ್ಶನ (1986) ಯಕ್ಷಚಿಂತನೆ (2015) ಪ್ರತಿಬಿಂಬ (2018) ಎಂಬ ಪುಸ್ತಕಗಳನ್ನು ಬರೆದಿದ್ದಾರೆ. 'ಯಕ್ಷಗಾನಂ ವಿಶ್ವಗಾನಂ' ಮತ್ತು 'ಕೋದಂಡ' ಎಂಬ ಯಕ್ಷಗಾನ ಸಂಬಂಧಿ ಸ್ಮರಣ ಸಂಚಿಕೆಗಳಿಗೆ ಸಂಪಾದಕರಾಗಿದ್ದಾರೆ. ಪ್ರಕೃತ ನಿಮ್ಮ ಕೈಯಲ್ಲಿರುವ 'ಯಕ್ಷಪಥ'ದ ಸಂಪಾದಕರೂ ಆಗಿದ್ದಾರೆ. ಇವರಿಗೆ ಅರ್ಯಭಟ ಪ್ರಶಸ್ತಿ, ನರಸಿಂಹ ಪ್ರಶಸ್ತಿ, ಕೆರೆಮನೆ ಶಂಭು ಹೆಗಡೆ ಸಂಮಾನ ಮುಂತಾದ ಗೌರವಗಳು ಲಭಿಸಿವೆ. ಕರ್ನಾಟಕ ಬ್ಯಾಂಕ್‌ನ ವಲಯ ಮುಖ್ಯಸ್ಥರು ಹಾಗೂ ಸಹಾಯಕ ಮಹಾ ಪ್ರಬಂಧಕರಾಗಿ 2012ರಲ್ಲಿ ನಿವೃತ್ತಿ ಹೊಂದಿದ ಇವರು ಈಗ ಖ್ಯಾತ ಪಿ.ಇ.ಎಸ್. ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಯಕ್ಷವಾಹಿನಿ ಸಂಸ್ಥೆಯ ಅಧ್ಯಕ್ಷರಾಗಿ, ನರಹಳ್ಳಿ ಪ್ರತಿಷ್ಠಾನದ ಕಾರ್ಯದರ್ಶಿಯಾಗಿ ಪು.ತಿ.ನ ಟ್ರಸ್ಟ್‌ನ ಸದಸ್ಯರಾಗಿ ಸಾಹಿತ್ಯದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಪತ್ನಿ ಪ್ರೇಮಾ ಮಗಳು ಸೀಮಂತಿನಿ, ಅಳಿಯ ವೆಂಕಟೇಶ್ ಹಾಗೂ ಮೊಮ್ಮಗ ಆರ್ಣವನೊಂದಿಗೆ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಇವರಿಗೆ ಕರ್ನಾಟಕ ಯಕ್ಷಗಾನ ಅಕಾಡೆಮಿಯ 2019ರ ಸಾಲಿನ ಗೌರವ ಪ್ರಶಸ್ತಿಯು ದೊರೆತಿದೆ.

• • • • • • • • • • • •



ನಗರೀಕರಣದ ಬಿರುಬಿಸಿಲಿಗೆ ಮೈಯೊಡ್ಡಿರುವ ಬೆಂಗಳೂರಿಗೆ ಸಾಹಿತ್ಯ, ಸಂಗೀತ, ನಾಟ್ಯ, ನಾಟಕ, ಯಕ್ಷಗಾನದಂತಹ ಕಲಾಪ್ರಕಾರಗಳು ತಂಪೆರೆಯುವ ಸಾಧನಗಳಾಗಿವೆ. ಮೂಲತಃ ಗ್ರಾಮೀಣ ಕಲೆಯಾದ ಯಕ್ಷಗಾನ ಇಂದು ನಗರದ ಜನರಿಗೆ ಹೆಚ್ಚು ಆಪ್ತವಾಗುತ್ತಿದೆ. ಅರವತ್ತು ವರ್ಷಗಳ ಹಿಂದೆ ಮೊದಲಿಗೆ ಬೆಂಗಳೂರಿನಲ್ಲಿ ಕೇಳಿಸಿಕೊಂಡ ಯಕ್ಷಗಾನದ ಚಂಡೆಯ ದನಿ ಇಂದು ಇಲ್ಲಿನ ಹಲವು ಬಡಾವಣೆಗಳಲ್ಲಿ ಸದಾ ಮಾರ್ದನಿಗೊಳ್ಳುತ್ತಿರುತ್ತಿದೆ. ಈ ಹಿನ್ನೆಲೆಯಲ್ಲಿ ರಚಿತವಾದ 'ಯಕ್ಷಪಥ' ಬೆಂಗಳೂರಿನಲ್ಲಿ ಯಕ್ಷಗಾನದ ಹೆಜ್ಜೆ ಗುರುತುಗಳನ್ನು ದಾಖಲಿಸುವ ಪ್ರಯತ್ನವಾಗಿದೆ. ಯಕ್ಷಗಾನ ವಿದ್ವಾಂಸ. ಕರ್ನಾಟಕ ಯಕ್ಷಗಾನ ಅಕಾಡೆಮಿಯ ಗೌರವ ಪ್ರಶಸ್ತಿ ಪುರಸ್ಕೃತ ಡಾ. ಆನಂದರಾಮ ಉಪಾಧ್ಯರ ಸಂಪಾದಕತ್ವದಲ್ಲಿ ಹೊರಬರುತ್ತಿರುವ ಈ ಕೃತಿಯಲ್ಲಿ ಯಕ್ಷಗಾನವು ಬೆಂಗಳೂರಿನಲ್ಲಿ ಬೇರು ಬಿಟ್ಟು, ಬೆಳೆದು, ಪಲ್ಲವಿಸಿ, ಹುಲುಸಾದ ಬೆಳೆ ನೀಡುತ್ತಿರುವುದರ ಚಿತ್ರಣವಿದೆ. ಯಕ್ಷಗಾನದ ಲೇಖಕರು, ಕಲಾವಿದರು, ಸಂಘಟಕರು, ಹವ್ಯಾಸಿಗಳು, ಚಿಂತಕರು ಇಲ್ಲಿನ ಇಪ್ಪತ್ತೆಂಟು ಬರಹಗಳ ಮೂಲಕ ತಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ. ಬದಲಾಗುತ್ತಿರುವ ಕಾಲಕ್ಕೆ ಸದಾ ತೆರೆದುಕೊಳ್ಳುತ್ತಲೇ ಚಿರಂತನವಾಗುತ್ತಿರುವ ಯಕ್ಷಗಾನದ ನಾನಾ ವಿನ್ಯಾಸಗಳು ಬೆಂಗಳೂರಿನ ಅಭಿಮಾನಿಗಳನ್ನು ತಣಿಸಿದ ಬಗೆ ಹಾಗೂ ಯಕ್ಷಗಾನ ಆಸಕ್ತರು ತೋರಿದ ಪ್ರತಿಕ್ರಿಯೆಗಳ ಪಡಿಯಚ್ಚು ಇಲ್ಲಿದೆ. ಬೆಂಗಳೂರಿನ ಸಾಂಸ್ಕೃತಿಕ ಇತಿಹಾಸದಲ್ಲಿ ಯಕ್ಷಗಾನದ ಸ್ಥಾನ ನಿರ್ಣಯಕ್ಕೆ ಹಾಗೂ ಯಕ್ಷಗಾನ ಕಲೆಯ ಜೀವಂತಿಕೆಯ ಅಧ್ಯಯನಕ್ಕೆ 'ಯಕ್ಷಪಥ' ಸಹಾಯಕವಾಗಲಿದೆ. ಇಂತಹ ವಿಶಿಷ್ಟ ಕೃತಿಯನ್ನು ಯಕ್ಷಗಾನ ಲೋಕಕ್ಕೆ ಅರ್ಪಿಸುತ್ತಿರುವ ಡಾ. ಉಪಾಧ್ಯರ ಪ್ರಯತ್ನ ಶ್ಲಾಘನೀಯ.

ಭರತ್ ಪಬ್ಲಿಕೇಷನ್
ನಂ. 40, 5ನೇ ಮುಖ್ಯರಸ್ತೆ,
ದತ್ತಾತ್ರೇಯನಗರ, ಬೆಂಗಳೂರು – 560 085
ಮೊ: 8123496789

ಬೆಲೆ : 200/-